ಶ್ರೀಸ್ಕಂದಪುರಾಣೋಕ್ತ

ಮಾರ್ಗಶೀರ್ಷಮಾಸ ಮಹಾತ್ಮೆ

(ಮೂಲ ಹಾಗೂ ಕನ್ನಡಾನುವಾದ)

ಅನುವಾದಕ :

ಆ. ರಾ. ಪಂಚಮುಖಿ

ವಿದ್ಯಾರತ್ನ ರಾ. ಸ್ವಾ. ಪಂಚಮುಖಿ ಜನ್ಮಶತಮಾನೋತ್ಸವ ಪ್ರಕಟಣೆ - ೨೪

ಗುರುಸಾರ್ವಭೌಮ
ಶ್ರೀರಾಘವೇಂದ್ರತೀರ್ಥ ಪ್ರತಿಷ್ಠಾನಂ

ಧಾರವಾಡ - ೫೮೦ ೦೦೭

ಸ್ಕಂದಪುರಾಣೋಕ್ತ

ಮಾರ್ಗಶೀರ್ಷಮಾಸ ಮಹಾತ್ಮೆ

(ಮೂಲ ಹಾಗೂ ಕನ್ನಡಾನುವಾದ)

ಅನುವಾದ

ಆ.ರಾ. ಪಂಚಮುಖಿ

ವಿದ್ಯಾರತ್ನ ರಾ.ಸ್ವಾ. ಪಂಚಮುಖಿ ಜನ್ಮಶತಮಾನೋತ್ಸವ ಪ್ರಕಟಣೆ ೨೪

ಗುರುಸಾರ್ವಭೌಮ
ಶ್ರೀರಾಘವೇಂದ್ರತೀರ್ಥ ಪ್ರತಿಷ್ಠಾನಂ
ಧಾರವಾಡ - ೫೮೦ ೦೦೭

ಪ್ರಕಾಶಕ : ಕಾರ್ಯದರ್ಶಿ
ಗು. ಶ್ರೀ.ರಾ. ಪ್ರತಿಷ್ಠಾನಂ
ಪವಮಾನ ಸದನ ಧಾರವಾಡ-೫೮೦ ೦೦೭
ಫೋನ:೦೮೩೬-೨೭೯೬೬೧೩

ಪ್ರಥಮ ಮುದ್ರಣ : ೧೯೮೭
ದ್ವಿತೀಯ ಮುದ್ರಣ : ೨೦೦೩

ಪ್ರತಿಗಳು : ೧೦೦೦

ಬೆಲೆ : ೫೦/-

ಅಕ್ಷರ ಜೋಡಣೆ : ಪ್ರತಿಭಾ ಪ್ರಕಾಶ

ಮುದ್ರಕ : ಶ್ರೀ ಜಗದೀಶ ಘಾಣೇಕರ
ಸರಸ್ವತಿ ಆಫ್‌ಸೆಟ್ ಮುದ್ರಣಾಲಯ
ಧಾರವಾಡ-೧

ಪ್ರಸ್ತಾವನೆ

ಶ್ರೀಕೃಷ್ಣಪರಮಾತ್ಮನು ತನ್ನ ವಿಭೂತಿರೂಪಗಳನ್ನು ತಿಳಿಸುತ್ತ 'ಮಾಸಾನಾಂ ಮಾರ್ಗಶೀರ್ಷೋಽಹಂ' ಅಂದರೆ ಎಲ್ಲ ಮಾಸಗಳಲ್ಲಿ ಮಾರ್ಗಶೀರ್ಷಮಾಸವು ತನಗೆ ಅತಿಪ್ರಿಯ ಎಂದು ಶ್ರೀಮದ್ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಇಂಥ ಶ್ರೇಷ್ಠವಾದ ಮಾರ್ಗಶೀರ್ಷಮಾಸದ ವಿವಿಧ ಮಹಾತ್ಮೆಗಳನ್ನು ಸಾಕ್ಷಾತ್ ಶ್ರೀಹರಿಯು ತನ್ನ ಮಗನಾದ ಚತುರ್ಮುಖನಿಗೆ ವಿಸ್ತಾರವಾಗಿ ಹೇಳಿದ್ದು ಅದು ಸ್ಕಂದಪುರಾಣದಲ್ಲಿ ನಿರೂಪಿತವಾಗಿದೆ. ಭಗವಾನ್ ವಿಷ್ಣು ಹಾಗೂ ಬ್ರಹ್ಮ ಶಿವರಿಬ್ಬರ ಸಂವಾದದಲ್ಲಿ ಮೂಡಿ ಬಂದಿರುವ ಈ ಮಾಸ ಮಹಾತ್ಮೆಯು ಒಟ್ಟು ೧೭ ಅಧ್ಯಾಯಗಳಿಂದ ಯುಕ್ತವಾಗಿದೆ ಇದರಲ್ಲಿ ಮಾರ್ಗಶೀರ್ಷ ಮಾಸದ ಮಹತ್ವ, ಮಾಸಧರ್ಮಗಳು ಮುಂತಾದವುಗಳನ್ನು ಮನೋಜ್ಞವಾಗಿ ವಿವರಿಸಲಾಗಿದೆ. ಅರ್ಹರಾದ ಸ್ತ್ರೀ-ಪುರುಷರೆಲ್ಲರೂ ಈ ಮಾಸಧರ್ಮಗಳನ್ನು ಆಚರಿಸಿ ಮಾಸ ನಿಯಾಮಕ ಶ್ರೀಹರಿಕೇಶವನ ಅನುಗ್ರಹಕ್ಕೆ ಪಾತ್ರರಾಗಬೇಕು.

ಇದುವರೆಗೆ ನಾನು ಅನುವಾದಿಸಿ ಪ್ರಕಟಿಸಿದ ಮಾಸಗಳ ಮಹಾತ್ಮೆಗಳನ್ನು ಸಹೃದಯ ಆಸ್ತಿಕ ವಾಚಕರು ಅಭಿಮಾನ ಹಾಗೂ ಗೌರವದಿಂದ ಸ್ವೀಕರಿಸಿದ್ದಾರೆ ಕೆಲವೆಡೆ ಈ ಮಾಸ ಮಹಾತ್ಮೆಗಳ ಅನುವಾದ ಗ್ರಂಥಗಳನ್ನಿಟ್ಟುಕೊಂಡು ಪುರಾಣವಾಚನಗಳೂ ನಡೆದಿವೆ. ವಾಚಕಾಭಿಮಾನಿಗಳ ಅಭಿಮಾನ ಹಾಗೂ ಪ್ರೋತ್ಸಾಹಗಳಿಗೆ ಚಿರಋಣಿಯಾಗಿರುವೆ.

ಈ ಮಾಸಮಹಾತ್ಮೆಯ ಅಕ್ಷರಜೋಡಣೆ ಮಾಡಿದ ಮತ್ತು ಉತ್ಸಾಹದಿಂದ ಮುದ್ರಣದ ಕಾರ್ಯಭಾರವನ್ನು ಹೊತ್ತು ನಿರ್ವಹಿಸಿದ ಶ್ರೀ ಜಗದೀಶ ಘಾಣೇಕರರ ಶ್ರಮವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಬಹುವರ್ಷಗಳ ಹಿಂದೆ ಅನುವಾದಿಸಿ ಮುದ್ರಿಸಿದ್ದ ಮಾರ್ಗಶೀರ್ಷಮಾಸ ಮಹಾತ್ಮೆಯ ಮೊದಲ ಆವೃತ್ತಿಯನ್ನು ಸಂಪೂರ್ಣವಾಗಿ ಪರಿಷ್ಕರಿಸಿ ಈಗ ಸುಧಾರಿತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದು ಇದರಿಂದ ಶ್ರೀಹರಿವಾಯುಗಳು ಪ್ರೀತರಾಗಲಿ ಹಿರಿಯರ ಆಶೀರ್ವಾದವು ದೊರಕುತ್ತಿರಲಿ ಎಂದು ಪ್ರಾರ್ಥಿಸುತ್ತೇನೆ.

೧೮-೮-೨೦೦೩ ಆ.ರಾ. ಪಂಚಮುಖಿ

ಮಾರ್ಗಶೀರ್ಷ ಮಾಸ ಮಹಾತ್ಮೆ

ವಿಷಯಾನುಕ್ರಮಣಿಕೆ

ಮಾರ್ಗಶೀರ್ಷ ಮಾಸ ಮಹಾತ್ಮೆ

ಅಧ್ಯಾಯ ೧

ಮಾರ್ಗಶೀರ್ಷ ವೈಶಿಷ್ಟ್ಯ

★

ಶ್ರೀ ಗಣೇಶಾಯ ನಮಃ ॥ ಶ್ರೀ ಗುರುಭ್ಯೋ ನಮಃ ॥ ಹರಿಃ ಓಂ ॥

ದೇವಕೀನಂದನಂ ಕೃಷ್ಣಂ ಜಗದಾನಂದಕಾರಕಮ್ ।
ಭುಕ್ತಿಮುಕ್ತಿಪ್ರದಂ ದೇವಂ ಮಾಧವಂ ಭಕ್ತವತ್ಸಲಮ್ ॥ ೧॥

ಸೂತ ಉವಾಚ -
ಶ್ವೇತದ್ವೀಪೇ ಸುಖಾಸೀನಂ ದೇವದೇವಂ ರಮಾಪತಿಮ್।
ಚತುರ್ವಕ್ತ್ರೋ ನಮಸ್ಕೃತ್ಯ ಪಪ್ರಚ್ಛ ಪಿತರಂ ತದಾ ॥ ೨॥

ಬ್ರಹ್ಮೋವಾಚ -
ಹೃಷೀಕೇಶ ಜಗದ್ಧಾತಃ ಪುಣ್ಯಶ್ರವಣಕೀರ್ತನ ।
ಪೃಷ್ಟಂ ಯದ್‌ಬ್ರೂಹಿ ದೇವೇಶ ಸರ್ವಜ್ಞ ಸಕಲೇಶ್ವರ ॥ ೩॥

ಮಾಸಾನಾಂ ಮಾರ್ಗಶೀರ್ಷೋಽಹಮಿತ್ಯುಕ್ತಂ ಭವತಾ ಪು[illegible] ।
ತಸ್ಯ ಮಾಸಸ್ಯ ಮಾಹಾತ್ಮ್ಯಂ ಜ್ಞಾತುಮಿಚ್ಛಾಮಿ ತತ್ತ್ವತಃ ॥ ೪॥

ಶ್ರೀ ಗಣೇಶಾಯ ನಮಃ ॥ ಸೂತರು ಶೌನಕಾದಿ ಋಷಿಗಳನ್ನು ಕುರಿತು ಹೇಳುತ್ತಾರೆ. ಏನೆಂದರೆ -ಭೋ ಶೌನಕಾದಿ ಋಷಿಗಳೇ ! ದೇವಕೀದೇವಿಯ ಮಗನಾದ,ಸಕಲ ಸುಜೀವಿಗಳಿಗೂ ಆನಂದವನ್ನುಂಟುಮಾಡುವ ಭುಕ್ತಿ- ಮುಕ್ತಿಗಳನ್ನು ಕೊಡಲು ಸಮರ್ಥನಾದ, ಕ್ರೀಡಾದಿ ಗುಣವಿಶಿಷ್ಟನಾದ, ಮಾಧವನಾದ, ಭಕ್ತವತ್ಸಲನಾದ॥ ೧॥ ಶ್ವೇತದ್ವೀಪದಲ್ಲಿ ಸುಖಾಸೀನನಾದ, ದೇವದೇವೋತ್ತಮನಾದ, ಲಕ್ಷ್ಮೀಪತಿಯಾದ, ತನ್ನ ತಂದೆಯಾದ ಶ್ರೀಕೃಷ್ಣನನ್ನು ಚತುರ್ಮುಖ ಬ್ರಹ್ಮನು ನಮಸ್ಕರಿಸಿ ತಂದೆಯನ್ನು ಕುರಿತು ಒಮ್ಮೆ ಕೆಲವು ಪ್ರಶ್ನೆಗಳನ್ನು ಮಾಡಿದನು ॥ ೨॥ ಬ್ರಹ್ಮನು ಕೇಳುತ್ತಾನೆ - ಹೇ, ಹೃಷೀಕೇಶಾ! ಜಗದ್ರಕ್ಷಕಾ, ಪುಣ್ಯಶ್ರವಣ ಕೀರ್ತನ, ಸರ್ವಜ್ಞ, ಸಕಲೇಶ್ವರಾ, ದೇವೇಶಾ ! ನಾನು ಕೇಳಬೇಕೆಂದಿರುವ ಕೆಲವು ಪ್ರಶ್ನೆಗಳಿಗೆ ಸಮಾಧಾನವನ್ನು ಹೇಳು. ॥೩॥ ದೇವಾ ! ''ಎಲ್ಲ ಮಾಸಗಳೊಳಗೆ ಮಾರ್ಗಶೀರ್ಷಮಾಸವು ನನಗೆ ಹೆಚ್ಚು ಪ್ರೀತ್ಯಾಸ್ಪದವಾದುದು ಅಂದರೆ ಆ ಮಾಸದಲ್ಲಿ ನನ್ನ ವಿಶೇಷ ಸನ್ನಿಧಾನವು ಇರುವುದು''

ಕೋ ದೇವಸ್ತಸ್ಯ ಕಿಂ ದಾನಂ ಕಥಂ ಸ್ನಾನಂ ವಿಧೀಯತೇ ।
ಪುರುಷೈಶ್ಚಾತ್ರ ಕಿಂ ಕಾರ್ಯಂ ಕರ್ತವ್ಯಂ ಕಿಂ ರಮಾಪತೇ ॥ ೫॥

ವಕ್ತವ್ಯಂ ಕಿಂ ತಥಾ ಪೂಜಾಧ್ಯಾನಮಂತ್ರಾದಿಕಂ ಚ ಯತ್ ।
ತತ್ರ ಯತ್ ಕ್ರಿಯತೇ ಕರ್ಮ ತತ್ಸರ್ವಂ ಬ್ರೂಹಿ ಮೇ ಅಚ್ಯುತ ॥ ೬॥

ಶ್ರೀಭಗವಾನುವಾಚ -
ಸಾಧು ಪೃಷ್ಟಂ ಮಹಾಭಾಗ ಸರ್ವಲೋಕೋಪಕಾರಿಣಾ ।
ಯಸ್ಮಿನ್ ಕೃತೇ ಕೃತಂ ಸರ್ವಮಿಷ್ಟಾಪೂರ್ತಾದಿಕಂ ಚ ಯತ್ ॥ ೭॥

ಸರ್ವಯಜ್ಞೇಷು ಯತ್ಪುಣ್ಯಂ ಸರ್ವತೀರ್ಥೇಷು ಯತ್ಫಲಮ್ ।
ತತ್ಫಲಂ ಸಮವಾಪ್ನೋತಿ ಮಾರ್ಗಶೀರ್ಷೇ ಕೃತೇ ಸುತ ॥ ೮॥

ತುಲಾಪುರುಷದಾನಾದ್ಯೈಃ ಯತ್ಫಲಂ ಲಭತೇ ನರಃ ।
ತತ್ಫಲಂ ಪ್ರಾಪ್ಯತೇ ಪುತ್ರ ಮಾಹಾತ್ಮ್ಯ ಶ್ರವಣಾತ್ ಕಿಲ ॥ ೯॥

ಎಂದು ಹಿಂದಕ್ಕೆ ನೀನು ಹೇಳಿರುವಿ. ಅಂಥ ಮಾರ್ಗಶೀರ್ಷ ಮಾಸದ ಮಹಾತ್ಮೆಯನ್ನು ಯಥಾವತ್ತಾಗಿ ನಿನ್ನಿಂದ ತಿಳಿಯಲು ಇಚ್ಛಿಸಿದ್ದೇನೆ. ॥ ೪॥ ಹೇ ರಮಾಪತೇ! ಆ ಮಾಸದ ಅಭಿಮಾನಿ ದೇವತೆ ಯಾರು ? ಆ ಮಾಸದಲ್ಲಿ ಮಾಡಬೇಕಾದ ದಾನಗಳಾವವು ? ಮಾಸಸ್ನಾನದ ವಿಧಿ ಯಾವುದು ? ಪುರುಷರು ಆ ಮಾಸದಲ್ಲಿ ಮಾಡಬೇಕಾದ ಕರ್ತವ್ಯಗಳಾವವು ? ॥೫॥ ಆ ಮಾಸದಲ್ಲಿ ಯಾವ ಗ್ರಂಥಗಳ ಪಾರಾಯಣ ಮಾಡಬೇಕು? ಯಾರ ಪೂಜೆಯನ್ನು ವಿಶೇಷವಾಗಿ ಮಾಡಬೇಕು ? ಒಟ್ಟಿನಲ್ಲಿ ಆ ಮಾಸದಲ್ಲಿ ಏನೇನು ಕರ್ಮಗಳನ್ನು ಮಾಡಬೇಕೋ ಅದೆಲ್ಲವನ್ನೂ ತಿಳಿಸಿ ಅನುಗ್ರಹಿಸು'' ॥ ೬॥ ಆಗ ಶ್ರೀಹರಿಯು ಮಾರ್ಗಶೀರ್ಷ ಮಾಸದ ಮಹಾತ್ಮೆಯನ್ನು ಹೇಳಲು ಪ್ರಾರಂಭಿಸುತ್ತಾನೆ - ಅಯ್ಯಾ, ಮಹಾಭಾಗನಾದ ಮಗನೇ! ಸಕಲ ಸುಜೀವಿಗಳಿಗೂ ಕಲ್ಯಾಣವನ್ನೇ ಬಯಸುವ ನೀನು ಒಳ್ಳೆಯ ಪ್ರಶ್ನೆಗಳನ್ನು ಮಾಡಿರುವಿ. ಈ ಮಾಸವ್ರತವನ್ನು ಆಚರಿಸುವುದರಿಂದ ॥೭॥ ಇಷ್ಟಾಪೂರ್ತಾದಿ ಯಾಗಗಳನ್ನು ಮಾಡಿದಂತಾಗುತ್ತದೆ. ಸರ್ವಯಜ್ಞಗಳನ್ನು ಹಾಗೂ ಸಕಲ ತೀಥಗಳಲ್ಲಿ ಸ್ನಾನವನ್ನು ಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುವದೋ ಅದೆಲ್ಲವೂ ಮಾರ್ಗಶೀರ್ಷ ಮಾಸದಲ್ಲಿ ಕರ್ತವ್ಯ ಕರ್ಮಗಳನ್ನು ಮಾಡುವ ಮಾತ್ರದಿಂದಲೇ ಲಭ್ಯವಾಗುವದು. ॥೮॥ ಪ್ರಿಯ ಪುತ್ರನೇ! ಸುವರ್ಣ ತುಲಾಭಾರದ ಸುವರ್ಣ ದಾನದಿಂದ ಬರುವ ಫಲವು ಈ ಮಾಸದ ಮಾಹಾತ್ಮ್ಯ ಶ್ರವಣ ಮಾತ್ರದಿಂದ ದೊರಕುವದು. ॥ ೯॥ ಯಜ್ಞ , ಅಧ್ಯಯನ , ದಾನಾದಿಗಳಿಂದಾಗಲೀ, ಸರ್ವ ತೀರ್ಥಗಳಲ್ಲಿ ಮುಳುಗಿ ಅನೇಕ ಸಲ ಸ್ನಾನ ಮಾಡುವುದರಿಂದಾಗಲೀ,

ಯಜ್ಞಾಧ್ಯಯನದಾನಾದ್ಯೈಃ ಸರ್ವತೀರ್ಥಾವಗಾಹನೈಃ ।
ಸನ್ಯಾಸೇನ ಚ ಯೋಗೇನ ನಾಹಂ ವಶ್ಯೋಽಭವಂ ನೃಣಾಮ್ ॥ ೧೦॥

ಸ್ನಾನೇನ ದಾನೇನ ಚ ಪೂಜನೇನ
ನಧ್ಯಾನೇನ ಮೌನೇನ ಜಪಾದಿಭಿಶ್ಚ ।
ವಶ್ಯೋಽಥವಾ ಮಾರ್ಗಶಿರೇ ಚ ಮಾಸಿ
ತಥಾ ನ ಚಾನ್ಯೇಷು ಚ ಗುಹ್ಯಮುಕ್ತಮ್ ॥ ೧೧॥

ಅನ್ಯೈಃ ಧರ್ಮಾದಿಭಿಃ ಕೃತ್ವಾ ಗೋಪಿತಂ ಮಾರ್ಗಶೀರ್ಷಕಮ್ ।
ಮತ್ಪ್ರಾಪ್ತೇಃ ಕಾರಣಂ ಮತ್ವಾ ದೇವೈಃ ಸ್ವರ್ಗನಿವಾಸಿಭಿಃ ॥ ೧೨॥

ಯೇ ಕೇಚಿತ್ ಪುಣ್ಯಕರ್ಮಾಣೋ ಮಮ ಭಕ್ತಿಪರಾಯಣಾಃ ।
ಏಭಿರವಶ್ಯಂ ಕರ್ತವ್ಯೋ ಮಾರ್ಗಶೀರ್ಷೋ ಮದಾಪನಃ ॥ ೧೩॥

ಮಾರ್ಗಶೀರ್ಷಂ ನ ಕುರ್ವಂತಿ ಯೇ ನರಾ ಭಾರತಾಜಿರೇ ।
ಪಾಪರೂಪಾಶ್ಚ ತೇ ಜ್ಞೇಯಾಃ ಕಲಿಕಾಲವಿಮೋಹಿತಾಃ ॥ ೧೪॥

ಅಷ್ಟಸ್ವಪಿ ಚ ಮಾಸೇಷು ಯತ್ಫಲಂ ಲಭತೇ ನರಃ।
ತತ್ಫಲಂ ಪ್ರಾಪ್ಯತೇ ವತ್ಸ ಮಾಸೇ ಮಕರಗೇ ರವೌ ॥ ೧೫॥

ಸನ್ಯಾಸದಿಂದಾಗಲೀ, ಯೋಗದಿಂದಾಗಲೀ ನಾನು ಯಾರಿಗೂ ಸಾಮಾನ್ಯವಾಗಿ ವಶನಾಗುವವನಲ್ಲ. ॥ ೧೦॥ ಆದರೆ ಕೇವಲ ಮಾರ್ಗಶೀರ್ಷಮಾಸದಲ್ಲಿ ಮಾಡುವ ಸ್ನಾನ, ದಾನ, ಪೂಜೆ, ಧ್ಯಾನ, ಮೌನ, ಜಪಾದಿಗಳಿಂದ ನಾನು ಪ್ರಸನ್ನನಾಗಿ ನರರಿಗೆ ಅನುಗ್ರಹಿಸುವೆನು. ಉಳಿದ ಮಾಸಗಳಲ್ಲಿ ಇದಾವುದರಿಂದಲೂ ನಾನು ಒಲಿಯುವದಿಲ್ಲ. ಅತ್ಯಂತ ರಹಸ್ಯವಾದ ಈ ವಿಷಯವನ್ನು ನಿನಗೋಸ್ಕರ ಹೇಳಿದ್ದೇನೆ. ॥೧೧॥ ನನ್ನ ಪ್ರಾಪ್ತಿಗೆ ಈ ಸುಲಭೋಪಾಯವನ್ನು ಅರಿತ ಸ್ವರ್ಗನಿವಾಸಿಗಳಾದ ದೇವತೆಗಳು ಇತರ ಬೇರೆ ಧರ್ಮಾದಿಗಳನ್ನು ಕಲ್ಪಿಸಿ ಮಾರ್ಗಶೀರ್ಷ ಮಾಸದ ಧರ್ಮಗಳನ್ನು ಯಾರಿಗೂ ಗೊತ್ತಾಗದಂತೆ ಗುಪ್ತವಾಗಿಟ್ಟರು. ॥೧೨॥ ಯಾರು ಯಾರು ನನ್ನಲ್ಲಿ ಭಕ್ತಿಪರಾಯಣರಾಗಿ ಪುಣ್ಯಕರ್ಮಗಳನ್ನು ಮಾಡುವರೋ ಅವರೆಲ್ಲರೂ ಅವಶ್ಯವಾಗಿ ನನ್ನ ಸಾನಿಧ್ಯವನ್ನು ದೊರಕಿಸಿಕೊಡುವ ಮಾರ್ಗಶೀರ್ಷಮಾಸದ ಧರ್ಮಗಳನ್ನು ತಪ್ಪದೇ ಆಚರಿಸಬೇಕು. ॥೧೩॥ ಭರತಖಂಡದಲ್ಲಿದ್ದ ಈ ಮಾರ್ಗಶೀರ್ಷಮಾಸದ ಧರ್ಮಗಳನ್ನು ಕಲಿಕಾಲದಿಂದ ಮೋಹಿತರಾಗಿ ಯಾರು ಆಚರಿಸುವದಿಲ್ಲವೋ ಅವರು ಪಾಪಿಷ್ಠರೆಂದೇ ತಿಳಿಯಬೇಕು. ॥ ೧೪॥ ಹೇ ವತ್ಸಾ ! ಮನುಷ್ಯನು ಎಂಟು ಮಾಸಗಳಲ್ಲಿ ಆ ಆ ಮಾಸವ್ರತವನ್ನು ಆಚರಿಸುವುದರಿಂದ ಒಟ್ಟು ಏನು ಫಲವನ್ನು ಹೊಂದುವನೋ ಅದೆಲ್ಲ ಫಲವನ್ನು

ಮಾಘಾತ್ ಶತಗುಣಂ ಪುಣ್ಯಂ ವೈಶಾಖೇ ಮಾಸಿ ಲಭ್ಯತೇ ।
ತಸ್ಮಾತ್ ಶತಗುಣಂ ಪುಣ್ಯಂ ತುಲಾಸಂಸ್ಥೇ ದಿವಾಕರೇ ॥ ೧೬॥

ತಸ್ಮಾತ್ಕೋಟಿಗುಣಂ ಪುಣ್ಯಂ ವೃಶ್ಚಿಕಸ್ಥೇ ದಿವಾಕರೇ ।
ಮಾರ್ಗಶೀರ್ಷೋಽಧಿಕಸ್ತಸ್ಮಾತ್ ಸರ್ವದಾ ಚ ಮಮ ಪ್ರಿಯಃ ॥ ೧೭॥

ಉಷಸ್ಯುತ್ಥಾಯ ಯೋ ಮರ್ತ್ಯಃ ಸ್ನಾನಂ ವಿಧಿವದಾಚರೇತ್ ।
ತುಷ್ಟೋಽಹಂ ತಸ್ಯ ಯಚ್ಛಾಮಿ ಆತ್ಮಾನಮಪಿ ಪುತ್ರಕ ॥ ೧೮॥

ಅತ್ರಾಪ್ಯುದಾಹರಂತೀದಂ ಶೃಣು ಪುತ್ರ ಕಥಾಂತರಂ ।
ನಂದಗೋಪೋ ಮಾಹಾತ್ಮಾ ವೈ ಖ್ಯಾತೋ ಯೋ ಭೂತಲೇಽಭವತ್ ॥ ೧೯॥

ಯತ್ರ ವೃಂದಾವನೇ ರಮ್ಯೇ ಗೋಪಕನ್ಯಾಃ ಸಹಸ್ರಶಃ ।
ತಾಸಾಂ ಚಿತ್ತಂ ಚ ಮದ್ರೂಪೇ ಲಗ್ನಮಾಸೀತ್ಪುರಾನಘ ॥ ೨೦॥

ತಾಸಾಂ ಬುದ್ಧಿರ್ಮಯಾ ದತ್ತಾ ಮಾರ್ಗಶೀರ್ಷಾವಗಾಹನೇ ।
ತತಸ್ತಾಭಿಃ ಕೃತಂ ಸ್ನಾನಂ ಪ್ರಾತಃಕಾಲೇ ಯಥಾವಿಧಿ ॥ ೨೧॥

ಮಾಘಮಾಸ ಒಂದರಲ್ಲಿ ರವಿಯು ಮಕರದಲ್ಲಿರುವಾಗ ಆಚರಿಸುವ ಮಾಸ ವ್ರತದಿಂದ ಪಡೆಯುವನು ॥ ೧೫॥ ಮಾಘಮಾಸದಲ್ಲಿ ಸಂಪಾದಿಸುವ ಈ ಫಲಕ್ಕಿಂತಲೂ ಒಂದು ನೂರು ಪಟ್ಟು ಅಧಿಕವಾದ ಪುಣ್ಯಫಲವನ್ನು ವೈಶಾಖ ಮಾಸದಲ್ಲಿ ಹೊಂದುವನು. ಇದಕ್ಕಿಂತಲೂ ಒಂದು ನೂರು ಪಟ್ಟು ಅಧಿಕವಾದ ಫಲವನ್ನು ತುಲಾರಾಶಿಯಲ್ಲಿ ಸೂರ್ಯನಿರುವಾಗ ಮಾಡುವ ವ್ರತದಿಂದ ಪಡೆಯುವನು. ॥ ೧೬॥ ಇದಕ್ಕಿಂತಲೂ ಒಂದು ಕೋಟಿ ಪಟ್ಟು ಅಧಿಕವಾದ ಪುಣ್ಯಫಲವು ರವಿಯು ವೃಶ್ಚಿಕ ರಾಶಿಯಲ್ಲಿ ಇರುವಾಗ ದೊರೆಯುವದು. ಇದಕ್ಕಿಂತಲೂ ಮಾರ್ಗಶೀರ್ಷವು ಶ್ರೇಷ್ಠವಾದುದು. ಆದ್ದರಿಂದಲೇ ಈ ಮಾಸವು ನನಗೆ ಸದಾ ಪ್ರಿಯವಾಗಿದೆ. ॥೧೭॥ ಅಯ್ಯಾ, ಪ್ರಿಯಪುತ್ರನೇ ! ಈ ಮಾಸದಲ್ಲಿ ಪ್ರಾತಃಕಾಲದಲ್ಲೆದ್ದು ಪ್ರಾತರ್ವಿಧಿಗಳನ್ನೆಲ್ಲ ಮುಗಿಸಿ ಯಾವ ಮನುಷ್ಯನು ವಿಧಿಪೂರ್ವಕ ಪ್ರಾತಃಸ್ನಾನವನ್ನು ಮಾಡುವನೋ ಅವನಲ್ಲಿ ನಾನು ಅತ್ಯಂತ ಪ್ರಸನ್ನನಾಗಿ ನನ್ನನ್ನೇ ಕೊಡುವೆನು. ॥೧೮॥ ಮಗನೇ! ಈ ವಿಷಯದಲ್ಲಿ ಜ್ಞಾನಿಗಳು ಒಂದು ಪುರಾತನ ಸತ್ಯ ಕಥೆಯನ್ನು ಹೇಳುತ್ತಾರೆ. ಅದಾವುದೆಂದರೆ - ಹಿಂದಕ್ಕೆ ಮಹಾತ್ಮನಾದ ನಂದಗೋಪನೆಂಬುವನು ಭೂಮಿಯ ಮೇಲೆ ಅತ್ಯಂತ ಪ್ರಸಿದ್ಧನಾಗಿದ್ದನು. ॥ ೧೯॥ ನಂದಗೋಪನಿರುವ 'ವೃಂದಾವನ'ವೆಂಬ ರಮ್ಯವಾದ ಸ್ಥಳದಲ್ಲಿ ಸಾವಿರಾರು ಗೋಪಿಕಾ ಸ್ತ್ರೀಯರು ವಾಸಿಸುತ್ತಿದ್ದರು. ಆ ಸ್ತ್ರೀಯರೆಲ್ಲರೂ ನನ್ನಲ್ಲೇ ಅಚಲವಾದ ಮನಸ್ಸಿಟ್ಟವರಾಗಿದ್ದರು. ॥ ೨೦॥ ನನ್ನಲ್ಲಿ ಏಕಾಗ್ರಚಿತ್ತರಾದ ಆ ಸ್ತ್ರೀಯರನ್ನೆಲ್ಲ

ಪೂಜಾ ಕೃತಾ ಹವಿಷ್ಯಾನ್ನಂ ಭುಕ್ತಂ ತಾಭಿಃ ಕೃತಾ ನತಿಃ ।
ಏವಂ ಕೃತೇನ ವಿಧಿನಾ ಪ್ರಸನ್ನೋಽಹಂ ತತೋಽನಘ ॥ ೨೨॥

ವರೋ ದತ್ತೋ ಮಯಾತ್ಮಾ ವೈ ತಾಸಾಂ ತುಷ್ಟೋಽತ್ರ ವೈ ಕಿಲ ।
ತಸ್ಮಾನ್ನರೈಸ್ತು ಕರ್ತವ್ಯೋ ಮಾರ್ಗಶೀರ್ಷೋ ಯಥಾವಿಧಿ ॥ ೨೩॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಪ್ರಥಮೋಽಧ್ಯಾಯಃ ॥

ಮಾರ್ಗಶೀರ್ಷ ಮಾಸವು ಬಂದಾಗ ಪ್ರಾತಃಸ್ನಾನ ಮಾಡುವಂತೆ ಪ್ರೇರಿಸಿದೆನು. ನನ್ನ ಪ್ರೇರಣೆಯಂತೆ ಅವರು ಮಾರ್ಗಶೀರ್ಷದಲ್ಲಿ ಯಥಾವಿಧಿ ಪ್ರಾತಃಸ್ನಾನವನ್ನು ಮಾಡಿದರು.॥ ೨೧॥ ನಂತರ ನನ್ನ ಪೂಜೆಯನ್ನು ಮಾಡಿದರು. ನನಗೆ ಭಕ್ತಿಯಿಂದ ನಮಸ್ಕರಿಸಿದರು. ಹವಿಷ್ಯಾನ್ನವನ್ನು ಸೇವಿಸಿದರು. ಅವರು ಈ ಪ್ರಕಾರ ಎಲ್ಲವನ್ನು ವಿಧಿಪೂರ್ವಕ ಹಾಗೂ ಭಕ್ತಿಪೂರ್ವಕ ಮಾಡಿದ್ದರಿಂದ ನಾನು ಅತ್ಯಂತ ಸಂತುಷ್ಟನಾಗಿ ಆ ಗೋಪಿಕಾ ಸ್ತ್ರೀಯರಿಗೆ ವರವನ್ನು ಕೊಟ್ಟೆನು. ॥ ೨೨॥ ಅವರಲ್ಲಿ ಸುಪ್ರಸನ್ನನಾಗಿ ಅವರಿಗೆ ನನ್ನನ್ನೇ ಅರ್ಪಿಸಿದೆನು. ಆದ್ದರಿಂದ ಬ್ರಹ್ಮಾ ! ಮಾರ್ಗಶೀರ್ಷ ಮಾಸದಲ್ಲಿ ಮನುಷ್ಯರು ವಿಧಿಪೂರ್ವಕ ಮಾಸ ವಿಧಿಗಳನ್ನು ಆಚರಿಸಬೇಕು. ॥ ೨೩॥

ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಬ್ರಹ್ಮ ವಿಷ್ಣು ಸಂವಾದದಲ್ಲಿ ಮಾರ್ಗಶೀರ್ಷ ಮಾಸಮಹಾತ್ಮೆಯಲ್ಲಿ ''ಮಾರ್ಗಶೀರ್ಷ ವೈಶಿಷ್ಟ್ಯ''ವೆಂಬ ಪ್ರಥಮ ಅಧ್ಯಾಯವು ಸಮಾಪ್ತವಾಯಿತು.॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೨
ಸ್ನಾನವಿಧಿ, ಊರ್ಧ್ವಪುಂಡ್ರ ಧಾರಣ ವಿಧಿ

★

ಬ್ರಹ್ಮೋವಾಚ -
ತ್ವಯೋಕ್ತೋ ವಿಧಿಸಂಯುಕ್ತೋ ಮಾರ್ಗಶೀರ್ಷೋ ಮದಾಪನಃ ।
ಕೋ ವಿಧಿಸ್ತಸ್ಯ ದೇವೇಶ ಸರ್ವಂ ಮೇ ಬ್ರೂಹಿ ಕೇಶವ ॥ ೧॥

ಶ್ರೀ ಭಗವಾನುವಾಚ -
ರಾತ್ರ್ಯಾವಂತೇ ಸಮುತ್ಥಾಯ ಉಪಸ್ಪೃಶ್ಯ ಯಥಾವಿಧಿ ।
ನಮಸ್ಕೃತ್ವಾ ಗುರುಂ ಸ್ವೀಯಂ ಸಂಸ್ಮರೇನ್ಮಾಂ ಅತಂದ್ರಿತಃ ॥ ೨॥

ಸಹಸ್ರನಾಮಭಿಸ್ತುತ್ವಾ ಕೀರ್ತಯೇದ್ವಾಗ್ಯತಃ ಶುಚಿಃ ।
ಬಹಿರ್ಗ್ರಾಮಾತ್ಸಮುತ್ಸೃಜ್ಯ ಮಲಮೂತ್ರಂ ಯಥಾವಿಧಿ ॥ ೩॥

ಶೌಚಂ ಕೃತ್ವಾ ಯಥಾನ್ಯಾಯಂ ಆಚಮ್ಯ ಪ್ರಯತಃ ಶುಚಿಃ ।
ದಂತಧಾವನಪೂರ್ವಂ ಚ ಸ್ನಾನಂ ಕೃತ್ವಾ ಯಥಾವಿಧಿ ॥ ೪॥

ಶ್ರೀ ಹರೇ ಕೇಶವ ! ''ಅನೇಕ ನಿಯಮಗಳಿಂದ ಯುಕ್ತವಾದ ಮಾರ್ಗಶೀರ್ಷ ಮಾಸವು ಶ್ರೀಹರಿಯಾದ ನನ್ನನ್ನು ಹೊಂದಲು ಸರ್ವೋತ್ಕೃಷ್ಟವಾದ ಉಪಾಯವುಳ್ಳದ್ದಾಗಿದೆ'' ಎಂದು ನೀನು ಹೇಳಿದೆಯಷ್ಟೇ. ಹಾಗಾದರೆ ಹೇ ದೇವೇಶಾ! ಆ ಮಾಸದ ಮಹಿಮೋಪೇತವಾದ ವಿಧಿಗಳಾವವು ? ಅದೆಲ್ಲವನ್ನು ನನಗೆ ತಿಳಿಸಬೇಕು ಎಂದು ಚತುರ್ಮುಖ ಬ್ರಹ್ಮನು ವಿಜ್ಞಾಪಿಸಲು ॥೧॥ ಶ್ರೀಭಗವಂತನು ಹೇಳುತ್ತಾನೆ- ಹೇ ಬ್ರಹ್ಮಾ! ರಾತ್ರಿಯು ಕಳೆಯಲು ಬ್ರಾಹ್ಮೀಮುಹೂರ್ತದಲ್ಲೆದ್ದು ಕೈಗಳಿಗೆ ನೀರನ್ನು ಹಚ್ಚಿ ಕೊಂಡು, ಸ್ವಗುರುಗಳನ್ನು ನಮಸ್ಕರಿಸಿ ನಂತರ ಉತ್ಸಾಹ ಹಾಗೂ ಭಕ್ತಿಯುಕ್ತನಾದವನಾಗಿ ನನ್ನ ಸ್ಮರಣೆ ಮಾಡಬೇಕು. ॥ ೨॥ ಮೌನದಿಂದ ಇದ್ದು ಶ್ರೀಹರಿಯ ಸಹಸ್ರನಾಮಗಳನ್ನು ಉಚ್ಚರಿಸಬೇಕು. ಆಮೇಲೆ ಊರ ಹೊರಗೆ ಹೋಗಿ ಮಲಮೂತ್ರಾದಿಗಳನ್ನು ವಿಸರ್ಜಿಸಿ ॥೩॥ ಶೌಚಕರ್ಮವನ್ನು ವಿಧಿಪೂರ್ವಕ ಮಾಡಿ, ಮಂತ್ರಾಚಮನ ಮಾಡಿ ದಂತಧಾವನವನ್ನು ಮಾಡಿಕೊಳ್ಳಬೇಕು. ಅನಂತರ ಸ್ನಾನವನ್ನು ಮಾಡಬೇಕು. ॥೪॥ ತುಲಸೀಗಿಡದ ಒಳಗಿನ ಮೃತ್ತಿಕೆಯನ್ನು ತುಲಸೀದಲಸಹಿತವಾಗಿ ತೆಗೆದುಕೊಂಡು ಬಂದು ಅದನ್ನು ಮೂಲಮಂತ್ರದಿಂದ ಹಾಗೂ ಗಾಯತ್ರೀ ಮಂತ್ರದಿಂದ

ಆದಾಯ ತುಲಸೀಮೂಲಮೃದಂ ತತ್ಪತ್ರಸಂಯುತಾಮ್ ।
ಮೂಲಮಂತ್ರೇಣಾಭಿಮಂತ್ರ್ಯ ಗಾಯತ್ರ್ಯಾ ವಾ ಮಹಾಮತೇ ॥ ೫॥

ಮಂತ್ರೇಣೈವಾನುಲಿಪ್ತಾಂಗಃ ಸ್ನಾಯಾದಥಾಘಮರ್ಷಣಮ್ ।
ಅನುದ್ಧೃತ್ಯೈರುದ್ಧೃತ್ಯೈರ್ವಾ ಜಲೈಃ ಸ್ನಾನಂ ವಿಧೀಯತೇ ॥ ೬॥

ತೀರ್ಥಂ ಪ್ರಕಲ್ಪಯೇದ್ವಿದ್ವಾನ್ಮಂತ್ರೇಣಾನೇನ ಮಂತ್ರವಿತ್ ।
ಓಂ ನಮೋ ನಾರಾಯಣಾಯೇತಿ ಮೂಲಮಂತ್ರ ಉದಾಹೃತಃ ॥ ೭॥

ದರ್ಭಪಾಣಿಸ್ತು ವಿಧಿನಾ ಆಚಾಂತಃ ಪುರತಃ ಶುಚಿಃ ।
ಚತುರ್ಹಸ್ತಸಮಾಯುಕ್ತಂ ಚತುರಸ್ರಂ ಸಮಂತತಃ ॥ ೮॥

ಪ್ರಕಲ್ಪ್ಯಾವಾಹಯೇದ್ಗಂಗಾಂ ಏಭಿರ್ಮಂತ್ರೈರ್ವಿಚಕ್ಷಣಃ ।
ವಿಷ್ಣುಪಾದಪ್ರಸೂತಾऽಸಿ ವೈಷ್ಣವೀ ವಿಷ್ಣುದೇವತಾ ॥ ೯॥

ತ್ರಾಹಿ ನಸ್ತ್ವಂ ನಮಸ್ತಸ್ಮಾದಾಜನ್ಮ ಮರಣಾಂತಿಕಮ್ ।
ತಿಸ್ರಃ ಕೋಟ್ಯೋऽರ್ಧಕೋಟೀ ಚ ತೀರ್ಥಾನಾಂ ವಾಯುರಬ್ರವೀತ್ ॥೧೦॥

ಅಭಿಮಂತ್ರಿಸಿ ದೇವತೆಗಳನ್ನು ಆಹ್ವಾನಿಸಬೇಕು. ॥೫॥ ಮಂತ್ರ ಪಠಣಪೂರ್ವಕ ಮೈಗೆಲ್ಲ ಮೃತ್ತಿಕೆಯನ್ನು ಲೇಪಿಸಿಕೊಂಡು ಅಘಮರ್ಷಣ ಸ್ನಾನವನ್ನು ಮಾಡಬೇಕು. ಇದಾದ ಮೇಲೆ ಬಾವಿಯಿಂದ ಸೇದಿ ತಂದ ನೀರಿನಿಂದಾಗಲೀ ಅಥವಾ ಇತರ ಜಲಾಶಯಗಳಲ್ಲಿಯ ನೀರಿನಿಂದಾಗಲೀ ಶುದ್ಧ ಸ್ನಾನವನ್ನು ಮಾಡುವುದು ವಿಹಿತವಾಗಿದೆ. ॥ ೬॥ ಸ್ನಾನಕ್ಕಾಗಿ ಇರುವ ನೀರಿನಲ್ಲಿ ' ಓಂ ನಮೋ ನಾರಾಯಣಾಯ' ಎಂಬ ಮೂಲಮಂತ್ರವನ್ನು ಬರೆದು ಆ ನೀರನ್ನು ತೀರ್ಥವೆಂದು ಅನುಸಂಧಾನ ಮಾಡಿಕೊಳ್ಳಬೇಕು. ॥೭॥ ಕೈಯಲ್ಲಿ ದರ್ಭವನ್ನು ಹಿಡಿದುಕೊಂಡು ಅದರಿಂದ, ತನ್ನ ಸುತ್ತಲೂ ನೀರಿನಲ್ಲಿ ನಾಲ್ಕು ಹಸ್ತಗಳಷ್ಟು ಪ್ರಮಾಣದಷ್ಟು ಉದ್ದ ರೇಖೆಯನ್ನು ಎಳೆದು ಸುತ್ತಲೂ ಚೌಕೋನವನ್ನು ನಿರ್ಮಿಸಿ ॥೮॥ ಚೌಕೋನದೊಳಗಿನ ನೀರಿನಲ್ಲಿ ಈ ಮುಂದೆ ಹೇಳುವ ಮಂತ್ರವನ್ನು ಪಠಿಸುತ್ತ ಗಂಗೆಯನ್ನು ಆವಾಹಿಸಬೇಕು. 'ಹೇ ಗಂಗೆ! ನೀನು ವಿಷ್ಣುಪಾದದಿಂದ ಉದ್ಭೂತಳಾಗಿರುವಿ. ನೀನು ವೈಷ್ಣವೀ, ವಿಷ್ಣುದೇವತೆ. ॥೯॥ ನಮ್ಮ ಹುಟ್ಟಿದಾರಭ್ಯ ಮರಣಪರ್ಯಂತ ನೀನು ನಮ್ಮನ್ನು ಸಂರಕ್ಷಿಸು. ನಿನಗೆ ಅನಂತ ನಮಸ್ಕಾರಗಳು. ದ್ಯುಲೋಕ ಭೂಲೋಕ ಅಂತರಿಕ್ಷಗಳಲ್ಲಿ ಮೂರೂವರೆ ಕೋಟಿ ತೀರ್ಥಗಳು ಏನಿವೆಯೋ ಅವೆಲ್ಲವೂ ನಿನ್ನಲ್ಲಿ ಸನ್ನಿಹಿತವಾಗಿವೆ' ಎಂದು ವಾಯು ದೇವನು ಹೇಳಿದ್ದಾನೆ. ನೀನು ದೇವತೆಗಳಲ್ಲಿ ನಂದಿನಿ ಎಂದು ಮತ್ತು ನಲಿನೀ ಎಂದೂ ಪ್ರಸಿದ್ಧಳಾಗಿರುವಿ. ॥ ೧೦॥೧೧॥ ಹೇ ದಕ್ಷಪುತ್ರೀ,

ದಿವಿ ಭುವ್ಯಂತರಕ್ಷೇ ಚ ತಾನಿ ತೇ ಸಂತಿ ಜಾಹ್ನವೀ ।
ನಂದೀನೀತ್ಯೇವ ತೇ ನಾಮ ದೇವೇಷು ನಲಿನೀತಿ ಚ ॥ ೧೧॥

ದಕ್ಷಪುತ್ರೀ ಚ ವಿಹಗಾ ವಿಶ್ವಗಾ ಯೋಗಿನಾಂ ಮತಾ ।
ವಿದ್ಯಾಧರಾ ಸುಪ್ರಸನ್ನಾ ತಥಾ ಲೋಕಪ್ರಸಾಧಿನೀ ॥ ೧೨॥

ಕ್ಷೇಮಾ ಚ ಜಾಹ್ನವೀ ಚೈವ ಶಾಂತಾ ಶಾಂತಿಪ್ರದಾಯಿನೀ ।
ಏತಾನಿ ಪುಣ್ಯನಾಮಾನಿ ಸ್ನಾನಕಾಲೇ ಸದಾ ಪಠೇತ್ ॥ ೧೩॥

ಸದಾ ಸನ್ನಿಹಿತಾ ತತ್ರ ಗಂಗಾ ತ್ರಿಪಥಗಾಮಿನೀ ।
ಸಪ್ತವಾರಾಭಿಜಪ್ತೇನ ಕರಸಂಪುಟಯೋಜಿತಮ್ ॥ ೧೪॥

ಮೂರ್ಧ್ನಾ ಕೃತಾಂಜಲಿರ್ಭೂಯಃ ತ್ರಿಚತುಃ ಪಂಚ ಸಪ್ತ ವಾ ।
ಸ್ನಾನಂ ಕುರ್ಯಾನ್ಮೃದಾ ತದ್ವದಾಮಂತ್ರ್ಯಾನುವಿಧಾನತಃ ॥ ೧೫॥

ಅಶ್ವಕ್ರಾಂತೇ ರಥಕ್ರಾಂತೇ ವಿಷ್ಣುಕ್ರಾಂತೇ ವಸುಂಧರೇ ।
ಮೃತ್ತಿಕೇ ಹರ ಮೇ ಪಾಪಂ ಯನ್ಮಯಾ ದುಷ್ಕೃತಂ ಕೃತಮ್ ॥ ೧೬॥

ಉದ್ಧೃತಾಸಿ ವರಾಹೇಣ ಕೃಷ್ಣೇನ ಶತಬಾಹುನಾ ।
ನಮಸ್ತೇ ಸರ್ವಭೂತಾನಾಂ ಪ್ರಭವಾರಣಿ ಸುವ್ರತೇ ॥ ೧೭॥

ವಿಹಗಾ, ವಿಶ್ವಗಾ, ವಿದ್ಯಾಧರಾ, ಸುಪ್ರಸನ್ನೇ, ಲೋಕಪಾವನೀ, ॥೧೨॥ ಕ್ಷೇಮಾ, ಜಾಹ್ನವೀ, ಶಾಂತಾ, ಶಾಂತಿಪ್ರದಾಯಿನೀ, ಇವೇ ಮೊದಲಾದ ಪವಿತ್ರನಾಮಗಳನ್ನು ಸ್ನಾನಕಾಲದಲ್ಲಿ ಸದಾ ಪಠಿಸಬೇಕು. ॥ ೧೩॥ ಹೀಗೆ ೭ ಸಲ ಪಠಿಸುವುದರಿಂದ ಚೌಕೋನದೊಳಗಿನ ನೀರಿನಲ್ಲಿ ತ್ರಿಪಥಗಾಮಿನಿಯಾದ ಗಂಗೆಯು ಸನ್ನಿಹಿತಳಾಗುವಳು. ತನ್ನೆರಡು ಹಸ್ತಗಳನ್ನು ಸಂಪುಟಾಕಾರವಾಗಿ ಮಾಡಿ ॥೧೪॥ ಜೋಡಿಸಿ ಹಣೆಗೆ ಹಚ್ಚಿ ನಮಸ್ಕರಿಸಿ ಮಂತ್ರಪಠಣಪೂರ್ವಕ ಮೃತ್ತಿಕೆಯನ್ನು ಹಚ್ಚಿಕೊಂಡು ೩ ಸಲ ಇಲ್ಲವೇ ೫ ಸಲ ಇಲ್ಲವೇ ೭ ಸಲ ನೀರಿನಲ್ಲಿ ಮುಳುಗಿ ಮೃತ್ತಿಕಾ ಸ್ನಾನ ಮಾಡಬೇಕು. ॥೧೫॥ 'ಹೇ ಅಶ್ವಕ್ರಾಂತೆ, ರಥಕ್ರಾಂತೇ, ವಿಷ್ಣುಕ್ರಾಂತೆ, ವಸುಂಧರೆ, ಮೃತ್ತಿಕೆ ! ನನ್ನಿಂದ ತಿಳಿದಾಗಲೀ ತಿಳಿಯದಾಗಲೀ ಮಾಡಲ್ಪಟ್ಟ ದುಷ್ಕರ್ಮದಿಂದ ಬಂದ ಪಾಪವನ್ನೆಲ್ಲ ನಾಶಮಾಡು. ॥೧೬॥ ಶತಬಾಹುಗಳುಳ್ಳ ಕೃಷ್ಣವರ್ಣದ ವರಾಹರೂಪೀ ಪರಮಾತ್ಮನಿಂದ ನೀನು ಉದ್ಧೃತಳಾಗಿರುವಿ. ಹೇ ಸುವ್ರತೇ! ಸರ್ವಭೂತಗಳಿಗೆ ಉತ್ಪತ್ತಿ ಸ್ಥಾನವಾಗಿರುವ ನಿನಗೆ ಅನಂತ ನಮಸ್ಕಾರಗಳು' ॥೧೭॥ ಎಂದು ಪ್ರಾರ್ಥಿಸುತ್ತ ಮೃತ್ತಿಕಾಸ್ನಾನವನ್ನು ಮಾಡಬೇಕು.

ಏವಂ ಸ್ನಾತ್ವಾ ತತಃ ಪಶ್ಚಾದಾಚಮ್ಯ ಚ ವಿಧಾನತಃ ।
ಉತ್ಥಾಯ ವಾಸಸೀ ಶುಕ್ಲೇ ಕೂಲೇ ವೈ ಪರಿಧಾಯ ಚ ॥ ೧೮॥

ಆಚಮ್ಯ ತರ್ಪಯೇದ್ದೇವಾನ್ ಪಿತೃಂಶ್ಚೈವ ಋಷೀಂಸ್ತಥಾ ।
ನಿಷ್ಪೀಡ್ಯ ವಸ್ತ್ರಮಾಚಮ್ಯ ಧೌತವಸ್ತ್ರೌ ವಿಚೇಷ್ಟಿತಃ ॥ ೧೯॥

ವಿಮಲಾಂ ಮೃತ್ತಿಕಾಂ ರಮ್ಯಾಮಾದಾಯ ದ್ವಿಜಸತ್ತಮ ।
ಮಂತ್ರೇಣೈವಾಭಿಮಂತ್ರ್ಯಾಥ ಲಲಾಟಾದಿಷು ವೈಷ್ಣವಃ ॥ ೨೦॥

ಧಾರಯೇದೂರ್ಧ್ವಪುಂಡ್ರಾಣಿ ಯಥಾಸಂಖ್ಯಮತಂದ್ರಿತಃ ।
ಬ್ರಹ್ಮನ್ದ್ವಾದಶಪುಂಡ್ರಾಣಿ ಬ್ರಾಹ್ಮಣ್ಯಃ ಸತತಂ ವಹೇತ್ ॥ ೨೧॥

ಚತ್ವಾರಿ ಭೂಭೃತಾಂ ಪುತ್ರ ಪುಂಡ್ರಾಣಿ ದ್ವೇ ವಿಶಾಂ ಸ್ಮರೇತ್ ।
ಏಕಪುಂಡ್ರಶ್ಚ ನಾರೀಣಾಂ ಶೂದ್ರಾಣಾಂ ಚ ವಿಧೀಯತೇ ॥ ೨೨॥

ಲಲಾಟೇ ಉದರೇ ಚೈವ ವಕ್ಷೋ ವೈ ಕಂಠಕೂಬರೇ ।
ಕುಕ್ಷೋರ್ಬಾಹ್ವೋಃ ಕರ್ಣಯೋಶ್ಚ ಪೃಷ್ಠೇ ತ್ರಿಕೇ ಚ ವೈ ಶಿರಃ ॥ ೨೩॥

ಸ್ನಾನಾನಂತರ ದಂಡೆಯಲ್ಲಿ ನಿಂತು ಆಚಮನ ಮಾಡಿ ಶುಭ್ರವಾದ ಒಣಗಿದ ವಸ್ತ್ರಗಳನ್ನು ಉಟ್ಟುಕೊಳ್ಳಬೇಕು. ॥೧೮॥ ನಂತರ ಒದ್ದೆ ಬಟ್ಟೆಯನ್ನು ಹಿಡಿದುಕೊಂಡು ಪುನಃ ಆಚಮನ ಮಾಡಿ ದೇವತೆಗಳನ್ನು ಋಷಿಗಳನ್ನು, ಪಿತೃಗಳನ್ನು ಉದ್ದೇಶಿಸಿ ತರ್ಪಣಗಳನ್ನು ಕೊಡಬೇಕು.॥ ೧೯॥ ಹೇ ಬ್ರಹ್ಮಾ ! ಸ್ನಾನಾನಂತರ ಒಣಗಿದ ಶುಭ್ರ ವಸ್ತ್ರಗಳನ್ನು ಉಟ್ಟುಕೊಂಡ ನಂತರ ವಿಷ್ಣುಭಕ್ತನಾದವನು ಶುದ್ಧವಾದ ಮನೋಹರವಾದ ಗೋಪೀಚಂದನ ಮೃತ್ತಿಕೆಯನ್ನು ಮೂಲ ಮಂತ್ರದಿಂದ ಅಭಿಮಂತ್ರಿಸಿ ಅದರಿಂದ ತನ್ನ ಹಣೆ ಮೊದಲಾದ ಅಂಗಗಳಲ್ಲಿ ॥೨೦॥ ಬೇಸರವಿಲ್ಲದವನಾಗಿ ಊರ್ಧ್ವಪುಂಡ್ರಗಳನ್ನು ಯಥಾವಿಧಿ ಹಾಗೂ ನಿಯತ ಸಂಖ್ಯೆಗಳನ್ನು ಮೀರದೇ ಧಾರಣ ಮಾಡಿಕೊಳ್ಳಬೇಕು. ಹೇ ಬ್ರಹ್ಮಾ! ಬ್ರಾಹ್ಮಣನಾದವನು ದ್ವಾದಶ ಊರ್ಧ್ವ ಪುಂಡ್ರಗಳನ್ನು ಧರಿಸಬೇಕು. ॥೨೧॥ ಕ್ಷತ್ರಿಯರಿಗೆ ೪ ಪುಂಡ್ರಗಳು, ವೈಶ್ಯರಿಗೆ ೨ ಪುಂಡ್ರಗಳು, ಸ್ತ್ರೀಯರು ಮತ್ತು ಶೂದ್ರರಿಗೆ ೧ ಪುಂಡ್ರವು ವಿಧಿಸಲ್ಪಟ್ಟಿದೆ. ॥೨೨॥ ಬ್ರಾಹ್ಮಣನಾದವನು ಲಲಾಟ, ಉದರ, ವಕ್ಷಃಸ್ಥಲ, ಕಂಠ, ಕುಕ್ಷಿ, ಬಾಹುಗಳು, ಕರ್ಣಗಳ ಕೆಳಭಾಗ, ಪೃಷ್ಠ, ಕುತ್ತಿಗೆಯ ಹಿಂಬದಿ ಮತ್ತು ಶಿರಸ್ಸು ಈ ಸ್ಥಳಗಳಲ್ಲಿ ॥ ೨೩॥ ಒಟ್ಟು ಹನ್ನೆರಡು ತಿಲಕಗಳನ್ನು (ಊರ್ಧ್ವಪುಂಡ್ರಗಳನ್ನು) ಹಚ್ಚಿಕೊಳ್ಳಬೇಕು. ಕ್ಷತ್ರಿಯನು ಲಲಾಟ, ಹೃದಯ, ಬಾಹುಗಳು,

ತಿಲಕಾ ದ್ವಾದಶಾ ಪ್ರೋಕ್ತಾ ಬ್ರಾಹ್ಮಣಸ್ಯ ಸದಾನಘ ।
ಲಲಾಟೇ ಹೃದಿ ಬಾಹ್ವೋಶ್ಚ ಕ್ಷಾತ್ರಃ ಪುಂಡ್ರಾಣಿ ಧಾರಯೇತ್ ॥ ೨೪॥

ಲಲಾಟೇ ಹೃದಯೇ ವೈಶ್ಯೋ ಭಾಲೇ ವೈ ಶೂದ್ರಯೋಷಿತಾಮ್ ।
ಲಲಾಟೇ ಕೇಶವಂ ಧ್ಯಾಯೇನ್ನಾರಾಯಣಮಥೋದರೇ ॥ ೨೫॥

ವಕ್ಷಃಸ್ಥಲೇ ಮಾಧವಂ ಚ ಗೋವಿಂದಂ ಕಂಠಕೂಬರೇ ।
ವಿಷ್ಣುಂ ಚ ದಕ್ಷಿಣೇ ಕುಕ್ಷೌ ಬಾಹ್ವೋಶ್ಚ ಮಧುಸೂದನಮ್ ॥ ೨೬॥

ತ್ರಿವಿಕ್ರಮಂ ಕರ್ಣರಂಧ್ರೇ ವಾಮನಂ ವಾಮಪಾರ್ಶ್ವಕೇ ।
ಶ್ರೀಧರಂ ವಾಮಬಾಹೌ ಚ ಹೃಷೀಕೇಶಂ ಚ ಕರ್ಣಕೇ ॥ ೨೭॥

ಪೃಷ್ಠೇ ತು ಪದ್ಮನಾಭಃ ಸ್ಯಾತ್ತ್ರಿಕೇ ದಾಮೋದರಂ ನ್ಯಸೇತ್ ।
ತತ್ಪ್ರಕ್ಷಾಲನತೋಯೇನ ವಾಸುದೇವಂ ತು ಮೂರ್ಧನಿ ॥ ೨೮॥

ಏವಂ ಕಾರ್ಯಂ ಬ್ರಾಹ್ಮಣಸ್ಯ ಕ್ಷತ್ರಿಯಸ್ಯೋಪಧಾರಯೇತ್ ।
ಲಲಾಟೇ ಕೇಶವಂ ಧ್ಯಾಯೇತ್ ಹೃದಯೇ ಮಾಧವಂ ತಥಾ । ॥೨೯॥

ಬಾಹ್ವೋಶ್ಚ ಉಭಯೋರ್ವತ್ಸ ಸ್ಮರೇದ್ವೈ ಮಧುಸೂದನಮ್ ।
ಕ್ಷತ್ರಿಯಸ್ಯ ವಿಧಿಃ ಪ್ರೋಕ್ತೋ ವೈಶ್ಯಕೃತ್ಯಂ ನಿಶಾಮಯ ॥ ೩೦॥

ಈ ಸ್ಥಳಗಳಲ್ಲಿ ಪುಂಡ್ರಗಳನ್ನು ಧರಿಸಬೇಕು. ॥ ೨೪॥ ವೈಶ್ಯನು ಲಲಾಟ ಮತ್ತು ಹೃದಯದಲ್ಲಿಯೂ, ಶೂದ್ರರು ಹಾಗೂ ಸ್ತ್ರೀಯರು ಲಲಾಟದಲ್ಲಿಯೂ ಪುಂಡ್ರವನ್ನು ಧರಿಸಬೇಕು. ಲಲಾಟದಲ್ಲಿ ಕೇಶವನನ್ನು, ಉದರದಲ್ಲಿ ನಾರಾಯಣನನ್ನು ॥ ೨೫ ॥ ವಕ್ಷಃಸ್ಥಳದಲ್ಲಿ ಮಾಧವನನ್ನು, ಕಂಠದಲ್ಲಿ ಗೋವಿಂದನನ್ನು, ಕುಕ್ಷಿಯ ಬಲಭಾಗದಲ್ಲಿ ವಿಷ್ಣುವನ್ನು,ಬಲಬಾಹುವಿನಲ್ಲಿ ಮಧುಸೂದನನ್ನು ॥ ೨೬॥ ಬಲಕರ್ಣದ ಕೆಳಗೆ ತ್ರಿವಿಕ್ರಮನನ್ನು,ಕುಕ್ಷಿಯ ಎಡಭಾಗದಲ್ಲಿ ವಾಮನನನ್ನು, ಎಡಬಾಹುವಿನಲ್ಲಿ ಶ್ರೀಧರನನ್ನು, ಎಡಕರ್ಣದ ಕೆಳಗೆ ಹೃಷೀಕೇಶನನ್ನು, ॥ ೨೭॥ ಪೃಷ್ಠಭಾಗದಲ್ಲಿ ಪದ್ಮನಾಭನನ್ನು, ಕುತ್ತಿಗೆಯ ಹಿಂಬದಿಯಲ್ಲಿ ದಾಮೋದರನನ್ನು ಈ ಪ್ರಕಾರ ದೇಹದ ಬೇರೆ ಬೇರೆ ಸ್ಥಳಗಳಲ್ಲಿ ಪರಮಾತ್ಮನ ಬೇರೆ ಬೇರೆ ನಾಮಗಳನ್ನು ಉಚ್ಚರಿಸುತ್ತ ಊರ್ಧ್ವಪುಂಡ್ರಗಳನ್ನು ಧರಿಸಬೇಕು. ತೊಳೆದ ನೀರಿನಿಂದ ಶಿರಸ್ಸಿನಲ್ಲಿ ವಾಸುದೇವನನ್ನು ಸ್ಮರಿಸಿ ಊರ್ಧ್ವ ಪುಂಡ್ರವನ್ನು ಹಚ್ಚಿಕೊಳ್ಳಬೇಕು. ॥ ೨೮॥ ಈ ವಿಧಾನವು ಬ್ರಾಹ್ಮಣನಿಗೆ ಹೇಳಲ್ಪಟ್ಟಿದೆ. ಕ್ಷತ್ರಿಯನಾದವನು, ಕೇಶವನನ್ನು ಧ್ಯಾನಿಸುತ್ತ ಲಲಾಟದಲ್ಲಿ,ಮಾಧವನನ್ನು ಧ್ಯಾನಿಸುತ್ತ ಹೃದಯಭಾಗದಲ್ಲಿ ॥ ೨೯॥ ಮಧುಸೂದನನ್ನು ಧ್ಯಾನಿಸುತ್ತ ತನ್ನೆರಡೂ

ಲಲಾಟೇ ಕೇಶವಂ ಧ್ಯಾಯೇತ್ ಹೃದಯೇ ಮಾಧವಂ ತಥಾ ।
ಯೋಷಿಚ್ಛೂದ್ರೌ ಸ್ಮರೇದ್ದೇವಂ ಕೇಶವಂ ಭಾಲದೇಶಕೇ ॥ ೩೦॥

ಅನೇನ ವಿಧಿನಾ ಕುರ್ಯಾತ್ಪುಂಡ್ರಾಣಿ ಮಮ ತುಷ್ಟಯೇ ।
ಶ್ಯಾಮಂ ಶಾಂತಿಕರಂ ಪ್ರೋಕ್ತಂ ರಕ್ತಂ ವಶ್ಯಕರಂ ತಥಾ ॥ ೩೨॥

ಶ್ರೀಕರಂ ಪೀತಮಿತ್ಯಾಹುಃ ಶ್ವೇತಂ ಮೋಕ್ಷಕರಂ ಶುಭಮ್ ।
ಏಕಾಂತಿನೋ ಮಹಾಭಾಗಾಃ ಸರ್ವಲೋಕಹಿತೇ ರತಾಃ ॥ ೩೩॥

ಸಾಂತರಾಲಂ ಪ್ರಕುರ್ವಂತಿ ಪುಂಡ್ರಂ ಹರಿಪದಾಕೃತಿಮ್ ।
ಮಧ್ಯೇ ಛಿದ್ರೇಣ ಸಂಯುಕ್ತಮೇತದ್ಧಿ ಹರಿಮಂದಿರಮ್ ॥ ೩೪॥

ಊರ್ಧ್ವಂ ಸೌಮ್ಯಮೃಜುಸೌಕ್ಷ್ಮ್ಯಂ ಸುಪಾರ್ಶ್ವಂ ಸುಮನೋಹರಮ್ ।
ನಿರಂತರಾಲಂ ಯಃ ಕುರ್ಯಾದೂರ್ಧ್ವಪುಂಡ್ರಂ ದ್ವಿಜಾಧಮಃ ॥ ೩೫॥

ಬಾಹುಗಳಲ್ಲಿ ಊರ್ಧ್ವಪುಂಡ್ರಗಳನ್ನು ಧರಿಸಬೇಕು. ಈ ಕ್ರಮವು ಕ್ಷತ್ರಿಯನಿಗಾಗಿ ಹೇಳಲ್ಪಟ್ಟಿದ್ದು ವೈಶ್ಯರ ಕ್ರಮವನ್ನು ತಿಳಿಸುವೆನು ಕೇಳು. ॥ ೩೦॥ ವೈಶ್ಯರು ಕೇಶವನನ್ನು ಸ್ಮರಿಸುತ್ತ ಲಲಾಟದಲ್ಲಿ ಮತ್ತು ಮಾಧವನನ್ನು ಸ್ಮರಿಸುತ್ತ ಹೃದಯದಲ್ಲಿ ಊರ್ಧ್ವಪುಂಡ್ರಗಳನ್ನು ಧರಿಸಬೇಕು. ಇನ್ನು ಸ್ತ್ರೀಯರು ಮತ್ತು ಶೂದ್ರರು ಕೇಶವನನ್ನು ಸ್ಮರಿಸುತ್ತ ಲಲಾಟದಲ್ಲಿ ಮಾತ್ರ ಊರ್ಧ್ವಪುಂಡ್ರವನ್ನು ಧರಿಸಬೇಕು. ॥ ೩೧॥ ಹೇ ಬ್ರಹ್ಮಾ! ಇದುವರೆಗೆ ತಿಳಿಸಿದಂತೆಯೇ ಆ ಆ ವರ್ಣದವರು ಮತ್ತು ಸ್ತ್ರೀಯರು ನನ್ನ ಪ್ರೀತ್ಯರ್ಥವಾಗಿ ಊರ್ಧ್ವ ಪುಂಡ್ರಗಳನ್ನು ಧರಿಸಬೇಕು. ಊರ್ಧ್ವಪುಂಡ್ರಗಳು ನೀಲ ಅಥವಾ ಕಪ್ಪು ವರ್ಣವಾಗಿದ್ದರೆ ಶಾಂತಿಕರವೆಂದೂ, ರಕ್ತವರ್ಣದ್ದಾಗಿದ್ದರೆ ವಶೀಕಾರಿಯೆಂದೂ, ॥ ೩೨॥ ಹಳದೀ ವರ್ಣದವು ಶ್ರೀಕರ (ಸಂಪತ್ ಪ್ರದಾಯಕವು)ವೆಂದೂ, ಶ್ವೇತವರ್ಣದ್ದು ಮೋಕ್ಷಕಾರಿಯೆಂದೂ ತಿಳಿಯಲ್ಪಟ್ಟಿವೆ. ಸರ್ವ ಜನರ ಕಲ್ಯಾಣದಲ್ಲಿ ಆಸಕ್ತರಾದ ನನ್ನ ಏಕಾಂತ ಭಕ್ತರಾದ ಮಹಾತ್ಮರು ॥ ೩೩॥ ತಾವು ಧರಿಸುವ ಪ್ರತಿಯೊಂದು ಪುಂಡ್ರವನ್ನು ಹರಿಪಾದದ ಆಕಾರದಂತೆ ಮಾಡಿ ಮಧ್ಯಭಾಗದಲ್ಲಿ ಅವಕಾಶವನ್ನು ಮಾಡಿ ಹಚ್ಚಿಕೊಳ್ಳುವರು. ಛಿದ್ರವು ಹರಿಮಂದಿರವೆಂಬ ಅನುಸಂಧಾನದಿಂದ ಪ್ರತಿಯೊಂದು ಪುಂಡ್ರದ ಮಧ್ಯಭಾಗದಲ್ಲಿ ಛಿದ್ರವನ್ನು ಮಾಡುವರು. ॥ ೩೪॥ ಊರ್ಧ್ವ ಪುಂಡ್ರವನ್ನು ಮಸುಕಾಗಿ, ಸರಳ ರೇಖಾಕಾರವಾಗಿ, ಚಿಕ್ಕದಾಗಿ, ದಟ್ಟವಾಗಿ ಆಕರ್ಷಕವಾಗುವಂತೆ ಮಧ್ಯದಲ್ಲಿ ಛಿದ್ರ ಮಾಡದೇ ಯಾರು ಹಚ್ಚಿ ಕೊಳ್ಳುವರೋ ಅವರು ದ್ವಿಜಾಧಮರೇ ಸರಿ. ॥ ೩೫॥ ಅವರು ಹೀಗೆ ಮಾಡುವುದರಿಂದ ಛಿದ್ರದಲ್ಲಿ ಲಕ್ಷ್ಮಿಯಿಂದ ಸಹಿತನಾಗಿ

ಸ ಹಿ ತತ್ರ ಸ್ಥಿತಂ ಲಕ್ಷ್ಮ್ಯಾ ಸಹ ಮಾಂ ಚ ವ್ಯಪೋಹತಿ ।
ಅಚ್ಛಿದ್ರಮೂರ್ಧ್ವಪುಂಡ್ರಂ ತು ಯೇ ಕುರ್ವಂತಿ ದ್ವಿಜಾಧಮಾಃ ॥ ೩೬॥

ತೈರ್ಲಲಾಟೇ ಶುನಃಪಾದಂ ನಿಕ್ಷಿಪ್ತಂ ವೈ ನ ಸಂಶಯಃ ।
ತಸ್ಮಿಂಚ್ಛಿದ್ರಾನ್ವಿತಂ ಪುಂಡ್ರಂ ಮಹಚ್ಛಿದ್ರಂ ಶುಭಾನ್ವಿತಮ್ ॥ ೩೭॥

ಧಾರಯೇತ್ ಬ್ರಾಹ್ಮಣೋ ನಿತ್ಯಂ ಹರಿಸಾಲೋಕ್ಯಸಿದ್ಧಯೇ ॥ ೩೮॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ದ್ವಿತೀಯೋಽಧ್ಯಾಯಃ॥

ವಾಸಮಾಡಬೇಕಾಗಿದ್ದ ನನ್ನನ್ನು ದೂರೀಕರಿಸಿದಂತಾಗುತ್ತದೆ. ॥ ೩೬ ॥ ಛಿದ್ರವಿಲ್ಲದೇ ಊರ್ಧ್ವಪುಂಡ್ರವನ್ನು ಧಾರಣ ಮಾಡುವ ದ್ವಿಜಾಧಮರು ತಮ್ಮ ಲಲಾಟದಲ್ಲಿ ಶ್ವಾನದ ಪಾದವನ್ನು ಅಂಕಿಸಿದಂತೆಯೇ ಸರಿ. ಇದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ ಶ್ರೀಹರಿಯ ಸಾಲೋಕ್ಯ ಪ್ರಾಪ್ತಿಯಾಗಬೇಕಾದರೆ ಬ್ರಾಹ್ಮಣರು ತಾವು ಧರಿಸುವ ಪ್ರತಿಯೊಂದು ಊರ್ಧ್ವಪುಂಡ್ರದ ಮಧ್ಯಭಾಗವನ್ನು ಶುಭಕರವಾದ ದೊಡ್ಡ ಛಿದ್ರದಿಂದ ಕೂಡಿರುವಂತೆ ಮಾಡಿಕೊಳ್ಳಬೇಕು. ॥ ೩೭॥ ೩೮॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಮಾರ್ಗಶೀರ್ಷಮಾಸಮಹಾತ್ಮೆಯಲ್ಲಿ ಬ್ರಹ್ಮ-ವಿಷ್ಣುಸಂವಾದದಲ್ಲಿ "ಸ್ನಾನವಿಧಿ ಮತ್ತು ಊರ್ಧ್ವಪುಂಡ್ರಧಾರಣ ವಿಧಿ" ಎಂಬ ಎರಡನೆಯ ಅಧ್ಯಾಯವು ಸಮಾಪ್ತವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೩
ಊರ್ಧ್ವಪುಂಡ್ರ ಹಾಗೂ ಮುದ್ರಾಧಾರಣೆ ಮಹಾತ್ಮೆ

★

ಬ್ರಹ್ಮೋವಾಚ -

ಪುಂಡ್ರಂ ಕತಿವಿಧಂ ಕಾರ್ಯಂ ಪ್ರಬ್ರೂಹಿ ಮಮ ಕೇಶವ ।
ಪುಂಡ್ರಾಣಾಂ ಶ್ರವಣೇಽತೀವ ಕೌತುಕಂ ಮಮ ಜಾಯತೇ ॥ ೧॥

ಶ್ರೀಭಗವಾನುವಾಚ -

ಶೃಣು ಪುತ್ರ ಪ್ರವಕ್ಷ್ಯಾಮಿ ಪುಂಡ್ರಂ ಚ ವಿವಿಧಂ ಸ್ಮೃತಮ್ ।
ತುಲಸೀಮೃತ್ಸ್ನಯಾ ಸಾರ್ಧಂ ಗೋಪೀಚಂದನಮೇವ ಚ ॥ ೨॥

ಹರಿಚಂದನತಃ ಕಾರ್ಯಂ ಪುಂಡ್ರಂ ತತ್ರ ವಿಚಕ್ಷಣೈಃ ।
ಗೋಪೀಚಂದನಮಾಹಾತ್ಮ್ಯಂ ನಿಬೋಧ ಗದತೋ ಮಮ ॥ ೩॥

ಶ್ರೀಕೃಷ್ಣತುಲಸೀಮೂಲಮೃದಮಾದಾಯ ಭಕ್ತಿಮಾನ್ ।
ಧಾರಯೇದೂರ್ಧ್ವಪುಂಡ್ರಾಣಿ ಹರಿಸ್ತತ್ರ ಪ್ರಸೀದತಿ ॥ ೪॥

'ಹೇ ಕೇಶವಾ ! ಪುಂಡ್ರಧಾರಣೆಯ ಬಗ್ಗೆ ಕೇಳಿ ತಿಳಿದುಕೊಳ್ಳಲು ನನಗೆ ಬಹು ಕೌತುಕವುಂಟಾಗಿದೆ. ಆದ್ದರಿಂದ ಎಷ್ಟು ಪ್ರಕಾರದ ಪುಂಡ್ರವನ್ನು ಧರಿಸಬೇಕೆಂಬ ಬಗ್ಗೆ ತಿಳಿಸಿ ಅನುಗ್ರಹಿಸು' ಎಂದು ಚತುರ್ಮುಖ ಬ್ರಹ್ಮನು ಪ್ರಾರ್ಥಿಸಲು ॥ ೧॥ ಶ್ರೀ ಭಗವಂತನು ಹೇಳುತ್ತಾನೆ - 'ಹೇ ವತ್ಸಾ ! ಹೇಳುವೆನು ಕೇಳು. ಪುಂಡ್ರವು ಬಹು ಪ್ರಕಾರದ್ದಾಗಿದೆ. ತುಲಸೀ ಮೃತ್ತಿಕೆ ಅಥವಾ (ತುಲಸೀ ಮೃತ್ತಿಕೆಯೊಂದಿಗೆ) ಕೇವಲ ಗೋಪೀಚಂದನ ಇವುಗಳಿಂದ ಪುಂಡ್ರಧಾರಣೆ ಮಾಡಿಕೊಳ್ಳಬೇಕು. ॥ ೨॥ ಜ್ಞಾನಿಗಳಾದವರು ಹರಿಚಂದನದಿಂದ ಪುಂಡ್ರಗಳನ್ನು ಧರಿಸಬೇಕು. ಹೇ ಬ್ರಹ್ಮಾ ! ಗೋಪೀಚಂದನದ ಮಹಾತ್ಮೆಯನ್ನು ನಿನಗೆ ತಿಳಿಸುವೆನು ಕೇಳು. ॥ ೩॥ ಭಕ್ತಿಯುತನಾದವನು ಮೊದಲು ಶ್ರೀಕೃಷ್ಣತುಲಸೀ ಮೂಲದ ಮೃತ್ತಿಕೆಯನ್ನು ತಂದು ಊರ್ಧ್ವಪುಂಡ್ರಗಳನ್ನು ಧರಿಸಬೇಕು. ಹೀಗೆ ಮಾಡುವುದರಿಂದ ಶ್ರೀಹರಿಯು ಪ್ರೀತನಾಗುತ್ತಾನೆ. ॥ ೪॥ ದ್ವಾರಕೆಯಲ್ಲಿ ದೊರಕುವ ಮೃತ್ತಿಕೆಯನ್ನು ತಂದು ಕೈಯಲ್ಲಿ ಚಂದನ ಮಾಡಿಕೊಂಡು ಯಾರು ತಮ್ಮ ಲಲಾಟದಲ್ಲಿ ನಿತ್ಯದಲ್ಲಿಯೂ

ಯೋ ಮೃತ್ತಿಕಾಂ ದ್ವಾರವತೀಸಮುದ್ಭವಾಂ
ಕರೇ ಸಮಾದಾಯ ಲಲಾಟಪಟ್ಟೇ ।
ಕರೋತಿ ನಿತ್ಯಂ ಪುರುಷೋರ್ಧ್ವಪುಂಡ್ರಂ
ಕ್ರಿಯಾಫಲಂ ಕೋಟಿಗುಣಂ ತದಾ ಭವೇತ್ ॥ ೫॥

ಕ್ರಿಯಾವಿಹೀನಂ ಯದಿ ಕರ್ಮಹೀನಂ
ಶ್ರದ್ಧಾವಿಹೀನಂ ಯದಿ ಕಾಲವರ್ಜಿತಮ್ ।
ಕೃತ್ವಾ ಲಲಾಟೇ ಯದಿ ಗೋಪಿಚಂದನಂ
ಪ್ರಾಪ್ನೋತಿ ತತ್ಕರ್ಮಫಲಂ ಸದಾವ್ಯಯಮ್ ॥ ೬॥

ಗೋಪೀಚಂದನಸಂಭವಂ ಸುರುಚಿರಂ ಕೃತ್ವಾ ಲಲಾಟೇ ದ್ವಿಜೋ
ನಿತ್ಯಂ ಧಾರಯತೇ ಯದಿ ಪ್ರತಿದಿನಂ ರಾತ್ರೌ ದಿವಾ ಸರ್ವದಾ ।
ಯತ್ಪುಣ್ಯಂ ಕುರುಜಾಂಗಲೇ ರವಿಗ್ರಹೇ ಮಾಘೇ ಪ್ರಯಾಗೇ ತಥಾ
ತತ್ಪ್ರಾಪ್ನೋತಿ ತತೋಽಧಿಕಂ ಮಮ ಗೃಹೇ ಸಂತಿಷ್ಠತೇ ದೇವವತ್ ॥ ೭॥

ಯಸ್ಮಿನ್ ಗೃಹೇ ತಿಷ್ಠತಿ ಗೋಪಿಚಂದನಂ
ಭಕ್ತ್ಯಾ ಲಲಾಟೇ ಮನುಜೋ ಬಿಭರ್ತಿ ಚೇತ್ ।
ತಸ್ಮಿನ್ ಗೃಹೇಽಹಂ ನಿವಸಾಮಿ ಸರ್ವದಾ
ಶ್ರಿಯಾನ್ವಿತಃ ಕಂಸನಿಹಾ ಚತುರ್ಮುಖ ॥ ೮॥

ಊರ್ಧ್ವಪುಂಡ್ರವನ್ನು ಧರಿಸುವರೋ ಅಂಥವರ ಪ್ರತಿಯೊಂದು ಸತ್ಕಾರ್ಯಕ್ಕೆ ಕೋಟಿಪಟ್ಟು ಪುಣ್ಯಫಲವು ಪ್ರಾಪ್ತವಾಗುವದು. ॥ ೫॥ ಪುರುಷನು ತಾನು ಮಾಡುವ ಕರ್ಮವು ಶಿಷ್ಟಾಚಾರ ಕ್ರಮಗಳಿಂದ ರಹಿತವಾಗಿದ್ದರೂ, ಶ್ರದ್ಧಾಪೂರ್ವಕವಾಗಿ ಇರದಿದ್ದರೂ, ಸಕಾಲದಲ್ಲಿ ಮಾಡಲ್ಪಟ್ಟಿರದಿದ್ದರೂ ತನ್ನ ಲಲಾಟದಲ್ಲಿ ಗೋಪೀಚಂದನದಿಂದ ಊರ್ಧ್ವಪುಂಡ್ರಾದಿಗಳನ್ನು ಧರಿಸಿದ್ದವನಾಗಿದ್ದರೆ ಅವನು ತನ್ನೆಲ್ಲ ಕರ್ಮಗಳಿಗೂ ಸದಾ ಅಕ್ಷಯವಾದ ಶುಭಫಲವನ್ನು ಹೊಂದುವನು. ॥ ೬॥ ಪ್ರತಿದಿನ ಹಗಲು ರಾತ್ರಿ ಅಂದರೆ ಸದಾ ಯಾರು ತಪ್ಪದೇ ತಮ್ಮ ಲಲಾಟದಲ್ಲಿ ಗೋಪೀಚಂದನದಿಂದ ಆಕರ್ಷಕವಾದ ಊರ್ಧ್ವಪುಂಡ್ರವನ್ನು ಧರಿಸಿರುವರೋ ಅವರು, ಸೂರ್ಯಗ್ರಹಣಾದಿ ಪರ್ವಪುಣ್ಯಕಾಲದಲ್ಲಿ ಕುರುಕ್ಷೇತ್ರದಲ್ಲಾಗಲೀ ಅಥವಾ ಮಾಘದಲ್ಲಿ ಪ್ರಯಾಗದಲ್ಲಾಗಲೀ ತೀರ್ಥನದೀ ಸ್ನಾನದಿಂದ ಬರುವ ಪುಣ್ಯವನ್ನು ಹೊಂದುವರಲ್ಲದೇ, ಅದಕ್ಕೂ ಅಧಿಕವಾದ ಪುಣ್ಯವನ್ನು ಹೊಂದಿ ನನ್ನ ಲೋಕದಲ್ಲಿ ದೇವತೆಗಳಂತೆ ವಾಸವಾಗಿರುವರು. ॥ ೭॥ ಅಯ್ಯಾ ಚತುರ್ಮುಖ ಬ್ರಹ್ಮಾ! ಯಾರ ಮನಿಯಲ್ಲಿ ಗೋಪೀಚಂದನವಿರುವದೋ ಮತ್ತು ಯಾರು ಈ ಗೋಪೀಚಂದನದಿಂದ ಪ್ರತಿದಿನ ತಮ್ಮ

ಯೋ ಧಾರಯೇದ್ವಾರವತೀಸಮುದ್ಭವಂ
ಪುಣ್ಯಂ ಪವಿತ್ರಂ ಕಲಿಕಲ್ಮಷಾಪಹಮ್ ।
ನಿತ್ಯಂ ಲಲಾಟೇ ಮಮ ಮಂತ್ರಯುಕ್ತಂ
ಯಮಂ ನ ಪಶ್ಯತ್ಯಪಿ ಪಾಪಸಂಯುತಃ ॥ ೯॥

ಯಸ್ಯಾಂತಕಾಲೇ ಸ ತು ಗೋಪಿಚಂದನಂ
ಬಾಹ್ವೋರ್ಲಲಾಟೇ ಹೃದಿ ಮಸ್ತಕೇ ಚ ।
ಪ್ರಯಾತಿ ಲೋಕೇ ಕಮಲಾಪತೇರ್ಮಮ
ಗೋಬಾಲಘಾತೀ ಯದಿ ಬ್ರಹ್ಮಹಾ ಸ್ಯಾತ್ ॥ ೧೦॥

ಗ್ರಹಾ ನ ಪೀಡಂತಿ ನ ರಕ್ಷಸಾಂ ಗಣಾ
ಯಕ್ಷಃ ಪಿಶಾಚೋರಗಭೂತನಾಯಕಾಃ ।
ಲಲಾಟಪಟ್ಟೇ ಸುತ ಗೋಪಿಚಂದನಂ
ಸಂತಿಷ್ಠತೇ ಯಸ್ಯ ಮಮ ಪ್ರಭಾವಾತ್ ॥ ೧೧॥

ಊರ್ಧ್ವಪುಂಡ್ರಂ ಋಜುಂ ಸೌಮ್ಯಂ ಲಲಾಟೇ ಯಸ್ಯ ದೀಪ್ಯತೇ ।
ಸ ಚಾಂಡಾಲೋಽಪಿ ಶುದ್ಧಾತ್ಮಾ ಪೂಜ್ಯ ಏವ ನ ಸಂಶಯಃ ॥ ೧೨॥

ಲಲಾಟದಲ್ಲಿ ಭಕ್ತಿಯಿಂದ ಊರ್ಧ್ವಪುಂಡ್ರವನ್ನು ಧರಿಸುವರೋ ಅಂಥವರ ಮನೆಯಲ್ಲಿ ಕಂಸಸಂಹಾರಕನಾದ ನಾನು ಲಕ್ಷ್ಮಿಯಿಂದ ಸಹಿತನಾಗಿ ಸದಾಕಾಲ ವಾಸವಾಗಿರುವೆನು. ॥೮॥ ದ್ವಾರಕೆಯಲ್ಲಿ ದೊರೆಯುವ, ಪುಣ್ಯಪ್ರದವಾದ, ಪವಿತ್ರವಾದ ಹಾಗೂ ಕಲಿಕಾಲದ ಕಲ್ಮಷವನ್ನು ನಾಶಗೊಳಿಸುವ ಗೋಪೀಚಂದನದಿಂದ ಯಾರು ತಮ್ಮ ಲಲಾಟದಲ್ಲಿ ನನ್ನ ಮಂತ್ರೋಚ್ಚಾರಪೂರ್ವಕ ನಾಮಗಳನ್ನು ಧರಿಸುವರೋ ಅಂಥವರು ಪಾಪಗಳನ್ನು ಮಾಡಿದವರಾಗಿದ್ದರೂ ಕೂಡ ಮರಣ ಸಮಯದಲ್ಲಿ ಯಮನನ್ನು ಕಾಣುವದಿಲ್ಲ. ॥೯॥ ಅಂತ್ಯ ಕಾಲದಲ್ಲಿ ಯಾವನ ಬಾಹುಗಳಲ್ಲಿ, ಲಲಾಟದಲ್ಲಿ, ಹೃದಯದಲ್ಲಿ ಮತ್ತು ಮಸ್ತಕದಲ್ಲಿ ಗೋಪೀಚಂದನ ಇರುವದೋ ಅವನು ಗೋ-ಬಾಲ ಹತ್ಯೆಯನ್ನು ಮಾಡಿದವನಾಗಿದ್ದರೂ ಅಥವಾ ಬ್ರಹ್ಮಹತ್ಯೆ ಮಾಡಿದವನಾಗಿದ್ದರೂ ಕೂಡ ಕಮಲಾಪತಿಯಾದ ನನ್ನ ಲೋಕವನ್ನು ನಿಶ್ಚಿತವಾಗಿ ಹೊಂದುವನು. ॥೧೦॥ ಹೇ ಪುತ್ರನೇ! ಕೇಳು, ಯಾವನ ಹಣೆಯ ಮೇಲೆ ಗೋಪೀಚಂದನವು ಎದ್ದು ಕಾಣುವದೋ ಅಂಥವನಿಗೆ ನನ್ನ ಅನುಗ್ರಹ ವಿಶೇಷದಿಂದ ದುಷ್ಟಗ್ರಹಗಳ ಪೀಡೆಯಾಗುವದಿಲ್ಲ ಹಾಗೂ ರಾಕ್ಷಸರ ಗಣಗಳಾಗಲೀ, ಯಕ್ಷ-ಪಿಶಾಚ-ಸರ್ಪ-ಭೂತ ಮೊದಲಾದವುಗಳಾಗಲೀ ಅಂಥವನನ್ನು ಬಾಧಿಸಲಾರವು .॥ ೧೧॥ ಯಾವನ ಲಲಾಟದಲ್ಲಿ ಸ್ಪಷ್ಟವಾದ ಹಾಗೂ ಸೌಮ್ಯವಾದ ಊರ್ಧ್ವಪುಂಡ್ರವು ಶೋಭಿಸುವದೋ ಅಂಥವನು ಚಾಂಡಾಲನಾಗಿದ್ದರೂ ಶುದ್ಧಾತ್ಮನೇ

ಅಶುಚಿರ್ವಾಪ್ಯನಾಚಾರೋ ಮಹಾಪಾಪಂ ಸಮಾಚರೇತ್ ।
ಅಸ್ನಾತೋ ಯಃ ಕ್ರಿಯಾಃ ಕುರ್ಯಾದಶುಚಿಃ ಪಾಪಸಂಯುತಃ ॥ ೧೩॥

ಗೋಪೀಚಂದನಸಂಪರ್ಕಾತ್ಪೂಜ್ಯ ಏವ ನ ಸಂಶಯಃ ।
ಅಶುಚಿರ್ವಾಪ್ಯನಾಚಾರೋ ಮಹಾಪಾಪಂ ಸಮಾಚರೇತ್ ॥ ೧೪॥

ಶುಚಿರೇವ ಭವೇನ್ನಿತ್ಯಮೂರ್ಧ್ವಪುಂಡ್ರಾಂಕಿತೋ ನರಃ ।
ಮತ್ಪ್ರಿಯಾರ್ಥಂ ಶುಭಾರ್ಥಂ ವಾ ರಕ್ಷಾರ್ಥಂ ಚತುರಾನನ ॥ ೧೫॥

ಮತ್ಪೂಜಾಹೋಮಕೇ ಚೈವ ಸಾಯಂ ಪ್ರಾತಃ ಸಮಾಹಿತಃ ।
ಮದ್ಭಕ್ತೋ ಧಾರಯೇನ್ನಿತ್ಯಮೂರ್ಧ್ವಪುಂಡ್ರಂ ಭವಾಪಹಮ್ ॥ ೧೬॥

ಊರ್ಧ್ವಪುಂಡ್ರಧರೋ ಮರ್ತ್ಯೋ ಗೃಹೇ ಯಸ್ಯಾನ್ನಮಶ್ನುತೇ ।
ತದಾ ವಿಂಶತ್ಕುಲಂ ತಸ್ಯ ನರಕಾದುದ್ಧರಾಮ್ಯಹಮ್ ॥ ೧೭॥

ವೀಕ್ಷ್ಯಾದರ್ಶತಲೇ ವಾಪಿ ಯೋ ವಿದಧ್ಯಾತ್ಪ್ರಯತ್ನತಃ ।
ಊರ್ಧ್ವಪುಂಡ್ರಂ ಮಹಾಭಾಗ ಸ ಯಾತಿ ಪರಮಾಂ ಗತಿಮ್ ॥ ೧೮॥

ಸರಿ ಹಾಗೂ ಅವನು ನಿಶ್ಚಿತವಾಗಿ ಪೂಜ್ಯನೇ ಆಗಿರುವನು. ॥೧೨॥ ಸ್ನಾನ ಮಾಡದೇ ನಿತ್ಯ ನೈಮಿತ್ತಿಕಾದಿ ಕ್ರಿಯೆಗಳನ್ನು ಮಾಡುವವನು ಅಶುಚಿಯು ಮತ್ತು ಪಾಪಿಷ್ಠನು ಆಗಿರುವನು. ಇಂಥ ಅಶುಚಿಯಾಗಲೀ ಅನಾಚಾರಿಯಾಗಲೀ ಮಹಾ ಪಾಪ ಕರ್ಮವನ್ನು ಮಾಡಿದ್ದರೂ ॥೧೩॥ ಅವನು ಗೋಪೀಚಂದನದ ಸಂಪರ್ಕ ಉಳ್ಳವನಾಗಿದ್ದರೆ ಪೂಜ್ಯನೇ ಆಗುವನು ಹಾಗೂ ಅವನು ॥ ೧೪ ॥ ಊರ್ಧ್ವಪುಂಡ್ರಗಳನ್ನು ಧಾರಣ ಮಾಡಿದ್ದರೆ ನಿತ್ಯದಲ್ಲಿ ಶುಚಿರ್ಭೂತನಾಗಿರುವನು. ಹೇ ಬ್ರಹ್ಮಾ! ನನ್ನ ಪ್ರೀತ್ಯರ್ಥವಾಗಿಯಾಗಲೀ ಅಥವಾ ಶುಭಕ್ಕಾಗಲೀ ಅಥವಾ ಸ್ವರಕ್ಷಣೆಗೋಸ್ಕರವಾಗಿಯಾಗಲೀ ನಿತ್ಯದಲ್ಲಿ ಊರ್ಧ್ವಪುಂಡ್ರಗಳನ್ನು ಧಾರಣ ಮಾಡುವ ಪುರುಷನು ನಿತ್ಯದಲ್ಲೂ ಶುಚಿಯಾಗಿರುವನು. ॥ ೧೫॥ ನನ್ನ ಭಕ್ತನಾದವನು ನಿತ್ಯದಲ್ಲಿ ದೇವರ ಪೂಜೆ ಮಾಡುವ ಸಮಯದಲ್ಲಿ ಮತ್ತು ಹೋಮ ಹವನಗಳನ್ನು ಮಾಡುವಾಗ ಸಾಯಂ, ಪ್ರಾತಃಕಾಲಗಳಲ್ಲಿ, ಭವ-ಭಯವನ್ನು ನಾಶಗೊಳಿಸುವ ಊರ್ಧ್ವಪುಂಡ್ರಗಳನ್ನು ಧರಿಸಬೇಕು. ॥ ೧೬॥ ಇಂಥ ಪುರುಷನು ಯಾರ ಮನೆಯಲ್ಲಿ ಭೋಜನ ಮಾಡುವನೋ ಅಂಥವರ ೨೦ ಕುಲಗಳನ್ನು ನಾನು ನರಕದಿಂದ ಮೇಲೆತ್ತಿ ರಕ್ಷಿಸುವೆನು. ॥ ೧೭॥ ಹೇ ಮಹಾಭಾಗ ! ಕನ್ನಡಿಯಲ್ಲಿ ನೋಡಿಕೊಂಡಾದರೂ ಯಾರು ಚೆನ್ನಾಗಿ ಊರ್ಧ್ವಪುಂಡ್ರವನ್ನು ಹಚ್ಚಿಕೊಳ್ಳುವರೋ ಅವರು ಮರಣಾನಂತರ ಉತ್ತಮ ಗತಿಯನ್ನು ಹೊಂದುವರು. ॥೧೮॥ ಅನಾಮಿಕಾ ಅಂಗುಲಿಯು ಶಾಂತಿಯನ್ನು ಕೊಡುವಂಥದು, ಮಧ್ಯಮಾಂಗುಲಿಯು ಆಯುಷ್ಯವನ್ನು

ಅನಾಮಿಕಾ ಶಾಂತಿದೋಕ್ತಾ ಮಧ್ಯಮಾಯುಃಕರೀ ಭವೇತ್ ।
ಅಂಗುಷ್ಠಃ ಪುಷ್ಟಿದಃ ಪ್ರೋಕ್ತಸ್ತರ್ಜನೀ ಮೋಕ್ಷದಾಯಿನೀ ॥ ೧೯॥

ಗೋಪೀಚಂದನಮೋಕ್ಷಂ ತು ಯೋ ದದಾತಿ ಚ ವೈಷ್ಣವೇ ।
ಕುಲಮಷ್ಟೋತ್ತರಂ ತೇನ ಪಾವಿತಂ ವೈ ಭವೇಚ್ಛತಮ್ ॥ ೨೦॥

ಯಜ್ಞೋ ದಾನಂ ತಪೋ ಹೋಮಃ ಸ್ವಾಧ್ಯಾಯಃ ಪಿತೃತರ್ಪಣಮ್ ।
ವ್ಯರ್ಥಂ ಭವತಿ ತತ್ಸರ್ವಂ ಊರ್ಧ್ವಪುಂಡ್ರಂ ವಿನಾ ಕೃತಮ್ ॥ ೨೧॥

ಯಚ್ಛರೀರಂ ಮನುಷ್ಯಾಣಾಮೂರ್ಧ್ವಪುಂಡ್ರಂ ವಿನಾ ಕೃತಂ ।
ತನ್ಮುಖಂ ನೈವ ಪಶ್ಯಾಮಿ ಸ್ಮಶಾನಸದೃಶಂ ಹಿ ತತ್ ॥ ೨೨॥

ಊರ್ಧ್ವಪುಂಡ್ರಂ ತು ಯಃ ಕುರ್ಯಾನ್ಮತ್ಸ್ಯಕೂರ್ಮಾದಿಧಾರಣಮ್ ।
ಕುರ್ಯಾದ್ವಿಷ್ಣುಪ್ರಸಾದಾಯ ಮಹಾವಿಷ್ಣೋರತಿಪ್ರಿಯಮ್ ॥ ೨೩॥

ಯತ್ಪುನಃ ಕಲಿಕಾಯಾಂ ತು ಮತ್ಪುರೀಸಂಭವಾಂ ಮೃದಮ್ ।
ಮತ್ಸ್ಯಕೂರ್ಮಾಂಕಿತಂ ಚಿಹ್ನಂ ಗೃಹೀತ್ವಾ ಕುರುತೇ ನರಃ ॥ ೨೪॥

ವರ್ಧಿಸುವಂಥದು, ಅಂಗುಷ್ಠವು ಪುಷ್ಟಿಪ್ರದವು, ತರ್ಜನೀ ಅಂಗುಲಿಯು ಮೋಕ್ಷವನ್ನು ಕೊಡುವಂಥದು, ಎಂದು ಜ್ಞಾನಿಗಳಿಂದ ಹೇಳಲ್ಪಟ್ಟಿದೆ. (ಆದ್ದರಿಂದ ಶಾಂತಿ, ಆಯುಷ್ಯ ಪುಷ್ಟಿ ಅಥವಾ ಮೋಕ್ಷವನ್ನು ಅಪೇಕ್ಷಿಸುವ ಪುರುಷನು ಆ ಆ ಅಂಗುಲಿಯಿಂದ ಊರ್ಧ್ವಪುಂಡ್ರವನ್ನು ಧರಿಸಬೇಕು.) ॥ ೧೯॥ ಗೋಪೀಚಂದನದ ತುಣುಕನ್ನು ಒಬ್ಬ ವಿಷ್ಣುಭಕ್ತನಿಗೆ ಯಾರು ದಾನವಾಗಿ ಕೊಡುವರೋ ಅಂಥವರ ೧೦೮ ಕುಲಗಳು ಗೋಪೀಚಂದನದ ದಾನದಿಂದ ಉದ್ಧೃತವಾಗಿ ಪಾವನಗೊಳಿಸಲ್ಪಡುತ್ತವೆ. ॥ ೨೦॥ ಊರ್ಧ್ವಪುಂಡ್ರಗಳನ್ನು ಧರಿಸದೇ ಮಾಡಿದ ಯಜ್ಞ, ದಾನ, ತಪ, ಹೋಮ ಸ್ವಾಧ್ಯಾಯ ಪಿತೃತರ್ಪಣ ಇವೇ ಮೊದಲಾದವುಗಳು ವ್ಯರ್ಥವಾಗುತ್ತವೆ. ॥ ೨೧॥ ಹೇ ಚತುರ್ಮುಖ ಬ್ರಹ್ಮಾ! ಕೇಳು, ಊರ್ಧ್ವಪುಂಡ್ರಗಳನ್ನು ಯಾರು ಧರಿಸುವುದಿಲ್ಲವೋ ಅಂಥವರ ಮುಖವು ಸ್ಮಶಾನ ಸದೃಶವಾಗಿರುವುದರಿಂದ ಅದನ್ನು ನಾನೆಂದಿಗೂ ನೋಡಲು ಬಯಸುವದಿಲ್ಲ. ॥ ೨೨॥ ಇನ್ನು ವಿಷ್ಣು ಪ್ರಸಾದವಾಗಬೇಕಾದರೆ ಮಹಾ ವಿಷ್ಣುವಿನ ಅತ್ಯಂತ ಪ್ರಿಯಕರವಾದ ಊರ್ಧ್ವಪುಂಡ್ರಗಳನ್ನು ಮತ್ತು ಮತ್ಸ್ಯಕೂರ್ಮಾದಿ ಚಿಹ್ನಗಳನ್ನು ಧರಿಸಬೇಕು. ॥೨೩॥ ಕಲಿಯುಗದಲ್ಲಿ ದ್ವಾರಕಾಪಟ್ಟಣದಲ್ಲಿ ದೊರೆಯುವ ಗೋಪೀಚಂದನವನ್ನು ತಂದು ಯಾರು ತಮ್ಮ ದೇಹದ ಮೇಲೆ ಮತ್ಸ್ಯಕೂರ್ಮಾದಿ ಚಿಹ್ನಗಳನ್ನು ಹಚ್ಚಿಕೊಳ್ಳುವರೋ ॥೨೪॥ ಅಂಥವರ ದೇಹದಲ್ಲಿ ನಾನು ವಾಸವಾಗಿರುವೆನೆಂದು ತಿಳಿ. ಅವರು ದೇವತೆಗಳಿಗೆ

ದೇಹೇ ತಸ್ಯ ಪ್ರಸ್ಥಿತಂ ಮಾಂ ಜಾನೀಹಿ ತ್ರಿದಶೋಪಮಮ್ ।
ತಸ್ಯ ಮೇ ನಾಂತರಂ ಕಿಂಚಿತ್ಕರ್ತವ್ಯಂ ಶ್ರೇಯಮಿಚ್ಛತಾ ॥ ೨೫॥

ಮಮಾವತಾರಚಿಹ್ನಾನಿ ದೃಶ್ಯಂತೇ ತಸ್ಯ ವಿಗ್ರಹೇ ।
ಮರ್ತ್ಯೋ ಮರ್ತ್ಯೋ ನ ವಿಜ್ಞೇಯಃ ಸ ನೂನಂ ಮಾಮಕೀ ತನುಃ ॥ ೨೬॥

ಪಾಪಂ ಸುಕೃತರೂಪಂ ತು ಜಾಯತೇ ತಸ್ಯ ದೇಹಿನಃ ।
ಮಮಾಯುಧಾನಿ ದೃಶ್ಯಂತೇ ಲಿಖಿತಾನಿ ಕಲೌ ಯುಗೇ ॥ ೨೭॥

ಉಭಾಭ್ಯಾಮಪಿ ಚಿಹ್ನಾಭ್ಯಾಮಂಕಿತೋ ಮತ್ಸ್ಯಮುದ್ರಯಾ ।
ಕೂರ್ಮಯಾಪಿ ಸ್ವಯಂ ತೇಜೋ ವಿಕ್ಷಿಪ್ತಂ ತಸ್ಯ ವಿಗ್ರಹೇ ॥ ೨೮॥

ಶಂಖಂ ಚ ಪದ್ಮಂ ಚ ಯಥಾ ರಥಾಂಗಂ ಮತ್ಸ್ಯಂ ಚ ಕೂರ್ಮಂ ರಚಿತಂ ಸ್ವದೇಹೇ ।
ಕರೋತಿ ನಿತ್ಯಂ ಸುಕೃತಸ್ಯ ವೃದ್ಧಿಂ ಪಾಪಕ್ಷಯಂ ಜನ್ಮಶತಾರ್ಜಿತಸ್ಯ ॥ ೨೯॥

ನಾರಾಯಣಾಯುಧೈರ್ನಿತ್ಯಂ ಚಿಹ್ನಿತೋ ಯಸ್ಯ ವಿಗ್ರಹಃ ।
ಪಾಪಕೋಟಿಪ್ರಯುಕ್ತಸ್ಯ ತಸ್ಯ ಕಿಂ ಕುರುತೇ ಯಮಃ ॥ ೩೦॥

ಸಮಾನರು. ಶ್ರೇಯಸ್ಸನ್ನು ಬಯಸುವವನು, ಮತ್ಸ್ಯಕೂರ್ಮಾದಿ ಚಿಹ್ನಗಳನ್ನು ಧರಿಸಿದವರಿಗೂ ನನಗೂ ಅತ್ಯಲ್ಪವಾದ ಅಭೇದವಿರುವದೆಂದು ತಿಳಿಯಬೇಕು (ಗೋಪೀಚಂದನ ಧಾರಣ ಮಾಡಿದ ಪುರುಷನಲ್ಲಿ ನನ್ನ ವಿಶೇಷ ಸನ್ನಿಧಾನ ಇರುವದರಿಂದ ಅತ್ಯಲ್ಪವಾದ ಅಭೇದ). ॥೨೫॥ ಏಕೆಂದರೆ ನನ್ನ ಅವತಾರ ಚಿಹ್ನೆಗಳು ಯಾವ ಪುರುಷನ ದೇಹದ ಮೇಲೆ ಕಾಣುವವೋ ಅವನ ದೇಹವು ಮನುಷ್ಯ ದೇಹವಲ್ಲ ನನಗೆ ಸಂಬಂಧಿಸಿದ ದೇಹವೆಂದೇ ತಿಳಿಯಬೇಕು. ॥ ೨೬॥ ಗೋಪೀಚಂದನದಿಂದ ನನ್ನ ಆಯುಧಗಳಾದ ಶಂಖ, ಚಕ್ರ, ಗದಾ, ಪದ್ಮಾದಿಗಳ ಚಿಹ್ನೆಗಳನ್ನು ಯಾರು ಕಲಿಯುಗದಲ್ಲಿ ಧರಿಸುವರೋ ಅಂಥವರು ಅಜ್ಞಾನದಿಂದ ಏನೇ ಪಾಪಕರ್ಮಗಳನ್ನು ಮಾಡಿದರೂ ಅವು ಪುಣ್ಯ ಕರ್ಮಗಳಾಗಿ ಮಾರ್ಪಾಡಾಗುವವು. ॥ ೨೭॥ ಮತ್ಸ್ಯ ಮತ್ತು ಕೂರ್ಮ ಮುದ್ರೆಗಳ ಚಿಹ್ನವನ್ನು ಧರಿಸುವ ಪುರುಷನ ದೇಹದಲ್ಲಿ ವಿಶಿಷ್ಟವಾದ ತೇಜಸ್ಸು ಪ್ರಾಪ್ತವಾಗುವದು. ॥೨೮॥ ಶಂಖ, ಪದ್ಮ, ಚಕ್ರ, ಮತ್ಸ್ಯ ಮತ್ತು ಕೂರ್ಮ ಈ ಮುದ್ರೆಗಳ ಚಿಹ್ನಗಳನ್ನು ತನ್ನ ದೇಹದ ಮೇಲೆ ಧರಿಸುವ ಪುರುಷನು ನಿತ್ಯವು ಅಧಿಕವಾದ ಪುಣ್ಯವನ್ನು ಸಂಪಾದಿಸುವನು ಮತ್ತು ಒಂದು ನೂರು ಜನ್ಮಗಳಲ್ಲಿ ಸಂಚಿತವಾದ ಪಾಪಗಳನ್ನು ಕಳೆದುಕೊಳ್ಳುವನು. ॥೨೯॥ ನಾರಾಯಣಾಯುಧ ಮುದ್ರೆಯ ಚಿಹ್ನವನ್ನು ಧರಿಸುವ ಪುರುಷನು ಕೋಟಿ ಪಾಪಗಳನ್ನು ಮಾಡಿದ್ದರೂ ಅವನನ್ನು ಯಮನು ಎಂದಿಗೂ ಬಾಧಿಸಲಾರನು. ॥ ೩೦॥

ಶಂಖೋದ್ಧಾರೇ ಚ ಯತ್ಪ್ರೋಕ್ತಂ ವಸತಾಂ ಕೋಟಿಜನ್ಮಭಿಃ ।
ತತ್ಫಲಂ ಲಭತೇ ಶಂಖೇ ಪ್ರತ್ಯಹಂ ದಕ್ಷಿಣೇ ಭುಜೇ ॥ ೩೧॥

ಯತ್ಫಲಂ ಪುಷ್ಕರೇ ಪ್ರೋಕ್ತಂ ಪುಂಡರೀಕಾಕ್ಷದರ್ಶನಾತ್ ।
ಶಂಖೋಪರಿ ಕೃತೇ ಪದ್ಮೇ ತತ್ಫಲಂ ಕೋಟಿಸಮ್ಮಿತಮ್ ॥ ೩೨॥

ವಾಮೇ ಭುಜೇ ಗದಾ ಯಸ್ಯ ಲಿಖಿತಾ ದೃಶ್ಯತೇ ಕಲೌ ।
ಗದಾಧರೋ ಗಯಾಪುಣ್ಯಂ ಪ್ರತ್ಯಹಂ ತಸ್ಯ ಯಚ್ಛತಿ ॥ ೩೩॥

ಯಚ್ಚಾನಂದಪುರೇ ಪ್ರೋಕ್ತಂ ಚಕ್ರಸ್ವಾಮೀಸಮೀಪತಃ ।
ಗದಾಚಕ್ರೇ ಚ ಲಿಖಿತೇ ತತ್ಫಲಂ ಲಿಂಗದರ್ಶನೇ ॥ ೩೪॥

ಮಮಾಯುಧಾಂಕಿತಂ ದೇಹಂ ಗೋಪೀಚಂದನಮೃತ್ಸ್ನಯಾ ।
ಪ್ರಯಾಗಾದಿಷು ತೀರ್ಥೇಷು ಸ ಗತ್ವಾ ಕಿಂ ಕರಿಷ್ಯತಿ ॥ ೩೫॥

ಯದಾ ಯದಾ ಪ್ರಪಶ್ಯೇತ ದೇಹಂ ಶಂಖಾದಿಚಿಹ್ನಿತಮ್ ।
ತದಾ ತದಾ ಪ್ರಪನ್ನೋಽಹಂ ಪಾಪಂ ತಸ್ಯ ದಹಾಮಿ ವೈ ॥ ೩೬॥

ಒಂದು ಕೋಟಿ ಜನ್ಮಗಳಲ್ಲಿ ಶಂಖದಾನ ಮಾಡಿದ್ದರೆ ಏನು ಫಲವು ಪ್ರಾಪ್ತವಾಗುವದೋ ಅದೆಲ್ಲ ಫಲವು ಕಲಿಯುಗದಲ್ಲಿ ಪ್ರತಿದಿನ ಬಲಭುಜದ ಮೇಲೆ ಶಂಖ ಮುದ್ರೆಯನ್ನು ಧರಿಸುವ ಮಾತ್ರದಿಂದ ದೊರಕುವದು. ॥ ೩೧॥ ಪುಷ್ಕರ ಕ್ಷೇತ್ರದಲ್ಲಿ ಪುಂಡರೀಕಾಕ್ಷನ ದರ್ಶನದಿಂದ ದೊರೆಯುವ ಫಲದ ಒಂದು ಕೋಟಿಯಷ್ಟು ಫಲವು ಶಂಖ ಮುದ್ರೆಯ ಮೇಲೆ ಪದ್ಮ ಮುದ್ರೆಯನ್ನು ಧರಿಸುವುದರಿಂದ ದೊರೆಯುವುದು. ॥ ೩೨॥ ಕಲಿಯುಗದಲ್ಲಿ ಯಾರು ತಮ್ಮ ಎಡಭುಜದ ಮೇಲೆ ಗದಾ ಮುದ್ರೆಯನ್ನು ನಿತ್ಯದಲ್ಲಿ ಧರಿಸುವರೋ ಅಂಥವರಿಗೆ ಗಯಾಗದಾಧರನು, ಗಯಾ ಯಾತ್ರೆಯನ್ನು ಮಾಡಿ ಅಲ್ಲಿ ನಿತ್ಯ ಗದಾಧರನ ದರ್ಶನ ಮಾಡುವುದರಿಂದ ಬರುವ ಪುಣ್ಯವನ್ನು ಕೊಡುವನು. ॥ ೩೩॥ ಆನಂದಪುರದಲ್ಲಿ ಚಕ್ರಸ್ವಾಮಿಯಾದ ನಾರಾಯಣನ ದರ್ಶನದಿಂದ ಪ್ರಾಪ್ತವಾಗುವ ಫಲವು ಗದಾಚಕ್ರಗಳನ್ನು ಧರಿಸುವ ಪುರುಷನಿಗೆ ಸುಲಭವಾಗಿ ದೊರೆಯುವದು. ॥ ೩೪॥ ಗೋಪೀಚಂದನದ ಮೃತ್ತಿಕೆಯಿಂದ ನನ್ನ ಆಯುಧಗಳ ಚಿಹ್ನೆಗಳನ್ನು ಧರಿಸಿದ ಪುರುಷನು ಪ್ರಯಾಗ ಮೊದಲಾದ ಕ್ಷೇತ್ರಗಳಿಗೆ ಹೋಗಿ ಏನು ಮಾಡುವನು ? ಅಲ್ಲಿ ಹೋಗುವ ಅವಶ್ಯಕತೆಯೇ ಇರುವದಿಲ್ಲ. ॥ ೩೫॥ ಶಂಖಾದಿ ಮುದ್ರೆಗಳಿಂದ ಚಿಹ್ನಿತವಾದ ದೇಹವನ್ನು ಎಲ್ಲೆಲ್ಲಿ ಯಾವ ಯಾವ ಸಮಯದಲ್ಲಿ ನೋಡುವೆನೋ ಆ ಕ್ಷಣವೇ ನಾನು ಆ ಪುರುಷನಲ್ಲಿ ಸನ್ನಿಹಿತನಾಗಿ ಅವನ ಪಾಪಗಳನ್ನೆಲ್ಲ ಸುಟ್ಟು ಹಾಕುವೆನು. ॥ ೩೬॥ ಪ್ರತಿದಿನ ಹಗಲು ರಾತ್ರಿ ಯಾವ ದೇಹದಲ್ಲಿ ಶಂಖ ಚಕ್ರ ಗದಾಪದ್ಮ ಮುದ್ರೆಗಳಿರುವವೋ ಅವನು

ತಿಷ್ಠತೇ ಯಸ್ಯ ದೇಹೇ ತು ಅಹೋರಾತ್ರಂ ದಿನೇ ದಿನೇ ।
ಶಂಖಂ ಚಕ್ರಂ ಗದಾಪದ್ಮಂ ಲಿಖಿತಂ ಸೋ ಮದಾತ್ಮಕಃ ॥ ೩೭॥

ನಾರಾಯಣಾಯುಧೈರ್ಯುಕ್ತಂ ಕೃತ್ವಾತ್ಮಾನಂ ಕಲೌ ಯುಗೇ ।
ಪುಣ್ಯಂ ಕರ್ಮ ಪ್ರಕುರುತೇ ಮೇರುತುಲ್ಯಂ ನ ಸಂಶಯಃ ॥ ೩೮॥

ಶಂಖಾಯುಧಾಂಕಿತೋ ಭಕ್ತ್ಯಾ ಯಃ ಶ್ರಾದ್ಧಂ ಕುರುತೇ ಸುತ ।
ವಿಧಿಹೀನಂ ತು ಸಂಪೂರ್ಣಂ ಪಿತೃಣಾಂ ದತ್ತಮಕ್ಷಯಮ್ ॥ ೩೯॥

ಯಥಾಗ್ನಿರ್ದಹತೇ ಕಾಷ್ಠಂ ವಾಯುನಾ ಪ್ರೇಷಿತೋ ಭೃಶಮ್ ।
ತಥಾ ದಹ್ಯಂತಿ ಪಾಪಾನಿ ದೃಷ್ಟ್ವಾ ಮೇ ಆಯುಧಾನಿ ವೈ ॥ ೪೦॥

ಮಮಾಯುಧಾಂಕಿತಾಂ ಮುದ್ರಾಂ ಅಷ್ಟಾಕ್ಷರಸಮನ್ವಿತಾಮ್ ।
ಶಂಖಾದಿಸ್ವಾಯುಧೈರ್ಯುಕ್ತಾಂ ಸ್ವರ್ಣರೌಪ್ಯಮಯಾಮಪಿ ॥ ೪೧॥

ಧತ್ತೇ ಭಗವತೋ ಯಸ್ತು ಕಲಿಕಾಲೇ ವಿಶೇಷತಃ ।
ಪ್ರಹ್ಲಾದಸ್ಯ ಸಮೋ ಜ್ಞೇಯೋ ನಾನ್ಯಥಾ ಮಮ ವಲ್ಲಭಃ ॥ ೪೨॥

ಯಸ್ಯ ನಾರಾಯಣೀಮುದ್ರಾ ದೇಹಂ ಶಂಖಾದಿಚಿಹ್ನಿತಮ್ ।
ಧಾತ್ರಿಫಲೈಃ ಕೃತಾ ಮಾಲಾ ತುಲಸೀ ಕಾಷ್ಠಸಂಭವಾ ॥ ೪೩॥

ನನಗೆ ಅತ್ಯಂತ ಪ್ರೀತ್ಯಾಸ್ಪದನಾಗಿರುವನು. ॥ ೩೭॥ ಕಲಿಯುಗದಲ್ಲಿ ನಾರಾಯಣ ಮುದ್ರೆಯನ್ನು ಧರಿಸಿದ ಪುರುಷನು ನಿಶ್ಚಿತವಾಗಿ ಮೇರು ಪರ್ವತದಷ್ಟು ಅಸಂಖ್ಯವಾದ ಪುಣ್ಯಕರ್ಮಗಳನ್ನು ಮಾಡಿದರೆ ಬರುವಷ್ಟು ಫಲವನ್ನು ಹೊಂದುವನು. ॥ ೩೮॥ ಹೇ ವತ್ಸಾ! ಕೇಳು, ಶಂಖಾಯುಧ ಮುದ್ರೆಯನ್ನು ಧರಿಸಿದ ಪುರುಷನು ಭಕ್ತಿಯಿಂದ ಮಾಡಿದ ಶ್ರಾದ್ಧವು ವಿಧಿರಹಿತವಾಗಿದ್ದರೂ ಕೂಡ ಸಂಪೂರ್ಣವಾಗುವದು. ಅಂದು ಪಿತೃಗಳಿಗೆ ಕೊಟ್ಟ ಪಿಂಡ ಪ್ರದಾನವು ಅಕ್ಷಯವಾದ ಫಲಪ್ರದವಾಗುವದು. ॥ ೩೯॥ ಗಾಳಿಯಿಂದ ಪ್ರಜ್ವಲಿತವಾದ ಅಗ್ನಿಯು ಒಣಗಿದ ಕಟ್ಟಿಗೆಯನ್ನು ಚೆನ್ನಾಗಿ ಸುಟ್ಟು ಬೂದಿ ಮಾಡುವಂತೆ ನನ್ನ ಆಯುಧಗಳ ಮುದ್ರೆಗಳ ಚಿಹ್ನೆಗಳು, ಪಾಪಗಳನ್ನು ನೋಡಿದಾಕ್ಷಣವೇ ಅವುಗಳನ್ನೆಲ್ಲ ಸುಟ್ಟು ಹಾಕುವವು. ॥೪೦॥ ಬಂಗಾರ ಅಥವಾ ಬೆಳ್ಳಿಯಿಂದ ಮಾಡಲ್ಪಟ್ಟ, ನಾರಾಯಣಾಷ್ಟಾಕ್ಷರದಿಂದ ಯುಕ್ತವಾದ ನಾರಾಯಣ ಮುದ್ರೆಯನ್ನು ಮತ್ತು ನನ್ನ ಆಯುಧ ಪ್ರತೀಕಗಳಾದ ಶಂಖ ಚಕ್ರಾದಿ ಮುದ್ರೆಗಳನ್ನು ॥ ೪೧॥ ವಿಶೇಷವಾಗಿ ಈ ಕಲಿಯುಗದಲ್ಲಿ ಯಾರು ಧರಿಸುವರೋ ಅವರು ನನ್ನ ಭಕ್ತಪ್ರಲ್ಹಾದನಿಗೆ ಸಮರೆಂದು ತಿಳಿ. ಹೀಗೆ ಧರಿಸದಿದ್ದವರು ಎಂದಿಗೂ ನನ್ನ ಪ್ರೀತಿಗೆ ಪಾತ್ರರಾಗುವದಿಲ್ಲವೆಂದೂ ತಿಳಿ. ॥೪೨॥ ಯಾವನು ನಾರಾಯಣ ಮುದ್ರೆಯನ್ನು ಹಾಗೂ ಶಂಖಾದಿ ಚಿಹ್ನೆಗಳನ್ನು ಧರಿಸುವನೋ,

ದ್ವಾದಶಾಕ್ಷರಮಂತ್ರಸ್ತು ನಿಯುಕ್ತಾನಿ ಕಲೇವರೇ ।
ಆಯುಧಾನಿ ಚ ವಿಪ್ರಸ್ಯ ಮತ್ಸಮಃ ಸ ಚ ವೈಷ್ಣವಃ ॥ ೪೪॥

ಶಂಖಾಂಕಿತತನುರ್ವಿಪ್ರೋ ಭುಂಕ್ತೇ ವೈ ಯಸ್ಯ ವೇಶ್ಮನಿ ।
ತದನ್ನಂ ಸ್ವಯಮಶ್ನಾಮಿ ಪಿತೃಭಿಃ ಸಹ ಪುತ್ರಕ ॥ ೪೫॥

ಕೃಷ್ಣಾಯುಧಾಂಕಿತಂ ದೃಷ್ಟ್ವಾ ಸನ್ಮಾನಂ ನ ಕರೋತಿ ಯಃ ।
ದ್ವಾದಶಾಬ್ದಾರ್ಜಿತಂ ಪುಣ್ಯಂ ಬಾಷ್ಕಲೇಯಾಯ ಗಚ್ಛತಿ ॥ ೪೬॥

ಕೃಷ್ಣಾಯುಧಾಂಕಿತೋ ಯಸ್ತು ಸ್ಮಶಾನೇ ಮ್ರಿಯತೇ ಯದಿ ।
ಪ್ರಯಾಗೇ ಯಾ ಗತಿಃ ಪ್ರೋಕ್ತಾ ಸಾ ಗತಿಸ್ತಸ್ಯ ಮಾನದ ॥ ೪೭॥

ಮಮಾಯುಧೈಃ ಕಲೌ ನಿತ್ಯಂ ಮಂಡಿತೋ ಯಸ್ಯ ವಿಗ್ರಹಃ ।
ತತ್ರಾಶ್ರಮಂ ಪ್ರಕುರ್ವಂತಿ ವಿಬುಧಾ ವಾಸವಾದಯಃ ॥ ೪೮॥

ಯಃ ಕರೋತಿ ಚ ಮೇ ಪೂಜಾಂ ಮಮ ಶಸ್ತ್ರಾಂಕಿತೋ ನರಃ ।
ಅಪರಾಧಸಹಸ್ರಾಣಿ ಪಾಪಂ ತಸ್ಯ ಹರಾಮ್ಯಹಮ್ ॥ ೪೯॥

ಕೃತ್ವಾ ಕಾಷ್ಠಮಯಂ ಬಿಂಬಂ ಮಮ ಶಸ್ತ್ರೈಃ ಸುಚಿಹ್ನಿತಮ್ ।
ಯೋ ವೈ ಅಂಕಯತೇ ದೇಹಂ ತತ್ಸಮೋ ನಾಸ್ತಿ ವೈಷ್ಣವಃ ॥ ೫೦॥

ಧಾತ್ರೀ ಫಲಗಳ ಮಾಲೆಯನ್ನು ಹಾಗೂ ತುಲಸೀಕಾಷ್ಠವನ್ನು ಧರಿಸುವನೋ ॥ ೪೩॥ ದ್ವಾದಶಾಕ್ಷರ ಮಂತ್ರವನ್ನು ಪಠಿಸುವನೋ ಅವನೇ ವಿಷ್ಣುಭಕ್ತನು ಮತ್ತು ಅವನೇ ನನ್ನ ಪ್ರೀತಿಗೆ ಪಾತ್ರನು. ॥೪೪॥ ಹೇ ವತ್ಸಾ ಬ್ರಹ್ಮಾ! ಕೇಳು, ಶಂಖಾದಿ ಮುದ್ರೆಗಳನ್ನು ಧರಿಸಿದ ಪುರುಷನು ಯಾರ ಮನೆಯಲ್ಲಿ ಭೋಜನ ಮಾಡುವನೋ ಅವನು ಉಣ್ಣುವ ಅನ್ನವನ್ನು ಆ ಪುರುಷನ ಪಿತೃಗಳಿಂದ ಸಹಿತನಾಗಿ ನಾನೇ ಸ್ವೀಕರಿಸುವೆನೆಂದು ತಿಳಿ. ॥ ೪೫॥ ಶ್ರೀ ಕೃಷ್ಣಪರಮಾತ್ಮನ ಆಯುಧಗಳ ಅಂಕಿತವುಳ್ಳವನನ್ನು ನೋಡಿ ಯಾರು ಸನ್ಮಾನವನ್ನು ಮಾಡುವದಿಲ್ಲವೋ ಅಂಥವರು ೧೨ ವರ್ಷಗಳಲ್ಲಿ ಸಂಪಾದಿಸಿದ ಪುಣ್ಯವು ಬಾಷ್ಕಲೇಯ ಎಂಬ ದೈತ್ಯನ ಪಾಲಾಗುವದು. ॥ ೪೬॥ ಶಂಖ, ಚಕ್ರ, ಗದಾದಿ ಮುದ್ರೆಗಳನ್ನು ಧರಿಸಿದ ಪುರುಷನು ಸ್ಮಶಾನದಲ್ಲಿ ಮೃತನಾದರೆ ಪ್ರಯಾಗ ಕ್ಷೇತ್ರದಲ್ಲಿ ಮೃತನಾದವನಿಗೆ ದೊರೆಯುವ ಗತಿಯೇ ಅವನಿಗೆ ದೊರೆಯುವದು. ॥ ೪೭॥ ಕಲಿಯುಗದಲ್ಲಿ ನಿತ್ಯ ನನ್ನ ಆಯುಧಗಳ ಮುದ್ರೆಗಳಿಂದ ಚಿಹ್ನಿತನಾದವನ ಶರೀರವೆಂಬ ಆಶ್ರಮದಲ್ಲಿ ಇಂದ್ರಾದಿ ದೇವತೆಗಳು ವಾಸಮಾಡುವರು. ॥ ೪೮॥ ನನ್ನ ಆಯುಧಗಳ ಮುದ್ರೆಗಳನ್ನು ಧರಿಸಿ ಯಾರು ನನ್ನ ಪೂಜೆಯನ್ನು ಮಾಡುವರೋ ಅವರ ಸಹಸ್ರ ಅಪರಾಧಗಳನ್ನು ಹಾಗೂ ಪಾಪಗಳನ್ನು

ಅಷ್ಟಾಕ್ಷರಾಂಕಿತಾ ಮುದ್ರಾ ಯಸ್ಯ ಧಾತುಮಯೀ ಕರೇ ।
ಶಂಖಪದ್ಮಾದಿಭಿರ್ಯುಕ್ತಾ ಪೂಜ್ಯತೇಽಸೌ ಸುರಾಸುರೈಃ ॥ ೫೧॥

ಧೃತಾ ನಾರಾಯಣೀ ಮುದ್ರಾ ಪ್ರಹ್ಲಾದೇನ ಪುರಾ ಕರೇ ।
ವಿಭೀಷಣೇನ ಬಲಿನಾ ಧ್ರುವೇಣ ಚ ಶುಕೇನ ಚ ॥ ೫೨॥

ಮಾಂಧಾತ್ರಾ ಹ್ಯಂಬರೀಷೇಣ ಮಾರ್ಕಂಡೇಯಮುಖೈರ್ದ್ವಿಜೈಃ ।
ಶಂಖಾದಿಚಿಹ್ನಿತೈಃ ಶಸ್ತ್ರೈರ್ದೇಹಂ ಕೃತ್ವಾ ಚ ಮಾನದ ॥ ೫೩॥

ಏವಮಾರಾಧ್ಯ ಮಾಂ ಪ್ರಾಪ್ತಂ ಸಮೀಹಿತಫಲಂ ಮಹತ್ ।
ಗೋಪೀಚಂದನಮೃತ್ಸ್ನಾ ಚ ಲಿಖಿತೋ ಯಸ್ಯ ವಿಗ್ರಹಃ ॥ ೫೪॥

ಶಂಖಚಕ್ರಾದಿಪದ್ಮಾಂಕೋ ದೇಹೇ ತಸ್ಯ ವಸಾಮ್ಯಹಮ್ ।
ಸೌವರ್ಣಂ ರಾಜತಂ ತಾಮ್ರಂ ಕಾಂಸ್ಯಮಾಯಸಮೇವ ಚ ॥ ೫೫॥

ಏವಂ ಸುದರ್ಶನಂ ಚಕ್ರಂ ಕಾರಯೀತ ವಿಚಕ್ಷಣಃ ।
ಉಪವೀತಾದಿವದ್ಧಾರ್ಯಾ ಶಂಖಚಕ್ರಗದಾಃ ಸದಾ ॥ ೫೬॥

ಬ್ರಾಹ್ಮಣೈಶ್ಚ ವಿಶೇಷೇಣ ವೈಷ್ಣವೈಶ್ಚ ವಿಶೇಷತಃ ।
ಉಪವೀತಂ ಶಿಖಾ ಯದ್ವತ್ ಚಕ್ರಲಾಂಛನಸಂಯುತಮ್ ॥ ೫೭॥

ನಾಶಮಾಡುವೆನು. ॥ ೪೯॥ ಕಾಷ್ಠದಿಂದ ನನ್ನ ಮೂರ್ತಿಯನ್ನು ಮಾಡಿ ಅದಕ್ಕೆ ಮುದ್ರೆಗಳನ್ನು ಹಚ್ಚುವವನಿಗೆ ಸಮನಾದ ವೈಷ್ಣವನಿಲ್ಲ. ॥೫೦॥ ಯಾವನ ಭುಜದಲ್ಲಿ ಶಂಖಪದ್ಮಾದಿ ಮುದ್ರೆಗಳು ಮತ್ತು ಅಷ್ಟಾಕ್ಷರಗಳಿಂದ ಯುಕ್ತವಾದ ನಾರಾಯಣ ಮುದ್ರೆ ಇರುವವೋ ಅವನು ಸುರಾಸುರರಿಂದ ಪೂಜಿಸಲ್ಪಡುವನು. ॥ ೫೧॥ ಹಿಂದಕ್ಕೆ ಪ್ರಹ್ಲಾದ, ವಿಭೀಷಣ, ಬಲಿ, ಧ್ರುವ, ಶುಕ, ।೫೨॥ ಮಾಂಧಾತಾ, ಅಂಬರೀಷ, ಹಾಗೂ ಮಾರ್ಕಂಡೇಯ ಮೊದಲಾದ ದ್ವಿಜರು ತಮ್ಮ ಬಾಹುಗಳಲ್ಲಿ ನಾರಾಯಣೀ ಮುದ್ರೆಯನ್ನು ಧರಿಸಿ ಮತ್ತು ಶಂಖಾದಿ ಮುದ್ರೆಗಳಿಂದ ತಮ್ಮ ದೇಹವನ್ನು ಅಲಂಕರಿಸಿಕೊಂಡು, ॥೫೩॥ ನನ್ನನ್ನು ಭಕ್ತಿಯಿಂದ ಆರಾಧಿಸಿ ಅಪೇಕ್ಷಿತವಾದ ಫಲಗಳನ್ನು ಹೊಂದಿದರು. ಗೋಪೀಚಂದನದಿಂದ ಊರ್ಧ್ವಪುಂಡ್ರಗಳನ್ನು ಮತ್ತು ॥೫೪॥ ಶಂಖ, ಚಕ್ರ, ಗದಾ, ಪದ್ಮಾದಿ ಮುದ್ರೆಗಳನ್ನು ಯಾರು ಧರಿಸುವರೋ ಅವರ ದೇಹದಲ್ಲಿ ನಾನು ವಾಸಮಾಡುವೆನು. ॥೫೫॥ ಜ್ಞಾನಿಯಾದವನು ಬಂಗಾರದ, ಬೆಳ್ಳಿಯ, ತಾಮ್ರದ ಅಥವಾ ಕಂಚಿನ ಕಟ್ಟಿನಲ್ಲಿ ಸುದರ್ಶನ ಚಕ್ರವನ್ನು ಮಾಡಿಸಿ ಕೈಯಲ್ಲಿ ಇಟ್ಟುಕೊಳ್ಳಬೇಕು. ಇದರಂತೆ ಉಪವೀತವನ್ನು ಧರಿಸುವಂತೆ ನಿತ್ಯದಲ್ಲೂ ಶಂಖ, ಚಕ್ರ, ಗದಾದಿಗಳನ್ನು ತಪ್ಪದೇ ಧರಿಸಬೇಕು ॥ ೫೬॥ ನಾಲ್ಕು ವರ್ಣಗಳಲ್ಲಿ ವಿಶೇಷವಾಗಿ ಬ್ರಾಹ್ಮಣರು ಅದರಲ್ಲೂ

ಚಕ್ರಲಾಂಛನಹೀನಸ್ಯ ವಿಪ್ರಸ್ಯ ವಿಫಲಂ ಭವೇತ್ ।
ಮಮ ಚಕ್ರಾಂಕಿತಂ ದೇಹಂ ಪವಿತ್ರ ಇತಿ ವೈ ಶ್ರುತಿಃ ॥ ೫೮॥

ಚಕ್ರಾಂಕಿತಾಯ ದಾತವ್ಯಂ ಹವ್ಯಂ ಕವ್ಯಂ ವಿಚಕ್ಷಣೈಃ ।
ಮಮ ಚಕ್ರಾಂಕಕವಚಮಭೇದ್ಯಂ ದೇವದಾನವೈಃ ॥ ೫೯॥

ಅಜೇಯಃ ಸರ್ವಭೂತಾನಾಂ ಶತ್ರೂಣಾಂ ರಕ್ಷಸಾಮಪಿ ।
ಮಮ ಚಕ್ರಾಂಕಕವಚಂ ಶರೀರೇ ಯಸ್ಯ ತಿಷ್ಠತಿ ॥ ೬೦॥

ನಾಶುಭಂ ವಿದ್ಯತೇ ತಸ್ಯ ಗೃಹಪುತ್ರಾದಿಕಸ್ಯ ಹಿ ।
ದಕ್ಷಿಣೇ ಚ ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಮ್ ॥ ೬೧॥

ಸವ್ಯೇ ಚ ಶಂಖಂ ಬಿಭೃಯಾದಿತಿ ವೇದವಿದೋ ವಿದುಃ ।
ತತ್ತನ್ಮಂತ್ರೇಣ ಮಂತ್ರಜ್ಞಃ ಪ್ರತಿಷ್ಠಾಪ್ಯ ಪೃಥಕ್ ಪೃಥಕ್ ॥ ೬೨॥

ಲಲಾಟೇ ಚ ಗದಾ ಧಾರ್ಯಾ ಮೂರ್ಧ್ನಿ ಚಾಪಂ ಶರಸ್ತಥಾ ।
ನಂದಕಂ ಚೈವ ಹೃನ್ಮಧ್ಯೇ ಶಂಖಚಕ್ರಂ ಭುಜದ್ವಯೇ ॥ ೬೩॥

ವಿಶೇಷವಾಗಿ ವೈಷ್ಣವರು ಉಪವೀತವನ್ನು ಮತ್ತು ಶಿಖೆಯನ್ನು ತಪ್ಪದೇ ಧರಿಸುವಂತೆ, ಚಕ್ರಾದಿ ಮುದ್ರೆಗಳಿಂದ ತಮ್ಮ ದೇಹವನ್ನು ಅಲಂಕರಿಸಿಕೊಳ್ಳಬೇಕು. ॥ ೫೭॥ ಚಕ್ರಾದಿ ಮುದ್ರೆಗಳನ್ನು ಧರಿಸದ ಬ್ರಾಹ್ಮಣರು ಮಾಡುವ ಕರ್ಮಗಳೆಲ್ಲವೂ ನಿಷ್ಪ್ರಯೋಜಕವಾಗುವವು. ನನ್ನ ಚಕ್ರಾದಿ ಆಯುಧಗಳ ಅಂಕಿತವುಳ್ಳವನ ದೇಹವು ಸದಾ ಪವಿತ್ರವಾದುದು ಎಂದು ಶ್ರುತಿಗಳು ಸಾರುತ್ತಿವೆ. ॥ ೫೮॥ ವಿಚಕ್ಷಣನಾದವನು ಚಕ್ರಾಂಕಿತನಾದವನಿಗೇ ಹವ್ಯಕವ್ಯಗಳನ್ನು ಸಮರ್ಪಿಸಬೇಕು. ನನ್ನ ಚಕ್ರಾಂಕ ಕವಚವು ದೇವದಾನವರಿಗೂ ಅಭೇದ್ಯವಾದುದು. ॥ ೫೯॥ ಯಾವ ಪುರುಷನ ಶರೀರದ ಮೇಲೆ ನನ್ನ ಚಕ್ರಾಂಕ ಕವಚವು ಶೋಭಿಸುವದೋ ಅವನು ಸರ್ವಭೂತಗಳಿಗೆ ಅಜೇಯನಾಗಿರುವನು. ಅದರಂತೆ ಶತ್ರುಗಳಿಗೆ ಹಾಗೂ ರಾಕ್ಷಸರಿಗೂ ಕೂಡ ಅಜೇಯನಾಗಿರುವನು. ॥ ೬೦॥ ಗೃಹಪುತ್ರಾದಿಗಳಿಂದ ಕೂಡಿರುವ ಅವನಿಗೆ ಅಶುಭವೆಂಬುದು ಸರ್ವಥಾ ಬರಲಾರದು. ವಿಪ್ರನು ತನ್ನ ದಕ್ಷಿಣ ಭುಜದಲ್ಲಿ ಸುದರ್ಶನ ಚಕ್ರದ ಚಿಹ್ನೆಯನ್ನೂ ॥ ೬೧॥ ಎಡಭುಜದಲ್ಲಿ ಶಂಖದ ಚಿಹ್ನೆಯನ್ನೂ ಧರಿಸಬೇಕೆಂದು ವೇದವಿದರು ಲೋಕಕ್ಕೆ ಉಪದೇಶಿಸಿದ್ದಾರೆ. ಮಂತ್ರಗಳನ್ನು ಬಲ್ಲವನು ಮುದ್ರಾಧಾರಣ ಸಮಯದಲ್ಲಿ ಆ ಆ ಮಂತ್ರಗಳನ್ನು ಪಠಿಸುತ್ತ ಬೇರೆ ಬೇರೆ ಮುದ್ರೆಗಳನ್ನು ಧರಿಸಬೇಕು. ॥ ೬೨॥ ತಮ್ಮ ಲಲಾಟದಲ್ಲಿ ಗದಾ ಮುದ್ರೆಯನ್ನು, ಶಿರಸ್ಸಿನಲ್ಲಿ ಚಾಪಶರಗಳ ಚಿಹ್ನೆಯನ್ನೂ, ಹೃನ್ಮಧ್ಯದಲ್ಲಿ ವಿಷ್ಣುವಿನ ಖಡ್ಗಚಿಹ್ನೆಯನ್ನೂ ಹಾಗೂ ಎರಡೂ ಭುಜಗಳಲ್ಲಿ

ತಸ್ಮಾತ್ಸರ್ವಪ್ರಯತ್ನೇನ ಚಕ್ರಾದೀನ್ ಧಾರಯೇತ್ಸದಾ ।
ಧಾರಣಾನಂತರಂ ಬ್ರೂಯಾತ್ತತ್ರ ಚೈವಂ ದ್ವಿಜೋತ್ತಮ ॥ ೬೪॥

ಪುತ್ರಮಿತ್ರಕಲತ್ರಾದಿ ಯಃ ಕಶ್ಚಿನ್ಮತ್ಪರಿಗ್ರಹಃ ।
ಸಹ ದೇಹೇನ ಸರ್ವೋಽಸೌ ವಿಪ್ರ ಪ್ರೀತ್ಯೈ ತವಾರ್ಪಿತಃ ॥ ೬೫॥

ಪಶ್ಚಾತ್ ಸ್ವಧರ್ಮಮಾಸ್ಥಾಯ ತಿಷ್ಠೇದಾಜೀವನಂ ಮಮ ।
ಭಕ್ತ್ಯಾ ಚಾವ್ಯಭಿಚಾರಿಣ್ಯಾ ಸರ್ವದಾಪ್ತಮನೋರಥಃ ॥ ೬೬॥

ಶಂಖಚಕ್ರಾಂಕಿತಂ ದೃಷ್ಟ್ವಾ ಯೇ ನಿಂದಂತಿ ನರಾಧಮಾಃ ।
ಅವಲೋಕ್ಯ ಮುಖಂ ತೇಷಾಮಾದಿತ್ಯಮವಲೋಕಯೇತ್ ॥ ೬೭॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮವಿಷ್ಣು-ಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ತೃತೀಯೋಽಧ್ಯಾಯಃ ॥

ಶಂಖ ಚಕ್ರಗಳನ್ನೂ ಧರಿಸಬೇಕು. ॥೬೩॥ ಈ ಪ್ರಕಾರ ಸರ್ವ ಪ್ರಯತ್ನಪೂರ್ವಕ ಚಕ್ರಾದಿ ಮುದ್ರೆಗಳನ್ನು ಧರಿಸಿದ ನಂತರ ಹೀಗೆ ಹೇಳಬೇಕು. ಏನೆಂದರೆ ॥ ೬೪॥ ಪುತ್ರರು, ಮಿತ್ರರು, ಹೆಂಡತಿ ಇವರೇ ಮೊದಲಾದವರು ನನ್ನ ಆಪ್ತರೇನಿರುವರೋ ಇವರೆಲ್ಲರನ್ನು, ಹೇ ಪರಮಾತ್ಮಾ ! ನಿನ್ನ ಪ್ರೀತ್ಯರ್ಥವಾಗಿ ನಿನಗೆ ಸಮರ್ಪಿಸುತ್ತೇನೆ . ॥ ೬೫॥ ಸ್ವಧರ್ಮವನ್ನು ಆಶ್ರಯಿಸಿ ನನ್ನಲ್ಲಿ ಅಕುಟಿಲವಾದ ಭಕ್ತಿಯನ್ನು ಮಾಡುತ್ತ ಇರುವವನು ಸದಾ ತನ್ನೆಲ್ಲ ಅಭೀಷ್ಟಗಳನ್ನು ಹೊಂದುವನು. ॥ ೬೬॥ ಶಂಖಚಕ್ರಾದಿ ಮುದ್ರೆಗಳನ್ನು ಧರಿಸಿದವನನ್ನು ಯಾರು ನಿಂದಿಸುವರೋ ಅವರು ನರಾಧಮರೇ ಸರಿ. ಅಂಥವರ ಮುಖವನ್ನು ಎಂದಿಗೂ ನೋಡಬಾರದು. ಒಂದು ವೇಳೆ ನೋಡಿದರೆ ಕೂಡಲೇ ಸೂರ್ಯದರ್ಶನ ಮಾಡಬೇಕು. ॥೬೭॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಬ್ರಹ್ಮವಿಷ್ಣು ಸಂವಾದದಲ್ಲಿ ಮಾರ್ಗಶೀರ್ಷಮಾಸ ಮಹಾತ್ಮೆಯಲ್ಲಿ ''ಊರ್ಧ್ವಪುಂಡ್ರ ಹಾಗೂ ಮುದ್ರಾಧಾರಣಮಹಾತ್ಮೆ'' ಎಂಬ ಮೂರನೆಯ ಅಧ್ಯಾಯವು ಸಮಾಪ್ತವಾಯಿತು.॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೪
ತುಲಸೀಮಹಿಮೆ ಮತ್ತು ಹರಿ ಪೂಜಾವಿಧಿ

★

ಬ್ರಹ್ಮೋವಾಚ -
ತವ ಚಕ್ರಾಂಕಿತಂ ದೃಷ್ಟ್ವಾ ಹ್ಯಾತ್ಮಾನಂ ಅಥ ದೀಕ್ಷಿತಃ ।
ಪದ್ಮಾಕ್ಷತುಲಸೀಮಾಲಾಫಲಂ ಪ್ರಬ್ರೂಹಿ ಕೇಶವ ॥ ೧॥

ಶ್ರೀಭಗವಾನುವಾಚ -
ತುಲಸೀಕಾಷ್ಠಸಂಭೂತಾಂ ಯೋ ಮಾಲಾಂ ವಹತೇ ದ್ವಿಜಃ ।
ಅಪ್ಯಶೌಚೋಽಪ್ಯನಾಚಾರಃ ಮಾಮೇವೈತಿ ನ ಸಂಶಯಃ ॥ ೨॥

ಧಾತ್ರೀಫಲಕೃತಾ ಮಾಲಾ ತುಲಸೀಕಾಷ್ಠಸಂಭವಾ ।
ದೃಶ್ಯತೇ ಯಸ್ಯ ದೇಹೇ ತು ಸ ವೈ ಭಾಗವತೋ ನರಃ ॥ ೩॥

ತುಲಸೀದಲಜಾಂ ಮಾಲಾಂ ಕಂಠಸ್ಥಾಂ ವಹತೇ ತು ಯಃ ।
ಪತ್ರೇ ಪತ್ರೇಽಶ್ವಮೇಧಾನಾಂ ದಶಾನಾಂ ಲಭತೇ ಫಲಮ್ ॥ ೪॥

ತುಲಸೀಕಾಷ್ಠಸಂಭೂತಾಂ ಯೋ ಮಾಲಾಂ ವಹತೇ ನರಃ ।
ಫಲಂ ಯಚ್ಛಾಮ್ಯಹಂ ವತ್ಸ ಪ್ರತ್ಯಹಂ ದ್ವಾರಕೋದ್ಭವಮ್ ॥ ೫॥

''ಹೇ ಕೇಶವ ಶ್ರೀಹರೇ! ಮಾಸವ್ರತಾಚರಣೆಯಲ್ಲಿ ದೀಕ್ಷಾಬದ್ಧನಾದ ಪುರುಷನು ತನ್ನ ದೇಹದ ಮೇಲೆ ಚಕ್ರದ ಮುದ್ರೆಗಳನ್ನು ಧರಿಸಿ ನಂತರ ಪದ್ಮಾಕ್ಷ ತುಲಸೀ ಮಾಲೆಗಳನ್ನು ಧರಿಸಿದಾಗ ಅವನಿಗೆ ಪ್ರಾಪ್ತವಾಗುವ ಫಲದ ಬಗ್ಗೆ ವಿಸ್ತಾರವಾಗಿ ತಿಳಿಸಿ ಅನುಗ್ರಹಿಸು'' ಎಂದು ಬ್ರಹ್ಮನು ವಿಜ್ಞಾಪಿಸಲು ॥೧॥ ಭಗವಂತನು ಹೇಳುತ್ತಾನೆ - ಹೇ ಬ್ರಹ್ಮಾ! ಕೇಳು. ಯಾವ ಬ್ರಾಹ್ಮಣನು ತುಲಸೀ ಕಾಷ್ಠದಿಂದ ತಯಾರಿಸಿದ ಮಾಲೆಯನ್ನು ಧರಿಸುವನೋ ಅಂಥವನು ಅಶುದ್ಧನಾಗಿದ್ದರೂ ಹಾಗೂ ಅನಾಚಾರಿಯಾಗಿದ್ದರೂ ಕೂಡ ಮರಣಾನಂತರ ನನ್ನನ್ನೇ ಹೊಂದುವನು. ॥೨॥ ತುಲಸೀಕಾಷ್ಠಗಳಿಂದ ಯುಕ್ತವಾದ ಮಾಲೆಯನ್ನು ಹಾಗೂ ಧಾತ್ರೀಫಲಗಳಿಂದ (ನೆಲ್ಲೀಕಾಯೀ)ತಯಾರಿಸಲ್ಪಟ್ಟ ಮಾಲೆಯನ್ನು ಧರಿಸುವವನೇ ಭಗವದ್ಭಕ್ತನು. ॥೩॥ ತುಲಸೀದಲಗಳಿಂದ ತಯಾರಿಸಿದ ಹಾರವನ್ನು ಯಾರು ಕೊರಳಲ್ಲಿ ಹಾಕಿಕೊಂಡಿರುವರೋ ಅವರು ಆ ಮಾಲೆಯಲ್ಲಿರುವ ಒಂದೊಂದು ಪತ್ರಕ್ಕೆ ಹತ್ತು ಅಶ್ವಮೇಧ ಯಾಗಗಳನ್ನು ಮಾಡಿದಷ್ಟು ಫಲವನ್ನು ಹೊಂದುವರು. ॥೪॥ ಹೇ ವತ್ಸಾ! ತುಲಸೀ ಕಾಷ್ಠಗಳಿಂದ ತಯಾರಿಸಲ್ಪಟ್ಟ ಮಣಿಮಾಲೆಯನ್ನು ಯಾವನು ಧರಿಸುವನೋ

ನಿವೇದ್ಯ ಭಕ್ತ್ಯಾ ಮೇ ಮಾಲಾಂ ತುಲಸೀಕಾಷ್ಠಸಂಭವಾಮ್ ।
ವಹತೇ ಯೋ ನರೋ ಭಕ್ತ್ಯಾ ತಸ್ಯ ನಾಸ್ತ್ಯತಿಪಾತಕಮ್ ॥ ೬॥

ಸದಾ ಪ್ರೀತಮನಾಃ ತಸ್ಯ ಅಹಂ ಪ್ರಾಣವರೋ ಹಿ ಸಃ ।
ತುಲಸೀಕಾಷ್ಠಸಂಭೂತಂ ಶಿರಸೋ ಕಾಷ್ಠಭೂಷಣಮ್ ॥ ೭॥

ಬಾಹ್ವೋಃ ಕರೇ ಚ ಮರ್ತ್ಯಸ್ಯ ದೇಹೇ ಯಸ್ಯ ಸ ಮೇ ಪ್ರಿಯಃ ।
ತುಲಸೀಕಾಷ್ಠಮಾಲಾಭಿಃ ಭೂಷಿತೋ ಪುಣ್ಯಮಾಚರೇತ್ ॥ ೮॥

ಪಿತೃಣಾಂ ದೇವತಾನಾಂ ಚ ಪುಣ್ಯಂ ಕೋಟಿಗುಣಂ ಭವೇತ್ ।
ತುಲಸೀಕಾಷ್ಠಮಾಲಾಂ ತು ಪ್ರೇತರಾಜಸ್ಯ ದೂತಕಾಃ ॥ ೯॥

ದೃಷ್ಟ್ವಾ ನಶ್ಯಂತಿ ದೂರೇಣ ವಾತೋದ್ಧೂತಂ ಯಥಾ ದಲಮ್ ।
ಯದ್ಗೃಹೇ ತುಲಸೀಕಾಷ್ಠಂ ಪತ್ರಂ ಶುಷ್ಕಂ ಅಥಾರ್ದ್ರಕಮ್ ॥ ೧೦॥

ತದ್ಗೃಹೇ ತು ಭವೇನ್ನೈವ ಪಾಪಂ ವೈ ಸಮಂತಕಲೌ ।
ತುಲಸೀಕಾಷ್ಠಮಾಲಾಭಿಃ ಭೂಷಿತೋ ಭ್ರಮತೇ ಭುವಿ ॥ ೧೧॥

ಅವನಿಗೆ ನಾನು ಪ್ರತಿದಿನವೂ ದ್ವಾರಕಾವಾಸದಿಂದ ಲಭಿಸುವ ಪುಣ್ಯವನ್ನು ಕೊಡುವೆನು. ।೫॥ ತುಲಸೀಕಾಷ್ಠದ ಮಾಲೆಯನ್ನು ಭಕ್ತಿಯಿಂದ ನನಗೆ ಅರ್ಪಿಸಿ ನಂತರ ತನ್ನ ಕೊರಳಲ್ಲಿ ಧರಿಸುವ ನರನಿಗೆ ಅತಿಪಾತಕವೆಂಬುದೇ ಇರುವುದಿಲ್ಲ. ॥ ೬॥ ಅವನಲ್ಲಿ ನನಗೆ ಅತಿಶಯವಾದ ಪ್ರೀತಿ ಇರುವದು ಮತ್ತು ಅವನು ನನಗೆ ಅತ್ಯಂತ ಪ್ರೀತ್ಯಾಸ್ಪದನಾಗಿರುವನು. ತುಲಸೀಕಾಷ್ಠಗಳಿಂದ ಮಾಡಿದ ಅಲಂಕಾರಗಳನ್ನು ಯಾವನು ತನ್ನ ತಲೆಯಲ್ಲಿ ॥ ೭॥ ಎರಡೂ ಭುಜಗಳಲ್ಲಿ, ಕೈಯಲ್ಲಿ ಹಾಗೂ ಕೊರಳಲ್ಲಿ ಧರಿಸುವನೋ ಅವನು ನನ್ನ ಪ್ರೀತಿಗೆ ಪಾತ್ರನಾಗಿರುವನು. ತುಲಸೀಕಾಷ್ಠದ ಮಣಿಗಳಿಂದ ತಯಾರಿಸಿದ ಹಾರವನ್ನು ಕೊರಳಲ್ಲಿ ಹಾಕಿಕೊಂಡು ಪುಣ್ಯಕರ್ಮವನ್ನು ಆಚರಿಸಬೇಕು. ॥ ೮॥ ಇಂಥವನು ತನ್ನ ಪಿತೃಗಳನ್ನು ಮತ್ತು ದೇವತೆಗಳನ್ನು ಉದ್ದೇಶಿಸಿ ಮಾಡುವ ಒಂದೊಂದು ಪುಣ್ಯಕರ್ಮವೂ ಕೋಟಿಪಟ್ಟು ಫಲವುಳ್ಳದ್ದಾಗಿರುತ್ತದೆ. ತುಲಸೀಕಾಷ್ಠದ ಮಾಲೆಯನ್ನು ಕಂಡು ಯಮದೂತರು ॥ ೯॥ ಬಿರುಗಾಳಿಯಿಂದ ಹಾರಿಸಲ್ಪಟ್ಟು ದೂರ ಎಸೆಯಲ್ಪಟ್ಟ ಒಂದು ಒಣಗಿದ ಪತ್ರದಂತೆ, ಓಡಿಹೋಗುವರು. ಯಾರ ಮನೆಯಲ್ಲಿ ಒಣಗಿದ ಅಥವಾ ಹಸಿಯಾದ ತುಲಸೀ ಕಾಷ್ಠ ಮತ್ತು ತುಲಸೀ ಪತ್ರಗಳಿರುವವೋ ॥ ೧೦॥ ಅಂಥವರ ಮನೆಯಲ್ಲಿ ಇಂಥ ಕಲಿಕಾಲದಲ್ಲೂ ಕೂಡ ಪಾಪವೆಂಬುದು ನಿಶ್ಚಿತವಾಗಿ ಘಟಿಸಲಾರದು. ತುಲಸೀಕಾಷ್ಠಮಾಲೆಗಳಿಂದ ಅಲಂಕರಿಸಿಕೊಂಡು ದೇಶಸಂಚಾರ ಮಾಡುವ ಪುರುಷನಿಗೆ ॥ ೧೧॥ ದುಃಸ್ವಪ್ನ, ದುರ್ನಿಮಿತ್ತ ಮತ್ತು ಶಸ್ತ್ರಭಯವೆಂಬುವು ಇರಲಾರವು. ಪಾಪಬುದ್ಧಿಗಳಾದ ಯಾವ ಜನರು ಕೌತುಕದಿಂದ (ಇದರಲ್ಲೇನಿದೆ ಎಂದು

ದುಃಸ್ವಪ್ನಂ ದುರ್ನಿಮಿತ್ತಂ ಚ ನ ಭಯಂ ಶಸ್ತ್ರಜಂ ಕ್ವಚಿತ್ ।
ಧಾರಯಂತಿ ನ ಯೇ ಮಾಲಾಂ ಕೌತುಕಾತ್ ಪಾಪಬುದ್ಧಯಃ ॥ ೧೨॥

ನರಕಾತ್ ನ ನಿವರ್ತಂತೆ ದಗ್ಧಾಃ ಕೋಪಾಗ್ನಿನಾ ಮಮ ।
ತಸ್ಮಾತ್ ಧಾರ್ಯಾ ಪ್ರಯತ್ನೇನ ಮಾಲಾ ತುಲಸಿಸಂಭವಾ ॥ ೧೩॥

ಪದ್ಮಾಕ್ಷನಿರ್ಮಿತಾ ಭಕ್ತ್ಯಾ ಫಲೈಃ ಧಾತ್ರ್ಯಾಃ ಸುಪುಣ್ಯದಾ ।
ತದೂರ್ಧ್ವಪುಂಡ್ರಶಾಖಾದ್ಯೈಃ ಯುಕ್ತಃ ತುಲಸಿಭೂಷಣೈಃ ॥ ೧೪॥

ಸಂಧ್ಯೋಪಾಸ್ತ್ಯಾದಿಕಂ ಕುರ್ಯಾತ್ ಕುಶಪ್ರಾಣಿರ್ಹಿ ಮಾಂ ಸ್ಮರನ್ ।
ಕೃತಸಂಧ್ಯಾದಿಕಃ ಭಕ್ತಃ ತತಃ ಸಂಪೂಜಯೇಚ್ಚ ಮಾಮ್ ॥ ೧೫॥

ಗುರುಶ್ಚೇತ್ ತತ್ರ ವರ್ತೇತ ಆದೌ ಗತ್ವಾ ನಮೇತ್ ಗುರುಮ್ ।
ಕಿಂಚಿತ್ ದತ್ವೋಪಾಯನಂ ಚ ದಂಡವತ್ ಪ್ರಣಮೇತ್ ಮುದಾ ॥ ೧೬॥

ಆಚಮ್ಯ ಏಕಾಗ್ರಮನಸಾ ಪೂಜಾಮಂಡಪಮಾವಿಶೇತ್ ।
ಉಪವಿಶ್ಯಾಸನೇ ರಮ್ಯೇ ಕೃಷ್ಣಾಜಿನಕುಶೋತ್ತರೇ ॥ ೧೭॥

ತಿರಸ್ಕಾರದಿಂದ) ತುಲಸೀಮಾಲೆಯನ್ನು ಧರಿಸುವದಿಲ್ಲವೋ ॥ ೧೨॥ ಅಂಥವರು ನನ್ನ ಕೋಪಾಗ್ನಿಗೆ ಬಲಿಯಾಗುತ್ತಾರೆ ಮತ್ತು ಅವರಿಗೆ ನರಕವಾಗಿ ಅದರಿಂದ ಬಿಡುಗಡೆಯನ್ನು ಹೊಂದುವದಿಲ್ಲ. ಆದ್ದರಿಂದಲೇ ಹೇ ಬ್ರಹ್ಮಾ ! ನೋಡು, ಹೇಗಾದರೂ ಪ್ರಯತ್ನಪೂರ್ವಕ ಎಲ್ಲರೂ ತುಳಸೀಮಾಲೆಯನ್ನು ಧರಿಸಲೇಬೇಕು. ॥ ೧೩॥ ಹಾಗೂ ಪದ್ಮಾಕ್ಷಗಳಿಂದ ನಿರ್ಮಿಸಿದ, ಧಾತ್ರೀಫಲಗಳಿಂದ ತಯಾರಿಸಿದ ಪುಣ್ಯಪ್ರದವಾದ ಮಾಲೆಗಳನ್ನು ಹಾಕಿಕೊಂಡು, ಊರ್ಧ್ವಪುಂಡ್ರಾದಿಗಳನ್ನು ಹಚ್ಚಿಕೊಂಡು, ತುಲಸೀಕಾಷ್ಠ, ದಲಗಳಿಂದ ಮಾಡಲ್ಪಟ್ಟ ಮಾಲೆ, ಹಾರಗಳಿಂದ ಅಲಂಕರಿಸಿಕೊಂಡು ॥ ೧೪ ॥ ದರ್ಭೆದ ಪವಿತ್ರವನ್ನು ಬೆರಳಲ್ಲಿ ಧರಿಸಿ ನನ್ನನ್ನು ಸ್ಮರಿಸುತ್ತ ಸಂಧ್ಯೋಪಾಸನಾದಿಗಳನ್ನು ಭಕ್ತಿಯಿಂದ ಮಾಡಬೇಕು. ಸಂಧ್ಯಾದಿಕರ್ಮಗಳನ್ನು ಮಾಡಿದ ನಂತರ ಭಕ್ತನು ನನ್ನನ್ನು ಭಕ್ತಿಪೂರ್ವಕ ಷೋಡಶೋಪಚಾರಗಳಿಂದ ಪೂಜಿಸಬೇಕು. ॥ ೧೫ ॥ ಆ ಸ್ಥಳದಲ್ಲಿ ಸಮೀಪದಲ್ಲಿ ಯಾರಾದರೂ ಗುರುಗಳು, ಪೂಜ್ಯರೂ ಆದವರಿದ್ದರೆ ಪೂಜೆಯನ್ನು ಆರಂಭಿಸುವ ಮೊದಲು ಅವರ ಸನ್ನಿಧಿಗೆ ಹೋಗಿ ನಮಸ್ಕರಿಸಬೇಕು. ಏನಾದರೂ ಅಲ್ಪಕಾಣಿಕೆಯನ್ನು ಸಮರ್ಪಿಸಿ ಪುನಃ ದಂಡವತ್ ಸಾಷ್ಟಾಂಗಪೂರ್ವಕ ನಮಸ್ಕರಿಸಬೇಕು. ॥ ೧೬ ॥ ನಂತರ ಅವರ ಅನುಜ್ಞೆಯನ್ನು ಪಡೆದು ಏಕಾಗ್ರ ಮನಸ್ಸಿನಿಂದ ಪೂಜಾಮಂಡಪವಿದ್ದಲ್ಲಿ ಬಂದು ರಮ್ಯವಾದ ದರ್ಭಾಸನದ ಮೇಲೆ ಹಾಸಿದ ಕೃಷ್ಣಾಜಿನದ ಮೇಲೆ ಕುಳಿತುಕೊಂಡು ಆಚಮನ ಮಾಡಬೇಕು. ॥ ೧೭॥ ಪದ್ಮಾಸನದಲ್ಲಿ ಚೆನ್ನಾಗಿ ಕುಳಿತುಕೊಂಡು ಭೂತೋಚ್ಚಾಟನಾದಿಗಳನ್ನು ಮಾಡಬೇಕು. ಜಿತೇಂದ್ರಿಯನಾಗಿ ಉತ್ತರಾಭಿಮುಖವಾಗಿ

ಸಮ್ಯಕ್ ಪದ್ಮಾಸನಾಸೀನಃ ಭೂತಶುದ್ಧಿಂ ಸಮಾಚರೇತ್ ।
ಪ್ರಾಣಾಯಾಮತ್ರಯಂ ಕೃತ್ವಾ ಮಂತ್ರೇಣ ಚ ಜಿತೇಂದ್ರಿಯಃ ॥ ೧೮॥

ಉದಂಗ್ಮುಖಃ ತತಃ ಕೃತ್ವಾ ಹೃತ್ಪಂಕಜಮನುತ್ತಮಮ್ ।
ವಿಕಾಸಂ ತಸ್ಯ ಕುರ್ವೀತ ವಿಜ್ಞಾನರವಿಣಾ ಭು ॥ ೧೯॥

ತತ್ ಕರ್ಣಿಕಾಯಾಂ ವಕ್ತ್ರಾಬ್ಜಂ ಶಶಿಬಿಂಬಾನ್ಯನುಕ್ರಮಾತ್ ।
ತ್ರಯಂ ತ್ರಯಾತ್ಮಕಂ ಸರ್ವಂ ಚಿಂತಯೇತ್ ವೈಷ್ಣವೋ ನರಃ ॥ ೨೦॥

ನಾನಾರತ್ನಮಯಂ ಪೀಠಂ ತೇಷಾಂ ಉಪರಿ ವಿನ್ಯಸೇತ್ ।
ತಸ್ಮಿನ್ ಮೃದುಶ್ಲಕ್ಷ್ಣತರೋ ಬಾಲಾರ್ಕಸದೃಶದ್ಯುತಿಃ ॥ ೨೧॥

ಅಷ್ಟೈಶ್ವರ್ಯದಲಂ ಪದ್ಮಂ ಶಂಖಚಕ್ರಗದಾಧರಮ್ ।
ಪದ್ಮಪತ್ರಂ ವಿಶಾಲಾಕ್ಷಂ ಸರ್ವಲಕ್ಷಣಲಕ್ಷಿತಮ ॥ ೨೨॥

ಶ್ರೀವತ್ಸಕೌಸ್ತುಭೋರಸ್ಕಂ ಪೀತವಸ್ತ್ರಾನ್ವಿತಂ ಚ ಮಾಮ್ ।
ವಿಚಿತ್ರಾಭರಣೈಃ ಯುಕ್ತಂ ದಿವ್ಯಮಂಡನಮಂಡಿತಮ್ ॥ ೨೩॥

ದಿವ್ಯಚಂದನಲಿಪ್ತಾಂಗಂ ದಿವ್ಯಪುಷ್ಪೋಪಶೋಭಿತಮ್ ।
ಕೋಟಿಬಾಲಾರ್ಕಸದೃಶಂ ಕಾಂತಂ ದಿವ್ಯಶ್ರಿಯಾ ಸಹ ॥ ೨೪॥

ಕುಳಿತುಕೊಂಡು ಮಂತ್ರಗಳನ್ನು ಉಚ್ಚರಿಸುತ್ತ ಮೂರು ಸಲ ಪ್ರಾಣಾಯಾಮಗಳನ್ನು ಮಾಡಬೇಕು.॥ ೧೮॥ ಅನಂತರ ಉತ್ತರಾಭಿಮುಖನಾಗಿ ಕುಳಿತು ಧ್ಯಾನಾಸಕ್ತನಾಗಿ ವಿಜ್ಞಾನವೆಂಬ ಸೂರ್ಯನಿಂದ ಶ್ರೇಷ್ಠವಾದ ತನ್ನ ಹೃದಯಕಮಲವನ್ನು ವಿಕಸಿತಗೊಳಿಸಬೇಕು. ॥೧೯॥ ವಿಷ್ಣುಭಕ್ತನಾದವನು ವಿಕಸಿತವಾದ ಆ ಕಮಲದಳಗಳಲ್ಲಿ ಅನುಕ್ರಮವಾಗಿ ಪರಮಾತ್ಮನ ಮುಖ ಕಮಲವನ್ನು ಮತ್ತು ಶಶಿಬಿಂಬವನ್ನು ಮೂರು ಮೂರು ಸಲ ಚಿಂತಿಸಬೇಕು. ॥೨೦॥ ಚಿಂತನೆ ಹೇಗೆ ಮಾಡಬೇಕೆಂದರೆ ಕೇಳು - ವಿಕಸಿತವಾದ ಕಮಲದಳಗಳ ಮೇಲೆ ನಾನಾರತ್ನಮಯವಾದ ಪೀಠವನ್ನು ಸ್ಥಾಪಿಸಬೇಕು. ಆ ಪೀಠ ಮಧ್ಯದಲ್ಲಿ ಮೃದು ಹಾಗೂ ಅತಿ ಕೋಮಲನಾದ, ಬಾಲ ಸೂರ್ಯನಂತೆ ಕಾಂತಿಯುಳ್ಳ ॥ ೨೧ ॥ ಅಷ್ಟೈಶ್ವರ್ಯ ದಲಗಳಿಂದ ಯುಕ್ತವಾದ ಪದ್ಮವನ್ನು ಮತ್ತು ಶಂಖ, ಚಕ್ರ, ಗದಾಗಳನ್ನು ತನ್ನ ನಾಲ್ಕು ಕೈಗಳಲ್ಲಿ ಧರಿಸಿದ , ಪದ್ಮಪತ್ರಗಳ ಮೇಲೆ ವಿರಾಜಿಸುವ, ವಿಶಾಲವಾದ ನೇತ್ರಗಳುಳ್ಳ, ಸರ್ವ ಲಕ್ಷಣಗಳಿಂದ ಯುಕ್ತನಾದ ॥೨೨॥ ಉರಸ್ಸಿನಲ್ಲಿ ಶ್ರೀ ವತ್ಸ ಹಾಗೂ ಕೌಸ್ತುಭಗಳನ್ನು ಧರಿಸಿದ, ಪೀತಾಂಬರವನ್ನು ಧರಿಸಿದ, ವಿಚಿತ್ರವಾದ ಆಭರಣಗಳಿಂದ ಕಂಗೊಳಿಸುವ , ದಿವ್ಯವಾದ ಅಲಂಕಾರಗಳಿಂದ ಶೋಭಿಸುವ , ॥ ೨೩॥ ದಿವ್ಯವಾದ ಚಂದನವನ್ನು ಲೇಪಿಸಿಕೊಂಡಿರುವ , ರಮ್ಯವಾದ

ಸರ್ವಲಕ್ಷಣಲಕ್ಷಿಣ್ಯಾ ಸಮಾಶ್ಲಿಷ್ಟತನುಂ ಶಿವಮ್ ।
ಏವಂ ಧ್ಯಾತ್ವಾ ಜಪೇತ್ ಮಂತ್ರಂ ಸಮಾಹಿತಮನಾಃ ಶುಚಿಃ ॥ ೨೫॥

ಸಹಸ್ರಂ ಶತವಾರಂ ವಾ ಯಥಾಶಕ್ತಿ ಜಪೇತ್ ಮನುಮ್ ।
ಮನಸೈವಾರ್ಚನಂ ಕೃತ್ವಾ ತತೋ ವಿಧಿವದಾಚರೇತ್ ॥ ೨೬॥

ಸಂಪ್ರದಾಯಾನುರೋಧೇನ ಶಂಖಂ ಸ್ಥಾಪ್ಯ ಮಮಾಗ್ರತಃ ।
ದುರ್ವಾಂಕುರೈಶ್ಚ ಪುಷ್ಪೈಶ್ಚ ಗಂಧೋದೇನ ಚ ಪೂರಿತವ್ ॥ ೨೭॥

ದಕ್ಷಿಣೇ ಗಂಧಪುಷ್ಪಾಣಾಂ ಪಾತ್ರಂ ಸ್ಥಾಪ್ಯ ಚ ದೈಶಿಕೈಃ ।
ವಾಮಭಾಗೇ ನ್ಯಸೇತ್ ಕುಂಭಂ ವಸ್ತ್ರಪೂತಂ ಸುವಾಸಿತಂ ॥ ೨೮॥

ಪುರತೋ ಮಮ ಘಂಟಾಂ ಚ ದಿಕ್ಷು ದೀಪಾನ್ನಿಯೋಜಯೇತ್ ।
ಅನ್ಯತ್ಸರ್ವಂ ಸಾಧನಂ ಚ ಯಥಾಸ್ಥಾನೇ ಚ ವಿನ್ಯಸೇತ್ ॥ ೨೯॥

ಅರ್ಘ್ಯಪಾದ್ಯಾಚಮನೀಯಮಧುಪರ್ಕಸ್ಯ ಕಾರಣಾತ್ ।
ವಿನ್ಯಸೇತ್ ಪುರತೋ ಮಹ್ಯಂ ಚತ್ವಾರೋ ಪಾತ್ರಕಾಣಿ ವೈ ॥ ೩೦॥

ಸಿದ್ಧಾರ್ಥಾಕ್ಷತಪುಷ್ಪಾಣಿ ಕುಶಾಗ್ರಂ ತಿಲಚಂದನಮ್ ।
ಫಲಂ ಯವಾಃ ಚತುರ್ವಕ್ತ್ರೇ ಅರ್ಘ್ಯಪಾತ್ರೆ ವಿನಿಕ್ಷಿಪೇತ್ ॥ ೩೧॥

ಪುಷ್ಪಮಾಲೆಗಳಿಂದ ಶೋಭಿಸುವ, ಕೋಟಿ ಬಾಲಸೂರ್ಯರಿಗೆ ಸದೃಶನಾದ ಮನೋಹರನಾದ, ॥ ೨೪॥ ಸರ್ವಲಕ್ಷಣಗಳಿಂದ ಯುಕ್ತಳಾದ ಲಕ್ಷ್ಮೀದೇವಿಯಿಂದ ಆಲಿಂಗಿತನಾದ, ಮಂಗಳಕರನಾದ, ಪರಮಾತ್ಮನಾದ ನನ್ನ ರೂಪವನ್ನು ಧ್ಯಾನಿಸಬೇಕು. ಧ್ಯಾನಿಸುವುದಾದ ಮೇಲೆ ಶುದ್ಧಮನಸ್ಕನಾದ ಹಾಗೂ ಸ್ಥಿತಪ್ರಜ್ಞನಾದ ಪುರುಷನು ॥೨೫॥ ಪರಮಾತ್ಮನ ಅಷ್ಟಾಕ್ಷರಾದಿ ಮಂತ್ರಗಳನ್ನು ಸಾವಿರ ಸಲವಾಗಲೀ, ನೂರು ಸಲವಾಗಲೀ ಅಥವಾ ಯಥಾಶಕ್ತಿಯಾಗಲೀ ಭಕ್ತಿಯಿಂದ ಏಕಾಗ್ರಮನದಿಂದ ಜಪಿಸಬೇಕು. ಈ ಪ್ರಕಾರ ಮಂತ್ರಗಳನ್ನು ಮನದಲ್ಲಿ ಜಪಿಸಿ ನಂತರ ವಿಧಿಪೂರ್ವಕ ಪೂಜೆಯನ್ನು ಪ್ರಾರಂಭಿಸಬೇಕು. ॥ ೨೬॥ ಸಂಪ್ರದಾಯಾನುಸಾರವಾಗಿ ಮೊದಲು ನನ್ನೆದುರಿನಲ್ಲಿ ದೂರ್ವಾಂಕುರಗಳಿಂದ ಪುಷ್ಪಗಳಿಂದ ಮತ್ತು ಗಂಧೋದಕದಿಂದ ತುಂಬಿದ ಶಂಖವನ್ನು ಸ್ಥಾಪಿಸಬೇಕು. ॥ ೨೭॥ ನನ್ನ ಬಲಭಾಗದಲ್ಲಿ ಗಂಧ ಪುಷ್ಪಗಳ ಪಾತ್ರೆಗಳನ್ನು ಇಡಬೇಕು. ಎಡಭಾಗದಲ್ಲಿ ಸುವಾಸಿತ ನೀರಿನಿಂದ ತುಂಬಿದ ಶುಭ್ರವಸ್ತ್ರದಿಂದ ಆಚ್ಛಾದಿಸಲ್ಪಟ್ಟ ಕುಂಭವನ್ನು ಇರಿಸಬೇಕು. ॥ ೨೮॥ ಎದುರಿನಲ್ಲಿ ಘಂಟೆಯನ್ನಿಡಬೇಕು. ಎಲ್ಲ ಕಡೆಗಳಲ್ಲಿ ನಂದಾದೀಪಗಳನ್ನು ಹಚ್ಚಬೇಕು. ಇನ್ನುಳಿದ ಪೂಜಾ ಸಾಧನಗಳನ್ನು ತತ್ತದ್ ಯೋಗ್ಯಸ್ಥಳದಲ್ಲಿ ಇಡಬೇಕು. ॥ ೨೯॥ ಅರ್ಘ್ಯ, ಪಾದ್ಯ, ಆಚಮನೀಯ ಮತ್ತು ಮಧುಪರ್ಕಗಳಿಗೋಸ್ಕರ ನನ್ನೆದುರಿನಲ್ಲಿ ನಾಲ್ಕು ಪಾತ್ರೆಗಳನ್ನಿಡಬೇಕು. ॥ ೩೦॥ ಅಕ್ಷತೆ

ದೂರ್ವಾ ವಿಷ್ಣುಪ್ರಿಯಾ ಶ್ಯಾಮಾ ಪದ್ಮಂ ಚೈವ ಚತುರ್ಮುಖ ।
ಪಾದ್ಯಪಾತ್ರೇ ನ್ಯಸೇತ್ ಪುತ್ರ ದೇಶಿಕೋ ಮಮ ತುಷ್ಟಯೇ ॥ ೩೨॥

ಕಂಕೋಲಂ ಚ ಲವಂಗಂ ಚ ಫಲಂ ಮಾಲತಿಸಂಭವಮ್ ।
ಕುರ್ಯಾದ್ವೈ ಶ್ರದ್ಧಯಾ ಶ್ರೇಯಾನ್ ಸತ್ಪಾತ್ರೇ ಆಚಮನೀಯಕೇ ॥ ೩೩॥

ಗವಾಂ ಪಯೋ ದಧಿ ಮಧು ಘೃತಂ ಖಂಡಸಮನ್ವಿತಮ್ ।
ಮಧುಪರ್ಕಸ್ಯ ಪಾತ್ರೇ ವೈ ದದ್ಯಾತ್ ವೈ ಶ್ರದ್ಧಯಾರ್ಚಕಃ ॥ ೩೪॥

ಉಕ್ತಾನಾಂ ಫಲಜಾತೀನಾಂ ಅಲಾಭೇ ಪತ್ರಪುಷ್ಪಯೋಃ ।
ತತ್ತದ್ಭಾವನಯಾ ಕುರ್ಯಾತ್ ಸರ್ವದಾ ವಿಧಿಕೋವಿದೈಃ ॥ ೩೫॥

ಕರನ್ಯಾಸಂ ತತಃ ಕುರ್ಯಾತ್ ಅಂಗನ್ಯಾಸಂ ತಥೈವ ಚ ।
ಪಂಚಾಂಗಂ ವಾ ಷಡಂಗಂ ವಾ ವಿನ್ಯಸೇತ್ ಸಂಪ್ರದಾಯತಃ ॥ ೩೬॥

ಮಮಾನುಸ್ಮರಣಂ ಕಾರ್ಯಮಾತ್ಮಾನಮನಿಶಂ ಸ್ಮರೇತ್ ।
ಪೂಜಾರಂಭೇ ಚತುರ್ವಕ್ತ್ರ ಮಂಗಲಂ ತು ಪಠೇನ್ನರಃ ॥ ೩೭॥

ಅಥ ಸಂಪೂಜಯೇತ್ ಶಂಖಂ ಪಾಂಚಜನ್ಯಂ ಮಮ ಪ್ರಿಯಮ್ ।
ಯಸ್ಯ ಸಂಪೂಜನಾತ್ ವತ್ಸ ಆನಂದಃ ಪರಮೋ ಮಮ ॥ ೩೮॥

ಪುಷ್ಪಗಳು, ಕುಶಾಗ್ರ, ತಿಲ, ಚಂದನ, ಫಲ ಮತ್ತು ಜವೆಗೋಧಿ ಇವುಗಳನ್ನು ನಾಲ್ಕು ಮುಖಗಳುಳ್ಳ ಅರ್ಘ್ಯಪಾತ್ರೆಯಲ್ಲಿ ಹಾಕಬೇಕು. ॥ ೩೧॥ ವಿಷ್ಣುಪ್ರಿಯಕರವಾದ ನೀಲವರ್ಣದ ದೂರ್ವಾ, ಕಮಲ ಇವುಗಳನ್ನು ಪಾದ್ಯಪಾತ್ರೆಯಲ್ಲಿ ಹಾಕಬೇಕು. ಹೇ ಚತುರ್ಮುಖ ಬ್ರಹ್ಮಾ ! ನನ್ನ ಪ್ರೀತ್ಯರ್ಥವಾಗಿ ಹೀಗೆಲ್ಲ ಮಾಡಬೇಕು. ॥ ೩೨॥ ಅಶೋಕಪತ್ರ, ಲವಂಗ, ಏಲಕ್ಕಿ, ಜಾಜೀಕಾಯೀ ಮುಂತಾದವುಗಳನ್ನು ಆಚಮನೀಯ ಪಾತ್ರೆಯಲ್ಲಿ ಹಾಕಬೇಕು. ॥ ೩೩॥ ಆಕಳ ಹಾಲು, ಮೊಸರು, ಜೇನುತುಪ್ಪ, ಸಕ್ಕರೆ ಇವುಗಳನ್ನು ಮಧುಪರ್ಕದ ಪಾತ್ರೆಯಲ್ಲಿರಿಸಬೇಕು. ॥ ೩೪॥ ಶ್ರದ್ಧೆಯಿಂದ ಪೂಜೆ ಮಾಡುವವನು ಈ ಮೊದಲು ತಿಳಿಸಿದ ಫಲ, ಪತ್ರ, ಪುಷ್ಪಗಳು ದೊರೆಯದಿದ್ದರೆ ಆ ಆ ಪದಾರ್ಥಗಳ ಅನುಸಂಧಾನವನ್ನು ಮಾಡಿಕೊಳ್ಳಬೇಕು. ಪೂಜಾವಿಧಾನವನ್ನು ಬಲ್ಲವರು ॥ ೩೫ ॥ ಅನಂತರ ಕರನ್ಯಾಸವನ್ನು (ತತ್ವ ನ್ಯಾಸಾದಿ) ಮತ್ತು ಅದರಂತೆ ಅಂಗನ್ಯಾಸವನ್ನು ಮಾಡಿಕೊಳ್ಳಬೇಕು. ಅವರವರ ಸಂಪ್ರದಾಯಾನುಸಾರ ಪಂಚಾಂಗನ್ಯಾಸವನ್ನಾಗಲೀ, ಷಡಂಗನ್ಯಾಸವನ್ನಾಗಲೀ ಮಾಡಿಕೊಳ್ಳಬೇಕು.॥ ೩೬॥ ಈ ನ್ಯಾಸಗಳನ್ನು ಮಾಡಿಕೊಳ್ಳುವಾಗ ಸದಾ ನನ್ನ ಧ್ಯಾನವನ್ನು ಮಾಡುತ್ತಿರಬೇಕು. ಹೇ ಚತುರ್ಮುಖ ಬ್ರಹ್ಮಾ! ಪೂಜಾರಂಭದಲ್ಲಿ ಮೊದಲು ಮಂಗಲ ಶ್ಲೋಕಗಳನ್ನು ಪಠಿಸಬೇಕು. ॥ ೩೭॥ ಅನಂತರ ಎದುರಿನಲ್ಲಿಟ್ಟಿರುವ ಶಂಖದಲ್ಲಿ ನನಗೆ ಪ್ರಿಯವಾದ ಪಾಂಚಜನ್ಯ

ಶಂಖಸ್ಯ ಪೂಜನೇ ವತ್ಸ ಮಂತ್ರಾನೇತಾನ್ ಉದೀರಯೇತ್ ।
ತ್ವಂ ಪುರಾ ಸಾಗರೋತ್ಪನ್ನೋ ವಿಷ್ಣುನಾ ವಿಧೃತಃ ಕರೇ ॥ ೩೯॥

ನಿರ್ಮಿತಃ ಸರ್ವದೇವೈಶ್ಚ ಪಾಂಚಜನ್ಯ ನಮೋಽಸ್ತು ತೇ ।
ತವ ನಾದೇನ ಜೀಮೂತಾ ವಿದ್ರವಂತಿ ಸುರಾಸುರಾಃ ॥ ೪೦॥

ಶಶಾಂಕಾಯುತದೀಪ್ತಾಭ ಪಾಂಚಜನ್ಯ ನಮೋಽಸ್ತು ತೇ ।
ಗರ್ಭಾ ದೇವಾರಿನಾರೀಣಾಂ ವಿಲೀಯಂತೆ ಸಹಸ್ರಧಾ ॥ ೪೧॥

ತವ ನಾದೇನ ಪಾತಾಲೇ ಪಾಂಚಜನ್ಯ ನಮೋಽಸ್ತು ತೇ ।
ದರ್ಶನೇನೈವ ಶಂಖಸ್ಯ ಕಿಂ ಪುನಃ ಸ್ಪರ್ಶನಂ ಕೃತಮ್ ॥ ೪೨॥

ವಿಲಯಂ ಯಾಂತಿ ಪಾಪಾನಿ ಹಿಮವತ್ ಭಾಸ್ಕರೋದಯೇ ।
ನತ್ವಾ ಶಂಖಂ ಕರೇ ಧೃತ್ವಾ ಮಂತ್ರೈರೇಭಿಸ್ತು ವೈಷ್ಣವಃ ॥ ೪೩॥

ಯಃ ಸ್ನಾಪಯತಿ ಮಾಂ ಭಕ್ತ್ಯಾ ತಸ್ಯ ಪುಣ್ಯಮನಂತಕಮ್ ।
ಸುವಾಸಿತೇನ ತೈಲೇನ ಕುರ್ಯಾತ್ ಅಭ್ಯಂಜನಂ ತತಃ ॥ ೪೪॥

ಶಂಖವನ್ನು ಅನುಸಂಧಾನಮಾಡಿಕೊಂಡು ಅದನ್ನು ಪೂಜಿಸಬೇಕು. ಹೇ ವತ್ಸಾ! ಈ ಅನುಸಂಧಾನದಿಂದ ಶಂಖವನ್ನು ಪೂಜಿಸುವುದರಿಂದ ನನಗೆ ಪರಮಾನಂದವಾಗುವುದು. ॥೩೮॥ ಹೇ ವತ್ಸಾ! ಈ ಶಂಖವನ್ನು ಪೂಜಿಸುವ ಸಮಯದಲ್ಲಿ ನಾನು ಈಗ ಹೇಳುವ ಮಂತ್ರಗಳನ್ನು ಪಠಿಸಬೇಕು. ಏನೆಂದರೆ - 'ನೀನು ಹಿಂದಕ್ಕೆ ಸಮುದ್ರದಿಂದ ಉತ್ಪನ್ನನಾಗಿರುವಿ. ವಿಷ್ಣು ನಿನ್ನನ್ನು ಕೈಯಲ್ಲಿ ಧರಿಸಿರುವನು. ॥ ೩೯॥ ಸಕಲ ದೇವತೆಗಳಿಂದ ನಿರ್ಮಿಸಲ್ಪಟ್ಟಿರುವ ಹೇ ಪಾಂಚಜನ್ಯ! ನಿನಗೆ ನಮಸ್ಕಾರವು. ನಿನ್ನ ಧ್ವನಿಯಿಂದ ಸುರಾಸುರರು ಭಯಭೀತರಾಗುವರು. ॥ ೪೦॥ ಹತ್ತು ಸಹಸ್ರ ಪೂರ್ಣ ಚಂದ್ರರ ಕಾಂತಿಗೆ ಸಮಾನವಾದ ಕಾಂತಿಯುಳ್ಳ ಹೇ ಪಾಂಚಜನ್ಯ! ನಿನಗೆ ನಮಸ್ಕಾರವು. ಯಾವ ನಿನ್ನ ಧ್ವನಿಯನ್ನು ಕೇಳುವುದರಿಂದ ಪಾತಾಲದಲ್ಲಿ ಅಸುರ ಸ್ತ್ರೀಯರ ಗರ್ಭಗಳು ಸಹಸ್ರ ಹೋಳುಗಳಾಗಿ ಸ್ರವಿಸುತ್ತವೆಯೋ ಅಂಥ ಪಾಂಚಜನ್ಯ, ನಿನಗೆ ನಮಸ್ಕಾರವು'. ॥೪೧॥ ಸೂರ್ಯೋದಯವಾಗಲು ಹಿಮವು ಕರಗಿಹೋಗುವಂತೆ ಶಂಖದ ದರ್ಶನದಿಂದಲೇ ಸಕಲ ಪಾಪಗಳು ನಾಶವಾಗಿ ಹೋಗುವಾಗ ಶಂಖ ಸ್ಪರ್ಶದಿಂದ ಸಕಲ ಪಾಪಗಳು ನಾಶವಾಗುವವೆಂದು ಹೇಳುವುದೇನಿದೆ! ವೈಷ್ಣವನಾದವನು ಶಂಖಕ್ಕೆ ನಮಸ್ಕರಿಸಿ, ಅದನ್ನು ಕೈಯಲ್ಲಿ ಹಿಡಿದುಕೊಂಡು ಇದುವರೆಗೆ ಹೇಳಿದಂತೆ ಮಂತ್ರೋಚ್ಚಾರಪೂರ್ವಕ ಸ್ತೋತ್ರ ಮಾಡಿದ ನಂತರ ಅಭಿಷೇಕ ಸೂಕ್ತಗಳನ್ನು ಪಠಿಸುತ್ತ ॥ ೪೨॥ ೪೩॥ ನನಗೆ ಭಕ್ತಿಯಿಂದ ನಿರ್ಮಾಲ್ಯ ವಿಸರ್ಜನಾಭಿಷೇಕ ಮಾಡುವವನಿಗೆ ಅನಂತವಾದ ಪುಣ್ಯವು ಲಭಿಸುವದು. ಅಭಿಷೇಕಾನಂತರ ಸುವಾಸಿತವಾದ ತೈಲವನ್ನು ಹಚ್ಚಿ

ಕಸ್ತೂರ್ಯಾ ಚಂದನೇನೈವ ಕುರ್ಯಾತ್ ಉದ್ವರ್ತನಾದಿಕಮ್ ।
ಸುಗಂಧಾದಿಸಿತ್ತೈಃ ತೋಯೈಃ ಸ್ನಾಪ್ಯ ಮಂತ್ರಯುತ್ತೈಃ ಶುಭೈಃ ॥ ೪೫॥

ಅರ್ಘ್ಯಂ ದತ್ವಾ ತತೋ ಮಂತ್ರಪಾದ್ಯಮಾಚಮನೀಯಕಮ್ ।
ಮಧುಪರ್ಕಂ ತತೋ ದದ್ಯಾತ್ ಪಾಯಸಾಪೂಪಮಿಶ್ರಿತಮ್ ॥ ೪೬॥

ಸಕರ್ಪೂರಂ ಚ ತಾಂಬೂಲಂ ಭಕ್ತ್ಯಾ ಚೈವ ನಿವೇದಯೇತ್ ।
ಸುರಭೀಣಿ ಚ ಪುಷ್ಪಾಣಿ ಭಕ್ತ್ಯಾ ಸಮ್ಯಕ್ ನಿವೇದಯೇತ್ ॥ ೪೭॥

ಧೂಪಂ ದಶಾಂಗಂ ಅಷ್ಟಾಂಗಂ ದೀಪಂ ಚ ಸುಮನೋಹರಮ್ ।
ಪರಿಣೀಯ ಪ್ರಣಮ್ಯಾಥ ಸ್ತುತ್ವಾ ಸ್ತುತಿಭಿರಾದರಾತ್ ॥ ೪೮॥

ಶಾಯಯಿತ್ವಾ ತು ಪರ್ಯಂಕೇ ಮಂಗಲಾರ್ಘ್ಯಂ ನಿವೇದಯೇತ್॥ ೪೯॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಚತುರ್ಥೋಽಧ್ಯಾಯಃ॥

ಅಭ್ಯಂಜನವನ್ನು ಮಾಡಿಸಬೇಕು. ॥ ೪೪॥ ಕಸ್ತೂರೀ ಚಂದನ ಮಿಶ್ರಿತವಾದ ಜಲದಿಂದ ಉದ್ವರ್ತನಾದಿಗಳನ್ನು ಮಾಡಿ ನಂತರ ಸುಗಂಧಾದಿಗಳಿಂದ ಯುಕ್ತವಾದ ಜಲದಿಂದ ಅಭಿಷೇಕ ಸೂಕ್ತ ಮಂತ್ರಪಠಣಪೂರ್ವಕ ಶುದ್ಧೋದಕ ಸ್ನಾನವನ್ನು ಮಾಡಿಸಬೇಕು. ॥೪೫॥ ಸ್ನಾನಾನಂತರ ಅರ್ಘ್ಯ, ಪಾದ್ಯ, ಆಚಮನೀಯ ಮತ್ತು ಮಧುಪರ್ಕಗಳನ್ನು ಸಮರ್ಪಿಸಬೇಕು. ಅನಂತರ ಪಾಯಸ,ಅಪೂಪಗಳಿಂದ ಸಹಿತವಾದ ಪದಾರ್ಥಗಳನ್ನು ॥ ೪೬॥ ಸಕರ್ಪೂರ ತಾಂಬೂಲವನ್ನು ಶ್ರೀಹರಿಗೆ ಭಕ್ತಿಯಿಂದ ನಿವೇದಿಸಬೇಕು. ಸುಗಂಧಯುಕ್ತವಾದ ಪುಷ್ಪಗಳನ್ನು ಭಕ್ತಿಪೂರ್ವಕ ಸಮರ್ಪಿಸಬೇಕು. ॥ ೪೭॥ ಧೂಪವನ್ನು, ದಶಾಂಗವನ್ನು, ಅಷ್ಟಾಂಗವನ್ನು ಮತ್ತು ಮನೋಹರವಾದ ದೀಪವನ್ನು ಅರ್ಪಿಸಬೇಕು. ಭಕ್ತಿಪೂರ್ವಕ ನಮಸ್ಕರಿಸಿ, ಸ್ತೋತ್ರಮಾಡಿ ॥ ೪೮॥ ಪರ್ಯಂಕದಲ್ಲಿ ಶ್ರೀಹರಿಯನ್ನು ಮಲಗಿಸಿ ನಂತರ ಮಂಗಲಾರ್ಘ್ಯವನ್ನು ನಿವೇದಿಸಬೇಕು. ॥ ೪೯॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಬ್ರಹ್ಮವಿಷ್ಣು ಸಂವಾದದಲ್ಲಿ ಮಾರ್ಗಶೀರ್ಷಮಾಸ ಮಹಾತ್ಮೆಯಲ್ಲಿ ''ತುಲಸೀ ಮಹಿಮೆ ಮತ್ತು ಹರಿಪೂಜಾವಿಧಿ'' ಎಂಬ ನಾಲ್ಕನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೫
ಅಭಿಷೇಕ ಮಹಾತ್ಮೆ

★

ಬ್ರಹ್ಮೋವಾಚ -
ಪಂಚಾಮೃತಸ್ಯ ಸ್ನಪನಾದ್ಯತ್ಫಲಂ ಲಭತೇ ಹರೇಃ ।
ಶಂಖೋದಕೇನ ಯತ್ಕಿಂಚಿತ್ತನ್ಮೇ ಬ್ರೂಹ್ಯಜಿತಾಚ್ಯುತ ॥ ೧॥

ಶ್ರೀಭಗವಾನುವಾಚ -
ಕ್ಷೀರಸ್ನಾನಂ ಪ್ರಕುರ್ವಂತಿ ಯೇ ನರಾ ಮಮ ಮೂರ್ಧನಿ ।
ಶತಾಶ್ವಮೇಧಜಂ ಪುಣ್ಯಂ ಬಿಂದುನಾ ಬಿಂದುನಾ ಸಮಮ್ ॥ ೨॥

ಕ್ಷೀರಾತ್ ದಶಗುಣಂ ಪುಣ್ಯಂ ಘೃತೇನೈವ ದಶೋತ್ತರಮ್ ।
ಗಂಧಪುಷ್ಪೋದಕಂ ಮಂತ್ರಂ ಸರ್ವೋತ್ಕೃಷ್ಟಂ ಪ್ರಶಸ್ಯತೇ ॥ ೩॥

ದ್ವಾದಶ್ಯಾಂ ಪಂಚದಶ್ಯಾಂ ವಾ ಗವ್ಯೇನ ಪಯಸಾ ಸಮಮ್ ।
ಸ್ನಾಪನೇ ದೇವಶಾರ್ದೂಲ ಮಹಾಪಾತಕನಾಶನಮ್ ॥ ೪॥

"ಹೇ ಅಜಿತ, ಅಚ್ಯುತ, ಶ್ರೀಹರೇ ! ಪೂಜಾ ಸಮಯದಲ್ಲಿ ನಿನಗೆ ಮಾಡುವ ಪಂಚಾಮೃತಾಭಿಷೇಕದಿಂದ ಮತ್ತು ಶಂಖೋದಕಾಭಿಷೇಕದಿಂದ ಏನು ಪುಣ್ಯವು ಲಭಿಸುವದೋ ಅದನ್ನು ಕಿಂಚಿತ್ತಾದರೂ ತಿಳಿಸು" ಎಂದು ಬ್ರಹ್ಮನು ಪ್ರಾರ್ಥಿಸಲು ಶ್ರೀಹರಿಯು ಹೇಳುತ್ತಾನೆ ॥ ೧॥ "ಅಯ್ಯಾ ಬ್ರಹ್ಮಾ ! ಕೇಳು. ಯಾವ ಮನುಷ್ಯರು ನನ್ನ ತಲೆಯ ಮೇಲೆ ಕ್ಷೀರಾಭಿಷೇಕವನ್ನು ಮಾಡುವರೋ ಅವರು ಕ್ಷೀರದ ಒಂದೊಂದು ಹನಿಗೆ ಒಂದು ನೂರು ಅಶ್ವಮೇಧ ಯಾಗಗಳ ಫಲವನ್ನು ಹೊಂದುವರು. ॥ ೨॥ ಕ್ಷೀರಾಭಿಷೇಕದಿಂದ ಬರುವ ಪುಣ್ಯದ ಹತ್ತು ಪಟ್ಟು ಪುಣ್ಯವು ದಧಿ ಅಭಿಷೇಕದಿಂದಲೂ ಇದಕ್ಕಿಂತಲೂ ಹತ್ತು ಪಟ್ಟು ಅಧಿಕವಾದ ಪುಣ್ಯವು ಮಧು ಸ್ನಾನದಿಂದ ದೊರೆಯುವದು ಮತ್ತು ಶರ್ಕರಾ ಸ್ನಾನದಿಂದ ಅದಕ್ಕಿಂತಲೂ ಹೆಚ್ಚು ಪುಣ್ಯವು ಪ್ರಾಪ್ತವಾಗುವದು. ಗಂಧಪುಷ್ಪೋದಕ ಮಂತ್ರವು ಸರ್ವೋತ್ಕೃಷ್ಟವಾಗಿರುತ್ತದೆ .॥ ೩॥ ಹೇ ದೇವತೆಗಳಲ್ಲಿ ಶ್ರೇಷ್ಠನಾದ ಬ್ರಹ್ಮಾ ! ದ್ವಾದಶಿಯ ದಿನ ಅಥವಾ ಪೌರ್ಣಿಮೆಯ ದಿನ (ಪಂಚಾಮೃತದಿಂದ) ಆಕಳ ಹಾಲಿನಿಂದ ಪರಮಾತ್ಮನಿಗೆ ಅಭಿ ಷೇಕ ಮಾಡುವುದರಿಂದ ಮಹಾಪಾತಕಗಳು ನಾಶವಾಗುವವು . ॥ ೪॥ ಹಾಲಿನ ವಿಕಾರದಿಂದ ಮೊಸರು ಮುಂತಾದವುಗಳು ಹೇಗೆ ಆಗುವವೋ ಅದರಂತೆ ನನಗೆ ಕ್ಷೀರಾಭಿಷೇಕ ಮಾಡುವವನು

ದಧ್ಯಾದೀನಾಂ ವಿಕಾರಾಣಾಂ ಕ್ಷೀರತಃ ಸಂಭವೋ ಯಥಾ ।
ತಥೈವ ಶೇಷಕಾಮಾನಿ ಕ್ಷೀರೇಣ ಸ್ನಪನೋ ಮಮ ॥ ೫॥

ಕ್ಷೀರಸ್ನಾನೇನ ಸೌಭಾಗ್ಯಂ ದಧ್ನಾ ಮಿಷ್ಟಾನ್ನಭೋಜನಮ್ ।
ಘೃತೇನ ಸ್ನಾಪಯೇತ್ ಯೋ ಮಾಂ ನರಃ ಮಮ ಪುರಂ ವ್ರಜೇತ್ ॥ ೬॥

ಸ್ನಾನಂ ಶರ್ಕರಯಾ ಯಸ್ತು ಕಾರಯನ್ ಮಾರ್ಗಶೀರ್ಷಕೇ ।
ಸ ರಾಜಾ ಜಾಯತೇ ಲೋಕೇ ಪುರಃ ಸ್ವರ್ಗಾದಿಹಾಗತಃ ॥ ೭॥

ಗಜಾಶ್ವರಥಸಂಪೂರ್ಣಂ ಸ ರಾಜ್ಯಂ ಲಭತೇ ಭುವಿ ।
ಕಾರಯನ್ ಮಾರ್ಗಶೀರ್ಷೇ ವೈ ಯಃ ಕ್ಷೀರಃ ಸ್ನಪನಂ ಮಮ ॥ ೮॥

ಸ್ವರ್ಗಲೋಕೇ ಸ ಜಯತಿ ಚಂದ್ರರುದ್ರೇಂದ್ರಮಾರುತಾನ್ ।
ಕ್ಷೀರಸ್ನಾನಂ ಪರಂ ಶ್ರೇಷ್ಠಂ ಮಾರ್ಗಶೀರ್ಷೇ ಚ ಪುತ್ರಕ ॥ ೯॥

ಕ್ಷೀರಸ್ನಪನಮಾಹಾತ್ಮ್ಯಂ ವರ್ಚಸ್ವಂ ಪುಷ್ಟಿವರ್ಧನಮ್ ।
ದೌರ್ಭಾಗ್ಯಂ ವಿಲಯಂ ಯಾತಿ ಕ್ಷೀರಸ್ನಾನೇನ ಮೇ ಸುತ ॥ ೧೦॥

ಸ್ನಾಪಯೇತ್ ಮಾರ್ಗಶೀರ್ಷೇ ಮಾಂ ಯೋ ವೈ ಪಂಚಾಮೃತೇನ ತು ।
ಸ ನ ಶೋಚ್ಯೋ ಭವೇತ್ ಜಂತುಃ ಬಂಧನಾತ್ ಭುವಿ ಮಾನ ॥ ೧೧॥

ಅವಶಿಷ್ಟ ಕಾಮನೆಗಳೆಲ್ಲ ಅನಾಯಾಸವಾಗಿ ಹೊಂದುತ್ತಾನೆ. ॥೫॥ ನನಗೆ ಕ್ಷೀರಾಭಿಷೇಕ ಮಾಡುವುದರಿಂದ ಕರ್ತೃವಿಗೆ ಸೌಭಾಗ್ಯವೂ, ದಧಿ ಅಭಿಷೇಕದಿಂದ ಮೃಷ್ಟಾನ್ನ ಭೋಜನವೂ, ದೊರೆಯುವವು . ಘೃತಾಭಿಷೇಕ ಮಾಡುವವನು ನನ್ನ ಪುರವನ್ನು ಹೊಂದುವನು. ॥ ೬॥ ಮಾರ್ಗಶೀರ್ಷ ಮಾಸದಲ್ಲಿ ನನಗೆ ಶರ್ಕರಾಸ್ನಾನ ಮಾಡಿಸುವವನು ಜನ್ಮಾಂತರದಲ್ಲಿ ಸ್ವರ್ಗದಿಂದ ಬಂದು ಭೂಮಿಯ ಮೇಲೆ ಹುಟ್ಟಿ ಲೋಕದಲ್ಲಿ ರಾಜನಾಗುವನು. ॥೭॥ ಗಜ, ಅಶ್ವ, ರಥಗಳಿಂದ ಸಮೃದ್ಧವಾದ ರಾಜ್ಯವನ್ನು ಹೊಂದುವನು. ಮಾರ್ಗಶೀರ್ಷ ಮಾಸದಲ್ಲಿ ನನಗೆ ಕ್ಷೀರಾಭಿಷೇಕ ಮಾಡುವವನು ॥೮॥ ಸ್ವರ್ಗಲೋಕದಲ್ಲಿದ್ದು ಚಂದ್ರ, ರುದ್ರ, ಇಂದ್ರ ಮತ್ತು ಮಾರುತರಿಗಿಂತಲೂ ಉತ್ಕೃಷ್ಟನಾಗಿ ಇರುವನು. ಆದ್ದರಿಂದ ಹೇ ವತ್ಸಾ! ಮಾರ್ಗಶೀರ್ಷದಲ್ಲಿ ಕ್ಷೀರಸ್ನಾನವು ಅತಿ ಶ್ರೇಷ್ಠವಾದುದು. ॥ ೯॥ ಕ್ಷೀರಾಭಿಷೇಕವು ವರ್ಚಸ್ವವನ್ನು ಕೊಡುವಂಥದು ಮತ್ತು ಸಮೃದ್ಧಿಯನ್ನುಂಟು ಮಾಡುವಂಥದು ಆಗಿದೆ. ಅಯ್ಯಾ ಮಗನೇ! ನನಗೆ ಕ್ಷೀರಾಭಿಷೇಕ ಮಾಡುವುದರಿಂದ ದೌರ್ಭಾಗ್ಯವು ನಾಶವಾಗಿ ಹೋಗುವದು. ॥ ೧೦॥ ಮಾರ್ಗಶೀರ್ಷದಲ್ಲಿ ನನಗೆ ಪಂಚಾಮೃತಾಭಿಷೇಕ ಮಾಡುವವನು ಭೂಮಿಯಲ್ಲಿ ಸಂಸಾರಬಂಧನದಿಂದಾಗುವ ಯಾವ ದುಃಖವನ್ನೂ ಹೊಂದಲಾರನು . ॥೧೧॥ ಎಲೈ

ಕಪಿಲಾಕ್ಷೀರಮಾದಾಯ ಯಃ ಸ್ನಾಪಯತಿ ಮಾಂ ಸುತ ।
ಕಪಿಲಾಶತದಾನಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೧೨॥

ಶಂಖತೀರ್ಥೋದಕಂ ಕೃತ್ವಾ ಯಃ ಸ್ನಾಪಯತಿ ದೇಶಿಕಃ ।
ಬಿಂದುನಾಪಿ ಸಹೋಮಾಸೇ ಸ್ವಕುಲಂ ತಾರಯೇದ್ಧಿ ಸಃ ॥ ೧೩॥

ಕಾಪಿಲಂ ಕ್ಷೀರಮಾದಾಯ ಶಂಖೇ ಕೃತ್ವಾ ಚ ಮಾನವಃ ।
ಯಃ ಸ್ನಾಪಯತಿ ಮಾಂ ಭಕ್ತ್ಯಾ ಸರ್ವತೀರ್ಥಫಲಂ ಲಭೇತ್ ॥ ೧೪॥

ಶಂಕಾಷ್ಟಕೇನ ಯಃ ಸ್ನಾನಂ ಕಾರಯೇತ್ ಮಾರ್ಗಶೀರ್ಷಕೇ ।
ಭಕ್ತ್ಯಾ ಭಾಗವತಶ್ರೇಷ್ಠಃ ಮಮ ಲೋಕೇ ಮಹೀಯತೆ ॥ ೧೫॥

ಶಂಖಷೋಡಶಕೇನಾಥ ಯಃ ಸ್ನಾಪಯತಿ ಮೇ ಸುತ ।
ಸ ಪಾಪಮುಕ್ತಃ ಸುಚಿರಂ ಸ್ವರ್ಗಲೋಕೇ ಮಹೀಯತೆ ॥ ೧೬॥

ಚತುರ್ವಿಂಶತಿಸಂಖ್ಯಾಕೈಃ ಶಂಖೈರ್ಯಃ ಸ್ನಾಪಯೇಚ್ಚ ಮಾಮ್ ।
ಇಂದ್ರಲೋಕೇ ಚಿರಂ ಸ್ಥಿತ್ವಾ ಸ ರಾಜಾ ಭುವಿ ಜಾಯತೇ ॥ ೧೭॥

ಶಂಖಾಷ್ಟೋತ್ತರಶತೇನೈವ ಸ್ನಾಪಯೇತ್ ಮಾರ್ಗಶೀರ್ಷಕೇ ।
ಶಂಖೇ ಶಂಖೇ ಸುವರ್ಣಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೧೮॥

ಪುತ್ರನೇ! ಕಪ್ಪು ಬಣ್ಣದ ಆಕಳಿನ ಹಾಲನ್ನು ತಂದು ಅದರಿಂದ ನನಗೆ ಯಾರು ಅಭಿಷೇಕ ಮಾಡುವರೋ ಅವರು ಒಂದು ನೂರು ಕಪಿಲಾ ಗೋವುಗಳನ್ನು ದಾನಮಾಡುವುದರಿಂದ ಬರುವಷ್ಟು ಫಲವನ್ನು ಪಡೆಯುವರು. ॥೧೨॥ ದೇಶಿಕನಾದ ಯಾವನು ಮಾರ್ಗಶೀರ್ಷ ಮಾಸದಲ್ಲಿ ಶಂಖದಲ್ಲಿ ತೀರ್ಥೋದಕವನ್ನು ಮಾಡಿ ಅದರಿಂದ ನನಗೆ ಅಭಿಷೇಕ ಮಾಡುವನೋ ಅವನು ಶಂಖೋದಕದ ಒಂದು ಬಿಂದುವಿನಿಂದಲೂ ಕೂಡ ತನ್ನ ಕುಲದ ಉದ್ಧಾರ ಮಾಡುವನು. ॥೧೩॥ ಕಪಿಲಾ ಗೋವಿನ ಹಾಲನ್ನು ತಂದು ಅದನ್ನು ಶಂಖದಲ್ಲಿ ಹಾಕಿ ನಂತರ ನನಗೆ ಅಭಿಷೇಕ ಮಾಡುವವನು ಸಕಲ ತೀರ್ಥಗಳಲ್ಲಿ ಸ್ನಾನ ಮಾಡುವುದರಿಂದ ಬರುವಷ್ಟು ಫಲವನ್ನು ಪಡೆಯುವನು. ॥೧೪॥ ಮಾರ್ಗಶೀರ್ಷದಲ್ಲಿ ಯಾರು ಭಕ್ತಿಯಿಂದ ನನಗೆ ಶಂಖೋದಕದಿಂದ ಎಂಟು ಸಲ ಅಭಿಷೇಕ ಮಾಡುವರೋ ಅವರು ಭಾಗವತ ಶ್ರೇಷ್ಠರು. ಅಂಥವರು ನನ್ನ ಲೋಕದಲ್ಲಿ ಪೂಜ್ಯರಾಗಿ ಇರುತ್ತಾರೆ. ॥೧೫॥ ಇನ್ನು ೧೬ ಸಲ ಶಂಖಗಳಿಂದ ನನಗೆ ಅಭಿಷೇಕ ಮಾಡುವವರು ಸಕಲ ಪಾಪಗಳಿಂದ ಮುಕ್ತರಾಗಿ ಸ್ವರ್ಗ ಲೋಕದಲ್ಲಿ ಬಹುಕಾಲ ವಾಸಿಸುತ್ತಾರೆ ॥೧೬॥ ೨೪ ಸಲ ಶಂಖಗಳಿಂದ ನನಗೆ ಅಭಿಷೇಕ ಮಾಡಿದರೆ ಆ ಪುರುಷನು ಇಂದ್ರಲೋಕದಲ್ಲಿ ಬಹುಕಾಲವಿದ್ದು ನಂತರ ಭೂಮಿಯಲ್ಲಿ ಹುಟ್ಟಿ ರಾಜನಾಗುವನು ॥ ೧೭॥ ೧೦೮ ಸಲ ಶಂಖಗಳಿಂದ ಅಭಿಷೇಕ ಮಾಡಿದವನು ಒಂದೊಂದು ಶಂಖದಿಂದ ಅಭಿಷೇಕ ಮಾಡಿದಾಗಲೂ ಸುವರ್ಣ ದಾನದ

ಮಾರ್ಗಶೀರ್ಷೇ ಭಕ್ತಿಮಾನ್ ಯಃ ಕೃತ್ವಾ ಶಂಖಧ್ವನಿಂ ಹಿ ಮಾಮ್ ।
ಸ್ನಾಪಯೇತ್ ಪಿತರಸ್ತಸ್ಯ ಸ್ವರ್ಗೇ ತಾವತ್ ಪ್ರತಿಷ್ಠಿತಾಃ ॥ ೧೯॥

ಅಷ್ಟೋತ್ತರಸಹಸ್ರಂ ತು ಶಂಖಸ್ನಾನಂ ತು ಯಶ್ಚರೇತ್ ।
ಸಗಣೋ ಮುಕ್ತಿಮಾಪ್ನೋತಿ ಯಾವದಾಭೂತಸಂಪ್ಲವಮ್ ॥ ೨೦॥

ನಿತ್ಯಂ ಸಂಸ್ನಾಪಯೇತ್ ಯೋ ಮಾಂ ಶಂಖೇನ ಸುರಸತ್ತಮ ।
ಗಂಗಾಸ್ನಾನಫಲಂ ಪ್ರಾಪ್ಯ ನಿತ್ಯಂ ನಂದತಿ ದೇವವತ್ ॥ ೨೧॥

ಶಂಖೇ ತೋಯಂ ಸಮಾದಾಯ ಯಃ ಸ್ನಾಪಯತಿ ಮಾಂ ಸುತ ।
ನಮೋ ನಾರಾಯಣೇತ್ಯುಕ್ತ್ವಾ ಮುಚ್ಯತೇ ಸರ್ವಕಿಲ್ಬಿಷೈಃ ॥ ೨೨॥

ಕೃತ್ವಾ ಪಾದೋದಕಂ ಶಂಖೇ ವೈಷ್ಣವಾನಾಂ ಮಹಾತ್ಮನಾಮ್ ।
ಯೋ ದದಾತಿ ತಿಲೋನ್ಮಿಶ್ರಂ ಚಾಂದ್ರಾಯಣಫಲಂ ಲಭೇತ್ ॥ ೨೩॥

ನಾದ್ಯಂ ತಡಾಗಜಂ ವಾಪಿ ವಾಪೀಕೂಪಾದಿಕಂ ಚ ಯತ್ ।
ಗಾಂಗೇಯಂ ಜಾಯತೇ ಸರ್ವಂ ಜಲಂ ಶಂಖಕೃತಂ ಚ ಯತ್ ॥ ೨೪॥

ಗೃಹೀತ್ವಾ ಮಮ ಪಾದಾಂಬು ಶಂಖೇ ಕೃತ್ವಾ ತು ವೈಷ್ಣವಃ ।
ಯೋ ವಹೇತ್ ಶಿರಸಾ ನಿತ್ಯಂ ಸಃ ಮುನಿಃ ತಪತಾಂ ವರಃ ॥ ೨೫॥

ಫಲವನ್ನು ಪಡೆಯುವನು. ॥ ೧೮॥ ಮಾರ್ಗಶೀರ್ಷದಲ್ಲಿ ಯಾವನು ಭಕ್ತಿಯುತನಾಗಿ ಶಂಖವನ್ನು ಊದಿ ನನಗೆ ಯಾವತ್ಕಾಲ ಅಭಿಷೇಕ ಮಾಡುವನೋ ಅಷ್ಟು ಹೊತ್ತಿನವರೆಗೆ ಅವನ ಪಿತೃಗಳು ಸ್ವರ್ಗದಲ್ಲಿ ಸುಖದಿಂದ ಇರುವರು. ॥ ೧೯॥ ೧೦೦೮ ಸಲ ಶಂಖೋದಕದಿಂದ ನನಗೆ ಅಭಿಷೇಕ ಮಾಡುವ ಪುರುಷನು ತನ್ನ ಬಾಂಧವರಿಂದ ಕೂಡಿಕೊಂಡು ಜಲಪ್ರಲಯವಾಗುವವರೆಗೆ ಸಂಸಾರದಿಂದ ಮುಕ್ತಿಯನ್ನು ಪಡೆಯುವನು. ॥ ೨೦॥ ಹೇ ದೇವೋತ್ತಮನಾದ ಬ್ರಹ್ಮಾ! ನಿತ್ಯದಲ್ಲಿ ಯಾವನು ಭಕ್ತಿಪೂರ್ವಕ ಶಂಖೋದಕದಿಂದ ನನಗೆ ಅಭಿಷೇಕ ಮಾಡುವನೋ ಅವನು ಗಂಗಾಸ್ನಾನದ ಫಲವನ್ನು ಹೊಂದಿ ದೇವತೆಗಳಂತೆ ನಿತ್ಯ ಆನಂದದಿಂದ ಇರುವನು. ॥೨೧॥ ಶಂಖದಲ್ಲಿ ನೀರನ್ನು ಹಾಕಿ 'ಹೇ ನಾರಾಯಣ ! ನಿನಗೆ ನಮಸ್ಕಾರ' ಎಂದು ಹೇಳುತ್ತ ನನಗೆ ಅಭಿಷೇಕ ಮಾಡುವವನು ಸಕಲ ಪಾಪಗಳಿಂದ ಮುಕ್ತನಾಗುವನು. ॥ ೨೨॥ ಯಾವನು ಶಂಖದಲ್ಲಿ ವಿಷ್ಣುಪಾದೋದಕವನ್ನು ಹಾಕಿ ಅದರಲ್ಲಿ ತಿಲವನ್ನು ಮಿಶ್ರಮಾಡಿ ಮಹಾತ್ಮರಾದ ವೈಷ್ಣವರಿಗೆ ದಾನವಾಗಿ ಕೊಡುತ್ತಾನೋ ಅವನು ಚಾಂದ್ರಾಯಣ ವ್ರತದ ಫಲವನ್ನು ಪಡೆಯುವನು. ॥೨೩॥ ನದೀ, ತಡಾಗ, ಕೆರಿ, ಬಾವಿ ಮೊದಲಾದವುಗಳಲ್ಲಿಯ ನೀರನ್ನು ತಂದು ಶಂಖದಲ್ಲಿ ಹಾಕಿದರೆ ಅದು ಗಂಗಾ ಜಲಕ್ಕೆ ಸಮನಾಗುತ್ತದೆ. ॥ ೨೪॥ ನನ್ನ ಪಾದೋದಕವನ್ನು ಶಂಖದಲ್ಲಿ ಹಾಕಿ ಅದನ್ನು ನಿತ್ಯದಲ್ಲಿ ತನ್ನ ಶಿರಸ್ಸಿನಲ್ಲಿ ಧರಿಸುವ

ತ್ರೈಲೋಕ್ಯೇ ಯಾನಿ ತೀರ್ಥಾನಿ ಮಮ ಚೈವಾಜ್ಞಯಾ ಸುತ ।
ಶಂಖೇ ತಾನಿ ವಸಂತೀಹ ತಸ್ಮಾತ್ ಶಂಖೋ ವರಃ ಸ್ಮೃತಃ ॥ ೨೬॥

ಸಾಂಬುಶಂಖಂ ಕರೇ ಧೃತ್ವಾ ಮಂತ್ರೈರೇತೈಸ್ತು ವೈಷ್ಣವಃ
ಯಃ ಸ್ನಾಪಯೇತ್ ಮಾರ್ಗಶೀರ್ಷೇ ತುಷ್ಟಸ್ತಸ್ಯ ಭವಾಮ್ಯಹಮ್ ॥ ೨೭॥

ಶಂಖಾದೌ ಚಂದ್ರದೈವತ್ಯಂ ಕುಕ್ಷೌ ವರುಣದೇವತಾ
ಪೃಷ್ಠೇ ಪ್ರಜಾಪತಿಶ್ಚೈವ ಅಗ್ರೇ ಗಂಗಾಸರಸ್ವತೀ ॥ ೨೮॥

ತೇಷಾಂ ಉಚ್ಚಾರಪೂರ್ವಂ ತು ಸ್ನಾಪಯೇತ್ ಮಾಮತಂದ್ರಿತಃ ।
ತಸ್ಯ ಪುಣ್ಯಸ್ಯ ಸಂಖ್ಯಾಂ ವೈ ಕರ್ತುಂ ನೈವ ಸುರಾಸುರಾಃ ॥ ೨೯॥

ಪುರತೋ ಮಮ ದೇವೇಶ ಸಪುಷ್ಪಃ ಸಜಲಾಕ್ಷತಃ ।
ಶಂಖಸ್ತ್ವಭ್ಯರ್ಚಿತಃ ತಿಷ್ಠೇತ್ ತಸ್ಯ ಶ್ರೀಃ ಸರ್ವತೋಮುಖೀ ॥ ೩೦॥

ವಿಲೇಪನೇನ ಸಂಪೂರ್ಣಂ ಶಂಖಂ ಕೃತ್ವಾ ತು ಮಾಂ ಭಜೇತ್ ।
ತದಾ ಮೇ ಪರಮಾ ಪ್ರೀತಿಃ ಭವೇತ್ ವೈ ಶತವಾರ್ಷಿಕೀ ॥ ೩೧॥

ಶಂಖೇ ಕೃತ್ವಾ ತು ಪಾನೀಯಂ ಸಪುಷ್ಪಂ ಸಜಲಾಕ್ಷತಮ್ ।
ಅರ್ಘ್ಯಂ ದದಾತಿ ಯೋ ಮಾಂ ವೈ ತಸ್ಯ ಪುಣ್ಯಮನಂತಕಮ್ ॥ ೩೨॥

ವೈಷ್ಣವನು ತಪಸ್ವಿಗಳಲ್ಲಿ ಶ್ರೇಷ್ಠನಾದ ಮುನಿ ಎಂದು ತಿಳಿಯಲ್ಪಡುತ್ತಾನೆ. ॥ ೨೫॥ ಹೇ ಬ್ರಹ್ಮಾ! ತ್ರಿಲೋಕಗಳಲ್ಲಿ ಎಷ್ಟೆಷ್ಟು ತೀರ್ಥಗಳಿವೆಯೋ ಅವೆಲ್ಲವೂ ನನ್ನ ಆಜ್ಞಾನುಸಾರ ಶಂಖದಲ್ಲಿ ಸನ್ನಿಹಿತವಾಗಿ ಇರುವುದರಿಂದಲೇ ಶಂಖವು ಶ್ರೇಷ್ಠವಾದುದೆಂದು ತಿಳಿಯಲ್ಪಟ್ಟಿದೆ. ॥ ೨೬॥ ವಿಷ್ಣುಭಕ್ತನಾದ ಪುರುಷನು ಶಂಖದಲ್ಲಿ ನೀರನ್ನು ತುಂಬಿ ಕೈಯಲ್ಲಿ ಹಿಡಿದುಕೊಂಡು " ಶಂಖಂ ಚಂದ್ರಾರ್ಕದೈವತ್ಯಂ ಮಧ್ಯೇ ವರುಣದೈವತಂ। ಪೃಷ್ಠೇ ಪ್ರಜಾಪತಿಂ ವಿಂದ್ಯಾದಗ್ರೇ ಗಂಗಾಸರಸ್ವತೀ ॥ " ಇವೇ ಮೊದಲಾದ ಸ್ತೋತ್ರ ಮಂತ್ರಗಳನ್ನು ಪಠಿಸುತ್ತ ನನ್ನ ಶಿರಸ್ಸಿನಲ್ಲಿ ಅಭಿಷೇಕ ಮಾಡುವುದರಿಂದ ನಾನು ಅವನಲ್ಲಿ ಪ್ರಸನ್ನನಾಗುತ್ತೇನೆ. ॥ ೨೭॥ ೨೮॥ ಆಲಸ್ಯರಹಿತನಾಗಿ ಮಂತ್ರಗಳನ್ನು ಚೆನ್ನಾಗಿ ಪಠಿಸುತ್ತ ನನಗೆ ಅಭಿಷೇಕ ಮಾಡಬೇಕು. ಹೀಗೆ ಮಾಡುವವನ ಪುಣ್ಯದ ಮಿತಿಯನ್ನು ತಿಳಿಯುವದು ಸುರಾಸುರರಿಗೂ ಸಾಧ್ಯವಾಗದು. ॥ ೨೯॥ ಹೇ ಬ್ರಹ್ಮಾ! ನನ್ನ ಮುಂಭಾಗದಲ್ಲಿ ಪುಷ್ಪ, ಜಲ, ಅಕ್ಷತೆಗಳಿಂದ ಪೂಜಿಸಲ್ಪಟ್ಟ ಶಂಖವನ್ನು ಯಾರು ಇಡುವರೋ ಅವರಿಗೆ ಸರ್ವತೋಮುಖಿಯಾದ ಸಂಪತ್ತು ದೊರೆಯುವದು. ॥ ೩೦॥ ಯಾವನು ಶ್ರೀಗಂಧದಿಂದ ಶಂಖವನ್ನು ಪೂರ್ಣ ಲೇಪಿಸಿ ನನ್ನ ಭಜನೆ ಮಾಡುವನೋ ಅವನ ಮೇಲೆ ನೂರು ವರ್ಷ ಪೂರ್ತಿ ಪೂರ್ಣ ಅನುಗ್ರಹ ಮಾಡುವೆನು. ॥ ೩೧॥ ಶಂಖದಲ್ಲಿ ನೀರನ್ನು ತುಂಬಿ ಅದರಲ್ಲಿ

ಅರ್ಘ್ಯಂ ಕೃತ್ವಾ ಸ್ವಯಂ ಶಂಖೇ ಯಃ ಕರೋತಿ ಪ್ರದಕ್ಷಿಣಾಮ್ ।
ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ॥ ೩೩॥

ಭ್ರಾಮಯಿತ್ವಾ ಚ ಮೇ ಮೂರ್ಧ್ನಿ ಮಂದಿರಂ ಶಂಖವಾರಿಣಾ ।
ಪ್ರೋಕ್ಷಯೇತ್ ವೈಷ್ಣವೋ ಯಸ್ತು ನಾಶುಭಂ ತದ್ಗೃಹೇ ಭವೇತ್ ॥ ೩೪॥

ನಾಧಯೋ ನ ಕ್ಲಮಃ ತಸ್ಯ ನಾರಕಂ ನ ಭಯಂ ಕ್ವಚಿತ್ ।
ತಸ್ಯ ಪಾದೋದಕಂ ಶಂಖೇ ಕೃತಂ ಮೂರ್ಧಾನಮಾಲಭೇತ್ ॥ ೩೫॥

ಗ್ರಹಾ ರಕ್ಷಾಂಸಿ ಕೂಷ್ಮಾಂಡಪಿಶಾಚೋರಗದಾನವಾಃ ।
ದೃಷ್ಟ್ವಾ ಶಂಖೋದಕಂ ಮೂರ್ಧ್ನಿ ವಿದ್ರವಂತಿ ದಿಶೋದಶ ॥ ೩೬॥

ವಾದಿತ್ರನಿನದೈಃ ಉಚ್ಚೈಃ ಗೀತಮಂಗಲ ನಿಃಸ್ವನೈಃ ।
ಯಃ ಸ್ನಾಪಯತಿ ಮಾಂ ಭಕ್ತ್ಯಾ ಜೀವನ್ಮುಕ್ತೋ ಭವೇದ್ಧಿ ಸಃ ॥ ೩೭॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಪಂಚಮೋಽಧ್ಯಾಯಃ ॥

ಪುಷ್ಪ, ಅಕ್ಷತೆಗಳನ್ನು ಹಾಕಿ ನನ್ನನ್ನು ಕುರಿತು ಅರ್ಘ್ಯವನ್ನು ಕೊಡುವ ಪುರುಷನಿಗೆ ಅನಂತವಾದ ಪುಣ್ಯವು ಲಭಿಸುವದು. ॥ ೩೨॥ ಅರ್ಘ್ಯವನ್ನು ಕೊಟ್ಟು ನಂತರ ಶಂಖಕ್ಕೆ ಪ್ರದಕ್ಷಿಣೆ ಹಾಕಿದರೆ ಸಪ್ತದ್ವೀಪಗಳಿಂದ ಸಹಿತವಾದ ಭೂಮಂಡಲಕ್ಕೆ ಪ್ರದಕ್ಷಿಣೆ ಮಾಡಿದಂತಾಗುವದು. ॥ ೩೩॥ ಯಾವ ಮನುಷ್ಯನು ಶಂಖದೊಳಗಿನ ನೀರನ್ನು ನನ್ನ ಮಸ್ತಕದ ಸುತ್ತಲೂ ತಿರುಗಿಸಿ ಶಂಖಭ್ರಮಣ ಮಾಡಿದ ನೀರಿನಿಂದ ತನ್ನ ಗೃಹವನ್ನು ಪ್ರೋಕ್ಷಿಸುವನೋ ವಿಷ್ಣುಭಕ್ತನಾದ ಆ ಮನುಷ್ಯನ ಮನೆಯಲ್ಲಿ ಅಶುಭವೆಂಬುದು ಇರಲಾರದು.॥ ೩೪॥ ಅವನಿಗೆ ವ್ಯಾಧಿಯಾಗಲೀ, ಶ್ರಮವಾಗಲೀ ಉಂಟಾಗಲಾರದು. ಅಲ್ಲದೇ ನರಕದ ಭಯವೂ ಕೂಡ ಇರಲಾರದು. ಯಾವನು ವಿಷ್ಣುಪಾದೋದಕವನ್ನು ಶಂಖದಲ್ಲಿ ಹಾಕಿ ತಮ್ಮ ತಲೆಯ ಮೇಲೆ ಧರಿಸುವನೋ ॥ ೩೫॥ ದುಷ್ಟಗ್ರಹಗಳು, ರಾಕ್ಷಸರು, ಪಿಶಾಚಿಗಳು, ಸರ್ಪಗಳು, ದಾನವರು ಮೊದಲಾದವರು ಅವನ ತಲೆಯಲ್ಲಿ ಕಾಣುವ ಶಂಖೋದಕವನ್ನು ನೋಡಿದಾಕ್ಷಣವೇ ದಿಕ್ಕೆಟ್ಟು ಓಡಿಹೋಗುವರು. ॥ ೩೬॥ ನಾನಾವಾದ್ಯಗಳನ್ನು ಗಟ್ಟಿಯಾಗಿ ಬಾರಿಸುತ್ತ ಗೀತಗಳನ್ನು ಹಾಡುತ್ತ ಯಾರು ನನಗೆ ಭಕ್ತಿಪೂರ್ವಕ ಅಭಿಷೇಕ ಮಾಡುವರೋ ಅವರು ಜೀವನ್ಮುಕ್ತರೇ ಸರಿ. ॥ ೩೭॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಬ್ರಹ್ಮ-ವಿಷ್ಣುಸಂವಾದದಲ್ಲಿ ಮಾರ್ಗಶೀರ್ಷಮಾಸಮಹಾತ್ಮೆಯಲ್ಲಿ "ಅಭಿಷೇಕ ಮಹಾತ್ಮೆ" ಎಂಬ ಐದನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೬
ಘಂಟಾನಾದ ಮತ್ತು ಚಂದನದ ಮಹಿಮೆ

★

ಬ್ರಹ್ಮೋವಾಚ -
ಘಂಟಾನಾದಸ್ಯ ಮಾಹಾತ್ಮ್ಯಂ ಚಂದನಸ್ಯ ತಥಾಚ್ಯುತ ।
ಯತ್ಫಲಂ ಲಭತೇ ಸ್ವಾಮಿನ್ ತತ್ಸರ್ವಂ ಬ್ರೂಹಿ ತತ್ತ್ವತಃ ॥ ೧॥

ಶ್ರೀಭಗವಾನುವಾಚ -
ಸ್ನಾನಾರ್ಚನಕ್ರಿಯಾಕಾಲೇ ಘಂಟಾನಾದಂ ಕರೋತಿ ಯಃ ।
ಪುರತೋ ಮಮ ದೇವೇಶ ತಸ್ಯ ಪುಣ್ಯಫಲಂ ಶೃಣು ॥ ೨॥

ವರ್ಷಕೋಟಿಸಹಸ್ರಾಣಿ ವರ್ಷಕೋಟಿಶತಾನಿ ಚ ।
ವಸತೇ ಮಾಮಕೇ ಲೋಕೇ ಅಪ್ಸರೋಗಣಸೇವಿತಃ ॥ ೩॥

ಸರ್ವವಾದ್ಯಮಯೀ ಘಂಟಾ ಸರ್ವದೇವಮಯೀ ಯತಃ ।
ತಸ್ಮಾತ್ ಸರ್ವಪ್ರಯತ್ನೇನ ಘಂಟಾನಾದಂ ತು ಕಾರಯೇತ್ ॥ ೪॥

ಸರ್ವವಾದ್ಯಮಯೀ ಘಂಟಾ ಸರ್ವದಾ ಮಮ ವಲ್ಲಭಾ ।
ವಾದನಾಲ್ಲಭತೇ ಪುಣ್ಯಂ ಯಜ್ಞಕೋಟಿಶತೋದ್ಭವಮ್ ॥ ೫॥

'ಹೇ ಕರುಣಾಕರ, ಸ್ವಾಮಿನ್, ಶ್ರೀಹರೇ ! ಘಂಟಾನಾದದ ಮಹಾತ್ಮೆಯನ್ನು ಹಾಗೂ ಚಂದನದ ಮಹಾತ್ಮೆಯನ್ನು ಮತ್ತು ಇದರಿಂದ ಬರುವ ಫಲವನ್ನು ಕುರಿತು ಯಥಾವತ್ತಾಗಿ ತಿಳಿಸಿ ಅನುಗ್ರಹಿಸು' ಎಂದು ಚತುರ್ಮುಖಬ್ರಹ್ಮನು ಪ್ರಾರ್ಥಿಸಲು ॥೧॥ ಶ್ರೀಹರಿಯು ಹೇಳುತ್ತಾನೆ - 'ಅಯ್ಯಾ ಕುಮಾರಾ ! ಕೇಳು. ಅಭಿಷೇಕ ಪೂಜೆ ಮಾಡುವ ಸಮಯದಲ್ಲಿ ಯಾವನು ನನ್ನ ಮುಂದೆ ಘಂಟಾನಾದವನ್ನು ಮಾಡುವನೋ ಅವನಿಗೆ ದೊರೆಯುವ ಪುಣ್ಯಫಲವನ್ನು ತಿಳಿಸುವೆನು ಕೇಳು. ॥ ೨॥ ಅವನು ಒಂದು ಕೋಟಿ ಸಹಸ್ರ ವರ್ಷಗಳವರೆಗೆ ಮತ್ತು ಒಂದು ಕೋಟಿ ನೂರು ವರ್ಷಗಳವರೆಗೆ ಅಪ್ಸರೋಗಣದಿಂದ ಸೇವಿತನಾಗಿ ನನ್ನ ಲೋಕದಲ್ಲಿ ವಾಸಿಸುವನು. ॥ ೩॥ ಘಂಟೆಯು ಸರ್ವವಾದ್ಯಗಳಿಂದಲೂ, ಸಕಲ ದೇವತೆಗಳಿಂದಲೂ ಯುಕ್ತವಾಗಿರುವ ಕಾರಣ ಸರ್ವಪ್ರಯತ್ನ ಪೂರ್ವಕ ಘಂಟಾನಾದವನ್ನು ಮಾಡಬೇಕು. ॥ ೪॥ ಒಂದು ಘಂಟೆಯನ್ನು ಬಾರಿಸುವುದರಿಂದ ಸಕಲ ವಾದ್ಯಗಳನ್ನು ಬಾರಿಸಿದಂತೆ ಆಗುವದು. ಆದ್ದರಿಂದ ಸರ್ವವಾದ್ಯಗಳ ಪ್ರತಿನಿಧಿಯಂತಿರುವ ಘಂಟೆಯು ನನಗೆ ಸದಾಪ್ರಿಯವಾದದ್ದಾಗಿದೆ.

ಘಂಟಾನಾದಂ ಸದಾ ಕಾರ್ಯಂ ಪೂಜಾಕಾಲೇ ವಿಶೇಷತಃ ।
ಮನ್ವಂತರಸಹಸ್ರಾಣಿ ಮನ್ವಂತರಶತಾನಿ ಚ ॥ ೬॥

ಪ್ರೀತೋ ಭವಾಮಿ ಸತತಂ ಘಂಟಾನಾದೇನ ಪುತ್ರಕ ।
ಭೇರೀ ಶಂಖನಿನಾದೇನ ಘಂಟಾನಾದಾನ್ವಿತೇನ ಚ ॥ ೭॥

ಮೃದಂಗಶಂಖೇನ ಯುತಂ ಪ್ರಣವೇನ ಸಮನ್ವಿತಮ್ ।
ಅರ್ಚನಂ ಮಮ ದೇವೇಶ ಸತತಂ ಮೋಕ್ಷದಂ ನೃಣಾಮ್ ॥ ೮॥

ಯತ್ರ ತಿಷ್ಠೇತ ಪುರತೋ ಘಂಟಾ ನಾದಾನ್ವಿತಾ ಮಮ ।
ಅರ್ಚಿತಾ ವೈಷ್ಣವೈರ್ಯತ್ರ ತತ್ರ ಮಾಂ ವಿದ್ಧಿ ಪುತ್ರಕ ॥ ೯॥

ವೈನತೇಯಾಂಕಿತಾ ಘಂಟಾ ಸುದರ್ಶನಯುತಾಥವಾ ।
ಮಮಾಗ್ರೇ ಸ್ಥಾಪಯೇದ್ಯಸ್ತು ತಸ್ಯ ಪಾಪಂ ಹರಾಮ್ಯಹಮ್ ॥ ೧೦॥

ಮದೀಯಾರ್ಚನವೇಲಾಯಾಂ ಘಂಟಾನಾದಂ ಕರೋತಿ ಯಃ ।
ನಶ್ಯಂತಿ ತಸ್ಯ ಪಾಪಾನಿ ಶತಜನ್ಮಾರ್ಜಿತಾನ್ಯಪಿ ॥ ೧೧॥

ಸ್ವಾಪಕಾಲೇ ಪ್ರಕುರ್ವೀತ ಘಂಟಾನಾದಂ ಸ್ವಭಕ್ತಿತಃ ।
ಮಮೈವಾರ್ಚನವೇಲಾಯಾಂ ಫಲಂ ಕೋಟಿಗುಣೋದ್ಭವಮ್ ॥ ೧೨॥

ಘಂಟಾನಾದದಿಂದ ಒಂದು ಕೋಟಿ ಶತ ಯಜ್ಞಗಳನ್ನು ಮಾಡುವುದರಿಂದ ಬರುವಷ್ಟು ಪುಣ್ಯವು ಪ್ರಾಪ್ತವಾಗುವದು. ॥ ೫॥ ಘಂಟಾನಾದವನ್ನು ಸದಾಕಾಲ ಮಾಡಬೇಕು. ಅದರಲ್ಲೂ ಪೂಜಾಕಾಲದಲ್ಲಿ ವಿಶೇಷವಾಗಿ ಮಾಡಬೇಕು. ಹೇ ಪುತ್ರಾ ! ಘಂಟಾನಾದದಿಂದ ಮತ್ತು ಘಂಟಾನಾದಮಾಡುವಾಗ ಭೇರಿ, ಶಂಖಗಳನ್ನು ಬಾರಿಸುವುದರಿಂದ ನಾನು ನೂರಾರು ಸಾವಿರಾರು ಮನ್ವಂತರಗಳವರೆಗೆ ಪ್ರೀತನಾಗಿರುವೆನು. ॥ ೬॥ ೭॥ ಮೃದಂಗ ಹಾಗೂ ಶಂಖವಾದನ ಮತ್ತು ಪ್ರಣವ ಮಂತ್ರಪಠಣ ಇವುಗಳಿಂದ ಯುಕ್ತವಾದ ನನ್ನ ಪೂಜೆಯು ಮನುಷ್ಯರಿಗೆ ಮೋಕ್ಷಪ್ರದವಾಗಿದೆ. ॥ ೮ ॥ ಎಲೈ ಪುತ್ರನೇ! ವಿಷ್ಣುಭಕ್ತರಿಂದ ಪೂಜಿಸಲ್ಪಟ್ಟ ಹಾಗೂ ಸುನಾದದಿಂದ ಯುಕ್ತವಾದ ಘಂಟೆಯು ನನ್ನ ಮುಂಭಾಗದಲ್ಲಿ ಇದ್ದರೆ ಆ ಸ್ಥಳದಲ್ಲಿ ನನ್ನ ವಿಶೇಷ ಸನ್ನಿಧಾನವಿದೆಯೆಂದು ತಿಳಿ. ॥ ೯॥ ಗರುಡಾಂಕಿತವಾದ ಅಥವಾ ಸುದರ್ಶನದಿಂದ ಯುಕ್ತವಾದ ಘಂಟೆಯನ್ನು ಯಾರು ನನ್ನ ಅಗ್ರಭಾಗದಲ್ಲಿಡುವರೋ ಅವರ ಸರ್ವಪಾಪಗಳನ್ನು ನಾಶಮಾಡುವೆನು. ॥ ೧೦॥ ನನ್ನ ಪೂಜಾಸಮಯದಲ್ಲಿ ಯಾರು ಘಂಟಾನಾದವನ್ನು ಮಾಡುವರೋ ಹಿಂದಿನ ಒಂದುನೂರು ಜನ್ಮಗಳಲ್ಲಿ ಮಾಡಿದ ಅವರ ಪಾಪಗಳನ್ನೆಲ್ಲ ನಾಶಮಾಡುವೆನು. ॥ ೧೧॥ ಮಲಗುವ ಸಮಯದಲ್ಲಾಗಲೀ, ನನ್ನ ಪೂಜಾ ಸಮಯದಲ್ಲಾಗಲೀ ಯಾವಾತನು ಭಕ್ತಿಯಿಂದ ಘಂಟಾನಾದವನ್ನು ಮಾಡುವನೋ

ಯೇ ಮಾಮರ್ಚಯಂತಿ ದೇವೇಶಂ ಸುಪರ್ಣೋಪರಿಸಂಸ್ಥಿತಮ್ ।
ಶಂಖಪದ್ಮಗದಾಯುಕ್ತಂ ಸಚಕ್ರಂ ಚ ಶ್ರಿಯಾ ಯುತಮ್ ॥ ೧೩॥

ಕಿಂ ಕರಿಷ್ಯಂತಿ ತೇ ತೀರ್ಥೈರ್ದೇವತಾನಾಂ ಚ ದರ್ಶನೈಃ ।
ಕಿಂ ಯಜ್ಞೈಃ ಕಿಂ ವ್ರತೈರ್ವಾಪಿ ಕಿಂ ದಾನೈಃ ಕಿಮುಪೋಷಣೈಃ ॥ ೧೪॥

ಮೂರ್ತಿರ್ನಾರಾಯಣೀ ಯತ್ರ ಮಾಮಕೀ ಗರುಡೋಪರಿ ।
ಸ್ಥಾಪಯಿತ್ವಾ ಕಲೌ ಯಾಂತಿ ಕಲ್ಪಕೋಟಿಪದಂ ಮಮ ॥ ೧೫॥

ಮಮಾಗ್ರೇ ಸ್ಥಾಪಯೇದ್ಯಸ್ತು ಪ್ರಾಸಾದೇಽಥ ಗೃಹೇಽಥವಾ ।
ತೀರ್ಥಕೋಟಿಸಹಸ್ರಾಣಿ ತತ್ರ ತಿಷ್ಠಂತಿ ದೇವತಾಃ ॥ ೧೬॥

ಯಸ್ತು ಪೂಜಯತೇ ಧನ್ಯೋ ಗರುಡೋಪರಿ ಸಂಸ್ಥಿತಮ್
ಏಕಾದಶ್ಯಾಂ ತಥಾ ರಾತ್ರೌ ವಾಸನಾಸಂಯುತೋ ಮಮ ॥ ೧೭॥

ಕೃತ್ವಾ ಗೀತಂ ಚ ನೃತ್ಯಂ ಚ ತಾರಯೇನ್ನರಕಾತ್ ಪಿತೃನ್ ।
ಪುನಶ್ಚ ಕಥಯಿಷ್ಯಾಮಿ ಶೃಣು ಘಂಟಾಮಹಂ ಸುತ ॥ ೧೮॥

ಅವನಿಗೆ ಒಂದು ಕೋಟಿಪಟ್ಟು ಅಧಿಕವಾದ ಪುಣ್ಯಫಲವು ಪ್ರಾಪ್ತವಾಗುವದು. ॥ ೧೨॥ ದೇವದೇವೋತ್ತಮನಾದ, ಗರುಡಾರೂಢನಾದ, ಶಂಖ ಚಕ್ರ ಗದಾಧಾರಿಯಾದ, ಲಕ್ಷ್ಮೀಸಹಿತನಾದ ನನ್ನನ್ನು ಯಾರು ಭಕ್ತಿಯಿಂದ ಅರ್ಚಿಸುವರೋ ಅಂಥವರು ॥ ೧೩॥ ವಿವಿಧ ತೀರ್ಥಗಳಲ್ಲಿ ಸ್ನಾನ ಮಾಡುವದು, ಯಜ್ಞಯಾಗಾದಿಗಳನ್ನು ಮಾಡುವದು, ವ್ರತ, ಉಪೋಷಣ, ದಾನಗಳನ್ನು ಮಾಡುವದು ಮುಂತಾದವುಗಳಿಂದ ಪಡೆಯಬೇಕಾದುದು ಏನೂ ಇರುವದಿಲ್ಲ. ನನ್ನ ಪೂಜೆಯೊಂದರಿಂದಲೇ ಇವೆಲ್ಲವುಗಳಿಂದ ಬರಬೇಕಾದ ಫಲವನ್ನು ಹೊಂದುವರು. ॥ ೧೪॥ ಕಲಿಯುಗದಲ್ಲಿ ನನ್ನ ನಾರಾಯಣ ಮೂರ್ತಿಯನ್ನು ಗರುಡಾರೂಢವಾಗುವಂತೆ ಮಾಡುವವರು ನನ್ನ ಲೋಕವನ್ನು ಹೊಂದಿ ಅಲ್ಲಿ ಕೋಟಿಕಲ್ಪಗಳವರೆಗೆ ವಾಸಿಸುವರು. ॥ ೧೫॥ ಗರುಡಾರೂಢನಾದ ನಾರಾಯಣನ ಮೂರ್ತಿಯನ್ನು ಅಗ್ರಭಾಗದಲ್ಲಾಗಲೀ, ಪ್ರಾಸಾದದಲ್ಲಾಗಲೀ ಅಥವಾ ತನ್ನ ಮನೆಯಲ್ಲಾಗಲೀ ಇಟ್ಟರೆ ಆ ಸ್ಥಳದಲ್ಲಿ ಸಹಸ್ರ ಕೋಟಿ ತೀರ್ಥಗಳು ಹಾಗೂ ಸಕಲ ದೇವತೆಗಳು ಸನ್ನಿಹಿತರಾಗುವರು. ॥ ೧೬॥ ಯಾವನು ಗರೂಡಾರೂಢನಾದ ನನ್ನನ್ನು ಏಕಾದಶಿಯ ದಿನ ಮತ್ತು ರಾತ್ರಿಯಲ್ಲಿ ಭಕ್ತಿಯಿಂದ ಪೂಜಿಸುವನೋ ಅವನೇ ಧನ್ಯನು. ॥ ೧೭॥ ಹೀಗೆ ಗೀತ ನೃತ್ಯಗಳೊಂದಿಗೆ ಪೂಜಿಸುವುದರಿಂದ ಅವನು ನರಕದಲ್ಲಿ ಯಾರಾದರೂ ತನ್ನ ಪಿತೃಗಳಿದ್ದರೆ ಅವರನ್ನು ಅಲ್ಲಿಂದ ಉದ್ಧರಿಸುವನು. ಹೇ ವತ್ಸಾ ! ಘಂಟೆಯನ್ನು ಕುರಿತು ಇನ್ನೂ ಕೆಲವು ವಿಷಯಗಳನ್ನು ತಿಳಿಸುವೆನು ಕೇಳು. ॥ ೧೮॥ ಎಲೈ ಪುತ್ರನೇ ! ನನ್ನ ನಾಮಗಳಿಂದ ಚಿಹ್ನಿತವಾದ ಮತ್ತು ವಿಷ್ಣುಭಕ್ತನಿಂದ ಪೂಜಿಸಲ್ಪಟ್ಟ

ಮಮ ನಾಮಾಂಕಿತಾ ಘಂಟಾ ಪುರತೋ ಯಾ ಚ ತಿಷ್ಠತಿ ।
ಅರ್ಚಿತಾ ವೈಷ್ಣವೀ ಯತ್ರ ತತ್ರ ಮಾಂ ವಿದ್ಧಿ ಪುತ್ರಕ ॥ ೧೯॥

ಯಸ್ತು ವಾದಯತೇ ಘಂಟಾಂ ವೈನತೇಯವಿಚಿಹ್ನಿತಾಮ್ ।
ಧೂಪೇ ನಿರಾಜನೇ ಸ್ನಾನೇ ಪೂಜಾಕಾಲೇ ವಿಲೇಪನೇ ॥ ೨೦॥

ಮಮಾಗ್ರೇ ಪ್ರತ್ಯಹಂ ವತ್ಸ ಪ್ರತ್ಯೇಕಂ ಲಭತೇ ಫಲಮ್ ।
ಮಖಾಯುತಂ ಗೋಯುತಂ ಚ ಚಾಂದ್ರಾಯಣಶತೋದ್ಭವಮ್॥ ೨೧॥

ವಿಧಿಬಾಹ್ಯಕೃತಾ ಪೂಜಾ ಸಫಲಾ ಜಾಯತೇ ನೃಣಾಮ್ ।
ಘಂಟಾನಾದೇನ ತುಷ್ಟೋಽಹಂ ಪ್ರಯಚ್ಛಾಮಿ ಸ್ವಕಂ ಪದಮ್ ॥ ೨೨॥

ನಾಗಾರಿಚಿಹ್ನಿತಾ ಘಂಟಾ ರಥಾಂಗೇನ ಸಮನ್ವಿತಾ ।
ವಾದನಾತ್ಕುರುತೇ ನಾಶಂ ಜನ್ಮಕೋಟಿಭಯಸ್ಯ ವೈ ॥ ೨೩॥

ಗರುಡೇನಾಂಕಿತಾಂ ಘಂಟಾಂ ದೃಷ್ಟ್ವಾಽಹಂ ಪ್ರತ್ಯಹಂ ಮುದಾ ।
ಪ್ರೀತಿಂ ಕರೋಮಿ ದೇವೇಶ ಲಕ್ಷ್ಮೀಂ ಪ್ರಾಪ್ಯ ಯಥಾ ಅಧನಃ॥ ೨೪॥

ಘಂಟಾದಂಡಸ್ಯ ಶಿರಸಿ ಸುಚಕ್ರಂ ಸ್ಥಾಪಯೇತ್ ತು ಯಃ ।
ಮತ್ಪ್ರಿಯಂ ವೈನತೇಯಂ ವಾ ಸ್ಥಾಪಿತಂ ಭುವನತ್ರಯಮ್ ॥ ೨೫॥

ಘಂಟೆಯು ನನ್ನ ಮುಂಭಾಗದಲ್ಲಿ ಇದ್ದರೆ ಅಲ್ಲಿ ನನ್ನ ಸನ್ನಿಧಾನವು ವಿಶೇಷವಾಗಿ ಇರುವದೆಂದು ತಿಳಿ. ॥೧೯॥ ಯಾವನು ನನ್ನ ಅಗ್ರಭಾಗದಲ್ಲಿ ಗರುಡನಿಂದ ಚಿಹ್ನಿತವಾದ ಘಂಟೆಯನ್ನು ಧೂಪಾರತಿ ನೀರಾಜನ ಮಾಡುವಾಗ, ಅಭೀಷೇಕ ಸಮಯದಲ್ಲಿ, ಪೂಜಾಕಾಲದಲ್ಲಿ ಹಾಗೂ ಗಂಧಲೇಪನ ಮಾಡುವಾಗ ಬಾರಿಸುವನೋ ಅವನು ।೨೦॥ ಪ್ರತಿದಿವಸದಲ್ಲಿ ಅಯುತ ಯಜ್ಞಗಳ ಫಲವನ್ನು ಅಯುತ ಗೋದಾನಗಳ ಫಲವನ್ನು ಮತ್ತು ಒಂದು ನೂರು ಚಾಂದ್ರಾಯಣ ವ್ರತಗಳ ಫಲವನ್ನು ಸಹ ಪಡೆಯುವನು. ॥೨೧॥ ವಿಧ್ಯುಕ್ತವಾಗಿ ಮಾಡದಿದ್ದ ಪೂಜೆಯೂ ಕೂಡ ಘಂಟಾನಾದದಿಂದ ಮನುಷ್ಯರಿಗೆ ಫಲಕಾರಿಯಾಗುವದು. ಘಂಟಾನಾದದಿಂದ ತುಷ್ಟನಾಗಿ ನಾನು ಅವರಿಗೆ ನನ್ನ ಲೋಕವಾಸವನ್ನು ಅನುಗ್ರಹಿಸುವೆನು. ॥೨೨॥ ಗರುಡಚಿಹ್ನಿತವಾದ ಮತ್ತು ಚಕ್ರದಿಂದ ಯುಕ್ತವಾದ ಘಂಟೆಯನ್ನು ಬಾರಿಸುವುದರಿಂದ ಕೋಟಿ ಜನ್ಮಗಳ ಭಯವು ನಾಶವಾಗುವದು. ॥ ೨೩॥ ಹೇ ಬ್ರಹ್ಮ ! ದರಿದ್ರನಾದವನು ಅತುಲವಾದ ಸಂಪತ್ತನ್ನು ಹೊಂದಿದಾಗ ಆನಂದ ಪಡುವಂತೆ ನನ್ನೆದುರಿನಲ್ಲಿರುವ ಗರುಡಾಂಕಿತವಾದ ಘಂಟೆಯನ್ನು ನಿತ್ಯವೂ ನೋಡುತ್ತ ಸಂತೋಷ ಪಡುವೆನು ಮತ್ತು ಘಂಟೆಯನ್ನು ನನ್ನ ಮುಂಭಾಗದಲ್ಲಿ ಇಟ್ಟಿರುವ ಪುರುಷನಲ್ಲಿ ವಿಶೇಷವಾದ ಅನುಗ್ರಹ ಮಾಡುವೆನು. ॥ ೨೪॥ ಕೈಯಿಂದ ಹಿಡಿದುಕೊಳ್ಳುವ ಘಂಟೆಯ ದಂಡದ ಮೇಲ್ಭಾಗದಲ್ಲಿ ಶುಭಲಕ್ಷಣಯುತವಾದ

ಘಂಟಾನಾದಂ ಸಚಕ್ರಂ ಚ ಅಂತಕಾಲೇ ಶೃಣೋತಿ ಯಃ ।
ಪಾಪಕೋಟಿಯುತಸ್ಯಾಪಿ ನಶ್ಯಂತಿ ಯಮಕಿಂಕರಾಃ ॥ ೨೬॥

ಸರ್ವೇ ದೋಷಾಃ ಪ್ರಣಶ್ಯಂತಿ ಘಂಟಾನಾದೇನ ವೈ ಸುತ ।
ದೇವತಾನಾಂ ಸರುದ್ರಾಣಾಂ ಪಿತೃಣಾಮುತ್ಸವೋ ಭವೇತ್ ॥ ೨೭॥

ಅಭಾವೇ ವೈನತೇಯಸ್ಯ ಚಕ್ರಸ್ಯಾಪಿ ನ ಸಂಶಯಃ ।
ಘಂಟಾನಾದೇನ ಭಕ್ತಾನಾಂ ಪ್ರಸಾದಂ ಪ್ರಕರೋಮ್ಯಹಮ್ ॥ ೨೮॥

ಗೃಹೇ ಯಸ್ಮಿನ್ ಭವೇನ್ನಿತ್ಯಂ ಘಂಟಾ ನಾಗಾರಿಸಂಯುತಾ ।
ಸರ್ಪಾಣಾಂ ನ ಭಯಂ ತತ್ರ ನಾಗ್ನಿವಿದ್ಯುತ್ಸಮುದ್ಭವಮ್ ॥ ೨೯॥

ಯಸ್ಯ ಘಂಟಾ ಗೃಹೇ ನಾಸ್ತಿ ಶಂಖೋ ನ ಪುರತೋ ಮಮ ।
ಕಥಂ ಭಾಗವತೋ ಜ್ಞೇಯಃ ಕಥಂ ಭವತಿ ವಲ್ಲಭಃ ॥ ೩೦॥

ಚಂದನಸ್ಯ ಪ್ರವಕ್ಷ್ಯಾಮಿ ಮಾಹಾತ್ಮ್ಯಂ ತವ ಪುತ್ರಕ ।
ಯಸ್ಮಿನ್ ಕೃತೇ ಭವೇತ್ ಪ್ರೀತಿರ್ಮಮಾತ್ಯಂತಂ ನ ಸಂಶಯಃ ॥ ೩೧॥

ಸಚಂದನಂ ಸಕುಸುಮಂ ಕರ್ಪೂರಾಗರುಮಿಶ್ರಿತಮ್ ।
ಮೃಗನಾಭಿಸಮಾಯುಕ್ತಂ ಜಾತೀಫಲಸಮನ್ವಿತಮ್ ॥ ೩೨॥

ಚಕ್ರವನ್ನಾಗಲೀ ಅಥವಾ ನನಗೆ ಪ್ರಿಯನಾದ ಗರುಡನನ್ನಾಗಲೀ ಸ್ಥಾಪಿಸಿದರೆ ಮೂರು ಲೋಕಗಳನ್ನು ತಂದು ಇಟ್ಟಂತೆ ಆಗುವದು. ॥೨೫॥ ಚಕ್ರಸಹಿತವಾದ ಘಂಟೆಯ ನಾದವನ್ನು ಅಂತ್ಯಕಾಲದಲ್ಲಿ ಯಾವನು ಕೇಳುವನೋ ಅವನು ಜೀವಿಸಿರುವಾಗ ಕೋಟಿ ಪಾಪಗಳನ್ನು ಮಾಡಿದ್ದರೂ ಯಮದೂತರು ಅವನ ಸನಿಹಕ್ಕೆ ಬರಲಾರರು. ॥ ೨೬ ॥ ಹೇ ವತ್ಸಾ ! ಘಂಟಾನಾದದಿಂದ ಸರ್ವದೋಷಗಳು ದೂರವಾಗುವವು . ರುದ್ರಾದಿ ದೇವತೆಗಳಿಗೆ ಹಾಗೂ ಪಿತೃಗಳಿಗೆ ಅದೊಂದು ಉತ್ಸವವಾಗುವದು. ॥ ೨೭॥ ಘಂಟಾ ದಂಡದ ಮೇಲೆ ಗರುಡ ಅಥವಾ ಚಕ್ರವಿಲ್ಲದಿದ್ದರೂ ಬರೀ ಘಂಟಾನಾದದಿಂದಲೇ ನನ್ನ ಭಕ್ತರಿಗೆ ನಿಶ್ಚಿತವಾಗಿ ಅನುಗ್ರಹವನ್ನುಂಟುಮಾಡುವೆನು. ॥ ೨೮॥ ಗರುಡಚಿಹ್ನಿತವಾದ ಘಂಟೆಯು ನಿತ್ಯ ಯಾರ ಮನೆಯಲ್ಲಿರುವದೋ ಅಲ್ಲಿ ಸರ್ಪಗಳ ಭಯವಿಲ್ಲ. ಹಾಗೂ ಅಗ್ನಿ, ಮಿಂಚುಗಳಿಂದಲೂ ಯಾವ ಭಯವಿಲ್ಲ. ॥ ೨೯॥ ಯಾವಾತನ ಮನೆಯಲ್ಲಿ ಘಂಟೆ ಇರುವುದಿಲ್ಲವೋ ಮತ್ತು ನನ್ನೆದುರು ಶಂಖವಿರುವುದಿಲ್ಲವೋ ಅವನೆಂತು ನನ್ನ ಭಕ್ತನಾದಾನು? ಮತ್ತು ನನ್ನ ಪ್ರೀತಿಗೆ ಪಾತ್ರನಾದಾನು? ॥೩೦॥ ಹೇ ವತ್ಸಾ! ಇನ್ನು ನಿನಗೆ ಚಂದನದ ಮಹಾತ್ಮೆಯನ್ನು ಹೇಳುವೆನು. ಮನೆಯಲ್ಲಿ ನಿತ್ಯ ಚಂದನವನ್ನು ತೇಯ್ದು ಸಿದ್ಧಪಡಿಸಿದರೆ ನಾನು ನಿಶ್ಚಿತವಾಗಿ ಅನುಗ್ರಹಿಸುವೆನು. ॥ ೩೧॥ ಕರ್ಪೂರ, ಕುಸುಮ, ಅಗರು, ಕಸ್ತೂರಿ, ಜಾತೀಫಲ, ಇವುಗಳನ್ನು ಹಾಕಿ ತಯಾರಿಸಿದ ॥ ೩೨ ॥ ಮತ್ತು

ತುಲಸೀಚಂದನೋಪೇತಂ ಮಮಾತ್ಯಂತಸುಖಾವಹಮ್ ।
ಯೋ ದದಾತಿ ಹಿ ಮಾಂ ನಿತ್ಯಂ ತುಲಸೀಕಾಷ್ಠಸಂಭವಮ್ ॥ ೩೩॥

ಯುಗಾನಿ ವಸತೇ ಸ್ವರ್ಗೇ ಹ್ಯನಂತಾನಿ ನರೋತ್ತಮಃ ।
ಮಹಾವಿಷ್ಣೋಃ ಕಲೌ ಭಕ್ತ್ಯಾ ದತ್ತ್ವಾ ತುಲಸಿಚಂದನಮ್ ॥ ೩೪॥

ಅರ್ಚಯೇನ್ಮಾಲತೀಪುಷ್ಪೈರ್ನ ಭೂಯಸ್ತನಪೋ ಭವೇತ್ ।
ತುಲಸೀಕಾಷ್ಠಸಂಭೂತಂ ಚಂದನಂ ಯಚ್ಛತೇ ಮಮ ॥ ೩೫॥

ದಹಾಮಿ ಪಾತಕಂ ಸರ್ವಂ ಪೂರ್ವಜನ್ಮ ಶತೈಃ ಕೃತಮ್ ।
ಸರ್ವೇಷಾಮೇವ ದೇವಾನಾಂ ತುಲಸೀಕಾಷ್ಠಚಂದನಮ್ ॥ ೩೬॥

ಪಿತೃಣಾಂ ಚ ವಿಶೇಷೇಣ ಸದಾಽಭೀಷ್ಟಂ ಯಥಾ ಮಮ ।
ಶ್ರೀಖಂಡಂ ಚಂದನಂ ತಾವತ್ ಶ್ರೇಷ್ಠಂ ಕೃಷ್ಣಾಗುರುಂ ತಥಾ ॥ ೩೭॥

ಯಾವನ್ನ ದೃಶ್ಯತೇ ಪುಣ್ಯಂ ತುಲಸೀಕಾಷ್ಠಚಂದನಮ್ ।
ತಾವತ್ಕಸ್ತೂರಿಕಾಮೋದಃ ಕರ್ಪೂರಸ್ಯ ಸುಗಂಧಿತಾ ॥ ೩೮॥

ಕಲೌ ಯಚ್ಛಂತಿ ಯೇ ಮಹ್ಯಂ ತುಲಸೀಕಾಷ್ಠಚಂದನಮ್ ।
ಮಾರ್ಗಶೀರ್ಷೇ ಶುಭೇ ಮಾಸೇ ತೇ ಕೃತಾರ್ಥಾ ನ ಸಂಶಯಃ ॥ ೩೯॥

ತುಲಸೀಕಾಷ್ಠದ ಚಂದನದಿಂದ ಯುಕ್ತವಾದ ಚಂದನವು ನನಗೆ ಅತ್ಯಂತ ಸೌಖ್ಯಪ್ರದವಾಗಿದೆ. ತುಲಸೀಕಾಷ್ಠದ ಚಂದನವನ್ನು ಯಾವನು ನಿತ್ಯದಲ್ಲಿ ನನಗೆ ಸಮರ್ಪಿಸುವನೋ ॥ ೩೩॥ ಅಂಥವನು ಅನಂತ ಯುಗಗಳವರೆಗೆ ಸ್ವರ್ಗಲೋಕದಲ್ಲಿ ವಾಸಿಸುವನು. ಕಲಿಯುಗದಲ್ಲಿ ಮಹಾವಿಷ್ಣುವಿಗೆ ಭಕ್ತಿಯಿಂದ ತುಲಸೀ ಚಂದನವನ್ನು ಸಮರ್ಪಿಸಿ ॥ ೩೪ ॥ ಮಾಲತೀ ಪುಷ್ಪಗಳಿಂದ ಅರ್ಚನೆಯನ್ನು ಮಾಡುವವನಿಗೆ ಪುನಃ ಗರ್ಭವಾಸ ಸ್ತನ್ಯಪಾನಗಳು ಇರುವದಿಲ್ಲ (ಪುನರ್ಜನ್ಮವೆಂಬುದಿಲ್ಲ). ತುಲಸೀಕಾಷ್ಠದಿಂದ ತೇಯ್ದು ತೆಗೆದ ಗಂಧವನ್ನು ಯಾವನು ನನಗೆ ಅರ್ಪಿಸುವನೋ ॥ ೩೫॥ ಅಂಥವನ ೧೦೦ ಪೂರ್ವಜನ್ಮಗಳಲ್ಲಿ ಮಾಡಿದ ಪಾಪಗಳನ್ನೆಲ್ಲ ಸುಟ್ಟು ಹಾಕುವೆನು. ತುಲಸೀಕಾಷ್ಠದ ಚಂದನವು ನನಗೆ ಹೇಗೆ ಪ್ರಿಯವೋ ಹಾಗೆ ಸಕಲ ದೇವತೆಗಳಿಗೆ ॥ ೩೬॥ ಅದರಲ್ಲೂ ವಿಶೇಷವಾಗಿ ಪಿತೃಗಳಿಗೆ ಸದಾಕಾಲದಲ್ಲಿ ಅಭೀಷ್ಟಪ್ರದವಾಗಿದೆ (ಪ್ರಿಯವಾಗಿದೆ). ಶ್ರೀಖಂಡ ಚಂದನವು ಹೇಗೆ ಶ್ರೇಷ್ಠವೋ ಹಾಗೆ ಕೃಷ್ಣಾಗುರು ಚಂದನವು ಶ್ರೇಷ್ಠವಾದದ್ದು. ॥ ೩೭॥ ಯಾವತ್ಕಾಲದವರೆಗೆ ಪುಣ್ಯಕರವಾದ ತುಲಸೀಕಾಷ್ಠ ಚಂದನವು ಇರುವದಿಲ್ಲವೋ ಅಲ್ಲಿಯವರೆಗೆ ಕಸ್ತೂರಿಯ ಮಕರಂದವು ಮತ್ತು ಕರ್ಪೂರದ ಸುಗಂಧವು ಶ್ರೇಷ್ಠವಾಗಿರುವವು. ತುಲಸೀಕಾಷ್ಠ ಚಂದನವು ಇದ್ದಾಗ ಕಸ್ತೂರಿ, ಕರ್ಪೂರಗಳ ಮಹತ್ವವಿರುವದಿಲ್ಲ. ॥ ೩೮॥ ಕಲಿಯುಗದಲ್ಲಿ ಮಾರ್ಗಶೀರ್ಷಮಾಸ ಬಂದಾಗ ಯಾರು

ಯೋ ಹಿ ಭಾಗವತೋ ಭೂತ್ವಾ ಕಲೌ ತುಲಸಿಚಂದನಮ್ ।
ನಾರ್ಪಯೇದ್ವೈ ಸಹೋಮಾಸೇ ನಾಸೌ ಭಾಗವತೋ ನರಃ ॥ ೪೦॥

ಕುಂಕುಮಾಗುರುಶ್ರೀಖಂಡಕರ್ದಮೈರ್ಮಾಮ ವಿಗ್ರಹಮ್ ।
ಆಲಿಂಪೇದ್ವೈ ಸಹೋಮಾಸೇ ಕಲ್ಪಕೋಟಿಂ ವಸೇದ್ದಿವಿ ॥ ೪೧॥

ಕರ್ಪೂರಾಗುರುಮಿಶ್ರೇಣ ಚಂದನೇನಾನುಲಿಂಪಯೇತ್ ।
ಮೃಗದರ್ಪಂ ವಿಶೇಷೇಣ ಅಭೀಷ್ಟಂ ಚ ಸದಾ ಮಮ ॥ ೪೨॥

ವಿಲೇಪಯತಿ ಯೋ ಮಾಂ ವೈ ಶಂಖೇ ಕೃತ್ವಾ ತು ಚಂದನಮ್ ।
ಮಾರ್ಗಶೀರ್ಷೇ ತದಾ ಪ್ರೀತಿಂ ಕರೋಮಿ ಶತವಾರ್ಷಿಕೀಮ್ ॥ ೪೩॥

ಸೇವತೇ ತುಲಸೀಪತ್ರೈಃ ನಿತ್ಯಮಾಮಲಕೈಶ್ಚ ಯಃ ।
ಮಾರ್ಗಶೀರ್ಷೇ ಸದಾ ಭಕ್ತ್ಯಾ ಸ ಲಭೇದ್ವಾಂಛಿತಂ ಫಲಮ್ ॥ ೪೪॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಷಷ್ಠೋಽಧ್ಯಾಯಃ ॥

ನನಗೆ ತುಲಸೀಕಾಷ್ಠ ಚಂದನವನ್ನು ಅರ್ಪಿಸುವರೋ ಅಂಥವರು ನಿಶ್ಚಯವಾಗಿಯೂ ಕೃತಾರ್ಥರು .॥೩೯॥ ಭಗವದ್ಭಕ್ತನಾದ ಯಾವನು ಕಲಿಯುಗದೊಳು ಮಾರ್ಗಶೀರ್ಷ ಮಾಸದಲ್ಲಿ ಶ್ರೀಹರಿಗೆ ತುಲಸೀಕಾಷ್ಠ ಚಂದನವನ್ನು ಅರ್ಪಿಸದಿದ್ದರೆ ಅವನು ಭಗವದ್ಭಕ್ತನೇ ಅಲ್ಲ. ॥೪೦॥ ಮಾರ್ಗಶೀರ್ಷ ಮಾಸದಲ್ಲಿ ಕುಂಕುಮ, ಅಗುರು, ಶ್ರೀಖಂಡ ಇವುಗಳಿಂದ ಮಿಶ್ರಿತವಾದ ಚಂದನದಿಂದ ನನ್ನ ದೇಹವನ್ನು ಲೇಪನ ಮಾಡುವವನು ಕೋಟಿಕಲ್ಪಗಳವರೆಗೆ ಸ್ವರ್ಗಲೋಕದಲ್ಲಿ ವಾಸಿಸುವನು. ॥ ೪೧॥ ಕರ್ಪೂರ, ಅಗುರು, ಇವುಗಳಿಂದ ಮಿಶ್ರಿತವಾದ ಗಂಧದಿಂದ ನನ್ನ ದೇಹವನ್ನು ಲೇಪಿಸುವುದು ವಿಶೇಷವಾಗಿ ಕಸ್ತೂರಿಯನ್ನು ಲೇಪಿಸುವುದು ನನಗೆ ಯಾವಾಗಲೂ ಇಷ್ಟವಾಗಿರುತ್ತದೆ. ॥ ೪೨॥ ಮಾರ್ಗಶೀರ್ಷ ಮಾಸದಲ್ಲಿ ಯಾವ ಮನುಷ್ಯನು ತುಲಸೀದಲದಿಂದ ಚಂದನವನ್ನು ಶಂಖಕ್ಕೆ ಮುಟ್ಟಿಸಿ ನನಗೆ ಭಕ್ತಿಯಿಂದ ಲೇಪಿಸುತ್ತಾನೋ ಅಂಥವನಲ್ಲಿ ನೂರು ವರ್ಷ ಅನುಗ್ರಹಿಸುವೆನು. ॥ ೪೩॥ ಮಾರ್ಗಶೀರ್ಷ ಮಾಸದಲ್ಲಿ ಯಾವನು ನಿತ್ಯ ತುಲಸೀದಳಗಳಿಂದ ಮತ್ತು ಧಾತ್ರೀ ದಳಗಳಿಂದ ಭಕ್ತಿಯಿಂದ ನನ್ನನ್ನು ಅರ್ಚಿಸುವನೋ ಅವನು ತನ್ನ ಇಷ್ಟಾರ್ಥಗಳನ್ನೆಲ್ಲ ಪಡೆಯುವನು. ॥ ೪೪ ॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಶ್ರೀಮಾರ್ಗಶೀರ್ಷಮಾಹಾತ್ಮ್ಯದಲ್ಲಿ ಶ್ರೀವಿಷ್ಣುಬ್ರಹ್ಮ ಸಂವಾದರೂಪದಲ್ಲಿ'' ಘಂಟಾನಾದ ಮತ್ತು ಚಂದನದ ಮಹಿಮೆ'' ಎಂಬ ಆರನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೭
ಪುಷ್ಪಾರ್ಚನೆ ಮಹಿಮೆ

★

ಬ್ರಹ್ಮೋವಾಚ -
ಮಾಹಾತ್ಮ್ಯಂ ವದ ದೇವೇಶ ಪುಷ್ಪಜಾತಿಸಮುದ್ಭವಮ್ ।
ಯೇನ ಯೇನ ಚ ಪುಷ್ಪೇಣ ಯತ್ಫಲಂ ಲಭತೇ ನರಃ ॥ ೧॥

ಶ್ರೀಭಗವಾನುವಾಚ -
ಶೃಣು ಪುತ್ರ ಪ್ರವಕ್ಷ್ಯಾಮಿ ಮಾಹಾತ್ಮ್ಯಂ ಪುಷ್ಪಸಂಭವಮ್ ।
ಯೇನ ಪುಷ್ಪೇಣ ಮೇ ಪ್ರೀತಿರ್ಭವೇತ್ ಸಮ್ಯಕ್ ನ ಸಂಶಯಃ॥ ೨॥

ಮಲ್ಲಿಕಾ ಮಾಲತೀ ಚೈವ ಯೂಥಿಕಾ ಜಾತಿಮುಕ್ತಕಾ ।
ಪಾಟಲಾಕರವೀರಂ ಚ ಜಯಂತೀ ವಿಜಯಾ ತಥಾ ॥ ೩॥

ಕುಬ್ಜಕಸ್ತಬಕಶ್ಚೈವ ಕರ್ಣಿಕಾರಂ ಕುರಂಟಕಃ ।
ಚಂಪಕೋ ಚಾತಕಃ ಕುಂದೋ ಬಾಣಃ ಕರ್ಚೂರಮಲ್ಲಿಕಾ ॥ ೪॥

ಅಶೋಕಸ್ತಿಲಕಶ್ಚೈವ ತಥೈವಾಪರಯೂಥಿಕಃ।
ಅಮೀ ಪುಷ್ಪಪ್ರಕಾರಾಸ್ತು ಶಸ್ತಾ ಮೇ ಪೂಜನೇ ಸುತ ॥ ೫॥

'ಹೇ ದೇವೇಶನೆ ! ಪುಷ್ಪಜಾತಿಗಳ ಮಹಾತ್ಮೆಯನ್ನು ಮತ್ತು ಯಾವ ಯಾವ ಹೂವುಗಳಿಂದ ಅರ್ಚನೆ ಮಾಡಿದರೆ ಮನುಷ್ಯನು ಯಾವ ಯಾವ ಫಲವನ್ನು ಹೊಂದುತ್ತಾನೆ ಎಂಬುದನ್ನು ನನಗೋಸ್ಕರ ತಿಳಿಸಬೇಕು' - ಹೀಗೆಂದು ಬ್ರಹ್ಮದೇವನು ಪ್ರಾರ್ಥಿಸಲು ॥೧॥ ಶ್ರೀಹರಿಯು ಹೇಳುತ್ತಾನೆ- 'ವತ್ಸಾ! ಪುಷ್ಪಗಳ ಮಹಾತ್ಮೆಯನ್ನು ಹೇಳುವೆನು ಮತ್ತು ಯಾವ ಪುಷ್ಪಾರ್ಚನೆಯಿಂದ ನನಗೆ ಬಹು ಸಂತೋಷವಾಗುವದು ಎಂಬುದನ್ನೂ ತಿಳಿಸುವೆನು ಕೇಳು ॥ ೨॥ ಮಲ್ಲಿಕಾಪುಷ್ಪ ,ಮಾಲತೀಪುಷ್ಪ, ಯೂಥಿಕಾಪುಷ್ಪ, ಜಾತೀಪುಷ್ಪ, ಪಾಟಲಾಪುಷ್ಪ, ಕರವೀರ ಪುಷ್ಪ, ಜಯಂತೀಪುಷ್ಪ, ವಿಜಯಾಪುಷ್ಪ, ॥೩॥ ಕುಬ್ಜಕಪುಷ್ಪ, ತಬಕಪುಷ್ಪ, ಕರ್ಣಿಕಾರಪುಷ್ಪ, ಕುರಂಟಕಪುಷ್ಪ, ಸಂಪಗೀಪುಷ್ಪ, ಚಾತಕಪುಷ್ಪ, ಕುಂದಪುಷ್ಪ, ಬಾಣಪುಷ್ಪ, ಕರ್ಚೂರಮಲ್ಲಿಕಾಪುಷ್ಪ ॥೪॥ ಅಶೋಕ ಪುಷ್ಪ, ತಿಲಕಪುಷ್ಪ, ಯೂಥಿಕಪುಷ್ಪ ಇವೇ ಮೊದಲಾದ ಪುಷ್ಪಪ್ರಕಾರಗಳು ನನ್ನ ಪೂಜನೆಯಲ್ಲಿ ಪ್ರಶಸ್ತವಾಗಿವೆ. ॥ ೫॥ ಕೇದಗಿಪುಷ್ಪ, ಭೃಂಗರಾಜ ಮತ್ತು ತುಳಸೀ

ಕೇತಕೀಪತ್ರಪುಷ್ಪಂ ಚ ಭೃಂಗರಾಜಸ್ತಥೈವ ಚ ।
ತುಲಸೀಪತ್ರಪುಷ್ಪಂ ಚ ಸದ್ಯಃ ಪ್ರೀತಿಕರಂ ಮಮ ॥ ೬॥

ಪದ್ಮಾನ್ಯಂಬುಸಮುತ್ಥಾನಿ ರಕ್ತನೀಲೋತ್ಪಲೇ ತಥಾ ।
ಸಿತೋತ್ಪಲಂ ಸಹೋಮಾಸೇ ಮಮಾತ್ಯಂತಂ ಹಿ ವಲ್ಲಭಮ್ ॥ ೭॥

ತಾನ್ಯೇವ ಚ ಪ್ರಶಸ್ತಾನಿ ಕುಸುಮಾನಿ ಚ ಮೇ ಸುತ ।
ಯಾನಿ ಸ್ಯುರ್ವರ್ಣಯುಕ್ತಾನಿ ರಸಗಂಧಯುತಾನಿ ಚ ॥ ೮॥

ನಿರ್ಗಂಧಾನ್ಯಪಿ ಶಸ್ತಾನಿ ಕುಸುಮಾನಿ ಮತಾನಿ ಮೇ ।
ಸುರಭೀಣಿ ತಥಾನ್ಯಾನಿ ವರ್ಜಯಿತ್ವಾ ತು ಕೇತಕೀಮ್ ॥ ೯॥

ಬಾಣಂ ಚ ಚಂಪಕಾಶೋಕಂ ಕರವೀರಂ ಚ ಯೂಥಿಕಾ ।
ಪಾರಿಭದ್ರಂ ಪಾಟಲಾ ಚ ಬಕುಲಂ ಗಿರಿಶಾಲಿನೀ ॥ ೧೦॥

ಬಿಲ್ವಪತ್ರಂ ಶಮೀಪತ್ರಂ ಪತ್ರಂ ಭೃಂಗಿರಜಸ್ಯ ಚ ।
ತಮಾಲಾಮಲಕೀಪತ್ರಂ ಶಸ್ತಂ ಮೇ ಪೂಜನೇ ಸುತ ॥ ೧೧॥

ಪುಷ್ಪೈರರಣ್ಯಸಂಭೂತೈಃ ಪತ್ರೈರ್ವಾ ಗಿರಿಸಂಭವೈಃ ।
ಅಪರ್ಯುಷಿತನಿಶ್ಛಿದ್ರೈಃ ಪ್ರೋಕ್ಷಿತೈರ್ಜಂತುವರ್ಜಿತೈಃ ॥ ೧೨॥

ಇವುಗಳ ಪತ್ರಗಳು ಹಾಗೂ ಪುಷ್ಪಗಳು ನನಗೆ ಸದ್ಯಃ ಪ್ರೀತಿಕರವಾದವುಗಳಾಗಿವೆ .॥೬॥ ಶುದ್ಧ ನೀರಿನೊಳಗೆ ಹುಟ್ಟಿದ ರಕ್ತವರ್ಣದ ಮತ್ತು ನೀಲವರ್ಣದ ಕಮಲಪುಷ್ಪಗಳು ಮಾರ್ಗಶೀರ್ಷ ಮಾಸದಲ್ಲಿ ನನಗೆ ಅತ್ಯಂತ ಪ್ರೀತ್ಯಾಸ್ಪದವಾದವುಗಳಾಗಿವೆ. ॥ ೭॥ ಸುತನೇ! ರಸ ಹಾಗೂ ಗಂಧಗಳಿಂದ ಯುಕ್ತವಾದ ವಿವಿಧ ವರ್ಣದ ಹೂವುಗಳೇ ನನ್ನ ಅರ್ಚನೆಗೆ ಪ್ರಶಸ್ತವಾದವುಗಳೆಂದು ತಿಳಿ. ॥೮॥ ಯಾವ ಗಂಧವಿಲ್ಲದ ಕೆಲವು ಪುಷ್ಪಗಳೂ ನನ್ನ ಅರ್ಚನೆಗೆ ಪ್ರಶಸ್ತವಾಗಿರುವುದು ನನಗೆ ಸಮ್ಮತವಾಗಿದೆ. ಸುಗಂಧಯುತವಾದ ಬೇರೆ ಕೆಲವು ಪುಷ್ಪಗಳನ್ನು ಬಿಟ್ಟು ಕೇತಕೀಪುಷ್ಪ ॥ ೯॥ ಬಾಣಪುಷ್ಪ, ಚಂಪಕಪುಷ್ಪ, ಅಶೋಕಪುಷ್ಪ, ಕರವೀರಪುಷ್ಪ, ಯೂಥಿಕಾಪುಷ್ಪ, ಪಾರಿಭದ್ರ, ಪಾಟಲಾಪುಷ್ಪಗಳು, ಬಕುಲಪುಷ್ಪ, ವಿಷ್ಣುಕ್ರಾಂತಪುಷ್ಪ, ॥ ೧೦॥ ಅದರಂತೆ ಬಿಲ್ವಪತ್ರ, ಶಮೀಪತ್ರ, ಭೃಂಗಿರಾಜಪತ್ರ ತಮಾಲಪತ್ರ, ಆಮಲಕೀ (ನೆಲ್ಲೀಗಿಡ) ಪತ್ರ, ಇವೆಲ್ಲವೂ ನನ್ನ ಪೂಜೆಯಲ್ಲಿ ಪ್ರಶಸ್ತವಾಗಿರುತ್ತವೆ. ॥ ೧೧॥ ತಂಗಳಾಗದ, ಯಾವ ಛಿದ್ರಗಳಿಲ್ಲದ, ಪರದೇಶದವು ಆಗಿರದ, ಹುಳಗಳು ಹತ್ತಿ ತಿಂದಿರದ, ಅರಣ್ಯಗಳಲ್ಲಿ ಬೆಳೆದ ಪುಷ್ಪಗಳಿಂದಲೂ ಹಾಗೂ ಪರ್ವತಗಳಲ್ಲಿ ಬೆಳೆದ ಪತ್ರಗಳಿಂದಲೂ ॥ ೧೨॥ ಅಥವಾ

ಅಥಾರಾಮೋದ್ಭವೈರ್ವಾಪಿ ಪುಷ್ಪೈಃ ಸಂಪೂಜಯೇಚ್ಚ ಮಾಮ್ ।
ಪುಷ್ಪಜಾತಿವಿಶೇಷೇಣ ಭವೇತ್ಪುಣ್ಯಂ ವಿಶೇಷತಃ ॥ ೧೩॥

ತಪಃಶೀಲಗುಣೋಪೇತೇ ಪಾತ್ರೇ ವೇದಸ್ಯ ಪಾರಗೇ ।
ದಶ ದತ್ವಾ ಸುವರ್ಣಾನಿ ಯತ್ಫಲಂ ಲಭತೇ ನರಃ ॥ ೧೪॥

ತತ್ಫಲಂ ಲಭತೇ ಮರ್ತ್ಯಃ ಸಹೇ ಕುಸುಮದಾನತಃ ।
ದ್ರೋಣಪುಷ್ಪೈಸ್ತಥೈಕಸ್ಮಿನ್ಮಹ್ಯಂ ಚ ವಿನಿವೇದಿತೆ ॥ ೧೫॥

ದಶ ದತ್ವಾ ಸುವರ್ಣಾನಿ ಫಲಂ ತದಧಿಕಂ ಸುತ ।
ಪುಷ್ಪಾತ್ ಪುಷ್ಪಾಂತರೇ ಭೇದೋ ಯಥಾಸೀತ್ತನ್ನಿಬೋಧ ಮೇ ॥ ೧೬॥

ದ್ರೋಣಪುಷ್ಪಸಹಸ್ರೇಭ್ಯಃ ಖಾದಿರಂ ತು ವಿಶಿಷ್ಯತೆ ।
ಖಾದಿರಾತ್ ಪುಷ್ಪಸಾಹಸ್ರಾದ್ಬಕಪುಷ್ಪಂ ವಿಶಿಷ್ಯತೆ ॥ ೧೭॥

ಶಮೀಪುಷ್ಪಸಹಸ್ರೇಭ್ಯೋ ಬಿಲ್ವಪುಷ್ಪಂ ವಿಶಿಷ್ಯತೆ ।
ಬಿಲ್ವಪುಷ್ಪಸಹಸ್ರೇಭ್ಯೋ ಬಕಪುಷ್ಪಂ ವಿಶಿಷ್ಯತೆ ॥ ೧೮॥

ಬಕಪುಷ್ಪಸಹಸ್ರೇಭ್ಯೋ ನಂದ್ಯಾವರ್ತಂ ವಿಶಿಷ್ಯತೆ ।
ನಂದ್ಯಾವರ್ತಸಹಸ್ರಾದ್ಧಿ ಕರವೀರಂ ವಿಶಿಷ್ಯತೆ ॥ ೧೯॥

ತೋಟಗಳಲ್ಲಿ ಬೆಳೆದ ಪುಷ್ಪಗಳಿಂದಲೂ ನನ್ನನ್ನು ಭಕ್ತಿಯಿಂದ ಪೂಜಿಸಬೇಕು. ಪುಷ್ಪಜಾತಿಯಲ್ಲಿ ವಿಶಿಷ್ಟವಾದ ಪುಷ್ಪಗಳಿಂದ ನನ್ನ ಪೂಜೆ ಮಾಡುವುದರಿಂದ ವಿಶೇಷವಾದ ಪುಣ್ಯವು ಲಭಿಸುವದು ॥ ೧೩॥ ತಪಃಶೀಲನಾದ, ಸದ್ಗುಣಗಳಿಂದ ಯುಕ್ತನಾದ ಮತ್ತು ವೇದಪಾಠಗನಾದ ಸತ್ಪಾತ್ರನಿಗೆ ಹತ್ತು ಸುವರ್ಣ ನಾಣ್ಯಗಳನ್ನು ದಾನವಾಗಿ ಕೊಡುವುದರಿಂದ ಮನುಷ್ಯನು ಯಾವಫಲವನ್ನು ಪಡೆಯುವನೋ ॥ ೧೪॥ ಅಷ್ಟೇ ಫಲವನ್ನು ಮಾರ್ಗಶೀರ್ಷ ಮಾಸದಲ್ಲಿ ಸತ್ಪಾತ್ರನಲ್ಲಿ ಪುಷ್ಪದಾನ ಮಾಡುವ ಮಾತ್ರದಿಂದಲೇ ಪಡೆಯುವನು. ದ್ರೋಣ ಪುಷ್ಪಗಳಿಂದ ನನ್ನ ಪೂಜೆ ಮಾಡಿದರೆ ಅಥವಾ ಬೇರೆ ಯಾವುದಾದರೂ ಒಂದು ಒಳ್ಳೆಯ ಪುಷ್ಪದಿಂದ ನನ್ನನ್ನು ಅರ್ಚಿಸಿದರೆ ಆ ಮನುಷ್ಯನು ॥೧೫॥ ಹತ್ತು ಸುವರ್ಣ ನಾಣ್ಯಗಳನ್ನು ದಾನ ಮಾಡುವುದರಿಂದ ಬರುವ ಪುಣ್ಯಕ್ಕಿಂತಲೂ ಅಧಿಕವಾದ ಪುಣ್ಯಫಲವನ್ನು ಹೊಂದುವನು. ಎಲೈ ಪುತ್ರನೇ ! ನಾನೀಗ ಪುಷ್ಪ ಪುಷ್ಪಗಳಲ್ಲಿರುವ ಭೇದವನ್ನು ತಿಳಿಸುವೆನು ಕೇಳು. ॥ ೧೬ ॥ ಒಂದುಸಾವಿರ ದ್ರೋಣಪುಷ್ಪಗಳಿಗಿಂತಲೂ ಒಂದು ಖಾದಿರಪುಷ್ಪವು ಶ್ರೇಷ್ಠವಾಗಿದೆ. ಒಂದು ಸಹಸ್ರ ಖಾದಿರಪುಷ್ಪಗಳಿಗಿಂತಲೂ ಒಂದು ಬಕಪುಷ್ಪವು ಅಧಿಕವಾಗಿದೆ. ॥೧೭॥ ಒಂದು ಸಹಸ್ರ ಶಮೀಪುಷ್ಪಗಳಿಗಿಂತ ಒಂದು ಬಕಪುಷ್ಪವು ಶ್ರೇಷ್ಠವಾಗಿರುವದು. ॥೧೮॥ ಒಂದು ಸಾವಿರ

ಕರವೀರಸಹಸ್ರಸ್ಯ ಕುಸುಮಂ ಶ್ವೇತಮುತ್ತಮಮ್ ।
ಕರವೀರಶ್ವೇತಪುಷ್ಪಾತ್ಪಾಲಾಶಂ ಪುಷ್ಪಮುತ್ತಮಮ್ ॥ ೨೦॥

ಮಾಲತೀಪುಷ್ಪಸಾಹಸ್ರಾತ್ ಸಂಧ್ಯಾಪುಷ್ಪಂ ವಿಶಿಷ್ಯತೆ ।
ಪಲಾಶಸ್ಯ ಸಹಸ್ರಾದ್ಧಿ ಮಾಲತೀಪುಷ್ಪಮುತ್ತಮಮ್ ॥ ೨೧॥

ಮಾಲತೀಪುಷ್ಪಸಾಹಸ್ರಾತ್ ತ್ರಿಸಂಧ್ಯಾಪುಷ್ಪಮುತ್ತಮಮ್ ।
ತ್ರಿಸಂಧ್ಯಾಶ್ವೇತಸಾಹಸ್ರಾಜ್ಜಾತೀಪುಷ್ಪಂ ವಿಶಿಷ್ಯತೆ ॥ ೨೨॥

ತ್ರಿಸಂಧ್ಯಾರಕ್ತಸಾಹಸ್ರಾತ್ ತ್ರಿಸಂಧ್ಯಾಶ್ವೇತಮುತ್ತಮಮ್ ।
ಸರ್ವಾಸಾಂ ಪುಷ್ಪಜಾತೀನಾಮ್ ಜಾತೀಪುಷ್ಪಮಿಹೋತ್ತಮಮ್ ॥ ೨೩॥

ಜಾತೀಪುಷ್ಪಸಹಸ್ರೇಣ ಯಚ್ಚೇನ್ಮಾಲಾಂ ಸುಶೋಭನಾಮ್ ।
ಮಹ್ಯಂ ಯೋ ವಿಧಿವದ್ದದ್ಯಾತ್ತಸ್ಯ ಪುಣ್ಯಫಲಂ ಶೃಣು ॥ ೨೪॥

ಕಲ್ಪಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ ।
ಮತ್ಪುರೇ ವಸತೆ ನಿತ್ಯಂ ಮಮ ತುಲ್ಯಪರಾಕ್ರಮಃ ॥ ೨೫॥

ಬಕಪುಷ್ಪ ಗಳಿಗಿಂತ ನಂದ್ಯಾವರ್ತಪುಷ್ಪವು ಅಧಿಕವಾಗಿದೆ. ಸಹಸ್ರನಂದ್ಯಾವರ್ತ ಪುಷ್ಪಗಳಿಗಿಂತಲೂ ಕರವೀರ ಪುಷ್ಪವು ಶ್ರೇಷ್ಠವಾಗಿದೆ. ॥೧೯॥ ಒಂದು ಸಹಸ್ರ ಕರವೀರ ಪುಷ್ಪಗಳಿಗಿಂತಲೂ ಶ್ವೇತಕರವೀರ (ಮುತ್ತಲ ಹೂ) ಪುಷ್ಪವು ಶ್ರೇಷ್ಠವಾಗಿದೆ. ॥೨೦॥ ಒಂದು ಸಾವಿರ ಮಾಲತೀ ಪುಷ್ಪಗಳಿಗಿಂತಲೂ ಒಂದು ಸಂಧ್ಯಾ ಪುಷ್ಪವು ಅಧಿಕ ಶ್ರೇಷ್ಠವಾಗಿದೆ. ಶ್ವೇತ ಕರವೀರಕ್ಕಿಂತಲೂ ಪಲಾಶ, ಸಹಸ್ರ ಪಲಾಶಪುಷ್ಪಗಳಿಗಿಂತ ಮಾಲತೀ ಪುಷ್ಪವು ಉತ್ತಮವಾದುದು. ॥೨೧॥ ಸಹಸ್ರ ಮಾಲತೀ ಪುಷ್ಪಗಳಿಗಿಂತ ಶ್ವೇತವರ್ಣದ ತ್ರಿಸಂಧ್ಯಾ ಪುಷ್ಪವು ಉತ್ತಮವಾಗಿದೆ. ಶ್ವೇತವರ್ಣದ ತ್ರಿಸಂಧ್ಯಾ ಪುಷ್ಪಗಳಿಗಿಂತ ಜಾತೀಪುಷ್ಪವು ಅಧಿಕವಾಗಿದೆ. ॥೨೨॥ ರಕ್ತವರ್ಣದ ಸಹಸ್ರ ತ್ರಿಸಂಧ್ಯಾ ಪುಷ್ಪಗಳಿಗಿಂತ ಶ್ವೇತವರ್ಣದ ಒಂದು ತ್ರಿಸಂಧ್ಯಾಪುಷ್ಪವು ಶ್ರೇಷ್ಠವಾದುದು. ಎಲ್ಲ ಪ್ರಕಾರದ ಪುಷ್ಪಗಳಿಗಿಂತಲೂ ಜಾತೀಪುಷ್ಪವು ಶ್ರೇಷ್ಠವಾಗಿರುವದು. ॥೨೩॥ ಹೇ ಬ್ರಹ್ಮಾ! ಒಂದು ಸಹಸ್ರ ಜಾತೀಪುಷ್ಪಗಳಿಂದ ತಯಾರಿಸಿದ ಶೋಭಿಸುವ ಪುಷ್ಪಹಾರವನ್ನು ನನಗೆ ವಿಧಿಪೂರ್ವಕ ಅರ್ಚನೆ ಮಾಡಿ ಭಕ್ತಿಯಿಂದ ಯಾರು ಸಮರ್ಪಿಸುವರೋ ಅವರು ಪಡೆಯುವ ಪುಣ್ಯಫಲವನ್ನು ತಿಳಿಸುವೆನು ಕೇಳು. ॥೨೪॥ ಸಹಸ್ರಕೋಟಿ ಕಲ್ಪಗಳವರೆಗೆ ಮತ್ತು ನೂರು ಕೋಟಿ ಕಲ್ಪಗಳವರೆಗೆ ಅವನು ನಿತ್ಯ ನನ್ನ ಪುರದಲ್ಲಿ ವಾಸಿಸುವನು. ಮತ್ತು ಆ ಪುರುಷನು ನನ್ನ ಅನುಗ್ರಹದಿಂದ ನನ್ನಂತೆ ಅಧಿಕವಾದ ಪರಾಕ್ರಮವುಳ್ಳವನಾಗುವನು. ॥೨೫॥ ನನ್ನ ಅರ್ಚನೆಗಾಗಿ ಯಾವ ಯಾವ ವೃಕ್ಷಗಳ ಪುಷ್ಪಗಳು ಪ್ರಶಸ್ತವಾಗಿರುವವೋ

ಯೇಷಾಂ ಸಂತಿ ಚ ಪುಷ್ಪಾಣಿ ಪ್ರಶಸ್ತಾನಿ ಮಮಾರ್ಚನೇ ।
ತೇಷಾಂ ಪತ್ರಾಣಿ ಶಸ್ತಾನಿ ತದಭಾವೇ ಫಲಾನಿ ಚ
॥ ೨೬॥ ಏತೈಃ ಪತ್ರೈಶ್ಚ ಪುಷ್ಪೈಶ್ಚ ಫಲೈಶ್ಚಾಪಿ ತಥಾ ಹಿ ಮಾಮ್ ।
ಅರ್ಚನ್ ದಶಸುವರ್ಣಸ್ಯ ಪ್ರತ್ಯೇಕಂ ಫಲಮಾಪ್ನುಯಾತ್ ॥ ೨೭॥

ಏತಾಭಿಃ ಪುಷ್ಪಜಾತೀಭಿಃ ಸಹೋಮಾಸೇಽರ್ಚಯಂತಿ ಚ ।
ಭಕ್ತಿಂ ದದಾಮಿ ತೇಷಾಂ ವೈ ತುಷ್ಟಃ ಸನ್ನಾತ್ರ ಸಂಶಯಃ ॥ ೨೮॥

ಧನಂ ಪುತ್ರಾಂಸ್ತಥಾ ದಾರಾನ್ ಯತ್ಕಿಂಚಿದ್ವಾಂಛತೇ ಹಿ ಸಃ ।
ತತ್ತದ್ದದಾಮಿ ವಿಪ್ರೇಂದ್ರ ಪುಷ್ಪೈರೇಭಿಃ ಪ್ರತೋಷಿತಃ ॥ ೨೯॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಸಪ್ತಮೋಽಧ್ಯಾಯಃ ॥

ಅವುಗಳ ಪತ್ರಗಳೂ ಕೂಡ ಪ್ರಶಸ್ತವಾಗಿವೆ. ಪತ್ರಗಳಿಲ್ಲದಿದ್ದರೆ ಅವುಗಳ ಫಲಗಳು ಪ್ರಶಸ್ತವಾಗಿರುತ್ತವೆ. ॥ ೨೬॥ ಇದುವರೆಗೆ ತಿಳಿಸಿದ ಪುಷ್ಪಗಳಿಂದಾಗಲೀ, ಪತ್ರಗಳಿಂದಾಗಲೀ, ಫಲಗಳಿಂದಾಗಲೀ ನನ್ನನ್ನು ಅರ್ಚಿಸುವವನು ಒಂದೊಂದು ಪುಷ್ಪ, ಪತ್ರ, ಫಲಕ್ಕೆ ೧೦ ಸುವರ್ಣ ನಾಣ್ಯಗಳ ದಾನದಿಂದ ಬರುವಷ್ಟು ಪುಣ್ಯವನ್ನು ಪಡೆಯುವನು. ॥ ೨೭॥ ಈ ಪ್ರಕಾರದ ವಿವಿಧ ಜಾತಿಯ ಪುಷ್ಪಗಳಿಂದ ಮಾರ್ಗಶೀರ್ಷ ಮಾಸದಲ್ಲಿ ಯಾರು ನನ್ನ ಪೂಜೆ ಮಾಡುವರೋ ಅವರಿಗೆ ನನ್ನಲ್ಲಿ ದೃಢವಾದ ಭಕ್ತಿಯನ್ನು ಕೊಟ್ಟು ಅನುಗ್ರಹಿಸುವೆನು. ವತ್ಸಾ! ಈ ವಿಷಯದಲ್ಲಿ ಸಂದೇಹಬಡದಿರು. ॥ ೨೮॥ ಅವರು ನನ್ನ ಪೂಜೆಯ ಸಮಯದಲ್ಲಿ ಭಕ್ತಿಯಿಂದ ಅರ್ಪಿಸುವ ಈ ವಿವಿಧ ಪುಷ್ಪಗಳಿಂದ ಪ್ರೀತನಾಗಿ ನಾನು ಅವರಿಗೆ ಧನ ಸಂಪತ್ತು, ಪುತ್ರರು, ಸುಕನ್ಯಾ ಮೊದಲಾದವುಗಳನ್ನಲ್ಲದೇ ಏನೇನು ಅವರ ವಾಂಛಿತವಿರುವದೋ ಅದೆಲ್ಲವನ್ನೂ ಕೊಡುವೆನು .॥ ೨೯॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಮಾರ್ಗಶೀರ್ಷಮಾಸ ಮಹಾತ್ಮೆಯಲ್ಲಿ ಬ್ರಹ್ಮವಿಷ್ಣು ಸಂವಾದದಲ್ಲಿ ''ಪುಷ್ಪಾರ್ಚನೆ ಮಹಿಮೆ'' ಎಂಬ ಏಳನೆಯ ಅಧ್ಯಾಯವು ಸಮಾಪ್ತವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೮
ತುಲಸೀ, ಧೂಪ-ದೀಪ, ಮಹಿಮೆ

★

ಬ್ರಹ್ಮೋವಾಚ -
ಶ್ರೀಮತ್ತುಲಸೀಮಾಹಾತ್ಮ್ಯಂ ಯಥಾವದ್ವರ್ಣಯ ಪ್ರಭೋ ।
ಯಸ್ಯಾಃ ಸನ್ನಿಧಿಮಾತ್ರೇಣ ಪ್ರೀತಿರ್ಭವತಿ ಮೇಽಧಿಕಾ ॥ ೧॥

ಶ್ರೀಭಗವಾನುವಾಚ -
ಮಣಿಕಾಂಚನಪುಷ್ಪಾಣಿ ತಥಾ ಮುಕ್ತಾಮಯಾನಿ ಚ ।
ತುಲಸೀಪತ್ರದಾನಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥ ೨॥

ತುಲಸೀಮಂಜರೀಭಿರ್ಯಃ ಕುರ್ಯಾದ್ವೈ ಮಮ ಪೂಜನಮ್ ।
ನ ಸ ಗರ್ಭಗೃಹಾನ್ ಯಾಯಾನ್ಮುಕ್ತಿಭಾಗೀ ಭವೇನ್ನರಃ ॥ ೩॥

ಆರೋಪ್ಯ ತುಲಸೀಂ ವತ್ಸ ಪೂಜಯೇತ್ತದ್ದಲೈಶ್ಚ ಮಾಮ್ ।
ದಿವಿ ಸಂಮೋದಮಾನಾಸ್ತೇ ಶ್ವೇತದ್ವೀಪೇ ಚ ಮೇ ಗೃಹೇ ॥ ೪॥

ಹೇ ಪ್ರಭೋ ಶ್ರೀಹರೇ! ಯಾವ ತುಲಸಿಯ ಸನ್ನಿಧಾನ ಮಾತ್ರದಿಂದ ನನಗೆ ನಿನ್ನಲ್ಲಿ ಅಧಿಕವಾದ ಭಕ್ತಿಯುಂಟಾಗುತ್ತದೆಯೋ, ಅಂಥ ಶ್ರೀತುಲಸಿಯ ಮಹಾತ್ಮೆಯನ್ನು ವಿಸ್ತಾರವಾಗಿ ತಿಳಿಸುವವನಾಗು' ಎಂದು ಬ್ರಹ್ಮದೇವನು ಪ್ರಾರ್ಥಿಸಲು ಭಗವಂತನು ಹೇಳುತ್ತಾನೆ ॥೧॥ " ಹೇ ಚತುರ್ಮುಖ ಬ್ರಹ್ಮನೇ! ಕೇಳು. ನವರತ್ನ, ಸುವರ್ಣಪುಷ್ಪ ಮತ್ತು ಮುತ್ತಿನ ಆಭರಣಗಳ ದಾನಗಳು ತುಲಸೀಪತ್ರ ದಾನದ ಹದಿನಾರನೇ ಒಂದು ಪಾಲಿಗೂ ಸರಿಯಾಗಲಾರವು ॥ ೨॥ ತುಲಸೀ ಹಾರಗಳಿಂದ ಯಾರು ನನ್ನ ಪೂಜೆಯನ್ನು ಮಾಡುವರೋ ಅವರಿಗೆ ಮತ್ತೆ ಗರ್ಭವಾಸವೆಂಬುದಿಲ್ಲ. ಅಲ್ಲದೇ ಅವರು ಮುಕ್ತಿಯನ್ನು ಪಡೆಯಲು ಅರ್ಹರಾಗುತ್ತಾರೆ. ॥ ೩॥ ಹೇ ವತ್ಸಾ! ತುಲಸೀ ಗಿಡವನ್ನು ಬೆಳೆಸಿ ಅದರ ದಲಗಳನ್ನು ತೆಗೆದು ಅವುಗಳಿಂದ ಯಾರು ನನ್ನ ಪೂಜೆಯನ್ನು ಮಾಡುವರೋ ಅವರು ಸ್ವರ್ಗಲೋಕದಲ್ಲಿ ಕೆಲಕಾಲ ಆನಂದದಿಂದ ಇದ್ದು ಮುಂದೆ ಶ್ವೇತದ್ವೀಪದ ನನ್ನ ಗೃಹದಲ್ಲಿ ಸುಖದಿಂದ ವಾಸಿಸುವರು. ॥ ೪॥ ಯಾವಾತನು ನಿರ್ಮಲವಾದ, ಸುಗಂಧಯುಕ್ತವಾದ, ಅಖಂಡಿತವಾದ ತುಲಸೀ ದಲಗಳಿಂದ ಯಾವಾಗಲೂ ನನ್ನನ್ನು ಪೂಜಿಸುವನೋ ಅಂಥವನ ಪಟದಲ್ಲಿದ್ದಂಥ ಪಾಪರಾಶಿಯನ್ನು ಯಮನು ತನ್ನ ಅವಲೋಕನ ಮಾತ್ರದಿಂದ

ಶ್ರೀಮತ್ತುಲಸ್ಯಾರ್ಚಯತೇ ಸಕೃದ್ಧಿ ಮಾಂ
ಪತ್ರೈಃ ಸುಗಂಧ್ಯೈಃ ವಿಮಲೈರಖಂಡಿತೈಃ ।
ಯತ್ತಸ್ಯ ಪಾಪಂ ಪಟಸಂಸ್ಥಿತಂ ತದಾ
ನಿರೀಕ್ಷಯಿತ್ವಾ ಪರಿಮಾರ್ಜಯೇದ್ಯಮಃ ॥ ೫॥

ಮತ್ಪೂಜನಾರ್ಥಂ ತುಲಸೀ ನ ಯೇಷಾಂ
ಸಂಪದ್ಯತೇ ದ್ವಾದಶಿಪುಣ್ಯವಾಸರೆ (ಸಂಪಾದಿತೈಕಾದಶಿಪುಣ್ಯವಾಸರೇ)।
ಧಿಗ್ಯೌವನಂ ಜೀವಿತಮರ್ಥಸಂತತಿ-
ಸ್ತೇಷಾಂ ಸುಖಂ ನೇಹ ಚ ದೃಶ್ಯತೇ ಪರೇ ॥ ೬॥

ಲಿಂಗಮಭ್ಯರ್ಚಿತಂ ದೃಷ್ಟ್ವಾ ಸಹೋಮಾಸೇ ಚ ಮಾಮಕಮ್ ।
ತುಲಸೀಪತ್ರನಿಕರೈರ್ಮುಚ್ಯತೇ ಬ್ರಹ್ಮಹತ್ಯಯಾ ॥ ೭॥

ನಿತ್ಯಮಭ್ಯರ್ಚಯೇದ್ಯೋ ವೈ ತುಲಸ್ಯಾ ಮಾಂ ರಮೇಶ್ವರಮ್ ।
ಮಹಾಪಾಪಾನಿ ನಶ್ಯಂತಿ ಕಿಂ ಪುನಶ್ಚೋಪಪಾತಕಮ್ ॥ ೮॥

ವರ್ಜ್ಯಂ ಪರ್ಯುಷಿತಂ ಪುಷ್ಪಂ ವರ್ಜ್ಯಂ ಪರ್ಯುಷಿತಂ ಜಲಮ್ ।
ನ ವರ್ಜ್ಯಂ ತುಲಸೀಪತ್ರಂ ನ ವರ್ಜ್ಯಂ ಜಾಹ್ನವೀಜಲಮ್ ॥ ೯॥

ತಾವದ್ಗರ್ಜಂತಿ ಪುಷ್ಪಾಣಿ ಮಾಲತ್ಯಾದೀನಿ ಭೋ ಸುತ ।
ಯಾವನ್ನ ಪ್ರಾಪ್ಯತೇ ಪುಣ್ಯಾ ತುಲಸೀ ಮಮ ವಲ್ಲಭಾ ॥ ೧೦॥

ನಾಶಪಡಿಸುವನು.॥೫॥ ಏಕಾದಶೀ, ದ್ವಾದಶೀ, ಪುಣ್ಯದಿನಗಳಂದು ಯಾರು ನನ್ನ ಪೂಜೆಗೋಸ್ಕರ ತುಲಸೀ ದಲಗಳನ್ನು ಸಂಗ್ರಹಿಸುವದಿಲ್ಲವೋ ಅಂಥವರ ಯೌವನಕ್ಕೆ ಮತ್ತು ಜೀವನಕ್ಕೆ ಧಿಕ್ಕಾರವಿರಲಿ. ಅವರು ಎಷ್ಟೇ ಅಖಂಡವಾದ ದ್ರವ್ಯವನ್ನು ಸಂಪಾದಿಸಿದರೂ, (ದ್ರವ್ಯ ಸಂತಾನ ಪಡೆದರೂ)ಇಹ ಪರಗಳಲ್ಲಿ ಸುಖವನ್ನು ಕಾಣಲಾರರು. ॥ ೬॥ ಮಾರ್ಗಶೀರ್ಷಮಾಸದಲ್ಲಿ ತುಲಸೀಪತ್ರಗಳಿಂದ ಪೂಜಿಸಲ್ಪಟ್ಟ ನನ್ನ ವಿಗ್ರಹವನ್ನು ನೋಡುವ ಮಾತ್ರದಿಂದ ಪುರುಷನು ಬ್ರಹ್ಮಹತ್ಯಾದಿ ದೋಷಗಳಿಂದ ಮುಕ್ತನಾಗುತ್ತಾನೆ. ॥ ೭॥ ಯಾವನು ಲಕ್ಷ್ಮೀಪತಿಯಾದ ನನ್ನನ್ನು ನಿತ್ಯದಲ್ಲಿ ತುಲಸೀ ಪತ್ರಗಳಿಂದ ಭಕ್ತಿಪೂರ್ವಕ ಪೂಜಿಸುವನೋ ಅವನ ಮಹಾಪಾತಕಗಳೆಲ್ಲವೂ ನಾಶವಾಗುವಾಗ ಉಪಪಾತಕಗಳು ನಾಶವಾಗುವವೆಂದೇನು ಹೇಳುವದು! ॥೮॥ ಒಮ್ಮೆ ಪೂಜೆ ಮಾಡಿ ತೆಗೆದ ಹೂವು ಮತ್ತು ನಿರ್ಮಾಲ್ಯ ವಿಸರ್ಜನೆಯ ಜಲ ಇವುಗಳನ್ನು ಪುನಃ ಉಪಯೋಗಿಸಕೂಡದು. ಆದರೆ ತುಲಸೀ ಪತ್ರವಾಗಲೀ, ಜಾಹ್ನವೀ ಜಲವಾಗಲೀ ಹೀಗೆ ಎಂದೂ ವರ್ಜ್ಯವಾಗುವದಿಲ್ಲ. ॥೯॥ ಎಲೈ ಪುತ್ರನೇ! ನನಗೆ ಪ್ರೀತ್ಯಾಸ್ಪದವಾದ ತುಲಸೀ ಪತ್ರಗಳ ಸಂಗವಾಗುವವರೆಗೆ ಮಾಲತೀ ಮೊದಲಾದ ಪುಷ್ಪಗಳು ಗರ್ಜಿಸುತ್ತಿರುತ್ತವೆ.

ಸಕೃದಭ್ಯರ್ಚಯೇದ್ಯೋ ಮಾಂ ಬಿಲ್ವಪತ್ರೇಣ ಮಾನವಃ ।
ಮುಕ್ತಿಭಾಗೀ ನಿರಾತಂಕೋ ಮಮ ಪಾರಿಷದೋ ಭವೇತ್ ॥ ೧೧॥

ಬಿಲ್ವಪತ್ರಾತ್ ಶಮೀಪತ್ರಾಜ್ಜಾತೀಪತ್ರಾತ್ ಸರೋರುಹಾತ್ ।
ವಲ್ಲಭಂ ತುಲಸೀಪತ್ರಂ ಕೌಸ್ತುಭಾದಧಿಕಂ ಮಮ ॥ ೧೨॥

ಅಭಿನ್ನಪತ್ರಾ ತುಲಸೀ ಹೃದ್ಯಾ ಮಂಜರಿಸಂಯುತಾ ।
ಕ್ಷೀರೋದಾರ್ಣವಸಂಭೂತಾ ಪದ್ಮೈವೇಯಂ ಸದಾ ಮಮ ॥ ೧೩॥

ಅಕೃಷ್ಣಾಪ್ಯಥವಾ ಕೃಷ್ಣಾ ತುಲಸೀ ಮಮ ವಲ್ಲಭಾ ।
ಸಿತಾ ಚಾಪ್ಯಸಿತಾ ವಾಪಿ ದ್ವಾದಶೀ ವಲ್ಲಭಾ ಯಥಾ ॥ ೧೪॥

ಗೃಹೀತ್ವಾ ತುಲಸೀಪತ್ರಂ ಭಕ್ತ್ಯಾ ಯೋ ಮಾಂ ಸಮರ್ಚಯೇತ್ ।
ಅರ್ಚಿತಂ ತೇನ ಸಕಲಂ ಸದೇವಾಸುರಮಾನುಷಮ್ ॥ ೧೫॥

ತಾವದ್ಗರ್ಜಂತಿ ರತ್ನಾನಿ ಕೌಸ್ತುಭಾದೀನ್ಯನಂತಶಃ ।
ಯಾವನ್ನ ಪ್ರಾಪ್ಯತೇ ಕೃಷ್ಣಾ ತುಲಸೀ ಕೃಷ್ಣಮಂಜರೀ ॥ ೧೬॥

(ದೇವರಿಗೆ ಮೊದಲು ಹೂವುಗಳನ್ನು ಏರಿಸಿದಾಗ ಅವು ತುಲಸೀ ಪತ್ರವನ್ನು ಏರಿಸುವ ವರೆಗೆ ಗರ್ಜಿಸುತ್ತಿರುತ್ತವೆ. ತುಲಸೀ ಪತ್ರಗಳನ್ನು ಏರಿಸಿದಾಗ ಸಮಾಧಾನಗೊಂಡು ಶಾಂತವಾಗುತ್ತವೆ.) ॥ ೧೦॥ ಯಾವನು ಒಮ್ಮೆ ಮಾತ್ರ ಬಿಲ್ವಪತ್ರಗಳಿಂದ ನನ್ನನ್ನು ಭಕ್ತಿಪೂರ್ವಕ ಪೂಜಿಸುವನೋ ಅವನು ಯಾವ ಆತಂಕಗಳಿಲ್ಲದವನಾಗಿ ಮುಕ್ತಿಗೆ ಪಾತ್ರನಾಗುತ್ತಾನೆ. ಮತ್ತು ಮುಕ್ತಿಯಲ್ಲಿ ನನ್ನ ಪರಿವಾರದ ಸದಸ್ಯನಾಗುತ್ತಾನೆ. ॥೧೧॥ ಬಿಲ್ವಪತ್ರಗಳಿಗಿಂತಲೂ, ಶಮೀಪತ್ರಗಳಿಗಿಂತಲೂ, ಜಾತೀಪತ್ರಗಳಿಗಿಂತಲೂ, ಕಮಲಪತ್ರಗಳಿಗಿಂತಲೂ ಹಾಗೂ ಕೌಸ್ತುಭಮಣಿಗಿಂತಲೂ ತುಲಸೀ ಪತ್ರವು ನನಗೆ ಹೆಚ್ಚು ಪ್ರಿಯವಾಗಿದೆ. ॥೧೨॥ ಭಿನ್ನವಾಗದಿರುವ ಹಾಗೂ ಮಂಜರೀ ಸಹಿತವಾದ ತುಲಸೀ ಪತ್ರವು ಕ್ಷೀರ ಸಮುದ್ರದ ಮಥನ ಕಾಲದಲ್ಲಿ ಹುಟ್ಟಿದ ಪದ್ಮಾದಿಗಳಂತೆ ನನಗೆ ಸದಾ ಪ್ರಿಯವಾಗಿದೆ. ॥ ೧೩॥ ಶುಕ್ಲ ಪಕ್ಷದ ಅಥವಾ ಕೃಷ್ಣಪಕ್ಷದ ದ್ವಾದಶಿಯು ನನಗೆ ಪ್ರಿಯವಾಗಿರುವಂತೆ ಶ್ವೇತ ತುಳಸಿಯೇ ಆಗಲಿ ಅಥವಾ ಕೃಷ್ಣತುಳಸಿಯೇ ಆಗಲಿ ನನಗೆ ಯಾವಾಗಲೂ ಪ್ರಿಯವಾಗಿರುತ್ತದೆ. ॥ ೧೪॥ ಕೈಯಲ್ಲಿ ತುಳಸೀ ಪತ್ರವನ್ನು ಹಿಡಿದುಕೊಂಡು ಯಾರು ಭಕ್ತಿಯಿಂದ ನನಗೆ ಸಮರ್ಪಿಸಿ ಪೂಜಿಸುವರೋ ಅಂಥವರು ಸಕಲ ದೇವತೆಗಳನ್ನು, ಮನುಷ್ಯೋತ್ತಮರನ್ನು ಮುಂತಾದವರನ್ನು ಪೂಜಿಸಿದಂತೆ ಆಗುವದು. ॥ ೧೫॥ ಯಾವ ಕಾಲದವರೆಗೆ ಕೃಷ್ಣತುಳಸಿಯ ಮಂಜರಿಯು ಪ್ರಾಪ್ತವಾಗುವದಿಲ್ಲವೋ ಅಲ್ಲಿಯವರೆಗೆ ಕೌಸ್ತುಭ ಮೊದಲಾದ ಅನೇಕ ರತ್ನಗಳು ತಾವೇ ಶ್ರೇಷ್ಠವೆಂದು ಗರ್ಜನೆಯನ್ನು ಮಾಡುತ್ತಿರುತ್ತವೆ. ॥೧೬॥ ಯಾವನು ಕೃಷ್ಣ ತುಳಸಿಯಿಂದ ಭಕ್ತಿಪೂರ್ವಕ ಶ್ರೀಕೃಷ್ಣನ ಪೂಜೆಯನ್ನು ಮಾಡುವನೋ ಅವನು ಶ್ರೀಲಕ್ಷ್ಮಿಯಿಂದ

ಕೃಷ್ಣಂ ಕೃಷ್ಣತುಲಸ್ಯಾಹಿ ಯೋ ಭಕ್ತ್ಯಾ ಪೂಜಯೇನ್ನರಃ ।
ಸ ಯಾತಿ ಭುವನಂ ಶುಭ್ರಂ ಯತ್ರ ವಿಷ್ಣುಃ ಶ್ರಿಯಾ ಸಹ ॥ ೧೭॥

ಮಮಾರ್ಚನಾರ್ಥಂ ಭಿಕ್ಷೂಣಾಂ ಯಚ್ಛಂತಿ ತುಲಸೀದಲಮ್ ।
ಅನ್ಯೇಷಾಮಪಿ ಭಕ್ತಾನಾಂ ಯಾಂತಿ ತೇ ಪದಮವ್ಯಯಮ್ ॥ ೧೮॥

ತುಲಸೀ ಕೃಷ್ಣಗೌರಾ ಯಾ ಭಕ್ತ್ಯಾ ಯೋ ಮಾಂ ಸಮರ್ಚಯೇತ್ ।
ನರೋ ಯಾತಿ ತನುಂ ತ್ಯಕ್ತ್ವಾ ವೈಷ್ಣವೀಂ ಶಾಶ್ವತೀಂ ಗತಿಮ್ ॥ ೧೯॥

ಬ್ರಹ್ಮೋವಾಚ -
ಧೂಪದಾನಸ್ಯ ಮಾಹಾತ್ಮ್ಯಂ ದೀಪಸ್ಯಾಪಿ ಚ ಕೇಶವ ।
ಯತ್ಫಲಂ ಲಭತೇ ಮರ್ತ್ಯಃ ತನ್ಮೇ ಬ್ರೂಹಿ ಯಥಾರ್ಥತಃ ॥ ೨೦॥

ಶ್ರೀಭಗವಾನುವಾಚ -
ಶೃಣು ಪುತ್ರ ಪ್ರವಕ್ಷ್ಯಾಮಿ ಧೂಪದಾನಸ್ಯ ಯತ್ಫಲಂ ।
ದೀಪದಾನಸ್ಯ ಮಾಹಾತ್ಮ್ಯಂ ಮಮ ಪ್ರೀತಿಕರಂ ಪರಮ್ ॥ ೨೧॥

ಅಗುರುಂ ಚ ಸಕರ್ಪೂರಂ ದಿವ್ಯಚಂದನಸೌರಭಮ್ ।
ದತ್ವಾ ಮಾಂ ವೈ ಸಹೋಮಾಸೇ ಕುಲಾನಾಂ ತಾರಯೇಚ್ಛತಮ್॥ ೨೨॥

ಕೂಡಿಕೊಂಡಿರುವ ವಿಷ್ಣುವಿನ ವಾಸಸ್ಥಾನವಾದ ಶುಭ್ರವಾದ ವೈಕುಂಠವನ್ನು ಹೊಂದುವನು.॥ ೧೭॥ ಹೇ ಬ್ರಹ್ಮಾ! ನನ್ನ ಪೂಜೆಯನ್ನು ಮಾಡಲಿಚ್ಛಿಸುವ ಭಿಕ್ಷುಗಳಿಗೆ ಅಥವಾ ಇತರ ನನ್ನ ಭಕ್ತರಿಗೆ ನನ್ನ ಪೂಜಾರ್ಥವಾಗಿ ಯಾರು ತುಲಸೀ ದಲಗಳನ್ನು ತಂದು ಕೊಡುವರೋ ಅವರು ನಾಶರಹಿತವಾದ ನನ್ನ ಸ್ಥಾನವನ್ನು ಪಡೆಯುವರು. ॥ ೧೮॥ ಯಾವಾತನು ಕೃಷ್ಣ ಅಥವಾ ಶ್ವೇತ ತುಲಸಿಯಿಂದ ನನ್ನನ್ನು ಭಕ್ತಿಪೂರ್ವಕವಾಗಿ ಪೂಜಿಸುವನೋ ಅವನು ನಶ್ವರವಾದ ಮನುಷ್ಯ ದೇಹವನ್ನು ಬಿಟ್ಟು ಅವ್ಯಯವಾದ ವಿಷ್ಣುಲೋಕವನ್ನು ಹೊಂದುವನು. ॥೧೯॥ ಚತುರ್ಮುಖ ಬ್ರಹ್ಮನು ವಿಷ್ಣುವನ್ನು ಕುರಿತು- 'ಹೇ ಕೇಶವಾ! ಇನ್ನು ಮುಂದೆ ಧೂಪದಾನದ ಮತ್ತು ದೀಪದಾನದ ಮಹಾತ್ಮೆಯನ್ನು ಮತ್ತು ಆ ದಾನಗಳಿಂದ ದೊರೆಯುವ ಫಲವನ್ನು ಯಥಾವತ್ತಾಗಿ ತಿಳಿಸುವವನಾಗು' ಎಂದು ಪ್ರಾರ್ಥಿಸಲು ॥೨೦॥ ಶ್ರೀಭಗವಂತನು ಹೇಳುತ್ತಾನೆ - ಹೇ ವತ್ಸಾ! ನನಗೆ ಅತ್ಯಂತ ಪ್ರೀತಿಕರವಾದ ಧೂಪ ಹಾಗೂ ದೀಪ ದಾನಗಳ ಮಹಾತ್ಮೆಯನ್ನು ಮತ್ತು ಈ ದಾನಗಳಿಂದ ಲಭಿಸುವ ಫಲವನ್ನೂ ತಿಳಿಸುವೆನು ಕೇಳು. ॥ ೨೧॥ ಯಾವ ಭಕ್ತನು ಸುಗಂಧಯುತವಾದ ಚಂದನ, ಅಗುರು, ಕರ್ಪೂರ ಇವುಗಳನ್ನು ಮಿಶ್ರಣ ಮಾಡಿ ಮಾರ್ಗಶೀರ್ಷ ಮಾಸದಲ್ಲಿ ನನಗೆ ಧೂಪವನ್ನು ಅರ್ಪಿಸುವನೋ ಅವನು ತನ್ನ ಒಂದೂನೂರು ಕುಲಗಳನ್ನು ಉದ್ಧರಿಸುವನು ॥ ೨೨॥ ಯಾವ ವಿಷ್ಣು ಭಕ್ತನು

ಕೃಷ್ಣಾಗುರುಸಮುತ್ಥೇನ ಧೂಪೇನ ಚ ಮಮಾಲಯಮ್ ।
ಧೂಪಯೇದ್ವೈಷ್ಣವೋ ಯಸ್ತು ಸ ಮುಕ್ತೋ ನರಕಾರ್ಣವಾತ್ ॥ ೨೩॥

ಮಾಹಿಷಂ ಗುಗ್ಗುಲಂ ಯಸ್ತು ಆಜ್ಯಯುಕ್ತಂ ಸಶರ್ಕರಮ್ ।
ಧೂಪಂ ದದಾತಿ ಯೋ ವೈ ಮಾಂ ತಸ್ಯೇಚ್ಛಾಂ ಪ್ರದದಾಮ್ಯಹಮ್ ॥ ೨೪॥

ಗುಗ್ಗುಲೋ ಹಂತ್ಯಶೇಷಾಣಿ ಅರಿಷ್ಟಾನಿ ಚ ಧೂಪಿತಃ ।
ಕಾಮಾನ್ನಾನಾವಿಧಾಂಶ್ಚೈವ ಅಗುರುಃ ಸಂಪ್ರಯಚ್ಛತಿ ॥ ೨೫॥

ದೇಹಂ ಗೇಹಂ ಪುನಾತ್ಯೇವ ಧೂಪಸ್ತ್ವಗುರುಸಂಭವಃ ।
ನಾಶಯೇದ್ಯಕ್ಷರಕ್ಷಾಂಸಿ ಧೂಪಃ ಸರ್ವರಸೋದ್ಭವಃ ॥ ೨೬॥

ಜಾತಿಪುಷ್ಪಮಥೈಲಾ ಚ ಗುಗ್ಗುಲಶ್ಚ ಹರೀತಕೀ ।
ಕೂಟಃ ಸರ್ಜರಸಶ್ಚೈವ ಗುಡಸೇಲಾಭಡಸ್ತಥಾ ।
ನಖಯುಕ್ತಾನಿ ಚೈತಾನಿ ದಶಾಂಗೋ ಧೂಪ ಉಚ್ಯತೇ ॥ ೨೭॥

ಧೂಪಂ ದಶಾಂಗಂ ಯದಿಚೇತ್ಕರೋತಿ
ವೈ ಮಾಸೇ ಸಹೇ ಮೇ ಅತಿವಲ್ಲಭೇ ಚ ।
ದದಾಮಿ ಕಾಮಾನತಿದುರ್ಲಭಾಂಶ್ಚ
ಬಲಂ ಚ ಪುಷ್ಟಿಂ ಸುತದಾರಭಕ್ತಿಮ್ ॥ ೨೮॥

ಕೃಷ್ಣಾಗುರುವಿನಿಂದ ಮಾಡಿದ ಧೂಪದಿಂದ ನನ್ನ ಮಂದಿರವನ್ನು ಸುಗಂಧಯುತವಾಗಿ ಮಾಡುವನೋ ಅವನೆಂದಿಗೂ ನರಕವನ್ನು ಹೊಂದುವದಿಲ್ಲ. ॥ ೨೩॥ ಯಾವಾತನು ಶರ್ಕರಾ ಮತ್ತು ಘೃತ ಸಹಿತ ಮಾಹಿಷಗುಗ್ಗುಲವನ್ನು ನನಗೆ ಅರ್ಪಿಸುವನೋ ಅಂಥವನ ಇಚ್ಛಿತಾರ್ಥವನ್ನು ನಾನು ಪೂರ್ಣ ಮಾಡುವೆನು. ॥ ೨೪॥ ಗುಗ್ಗುಲದ ಧೂಪಾರತಿಯು ಅಶೇಷವಾದ ಅರಿಷ್ಟಗಳನ್ನು ನಾಶಪಡಿಸುತ್ತದೆ. ಮತ್ತು ನಾನಾ ವಿಧವಾದ ಕಾಮನೆಗಳನ್ನು ಪೂರೈಸುತ್ತದೆ. ॥ ೨೫॥ ಅಗರು ಚಂದನದಿಂದ ಹುಟ್ಟುವ ಧೂಪವು ದೇಹವನ್ನು ಹಾಗೂ ಗೃಹವನ್ನು ಪವಿತ್ರಗೊಳಿಸುತ್ತದೆ. ಸರ್ವರಸಗಳಿಂದ ಹುಟ್ಟುವ ಆ ಧೂಪವು ಅಲ್ಲಿರುವ ಯಕ್ಷ-ರಾಕ್ಷಸರನ್ನು ನಾಶಪಡಿಸುತ್ತದೆ. ॥ ೨೬॥ ಜಾತೀ ಪುಷ್ಪ, ಏಲಕ್ಕಿ, ಗುಗ್ಗುಲ, ಹರೀತಕೀ (ಅಣಲೇಕಾಯಿ), ಕೂಟ, ರಾಳ, (ಸರ್ಜರಸ), ಗುಡ, ಸೇಲಾ, ಭಡ ಮತ್ತು ನಖ ಈ ಹತ್ತು ದ್ರವ್ಯಗಳಿಂದ ಯುಕ್ತವಾದದ್ದು " ದಶಾಂಗ ಧೂಪ " ಎಂದು ಕರೆಯಲ್ಪಡುತ್ತದೆ. ॥ ೨೭॥ ನನಗೆ ಅತಿ ಪ್ರಿಯಕರವಾದ ಈ ಮಾಸದಲ್ಲಿ ಯಾರು ನನಗೆ ದಶಾಂಗದಿಂದ ಯುಕ್ತವಾದ ಧೂಪಾರತಿಯನ್ನು ಮಾಡುವರೋ ಅವರಿಗೆ ಅತಿ

ಮುಸ್ತಾಧೂಪೇ ಮಾನುಷಾಣಾಂ ಪ್ರಿಯತ್ವಂ
ಮಾಂಗಲ್ಯಂ ಕಂ ವಶ್ಯಕಾರಂ ಗುಡಸ್ಯ ।
ಕುರ್ಯಾತ್ಸಹೋಮಾಸಿ ಮಮಾಗ್ರತೋ ಯೋ
ವಿಹಾಯ ಪಾಪಾನಿ ಸ ಮಾಂ ಸಮಾಪ್ನುಯಾತ್ ॥ ೨೯॥

ನ ಭಯಂ ವಿದ್ಯತೇ ತಸ್ಯ ದಿವ್ಯಭೌಮಾಂತರಿಕ್ಷಜಮ್ ।
ಮಮ ಧೂಪಾವಶೇಷೇಣ ಯಸ್ಯಾಂಗಂ ಪರಿಮಾರ್ಜಿತಮ್ ॥ ೩೦॥

ನಾಪದೋ ವಿಪದಸ್ತಸ್ಯ ಭವಂತಿ ಖಲು ದೇಹಿನಃ ।
ಧೂಪೇ ಕೃತೇ ಸಹೋಮಾಸೇ ಮಮಾಗ್ರೇ ಶ್ರದ್ಧಯಾಽನಿಶಮ್ ॥ ೩೧॥

ಧೂಪಃ ಸುರೂಪತಾಂ ಧತ್ತೇ ಧೂಪಃ ಪಾವನಮುತ್ತಮಮ್ ।
ವಾನಸ್ಪತ್ಯೋ ರಸೋ ದಿವ್ಯಃ ಪರಮಃ ಪಾವನಃ ಶುಚಿಃ ॥ ೩೨॥

ಅತಃ ಪರಂ ಪ್ರವಕ್ಷ್ಯಾಮಿ ದೀಪಮಾಹಾತ್ಮ್ಯಮುತ್ತಮಮ್ ।
ಯಸ್ಮಿನ್ ಕೃತೇ ನರೋ ಯಾತಿ ವೈಕುಂಠಂ ನಾತ್ರ ಸಂಶಯಃ ॥ ೩೩॥

ದುರ್ಲಭವಾದ ಮನೋರಥಗಳನ್ನಲ್ಲದೇ ಬಲ, ಪುಷ್ಟಿ, ಹೆಂಡತಿ, ಮಕ್ಕಳು ಮುಂತಾದವುಗಳನ್ನು ಕೊಟ್ಟು ನನ್ನಲ್ಲಿ ದೃಢವಾದ ಭಕ್ತಿಯನ್ನು ಕೊಡುವೆನು. ॥ ೨೮॥ ಇನ್ನು ನನ್ನೆದುರು ಮುಸ್ತಾಧೂಪದಿಂದ ಆರತಿಯನ್ನು ಮಾಡುವವರು ಜೀವಿಸಿರುವವರೆಗೆ ಎಲ್ಲ ಜನರ ಸ್ನೇಹವನ್ನು ಸಂಪಾದಿಸಿ ಸಕಲ ಮಂಗಲಗಳನ್ನು ಪಡೆದು ಪಾಪಗಳನ್ನು ತ್ಯಜಿಸಿ ಮರಣಾನಂತರ ನನ್ನನ್ನು ಹೊಂದುವರು. ॥ ೨೯॥ ನನ್ನ ಧೂಪವಿಶೇಷದಿಂದ ಯಾವ ಮನುಷ್ಯನ ದೇಹವು ಪರಿಮಾರ್ಜಿಸಲ್ಪಟ್ಟಿರುವದೋ ಅಂಥವನಿಗೆ ಆಕಾಶ, ಭೂಮಿ, ಅಂತರಿಕ್ಷಗಳಿಂದ ಹುಟ್ಟಿಬರಬಹುದಾದ ಯಾವ ಭಯವೂ ಉಂಟಾಗಲಾರದು. ॥೩೦॥ ಈ ಮಾರ್ಗಶೀರ್ಷಮಾಸದಲ್ಲಿ ಯಾವಾತನು ಶ್ರದ್ಧಾಯುತನಾಗಿ ನನ್ನೆದುರು ಧೂಪಾರತಿಯನ್ನು ಮಾಡುವನೋ ಅಂಥವನಿಗೆ ಯಾವುದೇ ರೀತಿಯ ಆಪತ್ತುಗಳಾಗಲೀ ವಿಪತ್ತುಗಳಾಗಲೀ ಎಂದಿಗೂ ಬರಲಾರವು . ॥ ೩೧॥ ಶುದ್ಧವಾದ, ಪವಿತ್ರವಾದ, ವನಸ್ಪತಿಯ ರಸವಾದ ಶ್ರೇಷ್ಠ ಧೂಪವು ಉತ್ತಮ ರೂಪವನ್ನು ಕೊಡುತ್ತದೆ. ಆ ಧೂಪವು ಪರಮ ಪಾವನವಾಗಿರುತ್ತದೆ. ॥ ೩೨॥ ಹೇ ಬ್ರಹ್ಮಾ ! ಇನ್ನು ಮುಂದೆ ನಿನಗೆ ದೀಪದ ಶ್ರೇಷ್ಠವಾದ ಮಹಾತ್ಮೆಯನ್ನು ತಿಳಿಸುವೆನು. ದೀಪಾರತಿ, ದೀಪದಾನಾದಿಗಳನ್ನು ಮಾಡುವ ಮನುಷ್ಯನು ನಿಶ್ಚಯವಾಗಿ ವೈಕುಂಠಲೋಕವನ್ನು ಹೊಂದುವನು. ಈ ವಿಷಯದಲ್ಲಿ ಸಂಶಯವೇ ಇಲ್ಲ. ॥ ೩೩॥ ತುಪ್ಪದಲ್ಲಿ ತೋಯಿಸಿದ ಬಹು ಬತ್ತಿಗಳಿಂದ ಯುಕ್ತವಾದ ನಾನಾ ವಿಧವಾದ ಆರತಿಗಳನ್ನು ನನಗೆ ಬೆಳಗುವ ಮನುಷ್ಯನು ಕೋಟಿಕಲ್ಪಗಳವರೆಗೆ

ಬಹುವರ್ತಿಸಮಾಯುಕ್ತಂ ಘೃತಪೂರಸಮನ್ವಿತಮ್ ।
ಕುರ್ಯಾದಾರಾರ್ತಿಕಂ ಯೋ ವೈ ಕಲ್ಪಕೋಟಿವಸೇದ್ದಿವಿ ॥ ೩೪॥

ನೀರಾಜನಂ ತು ಯಃ ಪಶ್ಯೇತ್ಸಹೋಮಾಸೇ ಮಮಾಗ್ರತಃ ।
ಸಪ್ತಜನ್ಮ ಭವೇದ್ವಿಪ್ರೋ ಹ್ಯಂತೇ ಚ ಪರಮಂ ಪದಮ್ ॥ ೩೫॥

ಕರ್ಪೂರೇಣ ತು ಯಃ ಕುರ್ಯಾದ್ಭಕ್ತ್ಯಾ ಚೈವ ಮಮಾಗ್ರತಃ ।
ಆರಾರ್ತಿಕಂ ದ್ವಿಜಶ್ರೇಷ್ಠ ಪ್ರವಿಶೇನ್ಮಾಮನಂತಕಮ್ ॥ ೩೬॥

ಮಂತ್ರಹೀನಂ ಕ್ರಿಯಾಹೀನಂ ಯತ್ಕೃತಂ ಪೂಜನಂ ಮಮ ।
ಸರ್ವಂ ಸಂಪೂರ್ಣತಾಮೇತಿ ಕೃತೇ ನೀರಾಜನೇ ಸುತ ॥ ೩೭॥

ಯಃ ಕರೋತಿ ಸಹೋಮಾಸೇ ಕರ್ಪೂರೇಣಾಥ ದೀಪಕಮ್ ।
ಅಶ್ವಮೇಧಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥ ೩೮॥

ಮಮಾಗ್ರೇ ವೈ ದ್ವಿಜಾನಾಂ ಚ ದೀಪಂ ದದ್ಯಾತ್ ಚತುಷ್ಪಥೇ ।
ಮೇಧಾವೀ ಜ್ಞಾನಸಂಪನ್ನೋ ಚಕ್ಷುಷ್ಮಾನ್ ಜಾಯತೇ ನರಃ ॥ ೩೯॥

ಘೃತೇನ ವಾಥ ತೈಲೇನ ದೀಪಂ ಪ್ರಜ್ವಾಲಯೇತ್ ನರಃ ।
ಸಹೋಮಾಸೇ ಮಮಾಗ್ರೇ ಚ ತಸ್ಯ ಪುಣ್ಯಫಲಂ ಶ್ರುಣು ॥ ೪೦॥

ಸ್ವರ್ಗಲೋಕದಲ್ಲಿ ವಾಸಿಸುವನು. ॥ ೩೪॥ ಈ ಮಾಸದಲ್ಲಿ ನನ್ನೆದುರು ನೀರಾಜನವನ್ನು ಬೆಳಗುವವನು ಏಳು ಜನ್ಮಗಳಲ್ಲಿ ಬ್ರಾಹ್ಮಣನಾಗಿ ಹುಟ್ಟಿ ಕೊನೆಗೆ ಪರಮಲೋಕವನ್ನು ಪಡೆಯುವನು. ॥ ೩೫॥ ನನ್ನೆದುರು ಭಕ್ತಿಪೂರ್ವಕ ಕರ್ಪೂರದ ಆರತಿಯನ್ನು ಮಾಡುವವನು ಅನಂತನಾದ ನನ್ನನ್ನೇ ಹೊಂದುವನು. ॥ ೩೬॥ ಅಯ್ಯಾ ವತ್ಸಾ! ನನಗೆ ಮಾಡಿದ ಪೂಜೆಯು ಮಂತ್ರಹೀನವಾಗಿ ಹಾಗೂ ಕ್ರಿಯಾಹೀನವಾಗಿದ್ದರೂ ನೀರಾಜನಾರತಿ ಒಂದನ್ನು ಮಾಡುವುದರಿಂದ ಅದು ಪರಿಪೂರ್ಣವಾಗುತ್ತದೆ. ॥ ೩೭॥ ಯಾವನು ಮಾರ್ಗಶೀರ್ಷಮಾಸದಲ್ಲಿ ಕರ್ಪುರದಿಂದ ದೀಪವನ್ನು ಹಚ್ಚುವನೋ ಅವನು ಅಶ್ವಮೇಧಯಾಗ ಮಾಡುವುದರಿಂದ ಬರುವ ಫಲವನ್ನು ಪಡೆಯುವನಲ್ಲದೇ ತನ್ನ ಕುಲವನ್ನೂ ಉದ್ಧರಿಸುವನು. ॥ ೩೮॥ ನನ್ನ ಮಂದಿರದಲ್ಲಿ, ಬ್ರಾಹ್ಮಣರ ಮನೆಯಲ್ಲಿ ಹಾಗೂ ಚತುಷ್ಪಥದಲ್ಲಿ ದೀಪವನ್ನು ಹಚ್ಚುವ ಮನುಷ್ಯನು ಮರುಜನ್ಮದಲ್ಲಿ ಮೇಧಾವಿಯಾಗಿ, ಜ್ಞಾನಸಂಪನ್ನನಾಗಿ ಉತ್ತಮ ಅಂತರ್ದೃಷ್ಟಿಯುಳ್ಳವನಾಗಿ ಜನಿಸುವನು. ॥ ೩೯॥ ಈ ಮಾಸದಲ್ಲಿ ಯಾವನು ನನ್ನೆದುರು ತುಪ್ಪದ ಅಥವಾ ಎಣ್ಣೆಯ ದೀಪವನ್ನು ಹಚ್ಚುವನೋ ಅವನ ಪುಣ್ಯಫಲವನ್ನು ತಿಳಿಸುವೆನು ಕೇಳು. ॥೪೦॥ ಅವನು ಸಕಲ ಪಾಪವನ್ನು ತ್ಯಜಿಸಿ ಸಾವಿರಸೂರ್ಯರ ಕಾಂತಿಗೆ ಸಮನಾದ ಕಾಂತಿಯುಳ್ಳವನಾಗಿ,

ವಿಹಾಯ ಸಕಲಂ ಪಾಪಂ ಸಹಸ್ರಾದಿತ್ಯಸನ್ನಿಭಃ ।
ಜ್ಯೋತಿಷ್ಮತಾ ವಿಮಾನೇನ ಮಮ ಲೋಕೇ ಮಹೀಯತೇ ॥ ೪೧॥

ತಸ್ಮಾತ್ಸರ್ವಪ್ರಯತ್ನೇನ ದೀಪಂ ದದ್ಯಾದ್ವಿಚಕ್ಷಣಃ ।
ತಂ ಚ ದತ್ವಾ ವಿಹಿಂಸೇದ್ಯಃ ಸ ಪತೇನ್ನರಕೇ ಧ್ರುವಮ್ ॥ ೪೨॥

ದೀಪಂ ಯೋ ವೈ ಹರೇತ್ಪಾಪೋ ಲೋಭಾತ್‌ದ್ವೇಷಾತ್‌ದ್ವಿಜೋತ್ತಮಃ ।
ತದ್ದೀಪಹರಣಾತ್ಸೋಽಪಿ ಮೂಕೋಽಂಧೋ ಜಾಯತೇ ಭುವಿ ॥ ೪೩॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಅಷ್ಟಮೋಽಧ್ಯಾಯಃ ॥

ಶೋಭಾಯಮಾನವಾದ ವಿಮಾನದಲ್ಲಿ ಕುಳಿತು ನನ್ನ ಲೋಕವನ್ನು ಹೊಂದಿ ಅಲ್ಲಿ ವಿರಾಜಿಸುವನು. ॥ ೪೧॥ ಆದ್ದರಿಂದ ಬುದ್ಧಿವಂತನಾದವನು ಪ್ರಯತ್ನಪೂರ್ವಕ ಆಲಸ್ಯವಿಲ್ಲದೇ ದೀಪವನ್ನು ಹಚ್ಚಬೇಕು. ದೀಪವನ್ನು ಹಚ್ಚಿ ಮತ್ತೆ ಅದನ್ನು ಆರಿಸಿದರೆ ಅವನು ನಿಶ್ಚಯವಾಗಿ ನರಕದಲ್ಲಿ ಬೀಳುವನು. ॥ ೪೨॥ ಯಾವ ಬ್ರಾಹ್ಮಣನು ಬೇರೊಬ್ಬರು ಹಚ್ಚಿಟ್ಟ ದೀಪವನ್ನು ಲೋಭದಿಂದಾಗಲೀ, ದ್ವೇಷದಿಂದಾಗಲೀ, ಅಪಹರಿಸುವನೋ ಪಾಪಿಷ್ಠನಾದ ಅವನು ಜನ್ಮಾಂತರದಲ್ಲಿ ಮೂಕನೂ ಅಂಧನೂ ಆಗಿ ಭೂಮಿಯಲ್ಲಿ ಹುಟ್ಟುವನು. ॥ ೪೩॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಮಾರ್ಗಶೀರ್ಷಮಾಸಮಹಾತ್ಮೆಯಲ್ಲಿ ಬ್ರಹ್ಮವಿಷ್ಣು ಸಂವಾದದಲ್ಲಿ "ತುಳಸೀ ಧೂಪ ದೀಪ ಮಹಿಮೆ" ಎಂಬ ಎಂಟನೆಯ ಅಧ್ಯಾಯವು ಸಮಾಪ್ತವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೯
'ನೈವೇದ್ಯವಿಧಿ ವರ್ಣನೆ'

★

ಬ್ರಹ್ಮೋವಾಚ -
ನೈವೇದ್ಯಸ್ಯ ವಿಧಿಂ ದೇವ ಬ್ರೂಹಿ ಮೇ ತತ್ವತಃ ಪ್ರಭೋ ।
ಅನ್ನಂ ಕತಿವಿಧಂ ಚೇಷ್ಟಂ ವ್ಯಂಜನಾದೀನ್ಯಶೇಷತಃ ॥ ೧॥
ಶ್ರೀಭಗವಾನುವಾಚ -
ಸಾಧು ಪೃಷ್ಟಂ ತ್ವಯಾ ವತ್ಸ ಮಮ ಪ್ರೀತಿಕರಂ ಪರಮ್ ।
ವಕ್ಷ್ಯಾಮಿ ತೇಽನ್ನಪಾನಾದಿವ್ಯಂಜನಾದೀನ್ಯಶೇಷತಃ ॥ ೨॥
ಆದೌ ಹಿರಣ್ಮಯಂ ಪಾತ್ರಂ ತದಭಾವೇ ಚ ರಾಜತಮ್ ।
ತದಭಾವೇ ಚ ಪಾಲಾಶಂ ವಿಸ್ತೀರ್ಣಂ ಬಹು ಸುಂದರಮ್ ॥ ೩॥
ಕಚೋಲಾಃ ಶತಶಃ ಕಾರ್ಯಾಃ ಪಾತ್ರೇ ವೈ ಪರಿತೋಽನಘ ।
ತನ್ಮಧ್ಯೇ ವ್ಯಂಜನಾ ದೇಯಾ ನಾನಾ ಫಲಮಯಾಃ ಶುಭಾಃ ॥ ೪॥
ಪಾಯಸಂ ಚಂದ್ರಸಂಕಾಶಂ ಪಾತ್ರೇ ಶರ್ಕರಯಾ ಯುತಮ್ ।
ಭಕ್ಷ್ಯಂ ಕುಮುದವರ್ಣಾಭಂ ಮುದ್ಗಾನ್ ಕಾಂಚನಸನ್ನಿಭಾನ್ ॥ ೫॥

'ಹೇ ಪ್ರಭೋ, ದೇವದೇವಾ ! ನಿನಗೆ ಎಷ್ಟು ಪ್ರಕಾರದ ಅನ್ನಗಳು ಹಾಗೂ ವ್ಯಂಜನಾದಿಗಳು ಪ್ರಿಯವಾಗಿವೆ ಎಂಬುದನ್ನು ಹಾಗೂ ಇಷ್ಟವಾದ ಈ ಪದಾರ್ಥಗಳನ್ನು ನಿನಗೆ ನಿವೇದಿಸುವ ವಿಧಿಯನ್ನು ನನಗೆ ತಿಳಿಸಿ ಅನುಗ್ರಹಿಸು' ಎಂದು ಚತುರ್ಮುಖ ಬ್ರಹ್ಮನು ಪ್ರಾರ್ಥಿಸಲು, ॥ ೧॥ ಶ್ರೀಹರಿಯು ಹೇಳುತ್ತಾನೆ - ' ಹೇ ವತ್ಸಾ ! ನೀನು ಒಳ್ಳೆಯ ಪ್ರಶ್ನೆಯನ್ನು ಮಾಡಿರುವಿ. ನನಗೆ ಪ್ರಿಯವಾದ ಅನ್ನಪಾನಾದಿಗಳನ್ನು ಹಾಗೂ ವ್ಯಂಜನಾದಿಗಳನ್ನು ನಿನಗೀಗ ಸಂಪೂರ್ಣವಾಗಿ ತಿಳಿಸುವೆನು. ॥ ೨॥ ಹೇ ಅನಘಾ! ಮೊದಲು ವಿಸ್ತೀರ್ಣವಾದ, ಬಹುಸುಂದರವಾದ ಒಂದು ಬಂಗಾರದ ಪಾತ್ರೆಯನ್ನು ಶುದ್ಧಮಾಡಿಟ್ಟುಕೊಳ್ಳಬೇಕು. ಇದು ಸಾಧ್ಯವಾಗದಿದ್ದರೆ ಒಂದು ಬೆಳ್ಳಿಯ ಪಾತ್ರೆಯನ್ನಾಗಲೀ ಅದೂ ಆಗದಿದ್ದರೆ ಒಂದು ಮುತ್ತಲ ಎಲೆಯನ್ನಾದರೂ ಸಿದ್ಧಪಡಿಸಿ ಇಟ್ಟುಕೊಳ್ಳಬೇಕು. ॥ ೩॥ ಈ ಪಾತ್ರೆಯಲ್ಲಿ ಸುತ್ತಲೂ ಅನೇಕ ದೊನ್ನೆಗಳನ್ನು ಇಟ್ಟು ಅವುಗಳಲ್ಲಿ ನಾನಾ ವಿಧವಾದ ಫಲಗಳಿಂದ ಹಾಗೂ ಶಾಕಗಳಿಂದ ತಯಾರಿಸಿದ ಕೋಸಂಬರೀ ಮೊದಲಾದ ಒಳ್ಳೆಯ ವ್ಯಂಜನಪದಾರ್ಥಗಳನ್ನು ಹಾಕಬೇಕು. ॥ ೪॥ ಪಾತ್ರೆಯಲ್ಲಿ ಬೆಳದಿಂಗಳಂತೆ ಶುಭ್ರವಾದ ಸಕ್ಕರೆಯ ಪಾಯಸವನ್ನು ಬಡಿಸಬೇಕು ಹಾಗೂ

ನಾನಾ ವ್ಯಂಜನಸಂರುದ್ಧಂ ತ್ರಿಭಿಃ ಪಂಕ್ತಿಭಿರೇವ ಚ ।
ನಿಂಬೂರಸೇನ ಚಂದ್ರೇಣ ಫಲಮೂಲಯುತೇನ ಚ
ವೈಕೃತಾಶ್ಚ ತದಾ ಕಾರ್ಯಾಃ ಶತಶೋ ಭೋಜನೇ ಮಮ ॥ ೬॥

ದ್ರಾಕ್ಷಾಸ್ತು ಮಿಶ್ರಿತಾಶ್ಚೂತ ಕರಮರ್ದಕೃತಾಃ ಶುಭಾಃ ।
ಮರೀಚ ಪಿಪ್ಪಲೀಸಾರ್ದ್ರಕೈಲಾ ಚಂದ್ರಕಸಂಯುತಾಃ ॥ ೭॥

ಕ್ವಾಥಿತಾಃ ಕಥಿಕಾಃ ಕಾರ್ಯಾ ಭೋಜನೇ ಭೂರಿಶೋ ಮಮ ।
ಪ್ರಲೇಹನಾಸ್ತಥಾ ಕಾರ್ಯಾಃ ಕಚೋಲಶತಸಂಯುತಾಃ ॥ ೮॥

ನಾನಾಕುಸುಮಸಂಮೋದಯುಕ್ತಾಃ ಸಹಸಿ ಮೇ ಪ್ರಿಯಾಃ ।
ಮಂಡಕಾ ವರ್ತುಲಾ ರಮ್ಯಾಃ ಸಮಾಃ ಸರ್ವತ್ರ ಬಿಂದುವತ್ ॥ ೯॥

ಸಿತಯಾ ಸಹಿತೇನಾಥ ದುಗ್ಧೇನ ಕ್ವಥಿತೇನ ಚ ।
ಮಧುವರ್ಣೇನ ಗವ್ಯೇನ ಯುಕ್ತೇ ತಸ್ಮಿನ್ ಸುಭೋಜನೇ ॥ ೧೦॥

ಕಚೋಲೇ ಶುಭ್ರಕೇ ವತ್ಸ ಸ್ಥಿತಂ ಕಾಂಚನಸುಪ್ರಭಮ್ ।
ಘೃತಂ ಸುವಾಸಿತಂ ಪ್ರೀತ್ಯಾ ಪ್ರದೇಯಂ ಮಮ ಭೋಜನೇ ॥ ೧೧॥

ಕುಮುದವರ್ಣದಂತೆ ಶೋಭಿಸುವ ಭಕ್ಷ್ಯವನ್ನು, ಕಾಂಚನದಂತೆ ಶೋಭಿಸುವ ಮುದ್ಗವನ್ನು ಬಡಿಸಬೇಕು. ॥ ೫॥ ನಾನಾ ವ್ಯಂಜನ ಪದಾರ್ಥಗಳನ್ನು ಪಾತ್ರೆಯಲ್ಲಿ ಮೂರು ಪಂಕ್ತಿ ಮಾಡಿ ಬಡಿಸಬೇಕು. ಈ ರೀತಿಯಾಗಿ ನನಗೆ ನಿಂಬೇರಸ ಹಾಗೂ ನಾನಾವಿಧವಾದ ಫಲಮೂಲಗಳಿಂದ ತಯಾರಿಸಿದ ನೂರಾರು ಪದಾರ್ಥಗಳನ್ನು ॥೬॥ ರುಚಿಕರವಾದ ದ್ರಾಕ್ಷಾಗಳಿಂದ ಕೂಡಿದ, ಮಾವಿನ ಹಣ್ಣಿನಶೀಕರಣೆ, ಕವಳಿಕಾಯಿಯಿಂದ ತಯಾರಿಸಿದ ಉಪ್ಪಿನಕಾಯಿ ಮೊದಲಾದ ಒಳ್ಳೆಯ ವ್ಯಂಜನ ಪದಾರ್ಥಗಳು ಮುಂತಾದವುಗಳನ್ನು ನನ್ನ ಭೋಜನದಲ್ಲಿಡಬೇಕು ಹಾಗೂ ಮೆಣಸು, ಹಿಪ್ಪಲೀ, ಏಲಕ್ಕಿ , ಮೆಣಸಿನಕಾಯಿ ಇವುಗಳನ್ನು ಹಾಕಿ ತಯಾರಿಸಿದ ಸಾರು ಮೊದಲಾದವುಗಳನ್ನೂ ಪಾತ್ರೆಯಲ್ಲಿಡಬೇಕು . ॥ ೭॥ ೮॥ ನನಗೆ ಪ್ರಿಯವಾದ ವಿವಿಧ ಪುಷ್ಪಗಳು ಹಾಗೂ ಚಿಗುರುಗಳಿಂದ ತಯಾರಿಸಿದ ಸುಗಂಧಯುಕ್ತವಾದ ರಸ ಮೊದಲಾದ ಪದಾರ್ಥಗಳನ್ನು ಬಡಿಸಬೇಕು. ಪೂರ್ಣಚಂದ್ರಬಿಂಬದಂತೆ ಸರ್ವತ್ರ ಸಮಾನವಾಗಿ ವರ್ತುಲಾಕಾರದಲ್ಲಿರುವ ॥ ೯॥ ಹಾಲಿನಲ್ಲಿ ಬೇಯಿಸಿದ ಸಕ್ಕರೆಯ ಸಿಹಿ ವಡಿಗಳನ್ನು ತಯಾರಿಸಿಡಬೇಕು. ಹೇ ಬ್ರಹ್ಮಾ! ಆಕಳ ಹಾಲು, ಮೊಸರುಗಳನ್ನು ಬಡಿಸಿ ॥ ೧೦॥ ಸುವರ್ಣ ಕಾಂತಿಯಂತೆ ಪ್ರಕಾಶಿಸುವ ದೊನ್ನೆಗಳಲ್ಲಿರುವ, ಪೂರ್ಣಚಂದ್ರನ ಪ್ರಕಾಶದಂತೆ ಕಂಗೊಳಿಸುವ ಸುವಾಸಿತ ಗೋಘೃತವನ್ನು ನನ್ನ ಭೋಜನಕ್ಕಾಗಿ ಪಾತ್ರೆಯಲ್ಲಿ ಭಕ್ತಿಯಿಂದ ಸಮರ್ಪಿಸಬೇಕು. ॥ ೧೧॥ ಅನಂತರ

ತತೋ ಗೋಧೂಮಪಿಷ್ಟೇನ ಚಂದ್ರಕೇಣ ಹಿ ಸೋಜ್ಜ್ವಲಮ್ ।
ಸೌಬಾಹ್ಲಿಕಾಃ ಪೂರಿಕಾಸ್ತು ಶತಛಿದ್ರಾಸ್ತು ವೇಷ್ಟಿತಾಃ ॥ ೧೨॥

ಅಪೂಪಾಶ್ಚ ತಥಾ ಕ್ಷೀರಪ್ರಕಾರಾಂಸ್ತು ಪ್ರಕಾರಯೇತ್ ।
ಮಣಯಃ ಸೂತ್ರಸಂಘಾಶ್ಚ ಮಾಲತೀಕುಸುಮಾದಯಃ ॥ ೧೩॥

ಪರ್ಪಟಾ ವರ್ಪಟಾ ರಮ್ಯಾ ಮಾಷಕೂಷ್ಮಾಂಡಸಂಯುತಾಃ ।
ವಟಕಾನ್ವಿವಿಧಾನ್ ರಮ್ಯಾನ್ ಕುರ್ಯಾತ್ ಮಾಸೇ ಸಹೇ ಮಮ ॥ ೧೪॥

ದ್ವಿಧಾಜಾತೀಮರೀಚೈಶ್ಚ ಪೂರಿತಾ ದ್ರೋಣಕೇ ಶುಭಾಃ ।
ಯುಕ್ತೇನ ಲವಣೇನಾತಿಶುದ್ಧತೈಲೇನ ಪೂರಿತಾಃ ॥ ೧೫॥

ಕುಂಕುಮಾಭಾಃ ಸ್ನೇಹಹೀನಾಃ ಸಕ್ಷತಾ ಇವ ದುರ್ಜನಾಃ ।
ದಧಿದುಗ್ಧಯುತಾಃ ಕೇಚಿಚ್ಚಿಂಚಿಣೀಚೂತಸಂಭವಾಃ ॥ ೧೬॥

ದ್ರಾಕ್ಷಾರಸಯುತಾಃ ಕೇಚಿತ್ತಥಾನ್ಯೇಕ್ಷುರಸೈರ್ಯುತಾಃ ।
ರಾಜಿಕಾಜಲಮಧ್ಯಸ್ಥಾಸ್ತಥಾನ್ಯೇ ಸಿತಯಾ ಸಹ ॥ ೧೭॥

ರಸೈಶ್ಚತುರ್ಭಿರ್ವಾಪ್ಯನ್ಯೇ ವಟಕಾ ನವಧಾ ಮತಾಃ ।
ವಜ್ರಪ್ರಭಾನುಕಣಿಕಾಚಾರುಬೀಜಸುಖಾರಿಕೈಃ ॥ ೧೮॥

ಗೋದಿಯ ಹಿಟ್ಟಿನಿಂದ ಪುರಿಗಳನ್ನು, ಶತಛಿದ್ರಗಳಿಂದ ಕೂಡಿದ ಪದರು ಫೇಣಿ, ಶಾವಿಗೆ ಫೇಣಿ ಮುಂತಾದವುಗಳನ್ನು ಮಾಡಬೇಕು. ॥೧೨॥ ಈ ಮಾಸದಲ್ಲಿ ನನ್ನ ಪ್ರೀತ್ಯರ್ಥವಾಗಿ ಅನಾರಸಗಳನ್ನು, ಹಾಲಿನ ವಿವಿಧ ಪೇಯಗಳನ್ನು, ಉದ್ದು ಮತ್ತು ಸಂಡಿಗೆ ಕುಂಬಳಕಾಯಿಗಳಿಂದ ವಿವಿಧ ಪ್ರಕಾರದ ಹಪ್ಪಳ ಹಾಗೂ ಸಂಡಿಗೆಗಳನ್ನು ಹಾಗೂ ನಾನಾ ಪ್ರಕಾರದ ಮನೋಹರವಾದ ವಡಿಗಳನ್ನು ಮಾಡಿ ಸಮರ್ಪಿಸಬೇಕು. ॥ ೧೩॥ ೧೪॥ ಜಾಜೀಕಾಯಿ ಪುಡಿ, ಮೆಣಸಿನ ಪುಡಿ, ಉಪ್ಪು ಮೊದಲಾದ ಮಸಾಲೆ ಸಾಮಾನುಗಳನ್ನು ತುಂಬಿ ಶುದ್ಧ ಎಣ್ಣೆಯಲ್ಲಿ ಕರಿದು ತಯಾರಿಸಿದ ವಡಿಗಳು, ಕುಂಕುಮ ವರ್ಣದಂತೆ ಕೆಂಬಣ್ಣವುಳ್ಳ ಎಣ್ಣೆಯಿಲ್ಲದೆ ತಯಾರಿಸಿದ ವಡಿಗಳು, ಕೇವಲ ಮೊಸರು ಹಾಕಿ ತಯಾರಿಸಿದ ಕೆಲವು ವಡಿಗಳು, ಹುಣಸಿಹಣ್ಣು, ಮಾವಿನಹಣ್ಣುಗಳನ್ನು ಉಪಯೋಗಿಸಿ ತಯಾರಿಸಿದ ವಡಿಗಳು ॥೧೫॥೧೬॥ ದ್ರಾಕ್ಷಾರಸದಿಂದ ಕೂಡಿದ ಕೆಲ ವಡಿಗಳು, ಇನ್ನು ಕೆಲವು ಕಬ್ಬಿನ ರಸದೊಳಗೆ ತಯಾರಿಸಿದ ವಡಿಗಳು, ಕರಿಸಾಸಿವೆಯನ್ನು ನೀರೊಳಗೆ ಬೇಯಿಸಿ ತಯಾರಿಸಿದ ಕೆಲ ವಡಿಗಳು, ಸಕ್ಕರೆಯಿಂದ ಕೂಡಿದ ॥೧೭॥ ಮತ್ತು ಚತುರ್ವಿಧ ರಸಗಳಿಂದ ಕೂಡಿದ ವಡಿಗಳು ಈ ರೀತಿ ಪ್ರಸಿದ್ಧವಾಗಿರುವ ಒಂಭತ್ತು ಪ್ರಕಾರದ ವಡಿಗಳನ್ನು ಮಾಡಿ ಸಮರ್ಪಿಸಬೇಕು. ವಜ್ರಪ್ರಭೆಗೆ ಸಮಾನವಾದ ಮತ್ತು ಉತ್ತತ್ತಿ ॥ ೧೮॥ ಖೊಬ್ಬರಿ,

ಶಕಲೈರ್ನಾರಿಕೇಲಸ್ಯ ಲವಂಗಶತಸಂಯುತಾಃ ।
ಘೃತಕ್ಷೀರಸಿತಾದ್ಯಾಸ್ತಾಃ ಕಟಾಹೇ ಸುಪ್ರಲೋಡಿತಾಃ ॥ ೧೯॥

ಲಬ್ಧಾಸಿತಾದಿಕೃಸರರಮ್ಯಾಃ ಸ್ನಿಗ್ಧಾಶ್ಚ ಫೇಣಿಕಾಃ ।
ಪರಾಕಿಕಾಸು ವೈ ಪಕ್ವಾಃ ಕೃತಾಶ್ಚಂದ್ರೇಣ ಪೋಲಿಕಾಃ ॥ ೨೦॥

ಮೋದಕಾಸ್ತತ್ರ ವೈ ಕಾರ್ಯಾ ಚಾರುಬೀಜಭವಾಃ ಪರೇ ।
ಸಿತಯಾ ಸಹಿತಾಃ ಕಾರ್ಯಾ ಅನ್ಯೇ ದುಗ್ಧೇನ ನಿರ್ಮಿತಾಃ ॥ ೨೧॥

ನಾರಿಕೇಲಫಲೈಶ್ಚಾನ್ಯೇ ವೃಕ್ಷನಿರ್ಯಾಸನಿರ್ಮಿತಾಃ ।
ಬಾದಾಮೈಶ್ಚ ಶುಭಾಶ್ಚಾನ್ಯೇ ತಿಲೈಶ್ಚ ಕಣಬೀಜಕೈಃ ॥ ೨೨॥

ಈದೃಶಾನ್ ಮೋದಕಾಂಶ್ಚಾನ್ಯಾನ್ ತುಷ್ಟ್ಯರ್ಥಂ ಮಮ ಕಾರಯೇತ್ ।
ಅರ್ಶೋಘ್ನಂ ಮೋಚನೀಕಂದಂ ತಥಾದ್ರ್ರಂ ಕರಮರ್ದಕಮ್ ॥ ೨೩॥

ನಾರಂಗಂ ಚಿಂಚಿಣೀಕಂಚ ಕಂಕೋಲೀಫಲಮೇವ ಚ ।
ದಶಾರಂ ತ್ರಿಪುರೀಜಾತಂ ಶುಭಂ ನಿಂಬುಫಲಂ ಬಿಸಮ್ ॥ ೨೪॥

ದ್ರಾಕ್ಷಾಫಲಂ ಚೂತಫಲಂ ರಮ್ಯಂ ಕಂಟಕಿನೀಫಲಮ್ ।
ಧಾತ್ರೀಫಲಂ ಶುಕ್ತಿಭವಂ ಫಲಮಂಬಾಡವಂ ತಥಾ ॥ ೨೫॥

ನೂರು ಲವಂಗ ಇವುಗಳನ್ನು ಹಾಕಿ ನಂತರ, ಹಾಲು, ಸಕ್ಕರಿ ಸೇರಿಸಿ ಕಡಾಯಿಯೊಳಗೆ ತಿರುವಿ ಬೇಯಿಸಿ ತಯಾರಿಸಿದ ಹೋಳಿಗೆಗಳು ॥ ೧೯॥ ಸಕ್ಕರೆ ಮೊದಲಾದವುಗಳನ್ನು ಸೇರಿಸಿ ಮಾಡಿದ ವಿವಿಧ ಪರಮಾನ್ನಗಳು, ಪದರಫೇಣಿಗಳು, ಉಗುರುಗಳಿಂದ ಮಾಡಿದ ಡೊಂಕಾಕೃತಿಯುಳ್ಳ ಚೆನ್ನಾಗಿ ಬೇಯಿಸಿದ ಸುರುಳಿ ಹೋಳಿಗೆಗಳು, ಇವುಗಳನ್ನು ಮಾಡಬೇಕು ॥ ೨೦॥ ಹಾಗೂ ಚಾರುಬೀಜಗಳಿಂದ ಯುಕ್ತವಾದ ಮೋದಕಗಳನ್ನು ತಯಾರಿಸಬೇಕು. ಕೆಲವು ಮೋದಕಗಳನ್ನು ಸಕ್ಕರೆಯಿಂದ ಹಾಲಿನೊಳಗೆ ತಯಾರಿಸಬೇಕು. ॥ ೨೧॥ ಇನ್ನು ಕೆಲವು ಮೋದಕಗಳನ್ನು ಕೊಬ್ಬರಿಯಿಂದ, ಕೆಲವನ್ನು ಗಿಡದ ಅಂಟನಿಂದ, ಕೆಲವನ್ನು ಬಾದಾಮಿ ಬೀಜಗಳಿಂದ, ಕೆಲವು ಮೋದಕಗಳನ್ನು ಎಳ್ಳು ಹಾಗೂ ಕಣಬೀಜಗಳಿಂದ ತಯಾರಿಸಬೇಕು. ॥ ೨೨॥ ಈ ರೀತಿ ನಾನಾ ಪ್ರಕಾರದ ಮೋದಕಗಳನ್ನು ನನ್ನ ಪ್ರೀತ್ಯರ್ಥವಾಗಿ ಹಾಗೂ ನನ್ನ ಅನುಗ್ರಹ ಸಂಪಾದನೆಗಾಗಿ ತಯಾರಿಸಿ ಸಮರ್ಪಿಸಬೇಕು. ಸುವರ್ಣಗಡ್ಡಿ, ಬೂರಲಗಡ್ಡಿ, ಶುಂಠಿ, ಕವಳೀಕಾಯಿ ॥ ೨೩॥ ಕಿತ್ತಳೆಹಣ್ಣು, ಹುಣಸೀಹಣ್ಣು, ಕಂಕೋಲಿ ಫಲ, ಕಮಲಕಂದ, ಒಳ್ಳೆಯ ನಿಂಬೇಹಣ್ಣು, ಬೋರೀಹಣ್ಣು ॥ ೨೪॥ ದ್ರಾಕ್ಷೆ, ಮಾವಿನಹಣ್ಣು, ಸವತೀಕಾಯಿ, ನೆಲ್ಲೀಕಾಯಿ,

ರಂಭಾಫಲಂ ಪಿಪ್ಪಲೀಶ್ಚ ಮರೀಚಾಶ್ಚ ಮನೋಹರಾಃ ।
ಶುದ್ಧಸರ್ಷಪತ್ಯೈಲೇನ ಲವಣೇನ ಸುವೇಧಿತಮ್ ॥ ೨೬॥

ತಥಾ ರಾಜಿಕಯಾ ವಿದ್ಧಂ ತ್ರಿಭಿರ್ವರ್ಷೈರ್ಘಟೇ ಸ್ಥಿತಮ್ ।
ಏವಂವಿಧಾನಿ ಜಾತಾನಿ ವ್ಯಂಜನಾನಿ ಚ ಮಾನದ ॥ ೨೭॥

ಕರ್ತವ್ಯಾನಿ ಸಹೋಮಾಸೇ ಮಮ ಪ್ರೀತಿಕರಾಣಿ ವೈ ।
ಏತಾದೃಶೇ ಭೋಜನೇ ಚೇದಸಾಮರ್ಥ್ಯಂ ಭವೇದ್ಯದಿ ॥ ೨೮॥

ಏವಂ ಕಾರ್ಯಂ ತದಾ ತೇನ ಸಂಕ್ಷೇಪೇಣ ಶೃಣುಷ್ವ ಮೇ ।
ಲಡ್ಡೂಕಮೇಕಂ ಘೃತಪೂರಮೇಕಂ ಫೇನದ್ವಯಂ ಕೋಕರಸತ್ರಯಂ ಚ ।
ಘೃತಪ್ಲುತಂ ಮಂಡಕಷೋಡಶಾನಾಂ ವಟಾಷ್ಟದಾಯೀ ನರಕಂ ನ ಪಶ್ಯೇತ್
॥೨೯॥

ಅರ್ಧಾರ್ಧಕಂ ಸುಚಿರಪರ್ಯುಷಿತಂ ಚ ದುಗ್ಧಂ
ಖಂಡಸ್ಯ ಷೋಡಶಪಲಾನಿ ಶಶಿಪ್ರಭಸ್ಯ ।
ಸರ್ಪಿಷ್ಪಲಂ ಮಧುಪಲಂ ಮರಿಚಂ ದ್ವಿಕರ್ಷಂ
ಶುಂಠ್ಯಾಃ ಪಲಾರ್ಧಮಥವಾರ್ಧಪಲಂ ಚತುರ್ಣಾಮ್ ॥ ೩೦॥

ಅಂಬಟೇಕಾಯಿ, ಬಾಳೇಹಣ್ಣು. ॥ ೨೫॥ ಹಿಪ್ಪಲೀ, ಮೆಣಸು, ಮೊದಲಾದ ಮನೋಹರವಾದ ಪದಾರ್ಥಗಳನ್ನು ಶುದ್ಧವಾದ ಸಾಸಿವೆಯ ಎಣ್ಣೆಯಲ್ಲಿ ಉಪ್ಪಿನೊಂದಿಗೆ ಹಾಕಿ ಕಲಸಿ ॥ ೨೬॥ ಕೇರಸಾಸಿವೆಯನ್ನು ಸೇರಿಸಿ ಭರಣಿಗಳಲ್ಲಿ ಹಾಕಿ ಮೂರು ವರ್ಷಗಳವರೆಗೆ ಗಟ್ಟಿಯಾಗಿ ಬಾಯಿ ಬಿಗಿದು ಕಟ್ಟಿ ನಂತರ ಹೊರತೆಗೆದ ಉಪ್ಪಿನಕಾಯಿ ಮೊದಲಾದ ವ್ಯಂಜನ ಪದಾರ್ಥಗಳನ್ನೂ ನನಗೆ ಸಮರ್ಪಿಸಬೇಕು. ಈ ಪ್ರಕಾರದ ವಿವಿಧ ಭಕ್ಷಭೋಜ್ಯಗಳು ಹಾಗೂ ವ್ಯಂಜನ ಪದಾರ್ಥಗಳ ಸಮರ್ಪಣೆಯು ॥ ೨೭॥ ಈ ಮಾರ್ಗಶೀರ್ಷ ಮಾಸದಲ್ಲಿ ನನ್ನ ಪ್ರೀತಿಯನ್ನು ಸಂಪಾದಿಸಲು ಸಮರ್ಥವಾಗುವವು . ಇದುವರೆಗೆ ತಿಳಿಸಿದ ಪದಾರ್ಥಗಳನ್ನು ನೈವೇದ್ಯಕ್ಕೆ ಮಾಡಲು ಸಾಧ್ಯವಾಗದಿದ್ದರೆ ॥ ೨೮॥ ಸಂಕ್ಷೇಪದಿಂದ ಏನು ಮಾಡಬೇಕೆಂಬುದನ್ನು ಸ್ವಲ್ಪದರಲ್ಲಿ ತಿಳಿಸುವೆನು ಕೇಳು - ಒಂದು ಉಂಡಿ, ಘೃತಯುಕ್ತವಾದ ಒಂದು ಪುರಿ, ಎರಡು ಪದರು ಫೇಣಿ, ಖರ್ಜೂರದಿಂದ ತಯಾರಿಸಿದ ಮೂರು ರಸಗಳು, ತುಪ್ಪದಲ್ಲಿ ಮಾಡಿದ ಹದಿನಾರು ಮಂಡಿಗೆಗಳು ಮತ್ತು ಎಂಟು ವಡಿಗಳು ಇವುಗಳನ್ನು ತಯಾರಿಸಿ ನನಗೆ ಸಮರ್ಪಿಸುವವನು ನರಕವನ್ನು ಕಾಣಲಾರನು. ॥ ೨೯॥ ಚೆನ್ನಾಗಿ ಮರಳಿಸಿ ಉಳಿದ ನಾಲ್ಕು ಪಾವು ಹಾಲು, ಹದಿನಾರು ತೊಲಿ ಬೆಲ್ಲ, ೪೦ ಮಾಸಿ ಘೃತ, ೪೦ ಮಾಸಿ ಜೇನುತುಪ್ಪ, ಮೆಣಸು,

ಶ್ಲಕ್ಷ್ಣೇ ಪಟೇ ಲಲನಯಾ ಮೃದುಪಾಣಿಘೃಷ್ಟಾ
ಕರ್ಪೂರಧೂಲಿಧವಲೀಕೃತಭಾಂಡಸಂಸ್ಥಾ ।
ಏಷಾ ಶುಭಾ ರಸವತೀ ಪ್ರಕರೋತಿ ಯೋ ವೈ
ಕಾಮಾನ್ ದದಾಮಿ ಸಕಲಾನ್ ಮನುಜಸ್ಯ ತಸ್ಯ ॥ ೩೦॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ನವಮೋಽಧ್ಯಾಯಃ ॥

ಶುಂಠಿ ಇವು ನಾಲ್ಕೂ ಪ್ರತಿಯೊಂದನ್ನು ೨೦ ಮಾಸಿ ತೂಕದಷ್ಟಾಗಲೀ ಸೇರಿಸಿ ॥ ೩೦॥ ಉತ್ತಮವಾದ ವಸ್ತ್ರದಲ್ಲಿ ಹಾಕಿ ಸ್ತ್ರೀಯರ ಮೃದುಹಸ್ತಗಳಿಂದ ತಿಕ್ಕಿಸಿ ಕರ್ಪುರದ ಪುಡಿಯಿಂದ ಶುಭ್ರಗೊಳಿಸಿದ ಶುಭ್ರವಾದ ಪಾತ್ರೆಯೊಳಗೆ ಮೇಲಿನ ಎಲ್ಲ (ದ್ರವ ಘನ) ಪದಾರ್ಥಗಳನ್ನು ಹಾಕಿ ಕುದಿಸಬೇಕು. ಕುದಿಸಿದ ನಂತರ ತಯಾರಾಗುವ ಶುಭಕರವಾದ ರಸವನ್ನು ಯಾವನು ನನಗೆ ಅರ್ಪಿಸುವನೋ ಅಂಥವನ ಸಕಲ ಮನೋರಥಗಳನ್ನು ಪೂರೈಸುವೆನು. ॥ ೩೦॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಮಾರ್ಗಶೀರ್ಷಮಾಸ ಮಹಾತ್ಮೆಯಲ್ಲಿ ಬ್ರಹ್ಮವಿಷ್ಣು ಸಂವಾದದಲ್ಲಿ "ನೈವೇದ್ಯವಿಧಿ ವರ್ಣನೆ" ಎಂಬ ಒಂಬತ್ತನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೧೦
ನೈವೇದ್ಯಾನಂತರ ವಿಧಿ

★

ಬ್ರಹ್ಮೋವಾಚ -

ನೈವೇದ್ಯಾನಂತರಂ ತಾತ ಕಿಂ ಕರ್ತವ್ಯಂ ನೃಭಿಃ ಪ್ರಭೋ ।
ಯತ್ಕರ್ತವ್ಯಂ ಸಹೋಮಾಸೇ ತತ್ಸರ್ವಂ ಬ್ರೂಹಿ ತತ್ತ್ವತಃ ॥ ೧॥

ಶ್ರೀಭಗವಾನುವಾಚ -

ಅಥ ಭುಕ್ತವತೇ ದತ್ತ್ವಾ ಜಲೈಃ ಕರ್ಪೂರವಾಸಿತೈಃ ।
ಆಚಮನಂ ಚ ತಾಂಬೂಲಂ ಚಂದನಂ ಕರಮಾರ್ಜನಮ್ ॥ ೨॥

ಪುಷ್ಪಾಂಜಲಿಂ ತತಃ ಕುರ್ಯಾತ್ ಭಕ್ತ್ಯಾದರ್ಶಂ ಪ್ರದರ್ಶಯೇತ್ ।
ನೀರಾಜನಂ ಪುನಃ ಕಾರ್ಯಂ ಕಾರ್ಪೂರಂ ವಿಭವೇ ಸತಿ ॥ ೩॥

ಸಮರ್ಪ್ಯ ಮುಕುಟಾದೀನಿ ಭೂಷಣಾನಿ ವಿಚಕ್ಷಣಃ ।
ತತಃ ಪಶ್ಚಾನ್ಮಹಾಭಾಗ ಪ್ರಕಲ್ಪ್ಯ ಛತ್ರಚಾಮರೇ ॥ ೪॥

ಪ್ರಸಾದಸುಮುಖಂ ಧ್ಯಾತ್ವಾ ಶ್ಯಾಮಸುಂದರವಿಗ್ರಹಮ್ ।
ಜಪೇದಷ್ಟೋತ್ತರಶತಂ ಸ್ತುವೀತ ಸ್ತುತಿಭಿಃ ಪ್ರಭುಮ್ ॥ ೫॥

' ಹೇ ಪ್ರಭೋ, ತಾತಪಾದ ! ಮಾರ್ಗಶೀರ್ಷ ಮಾಸದೊಳಗೆ ನೈವೇದ್ಯಾನಂತರದಲ್ಲಿ ಜನರು ಏನು ಮಾಡಬೇಕು ಎಂಬುದನ್ನೆಲ್ಲ ಯಥಾವತ್ತಾಗಿ ನನಗೆ ತಿಳಿಸಬೇಕು' ಎಂದು ಬ್ರಹ್ಮನು ಪ್ರಾರ್ಥಿಸಲು ॥ ೧॥ ಶ್ರೀ ಭಗವಂತನು ಹೇಳುತ್ತಾನೆ- ವತ್ಸಾ! ಕೇಳು. ಭೋಜನಾನಂತರದಲ್ಲಿ ನನಗೆ ಕರ್ಪೂರದಿಂದ ಸುವಾಸಿತವಾದ ಜಲದಿಂದ ಆಚಮನವನ್ನು ಕೊಟ್ಟು ನಂತರ ಚಂದನಯುಕ್ತ ನೀರನ್ನು ಹಸ್ತಪ್ರಕ್ಷಾಲನಾರ್ಥವಾಗಿ ಕೊಡಬೇಕು. ಆಮೇಲೆ ತಾಂಬೂಲವನ್ನು ಸಮರ್ಪಿಸಬೇಕು. ॥ ೨॥ ಇದಾದ ನಂತರ ಭಕ್ತಿಯಿಂದ ಪುಷ್ಪಾಂಜಲಿಯನ್ನು ಸಮರ್ಪಿಸಿ ಮುಖದರ್ಶನಕ್ಕೆಂದು ಕನ್ನಡಿಯನ್ನು ತೋರಿಸಬೇಕು. ಆಮೇಲೆ ಪುನಃ ನೀರಾಜನೆಯನ್ನು ಹಾಗೂ ತನ್ನ ದ್ರವ್ಯಶಕ್ತ್ಯನುಸಾರ ಹಾಗೂ ವಿಭವಾನುಸಾರ ಕರ್ಪೂರದ ಆರತಿಗಳನ್ನು ಬೆಳಗಬೇಕು. ॥ ೩॥ ಪುಷ್ಪಾದಿಗಳನ್ನು, ಭೂಷಣಗಳನ್ನು ಸಮರ್ಪಿಸಿ ಛತ್ರ ಚಾಮರಗಳನ್ನೂ ಅರ್ಪಿಸಬೇಕು. ॥ ೪॥ ಪರಮಾತ್ಮನ ಪ್ರತಿಮೆಯಲ್ಲಿ ಸನ್ನಿಹಿತನಾದ ಶ್ಯಾಮಸುಂದರನಾದ ಪ್ರಸನ್ನವದನ ಶ್ರೀ ಹರಿಯನ್ನು

ಶಂಖರೂಪ್ಯಮಯೀ ಮಾಲಾ ಕಾಂಚನೀ ಚ ವಿಶೇಷತಃ ।
ಪದ್ಮಾಕ್ಷೈಶ್ಚೈವ ಸುಭಗೈರ್ವಿದ್ರುಮೈರ್ಮಣಿಮೌಕ್ತಿಕೈಃ ॥ ೬॥

ರಚಿತೇಂದ್ರಾಕ್ಷಕೈರ್ಮಾಲಾ ತಥೈವಾಂಗುಲಿಪರ್ವಭಿಃ ।
ಪುತ್ರ ಜೀವಮಯೀ ಮಾಲಾ ಶಸ್ತಾ ವೈ ಜಪಕರ್ಮಣಿ ॥ ೭॥

ನ ಚಕ್ರಮನ್ನ ಚ ಹಸನ್ನ ಪಾರ್ಶ್ವಮವಲೋಕಯನ್ ।
ನ ಪದಾ ಪದಮಾಕ್ರಾಮ್ಯ ಕರಪ್ರಾಪ್ತಶಿರಸ್ತಥಾ ॥ ೮॥

ನೋತ್ತಿಷ್ಠಂಶ್ಚ ಮನುಂ ವಿದ್ವಾನ್ ನ ಜಪೇದ್ವ್ಯಗ್ರಮಾನಸಃ ।
ಜಪಕಾಲೇ ನ ಭಾಷೇತ ವ್ರತಹೋಮಾರ್ಚನಾದಿಷು ॥ ೯॥

ಗೃಹೇ ತ್ವೇಕಗುಣಂ ಜಾಪ್ಯಂ ನದ್ಯಾಂ ತದ್‌ದ್ವಿಗುಣಂ ಸ್ಮೃತಮ್ ।
ಗವಾಂ ಗೋಷ್ಠೇ ದಶಗುಣಂ ಅಗ್ನ್ಯಗಾರೇ ಶತಾಧಿಕಮ್ ॥ ೧೦॥

ತೀರ್ಥಾದಿಷು ಸಹಸ್ರಂ ಸ್ಯಾದನಂತಂ ಮಮ ಸನ್ನಿಧೌ ।
ಏವಂ ಕೃತ್ವಾ ಸಹೋಮಾಸೇ ಯಃ ಕುರ್ಯಾಚ್ಚ ಪ್ರದಕ್ಷಿಣಾಮ್ ॥ ೧೧॥

ಧ್ಯಾನಿಸುತ್ತ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸಬೇಕು. ಹಾಗೂ ಅನೇಕ ಸ್ತೋತ್ರಗಳಿಂದ ಪ್ರಭುವನ್ನು ಸ್ತುತಿಸಬೇಕು. ॥ ೫॥ ಹೇ ವತ್ಸಾ ! ರಜತ ಶಂಖಗಳ ಮಾಲೆಯು ವಿಶೇಷವಾಗಿ ಸುವರ್ಣ ಶಂಖಗಳ ಮಾಲೆಯು, ಪದ್ಮಾಕ್ಷಗಳಿಂದಲೂ, ಉತ್ತಮವಾದ ಹವಳ ಮಾಣಿಕ್ಯ, ಮುತ್ತುಗಳಿಂದಲೂ ಯುಕ್ತವಾದ ಮಾಲೆಯು ॥ ೬॥ ಇಂದ್ರಾಕ್ಷಿಗಳಿಂದ ತಯಾರಿಸಿದ ಮಾಲೆಯು, ಹಾಗೂ ಅಂಗುಷ್ಠಾಕಾರದ ಚಂದ್ರಕಾಂತಮಣಿಗಳ ಮಾಲೆಯು, ಜೀವಮಯೀ ಮಾಲೆಯು ಇವುಗಳಲ್ಲಿ ಯಾವುದಾದರೂ ಒಂದು, ಜಪ ಮಾಡುವಾಗ ಉಪಯೋಗಿಸಲು ಯೋಗ್ಯವಾಗಿರುತ್ತದೆ. ॥ ೭॥ ಆಸನದಿಂದ ಎದ್ದು ಓಡಾಡುತ್ತ, ನಗುತ್ತ, ಅತ್ತಿತ್ತ ನೋಡುತ್ತ ,ಕುಳಿತಲ್ಲಿಯೇ ಕಾಲಿನ ಮೇಲೆ ಕಾಲು ಹಾಕಿಕೊಂಡು, ಮಸ್ತಕದ ಮೇಲೆ ಕೈ ಇಟ್ಟುಕೊಂಡು, ಜಪ ಮಾಡಬಾರದು. ॥ ೮॥ ಬುದ್ಧಿವಂತನಾದವನು ಎದ್ದುನಿಂತು ಅಥವಾ ವ್ಯಗ್ರಚಿತ್ತನಾಗಿ ಜಪವನ್ನು ಮಾಡಬಾರದು. ಜಪ ಮಾಡುವ ಸಮಯಲ್ಲಿ ಮತ್ತು ವ್ರತ, ಹೋಮ,ಅರ್ಚನೆ ಇವೇ ಮೊದಲಾದವುಗಳನ್ನು ಮಾಡುವಾಗ , ಸರ್ವಥಾ ಮಾತನಾಡಬಾರದು. ॥ ೯॥ ಮನೆಯಲ್ಲಿ ಹತ್ತು ಜಪ ಮಾಡಿದರೆ ನದೀ ತೀರದಲ್ಲಿದ್ದಾಗ ಇಪ್ಪತ್ತು ಸಲ ಜಪ ಮಾಡಬೇಕು. ಗೋವುಗಳ ಗೋಷ್ಠಿಯಲ್ಲಿ ಒಂದು ನೂರು ಸಲ ಮತ್ತು ಅಗ್ನ್ಯಗಾರದಲ್ಲಿ (ಯಜ್ಞಶಾಲೆ) ಒಂದು ನೂರಕ್ಕಿಂತ ಹೆಚ್ಚು ಸರ ಜಪ ಮಾಡಬೇಕು. ॥ ೧೦॥ ತೀರ್ಥಾದಿಗಳಲ್ಲಿ ಒಂದು ಸಾವಿರ ಸಲ ಜಪಿಸಿದರೆ ನನ್ನ ಸನ್ನಿಧಿಯಲ್ಲಿ ಅನಂತ ಜಪ ಮಾಡಬೇಕು. ಮಾರ್ಗಶೀರ್ಷ ಮಾಸದಲ್ಲಿ ಈ ಪ್ರಕಾರ ಜಪಿಸಿ

ಸಪ್ತದ್ವೀಪವತೀಪುಣ್ಯಂ ಲಭತೇ ಸ ಪದೇ ಪದೇ ।
ಪಠನ್ನಾಮಸಹಸ್ರಂ ತು ಅಥವಾ ನಾಮ ಕೇವಲಮ್ ॥ ೧೨॥

ಏಕಾ ಪ್ರದಕ್ಷಿಣಾ ಭಕ್ತ್ಯಾ ದಹೇತ್ಪಾಪಂ ಸದಾಹ್ನಿಕಮ್ ।
ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ॥ ೧೩॥

ದಿನಸಪ್ತೋದ್ಭವಂ ಪಾಪಂ ಮಮ ತಿಸ್ರಃ ಪ್ರದಕ್ಷಿಣಾಃ ।
ತತ್‌ಕ್ಷಣಾನ್ನಾಶಯಂತ್ಯೇವ ಪಾಪಂ ದಶ ದಶಾಹ್ನಿಕಮ್ ॥ ೧೪॥

ಕೃತಾಃ ಪ್ರದಕ್ಷಿಣಾ ಯೇನ ಏಕವಿಂಶತಿ ಭಕ್ತಿತಃ ।
ಭ್ರೂಣಹತ್ಯಾದಿ ಪಾಪಾನಿ ನಾಶಮಾಯಾಂತಿ ತತ್‌ಕ್ಷಣಾತ್ ॥ ೧೫॥

ಅಷ್ಟೋತ್ತರಶತಂ ಯೇನ ಕೃತಾ ಭಕ್ತ್ಯಾ ಪ್ರದಕ್ಷಿಣಾಃ ।
ತೇನೇಷ್ಟಂ ಕ್ರತುಭಿಃ ಪುಣ್ಯೈಃ ಸಮಾಪ್ತವರದಕ್ಷಿಣೈಃ ॥ ೧೬॥

ಪ್ರದಕ್ಷಿಣೀಕೃತಾ ತೇನ ತಾವದ್ವಾರಂ ವಸುಂಧರಾ ।
ಮಾತುಃ ಪ್ರದಕ್ಷಿಣಾಸ್ತದ್ವದ್ಧಾತ್ರೀಪ್ರದಕ್ಷಿಣಾಃ ॥ ೧೭॥

ಯಾರು ನನಗೆ ಪ್ರದಕ್ಷಿಣೆ ಹಾಕಿ ನಮಸ್ಕಾರಗಳನ್ನು ಮಾಡುವರೋ ॥೧೧॥ ಪ್ರದಕ್ಷಿಣೆ ಹಾಕುವಾಗ ಅವರಿಡುವ ಒಂದೊಂದು ಹೆಜ್ಜೆಗೂ ಸಪ್ತದ್ವೀಪವತಿ ಭೂಮಿಯ ಪ್ರದಕ್ಷಿಣೆಯಿಂದ ಬರಬಹುದಾದ ಫಲವನ್ನು ಹೊಂದುವರು. ವಿಷ್ಣು ಸಹಸ್ರನಾಮಗಳನ್ನು ಪಠಿಸುತ್ತ ಅಥವಾ ಒಂದೇ ನಾಮವನ್ನಾದರೂ ಪಠಿಸುತ್ತ ॥೧೨॥ ಯಾವನು ಭಕ್ತಿಯಿಂದ ಒಂದು ಸಲ ಪ್ರದಕ್ಷಿಣೆ ಮಾಡುವನೋ ಆಗ ಅವನ ಒಂದು ದಿನದ ಪಾಪಗಳೆಲ್ಲವೂ ಸುಟ್ಟು ಭಸ್ಮವಾಗುವವು. ಹಾಗೆ ಮಾಡುವುದರಿಂದ ಅವನು ಸಪ್ತದ್ವೀಪವತೀ ಭೂಪ್ರದಕ್ಷಿಣೆ ಮಾಡಿದಂತೆ ಆಗುತ್ತದೆ. ॥ ೧೩॥ ನನಗೆ ಭಕ್ತಿಯಿಂದ ಸಮರ್ಪಿಸುವ ಮೂರು ಪ್ರದಕ್ಷಿಣೆಗಳು ಆ ಮನುಷ್ಯನು ಏಳು ದಿನಗಳಲ್ಲಿ ಮಾಡಿದ ಪಾಪಗಳನ್ನು ತಕ್ಷಣದಲ್ಲಿಯೇ ನಾಶಮಾಡುತ್ತವೆ. ಅದರಂತೆ ಹತ್ತು ಪ್ರದಕ್ಷಿಣೆಗಳು ನೂರು ದಿನಗಳಲ್ಲಿ ಮಾಡಿದ ಪಾಪಗಳನ್ನು ನಾಶಪಡಿಸುತ್ತವೆ. ॥೧೪॥ ಯಾವ ಮನುಷ್ಯನು ಭಕ್ತಿಪೂರ್ವಕವಾಗಿ ನನಗೆ ೨೧ ಸಲ ಪ್ರದಕ್ಷಿಣೆಗಳನ್ನು ಹಾಕುವನೋ ಅವನು ಭ್ರೂಣಹತ್ಯಾದಿ ಪಾಪಗಳನ್ನು ಮಾಡಿದ್ದರೂ ಅವು ತಕ್ಷಣದಲ್ಲೇ ನಾಶಹೊಂದುತ್ತವೆ. ॥೧೫॥ ಯಾವಾತನು ೧೦೮ ಸಲ ಪ್ರದಕ್ಷಿಣೆಗಳನ್ನು ಹಾಕುವನೋ ಅಂಥವನು ಭೂರಿದಕ್ಷಿಣಾದಿಗಳನ್ನು ಕೊಟ್ಟು ಅನೇಕ ಪುಣ್ಯ ಕರ್ಮಗಳನ್ನು ಹಾಗೂ ಯಜ್ಞಗಳನ್ನು ಸಾಂಗವಾಗಿ ಪೂರ್ತಿಗೊಳಿಸಿದಂತೆ ಆಗುತ್ತದೆ. ॥ ೧೬॥ ಅಲ್ಲದೇ ಅವನು ಅಷ್ಟು ಸಲ ಭೂಪ್ರದಕ್ಷಿಣೆ ಮಾಡಿದಂತಾಗುತ್ತದೆ. ಹಾಗೂ ತನ್ನ ತಾಯಿಯ ಪ್ರದಕ್ಷಿಣೆಗಳನ್ನು ಮಾಡಿದಂತಾಗುವದು, ಧಾತ್ರೀ ವೃಕ್ಷದ

ಶಾಲಿಗ್ರಾಮಶಿಲಾಯಾಶ್ಚ ಸಮಮೇತನ್ನ ಸಂಶಯಃ ।
ಏಕೋ ದಂಡಪ್ರಣಾಮಶ್ಚ ಸಹೇ ಸಪ್ತಪ್ರದಕ್ಷಿಣಾಃ ॥ ೧೮॥

ಸಮಮೇತತ್ ದ್ವಯಂ ನೋ ವಾ ದಂಡಪಾತೋ ವಿಶಿಷ್ಯತೇ ।
ಪ್ರದಕ್ಷಿಣೇ ದಂಡಪಾತಂ ಯಃ ಕರೋತಿ ಸದಾ ಮಮ ॥ ೧೯॥

ಸಹೋಮಾಸೇ ವಿಶೇಷೇಣ ಆಕಲ್ಪಂ ವಸೇದ್ದಿವಿ ।
ಕಲ್ಪಾದನಂತರಂ ತಾತ ಚಕ್ರವರ್ತೀ ಪ್ರಜಾಯತೇ ॥ ೨೦॥

ಚಿರಾಯುರ್ಧನವಾನ್ ಭೋಗೀ ದಾನವಾನ್ ಧರ್ಮವತ್ಸಲಃ।
ಸಹಸ್ರನಾಮಪಠನಾತ್ಪಾಪಂ ನಶ್ಯೇತ್ತ್ರಿಧಾ ಕೃತಮ್ ॥ ೨೧॥

ಅಥವಾ ಕಿಂ ಬಹೂಕ್ತೇನ ಶೃಣು ಗುಹ್ಯಂ ಚ ಮೇ ಸುತ ।
ದಾಮೋದರೇತಿ ನಾಮ್ನಾ ವೈ ಭವೇತ್ಪ್ರೀತಿರ್ಮಮಾತುಲಾ ॥ ೨೨॥

ಗುಣಸಂಬಂಧಿಮನ್ನಾಮ ಕೃತಂ ಮಾತ್ರಾ ಯಶೋದಯಾ ।
ಯದಾ ಮೇ ದಧಿಭಾಂಡಸ್ಯ ಸ್ಫೋಟನಂ ಗೋಕುಲೇ ಕೃತಮ್ ॥ ೨೩॥

ಪ್ರದಕ್ಷಿಣೆಗಳನ್ನೂ ಹಾಕಿದಂತಾಗುವದು. ॥೧೭॥ ಅಷ್ಟು ಸಲ ಶಾಲಿಗ್ರಾಮದ ಪ್ರದಕ್ಷಿಣೆ ಮಾಡಿದಂತೆಯೂ ಆಗುವದು. ಈ ರೀತಿ ಮಾತೃ ಪ್ರದಕ್ಷಿಣೆ, ಧಾತ್ರೀ ಪ್ರದಕ್ಷಿಣೆ ಹಾಗೂ ಶಾಲಿಗ್ರಾಮ ಪ್ರದಕ್ಷಿಣೆಗಳು ಸಮವಾಗಿದ್ದು ನನಗೆ ೧೦೮ ಸಲ ಪ್ರದಕ್ಷಿಣೆ ಮಾಡುವುದರಿಂದ ಇವುಗಳನ್ನೂ ಮಾಡಿದಂತಾಗುತ್ತದೆ. ಮಾರ್ಗಶೀರ್ಷ ಮಾಸದಲ್ಲಿ ನನಗೆ ಒಂದು ಸಲ ಮಾಡಿದ ದಂಡಪ್ರಣಾಮವೂ ೭ ಸಲ ಹಾಕಿದ ಪ್ರದಕ್ಷಿಣೆಗಳೂ ॥೧೮॥ ಇವೆರಡೂ ಸರಿಯಲ್ಲ. ಇವೆರಡರಲ್ಲಿ ದಂಡಪ್ರಣಾಮವೇ ಅಧಿಕವಾಗಿರುವದು. ವಿಶೇಷವಾಗಿ ಮಾರ್ಗಶೀರ್ಷ ಮಾಸದಲ್ಲಿ ಯಾವಾತನು ಸದಾಕಾಲ ನನಗೆ ದಂಡಪಾತಪೂರ್ವಕ ಪ್ರದಕ್ಷಿಣೆ ಹಾಕುವನೋ ॥ ೧೯॥ ಅವನು ಆ ಕಲ್ಪಾಂತದವರೆಗೆ ಸ್ವರ್ಗಲೋಕದಲ್ಲಿ ಸುಖವಾಗಿರುವನು. ಹೇ ಬ್ರಹ್ಮಾ! ಕಲ್ಪಾಂತದಲ್ಲಿ ಅವನು ಭೂಮಿಯ ಮೇಲೆ ಹುಟ್ಟಿ ಚಕ್ರವರ್ತಿಯಾಗುವದು. ॥ ೨೦॥ ದೀರ್ಘಾಯುಷ್ಯ ಉಳ್ಳವನೂ, ಧನವಂತನೂ, ಭೋಗಿಯೂ, ದಾನಶೂರನೂ, ಧರ್ಮಿಷ್ಠನೂ ಆಗಿ ಸುಖದಿಂದ ಇರುವನು. ಶ್ರೀವಿಷ್ಣು ಸಹಸ್ರನಾಮ ಪಠನ ಮಾಡುವುದರಿಂದ ಮೂರು ಪ್ರಕಾರದ ಪಾಪಗಳೂ ನಾಶವಾಗುತ್ತವೆ. ॥೨೧॥ ಹೇ ವತ್ಸಾ! ಹೆಚ್ಚಿಗೆ ಹೇಳುವುದರಿಂದೇನು ಪ್ರಯೋಜನ! ನಿನಗೊಂದು ರಹಸ್ಯ ವಿಷಯವನ್ನು ತಿಳಿಸುವೆನು ಕೇಳು. ಅದೇನೆಂದರೆ - 'ದಾಮೋದರ' ಎಂಬ ಹೆಸರಿನಿಂದ ನನ್ನನ್ನು ಕರೆಯುವುದರಿಂದ ನನಗೆ ಅಸದೃಶವಾದ ಆನಂದವಾಗುತ್ತದೆ. ॥ ೨೨॥ ನನ್ನ ಗುಣಸಂಬಂಧಿಯಾದ ಈ 'ದಾಮೋ ದರ ' ಎಂಬ ಹೆಸರನ್ನು ನನ್ನ ತಾಯಿಯಾದ

ತದಾ ಯಶೋದಯಾ ಗಾಢಂ ದಾಮ್ನಾ ಬದ್ಧೋ ಉಲೂಖಲೇ ।
ತತಃ ಪ್ರಭೃತಿ ಮೇ ನಾಮ ಖ್ಯಾತಂ ದಾಮೋದರೇತಿ ಚ ॥ ೨೪॥

ನಮೋ ದಾಮೋದರಾಯೇತಿ ಜಪೇದ್ಯಃ ಸುಸಮಾಹಿತಃ ।
ಸೂರ್ಯೋದಯೇ ಶುಚಿರ್ಭೂತ್ವಾ ತ್ರಿಸಹಸ್ರಂ ದಿನೇ ದಿನೇ ॥ ೨೫॥

ಸಾರ್ಧಲಕ್ಷತ್ರಯಂ ಯಾವತ್ತತ ಉದ್ಯಾಪಯೇದ್ಬುಧಃ ।
ತರ್ಪಣಂ ಹವನಂ ಚೈವ ಬ್ರಹ್ಮಭೋಜ್ಯಂ ದಶಾಂಶತಃ ॥ ೨೬॥

ಏವಂ ಯಃ ಕುರುತೇ ಭಕ್ತ್ಯಾ ತಸ್ಯ ಯಚ್ಛಾಮಿ ವಾಂಛಿತಮ್ ।
ಧನಂ ಧಾನ್ಯಂ ತಥಾ ದಾರಾನ್ ಪುತ್ರಾಂಶ್ಚಾನ್ಯಚ್ಚ ವಾಂಛಿತಮ್ ॥ ೨೭॥

ತ್ರಿಸತ್ಯೇನ ಮಯಾ ಪ್ರೋಕ್ತಂ ಶ್ರದ್ಧಸ್ವ ತ್ವಂ ಮಹಾಮತೇ ।
ಮನುರಾಜಮಿಮಂ ಪುತ್ರ ಕೃಪಯಾ ಮೇ ಪ್ರಕಾಶಿತಮ್ ॥ ೨೮॥

ದಾಮೋದರಾಯೇತಿ ಪಠನ್ನಿತ್ಯಂ ಕುರ್ಯಾತ್ ಪ್ರದಕ್ಷಿಣಮ್ ।
ದಂಡಪಾತಂ ತಥಾ ಪುತ್ರ ಅಷ್ಟಾಂಗೇನ ಸಮನ್ವಿತಮ್ ॥ ೨೯॥

ಯಶೋದೆಯು ಇಟ್ಟಿರುವಳು. ಗೋಕುಲದಲ್ಲಿ ಯಾವಾಗ ನಾನು ಮೊಸರಿನ ಪಾತ್ರೆಯನ್ನು ಒಡೆದೆನೋ ॥ ೨೩॥ ಆಗ ಯಶೋದೆಯು ನನ್ನನ್ನು ಹಗ್ಗದಿಂದ ಒರಳಲ್ಲಿ ಗಟ್ಟಿಯಾಗಿ ಬಿಗಿದು ಕಟ್ಟಿದಳು. ಅಂದಿನಿಂದ 'ದಾಮೋದರ' ಎಂಬ ನನ್ನ ಹೆಸರು ಪ್ರಸಿದ್ಧಿಗೆ ಬಂದಿತು. ॥೨೪॥ ಪ್ರಾತಃಕಾಲದಲ್ಲಿ ಸ್ನಾನಾಹ್ನಿಕಗಳನ್ನು ಮುಗಿಸಿ ಶುದ್ಧನಾಗಿ ಪ್ರತಿದಿನ ಸೂರ್ಯೋದಯಕ್ಕೆ ಸರಿಯಾಗಿ 'ಓಂ ನಮೋ ದಾಮೋದರಾಯ' ಎಂದು ಮೂರು ಸಾವಿರ ಸಲ ಭಕ್ತಿಪೂರ್ವಕವಾಗಿ ಸ್ಥಿರ ಮನಸ್ಸಿನಿಂದ ಜಪಿಸಬೇಕು. ॥ ೨೫॥ ಮೂರೂವರೆ ಲಕ್ಷ ಜಪವಾದ ಮೇಲೆ ಉದ್ಯಾಪನೆಯನ್ನು ಮಾಡಬೇಕು. ಹತ್ತು ಜಪಕ್ಕೆ ಒಂದು ಸಲದಂತೆ ತರ್ಪಣ, ಹವನ ಅರ್ಚನೆಗಳನ್ನು ಮಾಡಿ ಬ್ರಾಹ್ಮಣ ಭೋಜನಗಳನ್ನು ಮಾಡಿಸಬೇಕು. ॥೨೬॥ ಈ ಪ್ರಕಾರ ಯಾರು ಭಕ್ತಿಯಿಂದ ಮಾಡುವರೋ ಅವರ ಇಷ್ಟಾರ್ಥಗಳನ್ನೆಲ್ಲ ಕೊಡುವೆನು. ಧನ, ಧಾನ್ಯ,ಸತಿ-ಸುತರನ್ನು ಹಾಗೂ ಇಷ್ಟವಾದುದೆಲ್ಲವನ್ನೂ ಕೊಡುವೆನು. ॥ ೨೭॥ ಎಲೈ ಮಹಾಮತಿಯುಳ್ಳ ಬ್ರಹ್ಮನೇ ! ಈ ವಿಷಯವನ್ನು ಕಾಯಾ, ವಾಚಾ,ಮನಸಾ ಸತ್ಯವಾಗಿರುವುದನ್ನು ನಿನಗೆ ತಿಳಿಸಿದ್ದೇನೆ. ನೀನು ಇದರಲ್ಲಿ ವಿಶ್ವಾಸವಿಡು. ಪುತ್ರನೇ ! ಸಕಲ ಮಂತ್ರಗಳಲ್ಲಿ ಶ್ರೇಷ್ಠವಾಗಿರುವ ಈ ಮಂತ್ರವನ್ನು ನಿನ್ನ ಮೇಲಿನ ಕೃಪೆಯಿಂದ ಮತ್ತು ಜಗತ್ತಿನ ಕಲ್ಯಾಣಕ್ಕೋಸ್ಕರ ಪ್ರಕಾಶಪಡಿಸಿದ್ದೇನೆ. ॥೨೮॥ ಆದ್ದರಿಂದ ' ಓಂ ನಮೋ ದಾಮೋದರಾಯ ' ಎಂದು ಗಟ್ಟಿಯಾಗಿ ಹೇಳುತ್ತ ನಿತ್ಯ ನನಗೆ ಪ್ರದಕ್ಷಿಣೆ ಹಾಕಬೇಕು. ಅಷ್ಟಾಂಗಗಳಿಂದ ಸಹಿತವಾದ ದಂಡಪ್ರಣಾಮವನ್ನು ಮಾಡಬೇಕು. ॥ ೨೯॥

ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಉರಸಾ ಶಿರಸಾ ತಥಾ ।
ಮನಸಾ ವಚಸಾ ದೃಷ್ಟ್ಯಾ ಪ್ರಣಾಮೋಽಷ್ಟಾಂಗ ಉಚ್ಯತೇ ॥ ೩೦॥

ಶಿರೋ ಮತ್ಪಾದಯೋಃ ಕೃತ್ವಾ ಬಾಹುಭ್ಯಾಂ ಚ ಪರಸ್ಪರಮ್ ।
ಪ್ರಪನ್ನಂ ಪಾಹಿ ಮಾಮೀಶ ಭೀತಂ ಮೃತ್ಯುಗ್ರಹಾರ್ಣವಾತ್ ॥ ೩೧॥

ಪಶ್ಚಾಚ್ಛೇಷಾಂ ಮಯಾ ದತ್ತಾಂ ಶಿರಸ್ಯಾಧಾಯ ಸಾದರಮ್ ।
ಏವಂ ಬ್ರೂಯಾತ್ತತೋ ವತ್ಸ ಮಮ ಪೂಜನಪೂರ್ತಯೇ ॥ ೩೨॥

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ ।
ಯತ್ಪೂಜಿತಂ ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥ ೩೩॥

ಮೃದಂಗವಾದ್ಯೇನ ಸಮಂ ಪ್ರಣವೇನ ತಥಾ ಸುತ ।
ಏವಂ ಕಾರ್ಯಂ ಸಹೋಮಾಸೇ ನಿತ್ಯಂ ಪುಣ್ಯಪ್ರದಂ ನೃಣಾಂ ॥ ೩೪॥

ಗೀತಂ ವಾದ್ಯಂ ಚ ನೃತ್ಯಂ ಚ ತಥಾ ಪುಸ್ತಕವಾಚನಮ್ ।
ಪೂಜಾಕಾಲೇ ಚತುರ್ವಕ್ತ್ರ ಸರ್ವದಾ ಮಮ ಚ ಪ್ರಿಯಮ್ ॥ ೩೫॥

ಪದ, ಹಸ್ತ, ಮೊಳಕಾಲು, ಎದೆ, ಮಸ್ತಕ, ಮನಸ್ಸು, ಮಾತು ಮತ್ತು ಕಣ್ಣು (ದೃಷ್ಟಿ) ಇವುಗಳಿಂದ ಏಕಕಾಲಕ್ಕೆ ಮಾಡಿದ ಪ್ರಣಾಮವು ಅಷ್ಟಾಂಗ ಪ್ರಣಾಮವೆಂದು ಕರೆಯಲ್ಪಡುವದು. ॥೩೦॥ ನನ್ನ ಪಾದಕಮಲಗಳಲ್ಲಿ ಶಿರಸ್ಸನ್ನಿಟ್ಟು ಎರಡೂ ಕೈಗಳನ್ನು ಜೋಡಿಸಿ - 'ಹೇ ಸ್ವಾಮಿನ್! ಸಂಸಾರಸಾಗರದಿಂದ ಭೀತನಾಗಿ ನಿನಗೆ ಶರಣು ಬಂದಿರುವ ನನ್ನನ್ನು ರಕ್ಷಿಸು' ಎಂದು ನನ್ನನ್ನು ಪ್ರಾರ್ಥಿಸಬೇಕು. ॥ ೩೧॥ ನಂತರ ಹೇ ವತ್ಸಾ! ದೇವರಿಗೆ ನಿವೇದಿತವಾದ ತುಳಸೀ, ಪುಷ್ಪಾದಿ ಪ್ರಸಾದವನ್ನು ಶಿರಸ್ಸಿನಲ್ಲಿ ಭಕ್ತಿಯಿಂದ ಇಟ್ಟುಕೊಂಡು ಅದುವರೆಗೆ ಮಾಡಿದ ನನ್ನ ಪೂಜೆಯ ಪೂರ್ತಿಗಾಗಿ ॥ ೩೨॥ 'ಹೇ ದೇವಾ! ಜನಾರ್ದನಾ! ಮಂತ್ರ, ಕ್ರಿಯಾ, ಭಕ್ತಿಹೀನನಾಗಿ ನಾನು ಮಾಡಿದ ಪೂಜೆಯು ಪರಿಪೂರ್ಣವಾಗುವಂತೆ ಅನುಗ್ರಹಿಸು' ಎಂದು ಪ್ರಾರ್ಥಿಸಬೇಕು. ॥೩೩॥ ಹೇ ವತ್ಸಾ! ಈ ಪ್ರಕಾರವಾಗಿ ಮಾರ್ಗಶೀರ್ಷ ಮಾಸದಲ್ಲಿ ನಿತ್ಯವೂ ಮೃದಂಗ ವಾದ್ಯಗಳನ್ನು ಬಾರಿಸುತ್ತ, ಪ್ರಣವಮಂತ್ರೋಚ್ಚಾರಣೆಯನ್ನು ಮಾಡುತ್ತ ಮನುಷ್ಯರಿಗೆ ಪುಣ್ಯಪ್ರದವಾಗಿರುವ ನನ್ನ ಪೂಜೆಯನ್ನು ಭಕ್ತಿಯಿಂದ ಮಾಡಬೇಕು. ॥ ೩೪॥ ಹೇ ಚತುರ್ಮುಖ ಬ್ರಹ್ಮಾ! ಪೂಜಾಕಾಲದಲ್ಲಿ ದೇವರ ಕೀರ್ತನೆಗಳನ್ನು ಹಾಡುವುದು, ವಾದ್ಯಗಳನ್ನು ಬಾರಿಸುವುದು, ನೃತ್ಯಸೇವೆ ಮಾಡುವುದು, ಹಾಗೂ ಗ್ರಂಥಪಾರಾಯಣ ಮಾಡುವುದು, ಇವೆಲ್ಲವೂ ನನಗೆ ಯಾವಾಗಲೂ ಅತ್ಯಂತ ಪ್ರಿಯವಾದವುಗಳು. ॥೩೫॥ ಗೀತವಾದ್ಯಗಳು ಇರದಿದ್ದರೆ, ನನ್ನ ಸ್ತೋತ್ರಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದ

ಗೀತವಾದ್ಯಾದ್ಯಭಾವೇ ಚ ಮಮ ನಾಮಸಹಸ್ರಕಮ್ ।
ಸ್ತವರಾಜಂ ತಥಾ ಪುತ್ರ ಗಜೇಂದ್ರಸ್ಯ ಚ ಚ ಮೋಕ್ಷಣಮ್ ॥ ೩೬॥

ಅನುಸ್ಮೃತಿಶ್ಚ ಗೀತಾಯಾಸ್ತವನಂ ಪಂಚಧಾ ಮತಮ್ ।
ಪಂಚಸ್ತವಂ ಮಹಾಭಾಗ ಮಮ ಪ್ರೀತಿಕರಂ ಪರಮ್ ॥ ೩೭॥

ಪಾದೋದಕಂ ಪಿಬೇತ್ ಯೋ ವೈ ಶಾಲಿಗ್ರಾಮಸಮುದ್ಭವಮ್ ।
ಪಂಚಗವ್ಯಸಹಸ್ರೈಸ್ತು ಪ್ರಾಶಿತೈಃ ಕಿಂ ಪ್ರಯೋಜನಮ್ ॥ ೩೮॥

ಶಾಲಿಗ್ರಾಮಶಿಲಾತೋಯಂ ಯಃ ಪಿಬೇದ್ಬಿಂದುನಾ ಸಮಮ್ ।
ಮಾತುಸ್ತನ್ಯಂ ಪುನರ್ನೈವ ಸ ಪಿಬೇನ್ಮುಕ್ತಿಭಾಂಙ್ನರಃ ॥ ೩೯॥

ಅಶೌಚಂ ನೈವ ವಿದ್ಯೇತ ಸೂತಕೇ ಮೃತಕೇಽಪಿ ವಾ ।
ಯೇಷಾಂ ಪಾದೋದಕಂ ಮೂರ್ಧ್ನಿ ಪ್ರಾಶನಂ ಯೇ ಪ್ರಕುರ್ವತೆ॥ ೪೦॥

ಅಂತಕಾಲೇಽಪಿ ಯಸ್ಯೇದಂ ದೀಯತೆ ಪಾದಯೋರ್ಜಲಮ್ ।
ಸೋಽಪಿ ಸದ್ಗತಿಮಾಪ್ನೋತಿ ಸದಾಚಾರಬಹಿಷ್ಕೃತಃ ॥ ೪೧॥

ಸೋಽಪಿ ಪೂತೋ ಭವತ್ಯಾಶು ಸದ್ಯಃ ಪಾದಾಂಬುಸೇವನಾತ್ ।
ಚಾಂದ್ರಾಯಣಾತ್ಪಾದಕೃಚ್ಛ್ರಾದಧಿಕಂ ಪಾದಯೋರ್ಜಲಮ್ ॥ ೪೨॥

ಶ್ರೀವಿಷ್ಣುಸಹಸ್ರನಾಮ ಪಠಣ, ಭೀಷ್ಮಸ್ತವರಾಜ ಹಾಗೂ ಗಜೇಂದ್ರ ಮೋಕ್ಷ ಕೀರ್ತನೆ ॥೩೬॥ ಅನುಸ್ಮೃತಿ ಹಾಗೂ ಗೀತಾಪಠಣ ಇವುಗಳನ್ನು ಹೇಳಬೇಕು. ಹೇ ಮಹಾಭಾಗಾ! ಈ ಐದು ಸ್ತವನಗಳ ಪಠಣವು ನನಗೆ ಅತ್ಯಂತ ಪ್ರೀತಿಕಾರಕವಾಗಿದೆ. ॥೩೭॥ ಶಾಲಗ್ರಾಮ ಅಭಿಷೇಕ ಮಾಡುವುದರಿಂದಾದ ವಿಷ್ಣು ಪಾದೋದಕದ ಪ್ರಾಶನವನ್ನು ಒಮ್ಮೆ ಮಾಡಿದವನು ಸಾವಿರಾರು ಸಲ ಪಂಚಗವ್ಯ ಪ್ರಾಶನ ಮಾಡುವುದರಿಂದೇನು ಪ್ರಯೋಜನ? ॥ ೩೮॥ ಶಾಲಗ್ರಾಮಾಭಿಷೇಕದ ಜಲದ ಒಂದು ಹನಿಯನ್ನು ಸೇವಿಸಿದವನು ಮುಂದೆಂದೂ ಮಗುವಾಗಿದ್ದಾಗ ತಾಯಿಯ ಹಾಲನ್ನು ಸೇವಿಸುವ ಪ್ರಸಂಗವನ್ನು ಹೊಂದುವದಿಲ್ಲ ಅರ್ಥಾತ್ ಭೂಮಿಯಲ್ಲಿ ಹುಟ್ಟುವುದೇ ಇಲ್ಲ ಹಾಗೂ ಅವನು ಮೋಕ್ಷವನ್ನೇ ಹೊಂದುವನು. ॥೩೯॥ ವಿಷ್ಣು ಪಾದೋದಕದ ಪ್ರಾಶನವನ್ನು ಮಾಡಿ ತಲೆಯ ಮೇಲೆ ಧರಿಸುವವರಿಗೆ ಸೂತಕದಲ್ಲಾಗಲೀ, ಮೃತಕದಲ್ಲಾಗಲೀ ಅಶೌಚವೆಂಬುದೇ ಇರಲಾರದು. ॥೪೦॥ ಮರಣ ಸಮಯದಲ್ಲಿ ಯಾವನಿಗೆ ಈ ವಿಷ್ಣು ಪಾದೋದಕವು ಕೊಡಲ್ಪಡುವದೋ ಅವನು ಸದಾಚಾರ ಹೀನನಾಗಿದ್ದರೂ ಪಾದೋದಕವನ್ನು ಸೇವಿಸುವ ಮಾತ್ರದಿಂದಲೇ ಪಾವಿತ್ರ್ಯವನ್ನು ಹೊಂದಿ ಸದ್ಗತಿಯನ್ನು

ಅಪೇಯಂ ಪಿಬತೇ ಯಸ್ತು ಭುಂಕ್ತೇ ಯದ್ಯಪ್ಯಭೋಜನಮ್ ।
ಅಗಮ್ಯಾಗಮನೋ ಯೋ ವೈ ಪಾಪಾಚಾರಶ್ಚ ಯೋ ನರಃ ॥ ೪೩॥

ಅಗುರುಂ ಕುಂಕುಮಂ ಚಾಪಿ ಕರ್ಪೂರಂ ಚಾನುಲೇಪನಮ್ ।
ಮಮ ಪಾದಾಂಬುಸಂಸ್ಪೃಷ್ಟಂ ತದ್ವೈ ಪಾವನಪಾವನಮ್ ॥ ೪೪॥

ವಸ್ತ್ರ (ದೃಷ್ಟಿ) ಪೂತಂ ತು ಯತ್ತೋಯಂ ಭವೇದ್ವೈ ವಿಪ್ರಸತ್ತಮ ।
ತದ್ವೈ ಪಾಪಹರಂ ಜ್ಞೇಯಂ ಕಿಂ ಪುನಃ ಪಾದಯೋರ್ಜಲಮ್ ॥ ೪೫॥

ಪ್ರಿಯಸ್ತ್ವಂ ಮೇಽಗ್ರಜಃ ಪುತ್ರೋ ವಿಶೇಷೇಣ ಚ ಮತ್ಪ್ರಿಯಃ ।
ತದರ್ಥಂ ಗದಿತಂ ಸರ್ವಂ ರಹಸ್ಯಂ ಯಚ್ಚ ಮೇ ಸ್ಥಿತಮ್ ॥ ೪೬॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ದಶಮೋಽಧ್ಯಾಯಃ॥

ಹೊಂದುವನು. ಕೃಚ್ಛ್ರ ಚಾಂದ್ರಾಯಣಕ್ಕಿಂತಲೂ ವಿಷ್ಣು ಪಾದೋದಕ ಪ್ರಾಶನವು ಮತ್ತು ಧಾರಣವು ಹೆಚ್ಚು ಶ್ರೇಷ್ಠವಾದದ್ದು. ॥೪೧॥೪೨॥ ಯಾವಾತನು ಅಪೇಯವನ್ನು ಪಾನಮಾಡಿರುತ್ತಾನೋ, ನಿಷಿದ್ಧ ಪದಾರ್ಥಗಳನ್ನು ಭಕ್ಷಿಸಿರುತ್ತಾನೋ, ಅಗಮ್ಯವಾದ ಸ್ಥಳಗಳಿಗೆ ಹೋಗಿರುತ್ತಾನೋ, ಆ ಮನುಷ್ಯನು ವಿಷ್ಣುಪಾದೋದಕ ಪ್ರಾಶನ, ಧಾರಣಗಳಿಂದ ಪವಿತ್ರನಾಗುತ್ತಾನೆ. ॥ ೪೩॥ ನನ್ನ ಪಾದಕಮಲಗಳಲ್ಲಿ ಅರ್ಪಿಸಿದ ಅಗುರು, ಕುಂಕುಮ, ಕರ್ಪೂರ ಇವುಗಳ ಅನುಲೇಪನವು ಎಂಥವನನ್ನಾದರೂ ಪವಿತ್ರಗೊಳಿಸುತ್ತವೆ. ॥ ೪೪॥ ಹೇ ವಿಪ್ರೋತ್ತಮ! ಚತುರ್ಮುಖ ಬ್ರಹ್ಮಾ! ನನ್ನ ದೃಷ್ಟಿ ಮಾತ್ರದಿಂದ ಪವಿತ್ರವಾದ ನೀರು ಮನುಷ್ಯರ ಪಾಪಗಳನ್ನು ಕಳೆಯಲು ಸಮರ್ಥವಾಗಿರುವಾಗ ಪಾದೋದಕವು ಪಾಪನಾಶಕವಾಗಿರುವುದೆಂದೇನು ಹೇಳುವುದು? ॥ ೪೫॥ ಅಯ್ಯಾ ವತ್ಸಾ! ನೀನು ನನ್ನ ಜ್ಯೇಷ್ಠ ಕುಮಾರನು ಹಾಗೂ ವಿಶೇಷವಾಗಿ ನನ್ನ ಪ್ರೀತಿಪಾತ್ರನಾಗಿರುವಿ. ಆದ್ದರಿಂದ ನಿನಗೋಸ್ಕರವಾಗಿ ನನ್ನಲ್ಲಿದ್ದ ರಹಸ್ಯಪ್ರಮೇಯಗಳನ್ನೆಲ್ಲ ಅರುಹಿದ್ದೇನೆ. ॥ ೪೬॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿ ಮಾರ್ಗಶೀರ್ಷಮಾಸ ಮಹಾತ್ಮೆಯಲ್ಲಿ ಶ್ರೀವಿಷ್ಣು ಬ್ರಹ್ಮರ ಸಂವಾದದಲ್ಲಿ ''ನೈವೇದ್ಯಾನಂತರದ ವಿಧಿ ಕಥನ'' ಎಂಬ ಹತ್ತನೆಯ ಅಧ್ಯಾಯ ಸಮಾಪ್ತವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೧೧
ಅಖಂಡ ಏಕಾದಶೀವ್ರತ

★

ಬ್ರಹ್ಮೋವಾಚ -

ಏಕಾದಶ್ಯಾಶ್ಚ ಮಾಹಾತ್ಮ್ಯಂ ಉತ್ಪತ್ತಿಂ ಚ ವಿಧಾನಕಮ್ ।
ಸರ್ವಂ ಪ್ರಬ್ರೂಹಿ ಮೇ ತಾತ ಕೃಪಯಾ ಭೂತಭಾವನ ॥ ೧॥

ಶ್ರೀಭಗವಾನುವಾಚ -

ಶ್ರುಣು ಪುತ್ರ ಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಮ್ ।
ಯಾಂ ಶ್ರುತ್ವಾ ವಿಲಯಂ ಯಾತಿ ಪಾಪಂ ಬ್ರಹ್ಮವಧಾದಿಕಮ್ ॥ ೨॥

ಕಾಪಿಲೇ ನಗರೇ ರಾಜಾ ವೀರಬಾಹುರಿತಿ ಸ್ಮೃತಃ ।
ಸತ್ಯವಾದೀ ಜಿತಕ್ರೋಧೋ ಧರ್ಮಜ್ಞೋ ಧರ್ಮತತ್ಪರಃ ॥ ೩॥

ಕ್ಷಮಾವಾನ್ ಸ ದಯಾಶೀಲೋ ರೂಪವಾನ್ ಬಲವಾನ್ ನರಃ ।
ಭಕ್ತೋ ಭಗವತಃ ಪುಂಸಾಂ ಸದಾ ಮಮ ಕಥಾರುಚಿಃ ॥ ೪॥

ಸದಾ ಮಮ ಕಥಾಸಕ್ತಃ ಸದಾ ಜಾಗರಣಪ್ರಿಯಃ ।
ದಾತಾ ವಿದ್ವಾನ್ ಕ್ಷಮಾಶೀಲೋ ವಿಕ್ರಮೀ ವಿಜಿತೇಂದ್ರಿಯಃ ॥ ೫॥

''ಭೋ ದೇವಾಧಿದೇವಾ, ತಾತಪಾದ, ಜಗಜ್ಜನ್ಮಾದಿಕಾರಣಾ ! ಏಕಾದಶಿಯ ಮಹಾತ್ಮೆ ಆದರ ಉತ್ಪತ್ತಿ ಮತ್ತು ಅಂದಿನ ದಿನದ ವಿಧಿಗಳು ಇವೆಲ್ಲವುಗಳನ್ನು ದಯಮಾಡಿ ನನಗೆ ತಿಳಿಸಿ ಅನುಗ್ರಹಿಸು'' ಎಂದು ಬ್ರಹ್ಮನು ಪ್ರಾರ್ಥಿಸಲು ॥ ೧॥ ಶ್ರೀಭಗವಂತನು ಹೇಳುತ್ತಾನೆ - ಅಯ್ಯಾ ವತ್ಸಾ ! ಯಾವ ಏಕಾದಶೀ ಮಹಾತ್ಮೆಯ ಕಥೆಯನ್ನು ಕೇಳುವ ಮಾತ್ರದಿಂದ ಬ್ರಹ್ಮಹತ್ಯಾದಿ ಪಾತಕಗಳು ನಾಶವಾಗಿ ಹೋಗುವವೋ ಅಂಥ ಏಕಾದಶೀ ಮಹಾತ್ಮೆಯನ್ನು ವಿವರಿಸುವೆನು ಕೇಳು. ॥ ೨॥ ಹಿಂದಕ್ಕೆ ಕಾಪಿಲವೆಂಬ ನಗರದಲ್ಲಿ ವೀರಬಾಹು ಎಂಬ ಹೆಸರಿನ ಒಬ್ಬ ರಾಜನಿದ್ದನು. ಅವನು ಸತ್ಯವಾದಿಯೂ, ಜಿತಕ್ರೋಧನೂ, ಧರ್ಮಜ್ಞನೂ, ಧರ್ಮತತ್ಪರನೂ ಆಗಿದ್ದನು. ॥ ೩॥ ಇಷ್ಟಲ್ಲದೇ ಕ್ಷಮಾಶೀಲನೂ, ದಯಾವಂತನೂ, ಸುರೂಪನೂ, ಬಲವಂತನೂ ಆಗಿದ್ದನು. ಭಗವದ್ ಭಕ್ತನಾದ ಅವನು ಸದಾಕಾಲ ನನ್ನ ಮಹಾತ್ಮ್ಯ ಕಥನಗಳಲ್ಲಿ ಅಭಿರುಚಿಯುಳ್ಳವನೂ ಹಾಗೂ ॥ ೪॥ ನನ್ನ ಕಥಾಶ್ರವಣದಲ್ಲಿ ಆಸಕ್ತಿಯುಳ್ಳವನೂ ಆಗಿದ್ದನು. ಜಾಗರಣಪ್ರಿಯನೂ, ದಾನಿಯೂ, ಜ್ಞಾನಿಯೂ, ಕ್ಷಮಾಶೀಲನೂ, ವಿಕ್ರಮಿಯೂ, ಜಿತೇಂದ್ರಿಯನೂ,॥ ೫॥ ವಿಜಯಶೀಲನೂ, ರಣವೀರನೂ ಹಾಗೂ

ವಿಜಯೀ ರಣಶೂರಶ್ಚ ಋದ್ಧ್ಯಾ ಚ ಧನದೋಪಮಃ।
ಪುತ್ರವಾನ್ ಪೌತ್ರವಾನ್ ಚೈವ ಸ್ವದಾರನಿರತಸ್ತಥಾ ॥ ೬॥

ತಸ್ಯ ಭಾರ್ಯಾ ಕಾಂತಿಮತೀ ರೂಪೇಣಾಪ್ರತಿಮಾ ಭುವಿ ।
ಪತಿವ್ರತಾ ಮಹಾ ಸಾಧ್ವೀ ಮಮ ಭಕ್ತಿರತಾ ಸದಾ ॥ ೭॥

ತಯಾ ಸಹ ವಿಶಾಲಾಕ್ಷೋ ಬುಭುಜೇ ಮೇದಿನೀಂ ಯುವಾ ।
ಮುಕ್ತ್ವೈಕಮ್ ಮಾಂ ಮಹಾಬಾಹೋ ನಾನ್ಯಜ್ಞಾನಾತಿ ದೈವತಮ್ ॥ ೮ ॥

ಏಕಸ್ಮಿನ್ ದಿವಸೇ ಪುತ್ರ ಭಾರದ್ವಾಜೋ ಮಹಾಮುನಿಃ ।
ಸಮಾಗತೋ ಗೃಹೇ ತಸ್ಯ ವೀರಬಾಹೋರ್ಮಹಾತ್ಮನಃ ॥ ೯॥

ದೃಷ್ಟ್ವಾ ಸಮಾಗತಂ ದೂರಾತ್ ಭಾರದ್ವಾಜಂ ಮಹಾಮುನಿಮ್ ।
ಸ್ವಾಗತಂ ಕಾರಯಾಮಾಸ ದತ್ತ್ವಾರ್ಘ್ಯಂ ವಿಧಿವತ್ತದಾ ॥ ೧೦॥

ಆಸನಂ ಕಲ್ಪಯಾಮಾಸ ಸ್ವಯಮೇವ ಮಹೀಪತಿಃ ।
ಪ್ರಣಮ್ಯ ಪರಯಾ ಭಕ್ತ್ಯಾ ತಸ್ಥೌ ಮುನಿವರಾಗ್ರತಃ ॥ ೧೧॥

ರಾಜೋವಾಚ -
ಅದ್ಯ ಮೇ ಸಫಲಂ ಜನ್ಮ ಆದ್ಯ ಮೇ ಸಫಲಂ ದಿನಮ್ ।
ಅದ್ಯ ಮೇ ಸಫಲಂ ರಾಜ್ಯಂ ಅದ್ಯ ಮೇ ಸಫಲಂ ಗೃಹಮ್ ॥ ೧೨॥

ಕುಬೇರನಂತೆ ದ್ರವ್ಯವುಳ್ಳವನೂ ಆದ ಅವನು ಪುತ್ರ ಪೌತ್ರರಿಂದ ಮತ್ತು ತನ್ನ ಪತ್ನಿಯಿಂದ ಕೂಡಿಕೊಂಡು ಸುಖದಿಂದ ಇದ್ದನು. ॥ ೬॥ ಕಾಂತಿಮತೀ ಎಂದು ಪ್ರಸಿದ್ಧಳಾದ ಆ ರಾಜನ ಹೆಂಡತಿಯು ಜಗತ್ತಿನೊಳಗೆ ರೂಪ ಲಾವಣ್ಯದಲ್ಲಿ ಅಪ್ರತಿಮಳಾಗಿದ್ದಳು. ಪತಿವ್ರತಾ ಮಹಾಸಾಧ್ವಿಯಾದ ಅವಳು ಸದಾ ನನ್ನಲ್ಲಿ ಭಕ್ತಿಯುತಳಾಗಿದ್ದಳು. ॥ ೭॥ ಇಂಥ ಪತ್ನಿಯೊಂದಿಗೆ ಕೂಡಿಕೊಂಡು ವಿಶಾಲಾಕ್ಷನಾದ ತರುಣ ವೀರಬಾಹು ರಾಜನು ವಿಶಾಲವಾದ ಭೂಮಿಯನ್ನು ಆಳುತ್ತ ಸುಖದಿಂದ ಇದ್ದನು. ಮುಕ್ತಿಯನ್ನು ಅಪೇಕ್ಷಿಸುವ ಮಹಾತ್ಮನಾದ ಅವನು ನನ್ನನ್ನು ಬಿಟ್ಟು ಬೇರೊಬ್ಬ ದೇವತೆಯನ್ನು ಸೇವಿಸುತ್ತಿರಲಿಲ್ಲ. ॥೮॥ ಹೇ ವತ್ಸಾ ! ಈ ಪ್ರಕಾರ ಆ ರಾಜನು ಇರುತ್ತಿರಲು ಒಮ್ಮೆ ಭಾರದ್ವಾಜ ಮಹಾಮುನಿಗಳು ಮಹಾತ್ಮನಾದ ಆ ವೀರಬಾಹು ರಾಜನ ಅರಮನೆಗೆ ದಯಮಾಡಿಸಿದರು. ॥ ೯॥ ಬಹು ದೂರದಿಂದ ಅರಮನೆಗೆ ಬಂದಿರುವ ಭಾರದ್ವಾಜ ಮುನಿಗಳನ್ನು ಕಂಡು ರಾಜನು ಅವರಿಗೆ ವಿಧಿಪೂರ್ವಕ ಅರ್ಘ್ಯವನ್ನು ಕೊಟ್ಟು ಸ್ವಾಗತವನ್ನು ಕೋರಿದನು. ॥ ೧೦॥ ರಾಜನು ಸ್ವತಃ ಆ ಮುನಿವರಗೆ ಆಸನವನ್ನು ಕೊಟ್ಟು ಪರಮಭಕ್ತಿಯಿಂದ ನಮಸ್ಕರಿಸಿ ಅವರೆದುರು ಕೈ ಜೋಡಿಸಿಕೊಂಡು ನಮ್ರನಾಗಿ ನಿಂತು ॥ ೧೧॥ ನುಡಿಯುತ್ತಾನೆ - 'ಮುನಿಶ್ರೇಷ್ಠರೇ!

ಪ್ರಸನ್ನೋ ಮಮ ವಿಪ್ರರ್ಷೇ ಪರಮಾತ್ಮಾ ಜನಾರ್ದನಃ ।
ಯತ್ತ್ವಂ ಸಮಾಗತೋ ಹ್ಯದ್ಯ ಗೃಹೇ ಯೋಗಿವರಸ್ತಥಾ ॥ ೧೩॥

ಮುಕ್ತೋಽಹಂ ಪಾಪಪಂಕೌಘಾದ್ಯಸ್ತ್ವಯಾಹಂ ನಿರೀಕ್ಷಿತಃ ।
ರಾಜ್ಯಂ ಲಕ್ಷ್ಮೀರ್ಗಜಾ ಹ್ಯಶ್ವಾ ಮಯಾ ತುಭ್ಯಂ ನಿವೇದಿತಾಃ ॥ ೧೪॥

ವೈಷ್ಣವೋಽಸಿ ಮುನಿಶ್ರೇಷ್ಠ ನಾಸ್ತ್ಯದೇಯಂ ಮಯಾಽನಘ ।
ಮೇರುತುಲ್ಯಂ ಭವೇತ್ಸರ್ವಂ ವೈಷ್ಣವಸ್ಯ ಕರೇಽರ್ಪಿತಮ್ ॥ ೧೫॥

ಆಯಾತಿ ಹಿ ಗೃಹೇ ಯಸ್ಯ ವೈಷ್ಣವೋ ಯದ್ದ್ವಿಜೋತ್ತಮಃ ।
ತದ್ದಿನಂ ಸಫಲಂ ತಸ್ಯ ಕಥಿತಂ ಬ್ರಾಹ್ಮಣೈರ್ಮಮ ॥ ೧೬॥

ವಿಷ್ಣುಭಕ್ತಾಶ್ಚ ಯೇ ಕೇಚಿತ್ಸರ್ವೇ ವರ್ಣಾ ದ್ವಿಜಾತಯಃ ।
ಕಥಿತಂ ಮಮ ಗಾರ್ಗೇಣ ಗೌತಮೇನ ಸುಮಂತುನಾ ॥ ೧೭॥

ಯೇ ನ ಭಕ್ತಾ ಹೃಷಿಕೇಶೇ ಪಿಶಾಚಾಸ್ತೇ ಚ ಮಾನವಾಃ ।
ಮಹಾಪಾತಕಲಿಪ್ತಾಸ್ತೇ ಯೇ ಭುಂಜಂತಿ ಹರೇರ್ದಿನೇ ॥ ೧೮॥

ಶಿವವ್ರತಸಹಸ್ರೈಶ್ಚ ಸೌರ್ಯೈರ್ಬ್ರಾಹ್ಮ್ಯೈಶ್ಚ ಕೋಟಿಭಿಃ ।
ಯತ್ಫಲಂ ಕವಿಭಿಃ ಪ್ರೋಕ್ತಂ ವಾಸರೈಕೇನ ತದ್ಧರೇಃ ॥ ೧೯॥

ಇಂದು ನನ್ನ ಜನ್ಮವು ಸಫಲವಾಯಿತು, ಇಂದಿನ ನನ್ನ ದಿನವು ಸಫಲವಾಯಿತು, ನನ್ನ ರಾಜ್ಯವಿಂದು ಕೃತಾರ್ಥವಾಯಿತು, ನನ್ನ ಗೃಹವಿಂದು ಪವಿತ್ರವಾಯಿತು. ॥೧೨॥ ಭೋ ಬ್ರಾಹ್ಮಣೋತ್ತಮರೇ ! ಯೋಗಿವರರಾದ ತಾವು ಇಂದು ನನ್ನ ಅರಮನೆಗೆ ದಯಮಾಡಿಸಿದ್ದರಿಂದ ಭಗವಾನ್ ಶ್ರೀಹರಿ ಜನಾರ್ದನನು ನನ್ನ ಮೇಲೆ ಪ್ರಸನ್ನನಾಗಿರುವಲ್ಲಿ ಸಂದೇಹವೇ ಇಲ್ಲ. ॥೧೩॥ ತಮ್ಮ ಪ್ರಸನ್ನ ದೃಷ್ಟಿಯಿಂದ ಇಂದು ನಾನು ನೋಡಲ್ಪಟ್ಟಿರುವುದರಿಂದ ನಾನು ಪಾಪಗಳೆಂಬ ಕೆಸರಿನಿಂದ ಉದ್ಧೃತನಾಗಿದ್ದೇನೆ. ನನ್ನ ಸಕಲ ರಾಜ್ಯವನ್ನು ಸಂಪತ್ತನ್ನು, ಗಜಾಶ್ವಗಳನ್ನೆಲ್ಲ ನಾನಿಂದು ತಮ್ಮ ಅಡಿದಾವರೆಗಳಲ್ಲಿ ಸಮರ್ಪಿಸಿದ್ದೇನೆ. ॥೧೪॥ ಭೋ ಮುನಿಶ್ರೇಷ್ಠರೇ ! ತಾವು ಪರಮ ವೈಷ್ಣವರು, ಪಾಪದೂರರಾದ ಮಹಾತ್ಮರೇ ! ತಮಗೆ ಕೊಡದಿರುವುದು ಏನಿದೆ? ವೈಷ್ಣವರಿಗೆ ಸಮರ್ಪಿಸಿದುದೆಲ್ಲವೂ ವೃದ್ಧಿಯಾಗಿ ಮೇರುಪರ್ವತದಷ್ಟಾಗುತ್ತದೆ. ॥೧೫॥ ಯಾವ ದಿನದಂದು ವಿಷ್ಣು ಭಕ್ತನು ಯಾವನ ಮನೆಗೆ ಆಗಮಿಸುವನೋ ಅಂದಿನ ದಿನವೇ ಅವನಿಗೆ ಸಫಲವಾದದ್ದು ಎಂದು ಬ್ರಾಹ್ಮಣರು ನನಗೆ ತಿಳಿಸಿದ್ದಾರೆ. ॥೧೬॥ ವಿಷ್ಣುಭಕ್ತರಾದವರು ಯಾವುದೇ ವರ್ಣದವರಿದ್ದರೂ ಅವರು ದ್ವಿಜರೇ ಎಂದು ಗಾರ್ಗ್ಯ, ಗೌತಮ ಮತ್ತು ಸುಮಂತು ಇವರು ನನಗೆ ತಿಳಿಸಿದ್ದಾರೆ. ॥೧೭॥ ಶ್ರೀಹರಿ ಹೃಷೀಕೇಶನ ಭಕ್ತರಾಗದಿದ್ದ ಮಾನವರು ಪಿಶಾಚರೇ ಸರಿ. ಹರಿದಿನದಲ್ಲಿ ಊಟ ಮಾಡುವ ಮನುಷ್ಯರು

ಗರ್ವಮುದ್ವಹತೇ ತಾವತ್ತಿಥಿರ್ಬ್ರಾಹ್ಮೀ ಚ ಶಾಂಕರೀ ।
ಯಾವನ್ನಾಯಾತಿ ವಿಪ್ರೇಂದ್ರ, ದ್ವಾದಶೀ ಚಕ್ರಪಾಣಿನಃ ॥ ೨೦॥

ತಾವತ್ಪ್ರಭಾವಸ್ತಾರಾಣಾಂ ಯಾವನ್ನೋದಯತೇ ಶಶೀ (ರವಿಃ) ।
ತಿಥಯಸ್ತಾವದ್ವಿಪ್ರೇಂದ್ರ, ಯಾವನ್ನಾಯಾತಿ ದ್ವಾದಶೀ ॥ ೨೧॥

ನಾರದೇನ ಪುರಾ ಪ್ರೋಕ್ತಂ ವಸಿಷ್ಠೇನ ಮಮಾಗ್ರತಃ ।
ತ್ವಂ ವೇತ್ತಾ ಸರ್ವಧರ್ಮಾಣಾಂ ವೈಷ್ಣವಾನಾಂ ಮಹಾಮುನೇ ॥ ೨೨॥

ಭಾರದ್ವಾಜ ಉವಾಚ -
ಸಾಧು ಪ್ರಷ್ಟಂ ಮಹಾಭಾಗ ಯತ್ತ್ವಂ ಭಕ್ತೋಽಸಿ ವೈಷ್ಣವಃ ।
ಸಾ ಚ ಪ್ರಜಾ ಮಹೀಧನ್ಯಾ ಯಾಂ ತ್ವಂ ರಕ್ಷಸಿ ಭೂಮಿಪ ॥ ೨೩॥

ತಸ್ಮಿನ್ ರಾಷ್ಟ್ರೇ ನ ವಸ್ತವ್ಯಂ ಯತ್ರ ರಾಜಾ ನ ವೈಷ್ಣವಃ ।
ವರಂ ವಾಸೋ ವನೇ ತೀರ್ಥೇ ನ ತು ರಾಷ್ಟ್ರೇ ಹ್ಯವೈಷ್ಣವೇ ॥ ೨೪॥

ಮಹಾಪಾತಕಗಳನ್ನು ಹೊಂದುತ್ತಾರೆ. ॥ ೧೮॥ ಸಹಸ್ರ ಶಿವವ್ರತಗಳನ್ನು ಮಾಡುವುದರಿಂದ, ಒಂದು ಕೋಟಿ ಸೂರ್ಯ ಮತ್ತು ಬ್ರಾಹ್ಮ ವ್ರತಗಳಿಂದ ಯಾವ ಫಲವು ಬರುವದೆಂದು ಜ್ಞಾನಿಗಳು ಹೇಳಿರುವರೋ ಆ ಫಲವು ಕೇವಲ ಒಂದು ಹರಿದಿನದಿಂದ ಪ್ರಾಪ್ತವಾಗುವದು. ॥೧೯॥ ಭೋ ವಿಪ್ರೇಂದ್ರರೇ ! ಚಕ್ರಪಾಣಿಗೆ ಪ್ರಿಯವಾದ ದ್ವಾದಶೀ ತಿಥಿಯು ಬರುವವರೆಗೆ ಮಾತ್ರ ಬ್ರಹ್ಮ ಮತ್ತು ಶಂಕರ ಇವರ ಸಂಬಂಧಿಯಾದ ತಿಥಿಗಳು ಹೆಮ್ಮೆಯಿಂದ ಇರುವವು . ॥ ೨೦॥ ಶಶಿಯ (ರವಿಯ) ಉದಯವಾಗುವವರೆಗೆ ಮಾತ್ರ ಆಕಾಶದಲ್ಲಿ ತಾರೆಗಳ ಪ್ರಭಾವವಿರುವದಷ್ಟೇ! ಅದರಂತೆ ದ್ವಾದಶೀ ತಿಥಿಯು ಬರುವವರೆಗೆ ಮಾತ್ರ ಇತರ ತಿಥಿಗಳ ಆಟವು ! ॥ ೨೧॥ ಮಹಾಮುನಿಗಳೇ ! ತಾವು ವೈಷ್ಣವಧರ್ಮಗಳನ್ನೆಲ್ಲ ಬಲ್ಲವರು ಎಂಬ ವಿಷಯವನ್ನು ಹಿಂದಕ್ಕೆ ನಾರದರು ಮತ್ತು ವಶಿಷ್ಠರು ನನಗೆ ತಿಳಿಸಿದ್ದಾರೆ.' ॥ ೨೨॥ ರಾಜನ ಈ ನುಡಿಗಳನ್ನು ಕೇಳಿದ ಭಾರದ್ವಾಜರು ಹೇಳುತ್ತಾರೆ - 'ಎಲೈ ಪುಣ್ಯವಂತನಾದ ಮಹಾರಾಜನೇ ! ಒಳ್ಳೆಯ ಮಾತುಗಳನ್ನಾಡಿರುವಿ. ನೀನು ವೈಷ್ಣವನು, ವಿಷ್ಣುಭಕ್ತನಾಗಿರುವಿ. ಇಂಥ ನೀನು ಯಾವ ಭೂಮಿಯ ಪಾಲಕನಾಗಿರುವಿಯೋ ಅಲ್ಲಿ ವಾಸಿಸುವ ಪ್ರಜೆಗಳೇ ಮಹಾಭಾಗ್ಯವಂತರು. ॥ ೨೩॥ ಯಾವ ರಾಜ್ಯದ ಪಾಲಕನು ವೈಷ್ಣವನಲ್ಲವೋ ಅಂಥ ರಾಜ್ಯದಲ್ಲಿ ಸರ್ವಥಾ ವಾಸಿಸಬಾರದು. ಅವೈಷ್ಣವ ರಾಷ್ಟ್ರದಲ್ಲಿ ವಾಸಮಾಡುವದಕ್ಕಿಂತಲೂ ಕಾಡಿನಲ್ಲಿ ಅಥವಾ ತೀರ್ಥದಲ್ಲಿ ವಾಸಿಸುವುದು ಶ್ರೇಷ್ಠವಾದುದು. ॥ ೨೪॥ ಯಾವ ನಾಡಿನೊಳಗೆ ರಾಜನು ಭಗವದ್ಭಕ್ತನಾಗಿದ್ದು ರಾಜ್ಯವನ್ನು ಪರಿಪಾಲಿಸುವನೋ ಪಾಪವರ್ಜಿತವಾದ ಆ ರಾಜ್ಯವನ್ನು ವೈಕುಂಠಕ್ಕೆ ಸಮಾನವೆಂದು ತಿಳಿಯಬೇಕು. ॥ ೨೫॥ ಚಕ್ಷುರ್ಹೀನವಾದ ಶರೀರವು , ಪತಿರಹಿತರಾದ

ಯತ್ರ ಭಾಗವತೋ ರಾಜಾ ಸಂಪ್ರಶಾಸ್ತಿ ಚ ಮೇದಿನೀಮ್ ।
ವೈಕುಂಠಮಿತಿ ಮಂತವ್ಯಂ ತದ್ರಾಷ್ಟ್ರಂ ಪಾಪವರ್ಜಿತಮ್ ॥ ೨೫॥

ಚಕ್ಷುರ್ಹೀನಂ ಯಥಾ ದೇಹಂ ಪತಿಹೀನಾ ಯಥಾ ಸ್ತ್ರಿಯಃ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೨೬॥

ದಾನಹೀನೋ ಯಥಾ ರಾಜಾ ಬ್ರಾಹ್ಮಣೋ ರಸವಿಕ್ರಯೀ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೨೭॥

ದಂತಹೀನೋ ಯಥಾ ಹಸ್ತೀ ಪಕ್ಷಹೀನೋ ಯಥಾ ಖಗಃ
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೨೮॥

ಪ್ರತಿಗ್ರಹಾರ್ಥಂ ವೇದಾದಿ ದ್ರವ್ಯಾರ್ಥಂ ಸುಕೃತಂ ಯಥಾ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೨೯॥

ದರ್ಭಹೀನಾ ಯಥಾ ಸಂಧ್ಯಾ ಯಥಾ ಶ್ರಾದ್ಧಮದಕ್ಷಿಣಮ್ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೩೦॥

ಸಶಿಖಶ್ಚ ಯಥಾ ಶೂದ್ರಃ ಕಪಿಲಾ ಕ್ಷೀರಪಾಯಿನಮ್
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೩೧॥

ಸ್ತ್ರೀಯರು ಹಾಗೂ ದಶಮೀಯುಕ್ತವಾದ ಏಕಾದಶೀ (ದ್ವಾದಶಿಯು) ಹೇಗೋ ಹಾಗೆ ವೈಷ್ಣವರಿಲ್ಲದ ದೇಶವು ಶೋಭಿಸುವುದಿಲ್ಲ. ॥೨೬॥ ದಾನ ಧರ್ಮ ಮಾಡದ ರಾಜನು, ರಸಪದಾರ್ಥಗಳ ವ್ಯಾಪಾರ ಮಾಡುವ ಬ್ರಾಹ್ಮಣನು, ದಶಮೀಯುಕ್ತವಾದ ಏಕಾದಶಿಯು (ದ್ವಾದಶಿಯು) ॥ ೨೭॥ ದಂತವಿಲ್ಲದ ಆನೆಯು, ರೆಕ್ಕೆಗಳಿಲ್ಲದ ಪಕ್ಷಿಯು ಹೇಗೆ ಶೋಭಿಸುವದಿಲ್ಲವೋ ಹಾಗೆ ವೈಷ್ಣವರಿಲ್ಲದ ದೇಶವು ಶೋಭಿಸುವದಿಲ್ಲ. ।೨೮॥ ಪ್ರತಿಗ್ರಹಾರ್ಥವಾಗಿ ವೇದಾಧ್ಯಯನ ಮಾಡಿಸುವುದು, ದ್ರವ್ಯ ಸಂಪಾದನೆಗೆ ಪುಣ್ಯಕರ್ಮ ಮಾಡುವುದು ॥ ದರ್ಭವಿಲ್ಲದೇ ಮಾಡಿದ ಸಂಧ್ಯಾಕರ್ಮವು, ದಕ್ಷಿಣಾದಿಗಳನ್ನು ಕೊಡದೇ ಮಾಡಿದ ಶ್ರಾದ್ಧಕರ್ಮವು ॥ ಶಿಖೆಯಿಂದ ಯುಕ್ತನಾದ ಶೂದ್ರನು, ಕಪಿಲಾಗೋವಿನ ಕ್ಷೀರಪಾನ ಮಾಡುವುದು ॥ ಬ್ರಾಹ್ಮಣ ಸ್ತ್ರೀ ಸಂಗ ಮಾಡುವ ಶೂದ್ರನು, ಸುವರ್ಣಾಪಹಾರಕನು, ಧರ್ಮನಿಂದೆ ಮಾಡುವ ಪುರುಷನು ॥ ಹರಿ ಸೂರ್ಯ ಮೊದಲಾದ ವೃಕ್ಷಗಳ ಛೇದನವು ॥ ಮಂತ್ರಹೀನವಾದ ಆಹುತಿಯು, ಕೂಸು ಮೃತವಾದ ಹೆಂಗುಸಿನ ಹಾಲು॥ ಸಕೇಶಾ ವಿಧವಾ ಸ್ತ್ರೀ, ಸ್ನಾನವಿಲ್ಲದೇ ಮಾಡುವ ವ್ರತ, ದಶಮೀಯುಕ್ತವಾದ ದ್ವಾದಶೀ ಇವೇ ಮೊದಲಾದವು ನಿಂದ್ಯವಾಗಿರುವಂತೆ ವೈಷ್ಣವರಿಲ್ಲದ ರಾಷ್ಟ್ರವು ನಿಂದ್ಯವಾಗಿರುತ್ತದೆ. ॥೨೯-೩೫॥ ಮಧುಸೂದನನಲ್ಲಿ ಭಕ್ತಿಯುಳ್ಳ ರಾಜನೇ

ಬ್ರಾಹ್ಮಣೇಗಾಮಿನಂ ಶೂದ್ರಂ ಹೇಮಜಂ ಧರ್ಮದೂಷಕಮ್ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೩೨॥

ಹರಿಸೂರ್ಯಾದಿವೃಕ್ಷಾಣಾಂ ಯಥಾ ಭೇದಂ ನರೋತ್ತಮ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೩೩॥

ಯಥಾಹುತೀರ್ಮಂತ್ರಹೀನಾ ಮೃತವತ್ಸಾಪಯೋ ಯಥಾ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೩೪॥

ಸಕೇಶಾ ವಿಧವಾ ಯದ್ವದ್ವ್ರತಂ ಸ್ನಾನವಿವರ್ಜಿತಮ್ ।
ದ್ವಾದಶೀ ದಶಮೀಯುಕ್ತಾ ತಥಾ ರಾಷ್ಟ್ರಮವೈಷ್ಣವಮ್ ॥ ೩೫॥

ಸ ರಾಜಾ ಪ್ರೋಚ್ಯತೇ ಸದ್ಭಿರ್ಯೋ ಭಕ್ತೋ ಮಧುಸೂದನೇ ।
ತದ್ರಾಷ್ಟ್ರಂ ವರ್ಧತೇ ನಿತ್ಯಂ ಸುಖೀ ಭವತಿ ಸಪ್ರಜಃ ॥ ೩೬॥

ದೃಷ್ಟಿರ್ಮೇ ಸಫಲಾ ರಾಜನ್ಯತ್ತ್ವಯಾಹಂ ನಿರೀಕ್ಷಿತಃ ।
ಅದ್ಯ ಮೇ ಸಫಲಾ ವಾಣೀ ಜಲ್ಪತೇ ಯಾ ತ್ವಯಾ ಸಹ ॥ ೩೭॥

ದೂರಮೇವ ಹಿ ಗಂತವ್ಯಂ ಶ್ರೂಯತೇ ಯತ್ರ ವೈಷ್ಣವಃ ।
ದರ್ಶನಾಲ್ಲಭತೇ ಪುಣ್ಯಂ ತೀರ್ಥಸ್ನಾನಸಮುದ್ಭವಮ್ ॥ ೩೮॥

ಸ ತ್ವಂ ರಾಜನ್ಮಯಾ ದೃಷ್ಟೋ ವಿಷ್ಣುಭಕ್ತಿರತಃ ಶುಚಿಃ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸುಖೀ ಭವ ನರಾಧಿಪ ॥ ೩೯॥

ನಿಜವಾದ ರಾಜನೆಂದು ಜ್ಞಾನಿಗಳು ಹೇಳುವರು. ಅಂಥ' ರಾಜನಿರುವ ರಾಜ್ಯವು ನಿತ್ಯವೂ ಸಂಪದ್ಭರಿತವಾಗಿ ವರ್ಧಿಸುವುದು, ಹಾಗೂ ಅಲ್ಲಿ ಪ್ರಜೆಗಳು ಹಾಗೂ ರಾಜನು ಸುಖಿಯಾಗಿರುವರು. ॥ ೩೬॥ ಹೇ ರಾಜನೇ! ವಿಷ್ಣುಭಕ್ತನಾದ ನೀನು ನನ್ನನ್ನು ನೋಡಿದ್ದರಿಂದ ಹಾಗೂ ನಾನು ನಿನ್ನನ್ನು ನೋಡಿದ್ದರಿಂದ ನನ್ನ ದೃಷ್ಟಿಯು ಇಂದು ಪವಿತ್ರವಾಯಿತು. ನಿನ್ನೊಂದಿಗೆ ಮಾತನಾಡುತ್ತಿರುವ ನನ್ನ ಈ ನಾಲಿಗೆಯು ಹಾಗೂ ನನ್ನ ವಾಣಿಯು ಇಂದು ಧನ್ಯವಾದವು. ॥ ೩೭॥ ವಿಷ್ಣುಭಕ್ತನಿರುವನೆಂದು ತಿಳಿದು ಬಂದಾಕ್ಷಣ ಅವನು ದೂರದಲ್ಲಿದ್ದರೂ ಪ್ರಯತ್ನಬಟ್ಟು ಆ ಸ್ಥಳಕ್ಕೆ ಹೋಗಬೇಕು. ಅಂಥ ವಿಷ್ಣುಭಕ್ತನ ದರ್ಶನ ಮಾತ್ರದಿಂದ ತೀರ್ಥಸ್ನಾನದಿಂದ ಪ್ರಾಪ್ತವಾಗುವ ಪುಣ್ಯವು ಲಭಿಸುವದು. ॥ ೩೮॥ ಈ ರೀತಿ ವೈಷ್ಣವನಾದ, ವಿಷ್ಣುಭಕ್ತಿಯಲ್ಲಿ ರತನಾದ ಹಾಗೂ ಶುದ್ಧನಾದ ನಿನ್ನನ್ನು ನಾನಿಂದು ಕಂಡೆನು. ನಿನಗೆ ಕ್ಷೇಮವಾಗಲಿ. ಹೇ ರಾಜಾ! ನೀನು ಸುಖವಾಗಿರು. ನಾನಿನ್ನು ಹೊರಡುವೆನು. ॥೩೯॥

ಏತಸ್ಮಿನ್ನಂತರೇ ರಾಜಾ ಕಾಂತಿಮತ್ಯಾ ನಮಸ್ಕೃತಃ ।
ಭಾರದ್ವಾಜೋ ಮುನಿಶ್ರೇಷ್ಠಃ ಪ್ರವರಃ ಸರ್ವಯೋಗಿನಾಮ್ ॥ ೪೦॥

ಅವೈಧವ್ಯಂ ವರಾರೋಹೇ ಭಕ್ತ್ಯಾ ಭವ ಸ್ವಭರ್ತರಿ ।
ನಿಶ್ಚಲಾ ಕೇಶವೇ ಭಕ್ತಿಃ ಸದಾ ಭವತು ತೇ ಶುಭೇ ॥ ೪೧॥

ಏತಸ್ಮಿನ್ನಂತರೇ ರಾಜಾ ಭಾರದ್ವಾಜಂ ಮಹಾಮುನಿಮ್ ।
ಉವಾಚ ಪ್ರೀಣಯನ್ ವಾಕ್ಯಂ ಮೇಘನಾದಗಭೀರಯಾ ॥ ೪೨॥

ರಾಜೋವಾಚ -

ವಿಪುಲಾ ಮೇ ಕಥಂ ಲಕ್ಷ್ಮೀಃ ಕಿಂ ಕೃತಂ ಪೂರ್ವಜನ್ಮನಿ ।
ಸರ್ವಂ ಬ್ರೂಹಿ ಮುನಿಶ್ರೇಷ್ಠ ಕೃಪಾ ಯದಿ ಮಮೋಪರಿ ॥ ೪೩॥

ಏತನ್ಮಯಾ ಕಥಂ ಪ್ರಾಪ್ತಂ ರಾಜ್ಯಂ ನಿಹತಕಂಟಕಮ್ ।
ಪುತ್ರೋ ವೈ ಗುಣವಾನ್ ಶ್ರೇಷ್ಠಃ ಪ್ರಿಯಾ ಚ ಸುಮನೋಹರಾ ॥ ೪೪॥

ಮಚ್ಚಿತ್ತಾ ಮದ್ಗತಪ್ರಾಣಾ ಚಿಂತಯಂತೀ ಜನಾರ್ದನಮ್ ।
ಕೋಽಹಂ ಮುನೇ ಕಥಂ ಚೈಷಾ ಕಶ್ಚ ಧರ್ಮೋ ಮಯಾ ಕೃತಃ ॥ ೪೫॥

ಈ ರೀತಿ ಭಾರದ್ವಾಜ ಮುನಿಗಳು ಹೇಳುತ್ತಿರುವಾಗ ರಾಜನಿಂದಲೂ ಹಾಗೂ ಅವನ ಧರ್ಮಪತ್ನಿಯಿಂದಲೂ ನಮಸ್ಕೃತರಾದ ಯೋಗಿವರ್ಯರಾದ, ಮುನಿಶ್ರೇಷ್ಠರಾದ ಭಾರದ್ವಾಜರು ॥೪೦॥ 'ಹೇ ಕಮಲಮುಖಿಯೇ ! ನೀನು ದೀರ್ಘ ಸುಮಂಗಲಿಯಾಗು. ನಿನ್ನ ಪತಿಯಲ್ಲಿ ಭಕ್ತಿಯುಳ್ಳವಳಾಗು, ಶ್ರೀಕೇಶವನಲ್ಲಿ ನಿನಗೆ ಸದಾಕಾಲ ನಿಶ್ಚಲವಾದ ಭಕ್ತಿಯುಂಟಾಗಲಿ' ಎಂದು ಆಶೀರ್ವದಿಸಿದರು. ॥೪೧॥ ಅಷ್ಟರಲ್ಲಿ ರಾಜನು ಭಾರದ್ವಾಜ ಮುನಿಗಳನ್ನು ಕುರಿತು ಮೇಘಗರ್ಜನೆಯಂತೆ ಗಂಭೀರವಾದ ಧ್ವನಿಯಿಂದ ಮಾತನಾಡಿದನು. ॥ ೪೨॥ ಏನೆಂದರೆ, 'ಭೋ ಮುನಿವರ್ಯರೇ! ನನ್ನಲ್ಲಿ ಅನುಗ್ರಹ ಮಾಡುವುದಾದರೆ, ಈ ವಿಪುಲವಾದ ಸಂಪತ್ತು ನನಗೆ ಹೇಗೆ ಬಂದಿತು ? ಪೂರ್ವಜನ್ಮದಲ್ಲಿ ನಾನೇನು ಮಾಡಿದ್ದೆನು? ಇದೆಲ್ಲವನ್ನು ನೀವು ನನಗೆ ತಿಳಿಸಬೇಕು. ॥ ೪೩॥ ನಿಷ್ಕಂಟಕವಾದ ಈ ರಾಜ್ಯವು ನನಗೆ ಹೇಗೆ ಪ್ರಾಪ್ತವಾಯಿತು ? ನನ್ನ ಮಗನಾದರೋ ಸದ್ಗುಣಿಯಾಗಿದ್ದಾನೆ, ಶ್ರೇಷ್ಠನಾಗಿದ್ದಾನೆ. ಪತ್ನಿಯಾದರೋ ಅಪ್ರತಿಮ ಲಾವಣ್ಯವತಿಯಾಗಿದ್ದಾಳೆ. ॥ ೪೪॥ ನನ್ನಲ್ಲೇ ಮನಸ್ಸಿಟ್ಟ ಅವಳು ನನ್ನನ್ನು ಅತಿಯಾಗಿ ಪ್ರೀತಿಸುತ್ತಾಳೆ. ಸದಾಕಾಲ ಜನಾರ್ದನನನ್ನು ಧ್ಯಾನಿಸುತ್ತಾಳೆ. ಭೋ ಮುನಿಗಳೇ! ನಾನು ಪೂರ್ವಜನ್ಮದಲ್ಲಿ ಯಾರು? ಇವಳಾರು? ಪೂರ್ವ ಜನ್ಮದಲ್ಲಿ ನಾನು ಅದಾವ ಧರ್ಮವನ್ನು ಆಚರಿಸಿದ್ದೆನು ? ॥ ೪೫॥ ಮತ್ತು ಸುಂದರಾಂಗಿಯಾದ ಈ ನನ್ನ ಹೆಂಡತಿಯು ಪೂರ್ವಜನ್ಮದಲ್ಲಿ ಅದಾವ ಶುಭ

ಕಿಂ ಚಾನಯಾಪಿ ಚಾರ್ವಂಗ್ಯಾ ಮಮ ಪತ್ನ್ಯಾ ಕೃತಂ ಮುನೇ ।
ಕೇನ ಪುಣ್ಯೇನ ಮೇ ಲಕ್ಷ್ಮೀಃ ಮೃತ್ಯುಲೋಕೇ ಸುದುರ್ಲಭಾ ॥ ೪೬॥

ಅಶೇಷಾ ಭೂಮಿಪಾಲಾ ವೈ ವರ್ತಂತೇ ಯಸ್ಯ ಮೇವಶೇ ।
ವಿಕ್ರಮಂ ಚಾಪ್ರತೀಘಾತಂ ಶರೀರಾರೋಗ್ಯತಾ ತಥಾ ॥ ೪೭॥

ಮಮಾಪಿ ವಿಪುಲಂ ತೇಜೋ ನ ಕಶ್ಚಿತ್ ಸಹತೇ ಮುನೇ ।
ಇಚ್ಛಾ ಮೇಽದ್ಯ ಪರಿಜ್ಞಾತುಂ ಯಥಾ ಚೇಯಮನಿಂದಿತಾ ॥ ೪೮॥

ಮಯಾಪಿ ಸುಕೃತಂ ವಿಪ್ರ ಕಿಂ ಕೃತಂ ಪೂರ್ವಜನ್ಮನಿ ।
ಇತಿ ಪೃಷ್ಟೋ ನರೇಂದ್ರೇಣ ಪೂರ್ವಜನ್ಮನಿ ಚೇಷ್ಟಿತಮ್ ॥ ೪೯॥

ಸ್ವಪತ್ನ್ಯಾಶ್ಚೇಷ್ಟಿತಂ ಚೈವ ಸಂಪದಾಂ ಚೈವ ಕಾರಣಮ್ ।
ಯೋಗೋತ್ಥಂ ಸುಚಿರಂ ಕಾಲಂ ತಥಾವಿಂದತ ಮಾನಸೇ ॥ ೫೦॥

ವಿಜ್ಞಾತಮೇತನ್ನೃಪತೇ ಪೂರ್ವಜನ್ಮನಿ ಚೇಷ್ಟಿತಮ್ ।
ತವ ಪತ್ನ್ಯಾಶ್ಚ ರಾಜೇಂದ್ರ ಶೃಣುಷ್ವ ಕಥಯಾಮ್ಯಹಮ್ ॥ ೫೧॥

ಭಾರದ್ವಾಜ ಉವಾಚ -
ಶೃಣು ಭೂಪಾಲ ಸಕಲಂ ಯಸ್ಯೇದಂ ಕರ್ಮಣಃ ಫಲಮ್ ।
ತ್ವಮಾಸೀಃ ಶೂದ್ರಜಾತೀಯೋ ಜೀವಹಿಂಸಾಪರಾಯಣಃ ॥ ೫೨॥

ಕರ್ಮವನ್ನು ಆಚರಿಸಿದ್ದಳು? ಅದಾವ ಪುಣ್ಯಕರ್ಮದ ಫಲವಾಗಿ ಮೃತ್ಯುಲೋಕದಲ್ಲಿ ದುರ್ಲಭವಾದ ಈ ಸಂಪತ್ತು ನನಗೆ ಪ್ರಾಪ್ತವಾಗಿದೆ ? ॥ ೪೬॥ ಸಕಲ ಭೂಪಾಲರೂ ಮಾಂಡಲಿಕ ರಾಜರಾಗಿ ನನ್ನ ವಶದಲ್ಲಿದ್ದಾರೆ. ಅಪ್ರತಿಹತವಾದ ಪರಾಕ್ರಮವು ಮತ್ತು ಶರೀರಾರೋಗ್ಯವು ಎಲ್ಲವೂ ನನ್ನಲ್ಲಿವೆ. ॥ ೪೭॥ ಹೇ ಮುನಿಗಳೇ ! ನನ್ನಲ್ಲಿರುವ ವಿಪುಲವಾದ ತೇಜಸ್ಸನ್ನು ಯಾವನೂ ಸಹಿಸಿಕೊಳ್ಳಲಾರನು. ಅನಿಂದಿತವಾದ ಈ ಸಂಪತ್ತು ಪ್ರಾಪ್ತವಾಗಿರುವ ಕಾರಣವನ್ನು ತಿಳಿಯಲು ಇಂದು ಇಚ್ಛಿಸುತ್ತೇನೆ. ॥ ೪೮॥ ಭೋ ವಿಪ್ರೋತ್ತಮರೇ ! ನಾನಾದರೋ ಪೂರ್ವಜನ್ಮದಲ್ಲಿ ಅದೆಂಥ ಸುಕೃತಗಳನ್ನು ಮಾಡಿದ್ದೇನು! ' ಈ ಪ್ರಕಾರವಾಗಿ ತನ್ನ ಪೂರ್ವಜನ್ಮದ ಸುಕೃತಗಳನ್ನು ॥ ೪೯॥ ತನ್ನ ಪತ್ನಿಯ ಸುಕೃತಗಳನ್ನು ಹಾಗೂ ಸಂಪತ್ ಪ್ರಾಪ್ತಿಯ ಕಾರಣವನ್ನು ತಿಳಿಯಲಿಚ್ಛಿಸಿದ ರಾಜನಿಂದ ಈ ಪ್ರಕಾರ ಪ್ರಶ್ನಿಸಲ್ಪಟ್ಟ ಭಾರದ್ವಾಜ ಮುನಿಗಳು ಯೋಗಸಾಮರ್ಥ್ಯದಿಂದ ಬಹುಕಾಲ ತಮ್ಮ ಮನಸ್ಸಿನಲ್ಲಿ ಎಲ್ಲವನ್ನು ಆಲೋಚಿಸಿ ಹೇಳಿದರು. ॥ ೫೦॥ ಹೇ ರಾಜೇಂದ್ರನೇ! ಪೂರ್ವಜನ್ಮದಲ್ಲಿ ನೀವಿಬ್ಬರೂ ಮಾಡಿದ ಸುಕೃತಗಳನ್ನು ತಿಳಿದಿದ್ದೇನೆ. ಅದನ್ನು ನಿನಗೀಗ ಅರುಹುವೆನು ಕೇಳು. ॥ ೫೧॥ ಹೇ ರಾಜಾ ! ಇದೆಲ್ಲವೂ ಯಾವ

ನಾಸ್ತಿಕೋ ದುಷ್ಟಚಾರಿತ್ರೋ ಪರದಾರಪ್ರಧರ್ಷಕಃ ।
ಕೃತಘ್ನೋ ದುರ್ವಿನೀತಶ್ಚ ಸುಪ್ತಾತ್ವಚಾರವಿವರ್ಜಿತಃ ॥ ೫೩॥

ಇಯಂ ಯಾ ಭವತೋ ಭಾರ್ಯಾ ಪೂರ್ವಮಪ್ಯಾಯತೇಕ್ಷಣಾ ।
ಕರ್ಮಣಾ ಮನಸಾ ವಾಚಾ ನಾನ್ಯದಸ್ಯಾಸ್ತ್ವಯಾ ವಿನಾ ॥ ೫೪॥

ಪತಿವ್ರತಾ ಮಹಾಭಾಗಾ ಭಜಮಾನಾ ನಿರಂತರಮ್ ।
ಭಾವಂ ನ ಕುರುತೇ ದುಷ್ಟಂ ತವೋಪರಿ ತಥಾಸತಿ ॥ ೫೫॥

ಸಹಾಯೈಸ್ತ್ವಂ ಪರಿತ್ಯಕ್ತೋ ಬಂಧುಭಿಃ ಪಾಪಕರ್ಮಕೃತ್ ।
ಕ್ಷಯಂ ಜಗಾಮ ಚಾರ್ಥೋ ಯಸ್ಸಂಚಿತಸ್ತವ ಪೂರ್ವಜೈಃ ॥ ೫೬॥

ನಷ್ಟೇ ದ್ರವ್ಯೇ ಫಲಾಕಾಂಕ್ಷೀ ತ್ವಮಾಸೀಜ್ಜಗತಾಂ ಪತೇ ।
ಪೂರ್ವಕರ್ಮವಿಪಾಕೇನ ಕೃಷಿಶ್ಚ ವಿಫಲಾ ಗತಾ ॥ ೫೭॥

ತತೋ ವಿತ್ತೇ ಪರಿಕ್ಷೀಣೇ ಪರಿತ್ಯಕ್ತಶ್ಚ ಬಾಂಧವೈಃ ।
ಕ್ಷೀಯಮಾಣಾಽಪಿ ಸಾಧ್ವೀಯಮತ್ಯಜತ್ತ್ವಾಂ ನ ಭಾಮಿನೀ ॥ ೫೮॥

ತ್ವಂ ಭಗ್ನಃ ಸರ್ವಕಾಮೇಭ್ಯೋ ಗತವಾನ್ನಿರ್ಜನೇ ವನೇ ।
ಹತ್ವಾ ಜೀವಾನನೇಕಾಂಶ್ಚ ಚಕಾರಾತ್ಮವಿಪೋಷಣಮ್ ॥ ೫೯॥

ಸುಕೃತದ ಫಲವೆಂಬುದನ್ನು ತಿಳಿಸುವೆನು ಕೇಳು. ಪೂರ್ವಜನ್ಮದಲ್ಲಿ ಶೂದ್ರ ಜಾತಿಯಲ್ಲಿ ಹುಟ್ಟಿದ್ದ ನೀನು ಪರಹಿಂಸಾ ಪರಾಯಣನಾಗಿದ್ದಿ. ॥ ೫೨॥ ನಾಸ್ತಿಕನೂ, ದುಷ್ಟಚಾರಿತ್ರವುಳ್ಳವನೂ, ಪರಸ್ತ್ರೀರತನೂ, ಕೃತಘ್ನನೂ, ದುರ್ವಿನೀತನೂ, ಸದಾಚಾರ ವರ್ಜಿತನೂ ಆಗಿದ್ದಿ. ॥ ೫೩॥ ಮತ್ತು ವಿಶಾಲನೇತ್ರಗಳುಳ್ಳ ಈ ನಿನ್ನ ಪತ್ನಿಯು ಪೂರ್ವಜನ್ಮದಲ್ಲಿ ಕಾಯಾ, ವಾಚಾ, ಮನಸಾ ನಿನ್ನನ್ನು ಬಿಟ್ಟು ಬೇರೆ ಯಾವುದನ್ನೂ ಇಚ್ಛಿಸುತ್ತಿರಲಿಲ್ಲ. ॥ ೫೪॥ ಹೇ ರಾಜಾ ! ಪತಿವ್ರತೆಯಾಗಿದ್ದ ಇವಳು ಸದಾಕಾಲ ನಿನ್ನ ಸೇವೆಯನ್ನೇ ಮಾಡಿಕೊಂಡಿದ್ದಳು. ಎಂದಿಗೂ ನಿನ್ನ ವಿಷಯದಲ್ಲಿ ದುಷ್ಟಭಾವನೆಯನ್ನು ಹೊಂದುತ್ತಿರಲಿಲ್ಲ. ॥ ೫೫॥ ನಿನ್ನ ಪೂರ್ವಜರಿಂದ ಸಂಗ್ರಹಿಸಿ ಇಡಲ್ಪಟ್ಟ ದ್ರವ್ಯವು ದಿನೇ ದಿನೇ ಕ್ಷೀಣವಾಗಲು ಆಪ್ತೇಷ್ಟರೆಲ್ಲರೂ ಪಾಪಕರ್ಮಗಳನ್ನು ಮಾಡುತ್ತಲಿದ್ದ ನಿನ್ನನ್ನು ತ್ಯಜಿಸಿದರು. ॥ ೫೬॥ ದ್ರವ್ಯವು ನಶಿಸುತ್ತಿರಲು ನೀನು ನಿನ್ನ ಕೃಷಿಯಲ್ಲಿ ಹೆಚ್ಚಿನ ಫಲವನ್ನು ಇಚ್ಛಿಸುವಂಥವನಾದಿ. ಆದರೆ ಪೂರ್ವಕರ್ಮವಿಪಾಕದಿಂದ ಭೂಮಿಯು ಬೆಳೆಯನ್ನು ಕೊಡದೇ ಬಂಜರು ಆಗಿ ಉಳಿಯಿತು. ॥ ೫೭॥ ಹೀಗೆ ಸಂಪತ್ತೆಲ್ಲವೂ ಕ್ಷೀಣವಾಗಿ ಹೋಗಲು ಬಂಧು ಬಾಂಧವರು ನಿನ್ನನ್ನು ಪರಿತ್ಯಜಿಸಿದರು. ಆದರೆ ದ್ರವ್ಯವೆಲ್ಲವೂ ನಾಶವಾದಾಗ್ಯೂ ಈ ಸಾಧ್ವೀ ಸ್ತ್ರೀಯು ನಿನ್ನನ್ನು ತ್ಯಜಿಸಲಿಲ್ಲ. ॥ ೫೮॥ ಸಕಲ ಕಾಮನೆಗಳಿಂದ ನಿರಾಶನಾದ ನೀನು ನಿರ್ಜನವಾದ ವನಕ್ಕೆ ಹೊರಟು ಹೋದಿ. ಅಲ್ಲಿ ಅನೇಕ ಪಶುಪಕ್ಷಿ

ಏವಂ ಪ್ರವರ್ತತಸ್ತತ್ರ ಸಹ ಪತ್ನ್ಯಾ ತದಾ ನೃಪ ।
ಗತಾನಿ ಬಹುವರ್ಷಾಣಿ ಪಾಪವೃತ್ತ್ಯಾ ಮಹೀತಲೇ ॥ ೬೦॥

ಅನ್ಯಸ್ಮಿನ್ ವಾಸರೇ ರಾಜನ್ ಮಾರ್ಗಭ್ರಷ್ಟೋ ಮಹಾಮುನಿಃ ।
ನ ದಿಶಂ ವಿದಿಶಂ ವೇತ್ತಿ ದೇವಶರ್ಮಾ ದ್ವಿಜೋತ್ತಮಃ ॥ ೬೧॥

ಕ್ಷುತ್ತೃಷಾ ಪೀಡಿತೋಽತ್ಯಂತಂ ಮಧ್ಯಾಹ್ನಗದಿವಾಕರೇ ।
ಪತಿತೋ ವನಮಧ್ಯೇ ತು ಮಾರ್ಗಭ್ರಷ್ಟೋ ಮಹೀಪತೇ ॥ ೬೨॥

ದಯಾ ಜಾತಾ ಚ ತೇ ಭೂಪ ದೃಷ್ಟ್ವಾ ದುಃಖೇನ ಪೀಡಿತಮ್ ।
ಬ್ರಾಹ್ಮಣಂ ವೃದ್ಧಮಜ್ಞಾತಂ ಗೃಹೀತ್ವಾ ತಂ ಕರೇಣ ವೈ ॥ ೬೩॥

ಉತ್ಥಾಪ್ಯ ಪತಿತಂ ಭೂಮೌ ತ್ವಯೋಕ್ತಂ ಹಿ ತದಾ ನೃಪ ।
ಪ್ರಸಾದಂ ಕುರು ವಿಪ್ರರ್ಷೇ ಆಗಚ್ಛ ತ್ವಂ ಮಮಾಶ್ರಮಮ್ ॥ ೬೪॥

ಜಲಪೂರ್ಣಂ ತಡಾಗಂ ಚ ಪದ್ಮಿನೀಖಂಡಮಂಡಿತಮ್ ।
ವೃಕ್ಷೈರ್ಮನೋಹರೈರ್ಯುಕ್ತಂ ಫಲೈಃ ಪುಷ್ಪೈರ್ಮನೋರಮೈಃ ॥ ೬೫॥

ಸ್ನಾತ್ವಾ ಸುಶೀತಲೇ ತೋಯೇ ಕೃತ್ವಾ ಕರ್ಮ ಚ ನೈತ್ಯಕಮ್ ।
ಕುರು ವಿಪ್ರ ಫಲಾಹಾರಂ ಪಿಬ ವಾರಿ ಸುಶೀತಲಮ್ ॥ ೬೬॥

ಪ್ರಾಣಿಗಳನ್ನು ಕೊಂದು ಆತ್ಮಪೋಷಣೆಯನ್ನು ಮಾಡತೊಡಗಿದಿ.॥ ೫೯॥ ಹೇ ರಾಜಾ! ಈ ಪ್ರಕಾರ ಪತ್ನಿಯೊಂದಿಗೆ ಕೂಡಿಕೊಂಡು ಅರಣ್ಯದಲ್ಲಿ ಪಶುಹನನಾದಿ ಪಾಪವೃತ್ತಿಯಿಂದ ಜೀವನ ಸಾಗಿಸುತ್ತಿರಲು ಅನೇಕ ವರ್ಷಗಳು ಕಳೆದವು . ॥ ೬೦॥ ಒಂದು ದಿನ ದೇವಶರ್ಮನೆಂಬ ಹೆಸರಿನ ಮಹಾ ಮುನಿಯೊಬ್ಬನು ಸಂಚಾರ ಕ್ರಮದಲ್ಲಿ ದಿಕ್ಕು ತಿಳಿಯದೇ ದಾರಿತಪ್ಪಿ ॥ ೬೧॥ ಮಧ್ಯಾಹ್ನ ಸಮಯದಲ್ಲಿ ಹಸಿವೆಯಿಂದಲೂ, ನೀರಡಿಕೆಯಿಂದಲೂ ಅತ್ಯಂತ ಪೀಡಿತನಾಗಿ ಅರಣ್ಯಮಧ್ಯದಲ್ಲಿ ನಿಶ್ಚೇಷ್ಟಿತನಾಗಿ ಬಿದ್ದನು. ॥ ೬೨॥ ಹೀಗೆ ದುಃಖದಿಂದ ಪೀಡಿತನಾಗಿ ಬಿದ್ದಿರುವ ಬ್ರಾಹ್ಮಣನನ್ನು ಕಂಡು ನಿನಗೆ ಅವನಲ್ಲಿ ಬಹಳವಾದ ದಯೆ ಉಂಟಾಯಿತು. ನಿಶ್ಚೇಷ್ಟಿತನಾದ ಆ ವೃದ್ಧ ಬ್ರಾಹ್ಮಣನನ್ನು ನೀನು ಕೈಯಿಂದ ಹಿಡಿದು ॥ ೬೩॥ ಮೇಲೆತ್ತಿ ಅವನಿಗೆ ಹೀಗೆ ಹೇಳಿದಿ. ಏನೆಂದರೆ 'ಅಯ್ಯಾ ಬ್ರಾಹ್ಮಣೋತ್ತಮಾ! ನನ್ನ ಮೇಲೆ ಅನುಗ್ರಹ ಮಾಡು, ನನ್ನ ಆಶ್ರಮಕ್ಕೆ ಆಗಮಿಸು. ॥ ೬೪॥ ಅಲ್ಲಿ ಮನೋಹರವಾದ ಫಲ ಪುಷ್ಪಗಳಿಂದ ಯುಕ್ತವಾದ ವೃಕ್ಷಗಳಿಂದ ಸುತ್ತುವರಿಯಲ್ಪಟ್ಟ, ಪದ್ಮಸಮೂಹಗಳಿಂದ ಅಲಂಕೃತವಾದ ನೀರು ತುಂಬಿದ ಒಂದು ಸರೋವರವಿದೆ. ॥ ೬೫॥ ವಿಪ್ರನೇ! ನೀನು ಆ ಸರೋವರದ ತಂಪಾದ ನೀರಿನಲ್ಲಿ ಸ್ನಾನಮಾಡಿ, ನಿತ್ಯಾಹ್ನಿಕ ಕರ್ಮಗಳನ್ನು ಮುಗಿಸಿ ಫಲಾಹಾರಗಳನ್ನು ಸ್ವೀಕರಿಸು. ತಂಪಾದ

ಸುಖೇನ ಕುರು ವಿಶ್ರಾಮಂ ಮಯಾ ಸಂರಕ್ಷಿತಃ ಸ್ವಯಮ್ ।
ವಿಪ್ರರ್ಷೆ ತೃಪ್ತಿಪರ್ಯಂತಂ ವಸ ತ್ವಂ ಚ ಮಮಾಶ್ರಮೇ ॥ ೬೭॥

ಉತ್ತಿಷ್ಠ ತ್ವಂ ದ್ವಿಜಶ್ರೇಷ್ಠ ಪ್ರಸಾದಂ ಕರ್ತುಮರ್ಹಸಿ ।
ಲಬ್ಧಸಂಜ್ಞಸ್ತದಾ ವಿಪ್ರಃ ಶ್ರುತ್ವಾ ಶೂದ್ರಸ್ಯ ಭಾಷಿತಮ್ ॥ ೬೮॥

ಕರಂ ಜಗ್ರಾಹ ತಂ ಶೂದ್ರಂ ಗತೋ ಯತ್ರ ಜಲಾಶಯಃ ।
ಉಪವಿಷ್ಟೋ ಮಹಾಬಾಹೋ ಛಾಯಾಮಾಶ್ರಿತ್ಯ ತತ್ತಟೇ ॥ ೬೯॥

ಸ್ನಾನಂ ಚಕಾರ ವಿಧಿವತ್ ಪೂಜಯಾಮಾಸ ಕೇಶವಮ್ ।
ತರ್ಪಯಿತ್ವಾ ಪಿತೃನ್ ದೇವಾನ್ ಪಪೌ ನೀರಂ ಸುಶೀತಲಮ್ ॥ ೭೦॥

ವಿಶ್ರಾಂತೋ ವೃಕ್ಷಮೂಲೇ ಚ ದೇವಶರ್ಮಾ ದ್ವಿಜೋತ್ತಮಃ ।
ಸಾಷ್ಟಾಂಗಂ ಮುನಯೇ ಕೃತ್ವಾ ನಮಸ್ಕಾರಂ ಸಹ ಸ್ತ್ರಿಯಾ ॥ ೭೧॥

ಶೂದ್ರೇಣ ಪರಯಾ ಭಕ್ತ್ಯಾ ಪ್ರೋಕ್ತಂ ವಿಪ್ರಸ್ಯ ಸನ್ನಿಧೌ ।
ಆವಯೋಸ್ತಾರಣಾರ್ಥಾಯ ಅತಿಥಿಸ್ತ್ವಂ ಸಮಾಗತಃ ॥ ೭೨॥

ದರ್ಶನಾತ್ತವ ವಿಪ್ರರ್ಷೆ ಜಾತಃ ಪಾಪಸ್ಯ ಸಂಕ್ಷಯಃ ।
ಆಪಃ ಫಲಾನಿ ಸುಸ್ವಾದು ಪ್ರಯಚ್ಛಾಸ್ಮೈ ದ್ವಿಜಾತಯೇ ॥ ೭೩॥

ನೀರನ್ನು ಕುಡಿ. ॥ ೬೬॥ ನಂತರ ಯಾವ ಭಯವಿಲ್ಲದೇ ಸುಖದಿಂದ ಅಲ್ಲಿ ವಿಶ್ರಮಿಸು. ನಾನು ನಿನ್ನ ಯೋಗಕ್ಷೇಮವನ್ನು ತೆಗೆದುಕೊಳ್ಳುವೆನು. ನಿನಗೆ ಸಾಕಾಗುವವರೆಗೆ ನನ್ನ ಆಶ್ರಮದಲ್ಲಿರು. ॥ ೬೭॥ ಹೇ ದ್ವಿಜವರ್ಯನೇ ! ಎದ್ದೇಳು. ನನ್ನ ಮೇಲೆ ಅನುಗ್ರಹ ಮಾಡು. ' ಹೀಗೆಂದು ಶೂದ್ರನು (ನೀನು) ಹೇಳುತ್ತಿರುವುದನ್ನು ಕೇಳಿದ ಬ್ರಾಹ್ಮಣನು ಎಚ್ಚತ್ತನು. ॥ ೬೮॥ ಆಗ ಶೂದ್ರನು (ನೀನು) ಅವನನ್ನು ಕೈ ಹಿಡಿದು ಜಲಾಶ್ರಯವಿರುವ ಸ್ಥಳಕ್ಕೆ ಕರೆದುಕೊಂಡು ಹೋಗಲು, ವಿಪ್ರನು ಅದರ ದಂಡೆಯ ಮೇಲೆ ನೆರಳಿರುವ ಒಂದು ಸ್ಥಳದಲ್ಲಿ ಕುಳಿತುಕೊಂಡನು. ॥ ೬೯॥ ಆಗ ಬ್ರಾಹ್ಮಣನು ಸರೋವರದಲ್ಲಿ ಸ್ನಾನವನ್ನು ಮಾಡಿ ವಿಧಿಪೂರ್ವಕ ಶ್ರೀ ಕೇಶವನ ಪೂಜೆಯನ್ನು ಮಾಡಿದನು. ನಂತರ ದೇವತೆಗಳು, ಋಷಿಗಳು, ಪಿತೃಗಳನ್ನು ಉದ್ದೇಶಿಸಿ ತರ್ಪಣವನ್ನು ಕೊಟ್ಟಾದ ಮೇಲೆ ತಂಪಾದ ನೀರನ್ನು ಕುಡಿದನು. ॥ ೭೦॥ ನಂತರ ಆ ದ್ವಿಜೋತ್ತಮನಾದ ದೇವಶರ್ಮನು ಅಲ್ಲೇ ಒಂದು ಗಿಡದ ನೆರಳಿನಲ್ಲಿ ವಿಶ್ರಾಂತಿಯನ್ನು ಪಡೆದನು. ಆಗ ಶೂದ್ರನು ತನ್ನ ಪತ್ನಿಯೊಂದಿಗೆ ಕೂಡಿಕೊಂಡು ಆ ಬ್ರಾಹ್ಮಣನಿಗೆ ಸಾಷ್ಟಾಂಗ ನಮಸ್ಕರಿಸಿ ॥ ೭೧॥ ಪರಮ ಭಕ್ತಿಯಿಂದ ಬ್ರಾಹ್ಮಣನ ಸಮ್ಮುಖದಲ್ಲಿ ಹೀಗೆ ವಿಜ್ಞಾಪಿಸಿದನು - 'ನಮ್ಮಿಬ್ಬರನ್ನು ಉದ್ಧರಿಸುವುದಕ್ಕಾಗಿ ತಾವು ಇಂದು ನಮ್ಮ ಅತಿಥಿಯಾಗಿ ಇಲ್ಲಿಗೆ ಬಂದಿರುವಿರಿ. ॥ ೭೨॥ ಹೇ ವಿಪ್ರರ್ಷೇ !

ಮೃದೂನಿ ರಸಯುಕ್ತಾನಿ ಸುಪಕ್ವಾನಿ ತಥಾ ಪ್ರಿಯೆ ।
ಬ್ರಾಹ್ಮಣ ಉವಾಚ -
ತ್ವಾಮಹಂ ನೈವ ಜಾನಾಮಿ ಸ್ವಜ್ಞಾತಿಂ ಕಥಯಸ್ವ ಮೇ ॥ ೭೪॥

ನಾಜ್ಞಾತಸ್ಯ ಹಿ ಭೋಕ್ತವ್ಯಂ ಬ್ರಾಹ್ಮಣಸ್ಯಾಪಿ ಪುತ್ರಕ ।
ಶೂದ್ರ ಉವಾಚ -
ಶೂದ್ರೋऽಹಂ ದ್ವಿಜಶಾರ್ದೂಲ ನ ಕಾರ್ಯಃ ಸಂಶಯಸ್ತ್ವಯಾ॥ ೭೫॥

ಆತ್ಮಜೈರ್ದುರ್ನಯೈರ್ವಿಪ್ರ ಪರಿತ್ಯಕ್ತಃ ಸ್ವಬಾಂಧವೈಃ ।
ತಯೋಃ ಸಂವದತೋರೇವಂ ಶೂದ್ರಪತ್ನ್ಯಾ ಫಲಾನಿ ಚ ॥ ೭೬॥

ದತ್ತಾನಿ ತಸ್ಮೈ ವಿಪ್ರಾಯ ತೇನ ಭುಕ್ತಾನಿ ತಾನಿ ವೈ ।
ಅಭೂತ್ಪ್ರೀತಮನಾ ವಿಪ್ರಃ ಪೀತ್ವಾ ನೀರಂ ಸುಶೀತಲಮ್ ॥ ೭೭॥

ಸುಖಂ ಸಂಪ್ರಾಪ್ಯ ಸ ಮುನಿರ್ವಿಶ್ರಾಂತಸ್ತರುಮೂಲಕೇ ॥ ೭೮॥

ಸ್ವಾಗತಂ ತೇ ಮುನಿಶ್ರೇಷ್ಠ ಕುತಸ್ತ್ವಮಿಹ ಚಾಗತಃ ।
ಶೂನ್ಯಾಟವೀ ದ್ವಿಜಶ್ರೇಷ್ಠ ದುಷ್ಟಸತ್ವಭಯಾಕುಲಾ ॥ ೭೯॥

ತಮ್ಮ ದರ್ಶನ ಮಾತ್ರದಿಂದಲೇ ನಮ್ಮ ಪಾಪದ ನಾಶವಾಗಿ ಹೋಗಿದೆ. ಹೇ ಪ್ರಿಯೇ! ಮಹಾತ್ಮರಾದ ಈ ಬ್ರಾಹ್ಮಣರಿಗೆ ಸಿಹಿ ನೀರನ್ನು ಹಾಗೂ ಮೃದುವಾದ, ರಸಯುಕ್ತವಾದ, ಸುಪಕ್ವವಾದ ಸಿಹಿ ಹಣ್ಣುಗಳನ್ನು ತಂದುಕೊಡು'' ॥ ೭೩॥ ಶೂದ್ರನ ಈ ಮಾತುಗಳನ್ನು ಕೇಳಿ ಬ್ರಾಹ್ಮಣನು ' ಅಯ್ಯಾ ! ನನಗೆ ನಿನ್ನ ಪರಿಚಯವಿಲ್ಲ. ನಿನ್ನ ಜಾತಿ ॥ ೭೪॥ ಯಾವುದೆಂಬುದನ್ನು ತಿಳಿಸು. ಅಪರಿಚಿತನಾದವನು ಬ್ರಾಹ್ಮಣನಾಗಿದ್ದರೂ ಅವನು ಕೊಟ್ಟ ಯಾವುದನ್ನೂ ಸೇವಿಸಬಾರದು.' ಎಂದೆನ್ನಲು ಆಗ ಶೂದ್ರನು ಸ್ವಾಮಿ ದ್ವಿಜೋತ್ತಮರೇ! ನಾನು ಶೂದ್ರನು, ಈ ವಿಷಯದಲ್ಲಿ ತಾವು ಸಂದೇಹ ಪಡದಿರಿ ॥ ೭೫॥ ನನ್ನ ದುರ್ನಡತೆಗಳನ್ನು ಕಂಡು ಬೇಸತ್ತ ನನ್ನ ಮಕ್ಕಳಿಂದಲೂ, ಬಂಧು ಬಾಂಧವಾದಿಗಳಿಂದಲೂ ಪರಿತ್ಯಕ್ತನಾಗಿ ನಾನು ಈ ಅರಣ್ಯದಲ್ಲಿದ್ದೇನೆ'' ಎಂದು ಮುಂತಾಗಿ ಹೇಳಿದನು. ಈ ಪ್ರಕಾರ ಆ ಬ್ರಾಹ್ಮಣ ಹಾಗೂ ಶೂದ್ರರು ಸಂಭಾಷಿಸುತ್ತಿರುವಾಗ ಶೂದ್ರ ಪತ್ನಿಯು ಒಳ್ಳೆಯ ಹಣ್ಣುಗಳನ್ನು ತಂದು ॥ ೭೬॥ ಬ್ರಾಹ್ಮಣನಿಗೆ ಸಮರ್ಪಿಸಿದಳು. ಬ್ರಾಹ್ಮಣನಾದರೋ ಅವುಗಳನ್ನು ತಿಂದು ತಂಪಾದ ನೀರನ್ನು ಕುಡಿದು ಬಹು ಆನಂದಿತನಾದನು. ॥ ೭೭॥ ತೃಪ್ತನಾಗಿ ಆ ಮುನಿಯು ಆಯಾಸವನ್ನೆಲ್ಲ ಕಳೆದುಕೊಂಡು ಗಿಡದ ಕೆಳಗೆ ಸ್ವಲ್ಪ ಸಮಯ ವಿಶ್ರಮಿಸಿದನು. ॥ ೭೮॥ ಅಷ್ಟರಲ್ಲಿ ಶೂದ್ರನು ತನ್ನ ಪತ್ನಿಯೊಂದಿಗೆ ಕೂಡಿಕೊಂಡು ಭೋಜನವನ್ನು ಮುಗಿಸಿ ಪುನಃ ಬ್ರಾಹ್ಮಣನ ಸನ್ನಿಧಿಗೆ ಬಂದು ಹೀಗೆಂದನು. 'ಹೇ ಮುನಿಶ್ರೇಷ್ಠರೇ ! ನಿಮಗೆ ಸ್ವಾಗತವು. ಮನುಷ್ಯರಿಲ್ಲದ, ದುಷ್ಟಪ್ರಾಣಿಗಳಿಂದ ಭಯಂಕರವಾದ, ದುಃಖಕಾರಕವಾದ, ಹಗಲು ರಾತ್ರಿಗಳಲ್ಲಿ ಭಯಾನಕವಾದ ಈ

ನಿರ್ಮನುಷ್ಯಾ ದುಃಖಯುತಾ ದಿವಾರಾತ್ರಂ ಭಯಾನಕಾ ।
ಬ್ರಾಹ್ಮಣ ಉವಾಚ -
ಬ್ರಾಹ್ಮಣೋಽಹಂ ಮಹಾಭಾಗ ಪ್ರಯಾಗಗಮನಂ ಪ್ರತಿ ॥ ೮೦॥

ಅಹಮಜ್ಞಾತಮಾರ್ಗೇಣ ಸಂಪ್ರಾಪ್ತೋ ದಾರುಣೇ ವನೇ ।
ಮಮ ಪುಣ್ಯಪ್ರಭಾವೇನ ಜಾತೋಽಸಿ ವನಬಾಂಧವಃ ॥ ೮೧॥

ಜೀವಿತಂ ಮೇ ತ್ವಯಾ ದತ್ತಂ ಬ್ರೂಹಿ ಕಿಂ ಕರವಾಣಿ ತೇ ।
ಭವಾನಪಿ ಕುತಃ ಪ್ರಾಪ್ತೋ ನಿರ್ಮನುಷ್ಯೇ ವನೇ ಖಲು ॥ ೮೨॥

ಕೋ ಭವಾನ್ ಕಾರಣಂ ಕಿಂಚಿತ್ಕಥಯಸ್ವ ಮಮಾಗ್ರತಃ ।
ಶೂದ್ರ ಉವಾಚ -
ವಿದರ್ಭನಗರೀ ರಾಜ್ಞಾ ಭೀಮಸೇನೇನ ರಕ್ಷಿತಾ ॥ ೮೩॥

ವಾಸೋ ಮಮ ಮಹಾರಾಷ್ಟ್ರೇ ಶೂದ್ರೋಽಹಂ ಪಾಪಲಂಪಟಃ ।
ಸ್ವಕರ್ಮವಿಹಿತೋ ಧರ್ಮೋ ಮಯಾ ತ್ಯಕ್ತೋ ದ್ವಿಜೋತ್ತಮ ॥ ೮೪॥

ತ್ಯಕ್ತೋಽಹಂ ಬಂಧುವರ್ಗೇಣ ತತೋಽಹಂ ವನಮಾಗತಃ ।
ಕೃತ್ವಾ ಜೀವವಧಂ ನಿತ್ಯಂ ಜೀವೇಽಹಂ ಭಾರ್ಯಯಾ ಸಹ ॥ ೮೫॥

ಸಾಂಪ್ರತಂ ಪಾತಕಾತ್ಸಮ್ಯಕ್ ನಿರ್ವಿಣ್ಣೋಽಸ್ಮಿ ಮಹಾಮುನೆ
ಕುರುಷ್ವಾನುಗ್ರಹಂ ಕಿಂಚಿತ್ಪಾಪಯುಕ್ತಸ್ಯ ಸಾಂಪ್ರತಮ್ ॥ ೮೬॥

ಘೋರಾರಣ್ಯದಲ್ಲಿ ಹೇಗೆ ಬಂದಿರಿ ? ಹೀಗೆ ಶೂದ್ರನು ಕೇಳಲು ಬ್ರಾಹ್ಮಣನು ಹೇಳಿದನು - 'ಹೇ ಪುಣ್ಯಾತ್ಮಾ! ನಾನೊಬ್ಬ ಬ್ರಾಹ್ಮಣನು, ಪ್ರಯಾಗ ಕ್ಷೇತ್ರಕ್ಕೆ ಹೊರಟಾಗ ॥೭೯॥ ॥೮೦॥ ಅಜ್ಞಾತಮಾರ್ಗದಿಂದ ಈ ದಾರುಣವಾದ ವನದಲ್ಲಿ ಬಿದ್ದೆನು. ನನ್ನ ಪುಣ್ಯಪ್ರಭಾವದಿಂದ ನೀನಿಂದು ಈ ಅರಣ್ಯದಲ್ಲಿ ಆಪದ್ಬಾಂಧವನಾಗಿ ದೊರಕಿರುವಿ. ॥ ೮೧॥ ನೀನು ನನ್ನ ಪ್ರಾಣವನ್ನು ಉಳಿಸಿರುವಿ. ನಿನಗೆ ಯಾವ ಪ್ರತ್ಯುಪಕಾರವನ್ನು ಮಾಡಲಿ ತಿಳಿಸು. ನೀನಾದರೂ ನಿರ್ಮನುಷ್ಯವಾದ ಈ ಅರಣ್ಯದಲ್ಲಿ ಎಲ್ಲಿಂದ ಬಂದಿರುವಿ ? ॥ ೮೨॥ ನೀನಾರು ? ಇಲ್ಲಿಗೆ ಬರುವ ಕಾರಣವನ್ನು ಸ್ವಲ್ಪಾದರೂ ನನಗೆ ತಿಳಿಸು' ಎಂದೆನಲು ಆಗ ಶೂದ್ರನು ಹೇಳಿದನು - 'ರಾಜಾ ಭೀಮಸೇನನೆಂಬವನ ಆಳುವಿಕೆಯಲ್ಲಿದ್ದ ವಿದರ್ಭ ದೇಶದೊಳಗಿನ॥ ೮೩॥ ಮಹಾರಾಷ್ಟ್ರದಲ್ಲಿ ವಾಸವಾಗಿದ್ದ ಶೂದ್ರನಾದ ನಾನು ಪಾಪಲಂಪಟನಾಗಿದ್ದೆನು. ಹೇ ದ್ವಿಜೋತ್ತಮ ! ಆಗ ಸ್ವವಿಹಿತವಾದ ಧರ್ಮಗಳನ್ನು ನಾನು ತ್ಯಜಿಸಿದೆನು. ॥೮೪॥ ಇದರಿಂದ ಬಂಧುಗಳೆಲ್ಲ ನನ್ನನ್ನು ತ್ಯಜಿಸಲು ಆಗ ನಾನು ಈ ವನಕ್ಕೆ ಬಂದೆನು. ಇಲ್ಲಿ ನಿತ್ಯದಲ್ಲೂ ಪ್ರಾಣಿಗಳನ್ನು ಕೊಲ್ಲುತ್ತಾ ನನ್ನ ಪತ್ನಿಯೊಂದಿಗೆ ಉದರನಿರ್ವಹಣೆ ಮಾಡಿಕೊಂಡಿದ್ದೇನೆ.॥ ೮೫॥ ಹೇ ಮಹಾ ಮುನಿಗಳೇ ! ಇದುವರೆಗೆ

ಮಮ ಪುಣ್ಯಪ್ರಭಾವೇನ ಆಗತಸ್ತ್ವಂ ದ್ವಿಜೋತ್ತಮ ।
ನ ಯಾಸ್ಯಾಮಿ ಯಥಾ ಸೌರೀಂ ಪತ್ನ್ಯಾ ಸಹ ಮಹಾಮುನೇ ॥ ೮೭॥

ಉಪದೇಶಪ್ರಭಾವೇಣ ಪ್ರಸಾದಂ ಕರ್ತುಮರ್ಹಸಿ ।
ನಾನ್ಯದಿಚ್ಛಾಮ್ಯಹಂ ಕಿಂಚಿದೃತೇ ದೇವಂ ಜನಾರ್ದನಮ್ ॥ ೮೮॥

ಕುರುಷ್ವಾನುಗ್ರಹಂ ಕಿಂಚಿತ್ಪ್ರಸಾದಂ ಋಷಿಸತ್ತಮ ।
ಭಾರದ್ವಾಜ ಉವಾಚ -
ತವೇದೃಶೀ ಮತಿರ್ಜಾತಾ ಸಹಸಾ ಕೇಶವೋಪರಿ ॥ ೮೯॥

ಏತಸ್ಮಾತ್ತೇ ಗತಂ ಪಾಪಂ ಪೂರ್ವಜನ್ಮಶತೋದ್ಭವಮ್ ।
ವಿನಾ ವ್ರತೈರ್ವಿನಾ ತೀರ್ಥೈರ್ಮುಕ್ತಸ್ತ್ವಂ ಪಾಪಕೋಟಿಭಿಃ ॥ ೯೦॥

ಮದಾತಿಥ್ಯೇನ ಭಕ್ತ್ಯಾ ಚ ಜ್ಞಾತಂ ತವ ಹರೇಃ ಪದಮ್ ।
ತೇನ ಪುಣ್ಯಪ್ರಭಾವೇನ ಮತಿರ್ಜಾತಾ ತವೇದೃಶೀ ॥ ೯೧॥

ಧ್ಯಾತ್ವಾ ಸಂಚಿಂತ್ಯ ಮನಸಾ ಜ್ಞಾತಂ ಪೂರ್ವಂ ವಿಚೇಷ್ಟಿತಮ್ ।
ಪೂರ್ವಜನ್ಮನಿ ವಿಪ್ರಸ್ತ್ವಮವಂತ್ಯಾಂ ಧರ್ಮತತ್ಪರಃ ॥ ೯೨॥

ನಾನು ಮಾಡಿರುವ ಪಾತಕಗಳ ಭಾರದಿಂದ ಬಹು ನಿರ್ವಿಣ್ಣನಾಗಿದ್ದೇನೆ. ಇನ್ನು ಪಾಪಮುಕ್ತಿಯಾಗುವಂತೆ ಏನಾದರೂ ಅನುಗ್ರಹವನ್ನು ಮಾಡಿರಿ ॥ ೮೬॥ ನನ್ನ ಪೂರ್ವಜನ್ಮ ಪುಣ್ಯಪ್ರಭಾವದಿಂದ ತಾವಿಂದು ಇಲ್ಲಿಗೆ ದಯಮಾಡಿಸಿರುವಿರಿ. ಹೇ ಮಹಾಮುನಿಗಳೇ! ಯಾವ ಬಗೆಯಿಂದ ಹೆಂಡತಿ ಸಹಿತನಾದ ನಾನು ಯಮರಾಜನನ್ನು ಕಾಣಲಾರೆನೋ ಅಂಥ ॥ ೮೭॥ ಉಪದೇಶ ಪ್ರಭಾವದಿಂದ ನನ್ನಲ್ಲಿ ಅನುಗ್ರಹವನ್ನು ಮಾಡುವಂಥವರಾಗಿರಿ. ಶ್ರೀಹರಿ ಜನಾರ್ದನನನ್ನು ಬಿಟ್ಟು ಇನ್ನಾವುದನ್ನೂ ನಾನು ಇಚ್ಛಿಸುವುದಿಲ್ಲ. ॥ ೮೮॥ ಹೇ ಋಷಿವರ್ಯರೇ! ನನ್ನ ಮೇಲೆ ಸ್ವಲ್ಪವಾದರೂ ಅನುಗ್ರಹವನ್ನು ಮಾಡಿರಿ ' ಎಂದು ಪರಿಪರಿಯಾಗಿ ಶೂದ್ರನು ಪ್ರಾರ್ಥಿಸಿದನು. ಆಗ ಭಾರದ್ವಾಜರು ರಾಜನನ್ನು ಕುರಿತು, 'ಅಯ್ಯಾ ರಾಜಾ! ನೀನು ಆಗ ಬ್ರಾಹ್ಮಣನನ್ನು ಈ ರೀತಿ ಪ್ರಾರ್ಥಿಸಲು ಅವನ ಅನುಗ್ರಹದಿಂದ ಕೂಡಲೇ ಕೇಶವನಲ್ಲಿ ನಿನಗೆ ಅಚಲವಾದ ಮತಿಯುಂಟಾಯಿತು. ॥೮೯॥ ಮತ್ತು ಹಿಂದಿನ ನೂರು ಜನ್ಮಗಳಲ್ಲಿ ಘಟಿಸಿದ ಪಾಪರಾಶಿ ಎಲ್ಲವೂ ನಷ್ಟವಾಯಿತು. ಯಾವ ವ್ರತಾನುಷ್ಠಾನ-ವಾಗಲೀ; ತೀರ್ಥ ಸ್ನಾನವಾಗಲೀ ಇಲ್ಲದೆಯೇ ಪಾಪಕೋಟಿಗಳಿಂದ ನೀನು ಮುಕ್ತನಾದಿ. ॥ ೯೦॥ ಶೂದ್ರನ ಪ್ರಾರ್ಥನೆಯನ್ನು ಮನ್ನಿಸಿ ಬ್ರಾಹ್ಮಣನು ಹೇಳಿದನು - 'ಅಯ್ಯಾ! ನನಗೆ ನೀಡಿದ ಆತಿಥ್ಯ ಹಾಗೂ, ಶ್ರೀಹರಿಯಲ್ಲಿ ಮಾಡಿದ ಭಕ್ತಿಯ ಪುಣ್ಯ ಪ್ರಭಾವದಿಂದ ಶ್ರೀಹರಿಯ ಪಾದಕಮಲದಲ್ಲಿ ನಿನ್ನ ಮತಿಯು ಈ ರೀತಿ ಆಸಕ್ತವಾಗಿದೆ. ॥೯೧॥ ಅಂತರ್ದೃಷ್ಟಿಯಿಂದ ಮನಸ್ಸಿನಲ್ಲಿ ಚಿಂತಿಸಿ ಈ ಶೂದ್ರಜನ್ಮಕ್ಕಿಂತ ಹಿಂದಿನ ಜನ್ಮದಲ್ಲಿ ನೀನು

ಸದಾಧ್ಯಾಪನಶೀಲಶ್ಚ ಸುಶೀಲಶ್ಚ ಸದಾ ವ್ರತೀ ।
ಏಕಾ ತು ದ್ವಾದಶೀ ವಿಷ್ಣೋಃ ಕೃತಾ ದಶಮಿಸಂಯುತಾ ॥ ೯೩॥

ತಸ್ಯ ಪಾಪಪ್ರಭಾವೇನ ಸಮಸ್ತಂ ಸುಕೃತಂ ಗತಮ್ ।
ಸರ್ವಂ ತದ್ವಿಫಲಂ ಜಾತಂ ಯಥಾ ಶೂದ್ರಪತಿರ್ದ್ವಿಜಃ ॥ ೯೪॥

ಬಹುವರ್ಷಸಹಸ್ರಾಣಿ ಪ್ರಾಪ್ತಾ ನರಕಯಾತನಾಃ ।
ತಸ್ಮಾದೇವ ತ್ವಯಾ ಸರ್ವಂ ಪೂರ್ವಂ ದುಷ್ಟಂ ಕೃತಂ ಚಿರಮ್ ॥ ೯೫॥

ಕೃತಾ ತು ದಶಮೀಮಿಶ್ರಾ ತಿಥಿರ್ವಿಷ್ಣೋರ್ಮಹಾತ್ಮನಃ ।
ತೇನ ಶೂದ್ರೋ ಭವಾನ್ ಜಾತಃ ಪಾಪೇ ಚ ರಮತೇ ಮತಿಃ ॥ ೯೬॥

ಧರ್ಮೇ ನ ರಮತೇ ಚಿತ್ತಂ ದಶಮೀವೇಧದೂಷಿತಮ್ ।
ವಿದರ್ಭನಗರೇ ವಿಪ್ರ ಅಸ್ತಿ ತೇ ಪುತ್ರಿಕಾಸುತಃ ॥ ೯೭॥

ಕೃತಂ ತೇನ ವಿಧಾನೋಕ್ತಂ ಹರೇರೇಕಾದಶೀವ್ರತಮ್ ।
ಪ್ರದತ್ತಂ ತೇನ ತತ್ಪುಣ್ಯಂ ಅಖಂಡೈಕಾದಶೀವ್ರತಮ್ ॥ ೯೮॥

ಧರ್ಮೋಪರಿ ಮತಿರ್ಜಾತಾ ಜಾತಃ ಪಾಪಸ್ಯ ಸಂಕ್ಷಯಃ ।
ತೇನ ಪುಣ್ಯಪ್ರಭಾವೇನ ಏಕಾದಸ್ಯಾ ವ್ರತೇನ ಚ ॥ ೯೯॥

ಮಾಡಿದುದೆಲ್ಲವನ್ನೂ ತಿಳಿದೆನು. ಪೂರ್ವಜನ್ಮದಲ್ಲಿ ನೀನು ಅವಂತೀ ಎಂಬ ಪಟ್ಟಣದಲ್ಲಿ ಧರ್ಮಿಷ್ಠನಾದ ಒಬ್ಬ ಬ್ರಾಹ್ಮಣನಾಗಿದ್ದಿ. ॥ ೯೨॥ ಆಗ ಪಾಠಪ್ರವಚನದಲ್ಲಿ ಸದಾಕಾಲ ರತನಾಗಿ ಸುಶೀಲನಾಗಿ, ಸದಾವ್ರತಿಯಾಗಿ ಇರುವವನಾಗಿದ್ದಿ. ಒಮ್ಮೆ ನೀನು ಶ್ರೀವಿಷ್ಣುವಿನ ದಶಮೀ ವಿದ್ಧ ಏಕಾದಶೀ ಮತ್ತು ದ್ವಾದಶೀ ಆಚರಿಸಿದ್ದರಿಂದ ॥ ೯೩॥ ಆ ಪಾಪದ ಪ್ರಭಾವದಿಂದಾಗಿ ನೀನು ಅದುವರೆಗೆ ಸಂಪಾದಿಸಿದ ಪುಣ್ಯಫಲವೆಲ್ಲವೂ ನಷ್ಟವಾಗಿ ಹೋಯಿತು. ॥ ೯೪॥ ಇದರಿಂದ ಪಾಪಕರ್ಮಗಳನ್ನು ಮಾಡಿದ ಶೂದ್ರನೋಪಾದಿಯಲ್ಲಿ ಅನೇಕ ಸಹಸ್ರ ವರ್ಷಗಳವರೆಗೆ ನರಕಯಾತನೆಯನ್ನು ಅನುಭವಿಸಿದಿ. ಆದ್ದರಿಂದಲೇ ಪೂರ್ವಜನ್ಮದಲ್ಲಿ ನೀನು ಬಹುಕಾಲ ದುಷ್ಟ ಕರ್ಮಗಳನ್ನು ಮಾಡಿದಿ. ॥ ೯೫॥ ದಶಮೀಯುಕ್ತವಾದ ಏಕಾದಶೀ ದಿನವನ್ನು ಆಚರಿಸಿದ್ದರಿಂದಲೇ ಈಗ ನೀನು ಪುನಃ ಶೂದ್ರನಾಗಿ ಹುಟ್ಟಿರುವಿ ಹಾಗೂ ನಿನ್ನ ಬುದ್ಧಿಯು ಸದಾಕಾಲ ಪಾಪಕರ್ಮಗಳಲ್ಲೇ ಆಸಕ್ತವಾಗಿರುವದು. ॥ ೯೬॥ ದಶಮೀವೇಧದಿಂದ ದೂಷಿತವಾದ ನಿನ್ನ ಮನಸ್ಸು ಧರ್ಮಕಾರ್ಯಗಳಲ್ಲಿ ಹೋಗುತ್ತಿಲ್ಲ. ಅಯ್ಯಾ! ವಿದರ್ಭ ನಗರದಲ್ಲಿ, ನಿನ್ನ ಸುಶೀಲನಾದ ಮೊಮ್ಮಗನು (ಮಗಳ ಮಗನು) ವಾಸವಾಗಿದ್ದಾನೆ. ॥ ೯೭॥ ಅವನು ವಿಧಿಪೂರ್ವಕವಾಗಿ ಏಕಾದಶೀವ್ರತವನ್ನು ಆಚರಿಸಿ ತಾನು ಮಾಡಿದ ಅಖಂಡ ಏಕಾದಶೀ ವ್ರತದ ಪುಣ್ಯಫಲವನ್ನು ನಿನಗೆ ಧಾರೆ ಎರೆದು ಕೊಟ್ಟದ್ದರಿಂದ ॥ ೯೮॥ ಧರ್ಮದಲ್ಲಿ ನಿನಗೆ ಬುದ್ಧಿಯುಂಟಾಗಿದೆ

ದಶಮೀವೇಧಜಂ ಪಾಪಂ ಯಮೇನ ಪರಿಮಾರ್ಜಿತಮ್ ।
ಇಹ ಜನ್ಮನಿ ಯತ್ಪಾಪಮನ್ಯಜನ್ಮಕೃತಾನ್ಯಪಿ ॥ ೧೦೦॥

ಮಾರ್ಜಿತಾನಿ ಯಮೇನೈವ ಪಾಪಾನಿ ತವ ಸಾಂಪ್ರತಮ್ ।
ತಯೋರ್ವಿವದತೋರೇವಂ ವಿಷ್ವಕ್ಸೇನಃ ಸಮಾಗತಃ ॥ ೧೦೧॥

ವರ್ಣಾವರ ಸ್ವಾಗತಂ ತೇ ತುಷ್ಟೋಽಹಂ ತೇ ಜನಾರ್ದನಃ।
ವಿಪ್ರಸ್ಯಾತಿಥಿಹೇತುತ್ವಾಜ್ಜಾತಃ ಪಾಪಸ್ಯ ಸಂಕ್ಷಯಃ ॥ ೧೦೨॥

ಪರದತ್ತೇನ ಪುಣ್ಯೇನ ಏಕಾದಶ್ಯಾವ್ರತೇನಚ ।
ದಶಮೀವೇಧಜಂ ಪಾಪಂ ತವ ಶೂದ್ರ ಕ್ಷಯಂ ಗತಮ್ ॥ ೧೦೩॥

ವ್ರತಂ ಕೃತ್ವಾ ದದೌ ಪುಣ್ಯಂ ದೌಹಿತ್ರಸ್ತೇನ ತಾರಿತಃ ।
ಪತ್ನ್ಯಾ ಸಹ ಮಹಾಭಾಗ ವೈನತೇಯಂ ಸಮಾರುಹ
ಇತ್ಯುಕ್ತ್ವಾ ದೇವದೇವೇನ ವಿಮಾನೇ ಸ್ಥಾಪಿತಸ್ತದಾ ॥ ೧೦೪॥

ಸ್ವರ್ಗಂ ಗತಃ ಸಪತ್ನೀಕಃ ಶೂದ್ರಸ್ತ್ವೇನ ನೃಪೋತ್ತಮ ।
ದೇವಶರ್ಮಾ ತು ವಿಪ್ರೋ ವೈ ತೀರ್ಥರಾಜಂ ಯಯೌ ಪುನಃ ॥ ೧೦೫॥

ಹಾಗೂ ನಿನ್ನ ಪಾಪದ ನಾಶವಾಗಿದೆ. ಈ ಏಕಾದಶೀವ್ರತದ ಪುಣ್ಯ ಪ್ರಭಾವದಿಂದಾಗಿ ॥೯೯॥ ದಶಮೀವೇಧದಿಂದ ಪ್ರಾಪ್ತವಾಗಿದ್ದ ನಿನ್ನ ಪಾಪವನ್ನೆಲ್ಲ ಯಮಧರ್ಮರಾಜನು ನಾಶಮಾಡಿಬಿಟ್ಟನು. ಈ ಜನ್ಮದಲ್ಲಿ ಹಾಗೂ ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪಗಳೆಲ್ಲ ॥೧೦೦॥ ಯಮನಿಂದಲೇ ಸದ್ಯ ತೊಳೆಯಲ್ಪಟ್ಟವೆ.'' ಹೇ ರಾಜಾ! ದೇವಶರ್ಮ ಹಾಗೂ ಶೂದ್ರರು ಈ ಪ್ರಕಾರ ಸಂಭಾಷಿಸುತ್ತಿರುವಾಗ ವಿಷ್ವಕ್ಸೇನನು ಅಲ್ಲಿ ಆಗಮಿಸಿ ಹೇಳಿದನು ॥ ೧೦೧॥ -'ಎಲೈ ಶೂದ್ರನೇ ! ನಿನಗೆ ಒಳ್ಳೆಯದಾಗಲಿ . ನೀನು ಈ ಬ್ರಾಹ್ಮಣನಿಗೆ ಆತಿಥ್ಯವನ್ನು ನೀಡಿ ಉಪಚರಿಸಿದ್ದರಿಂದ ನಿನ್ನ ಪಾಪವೆಲ್ಲ ನಾಶವಾಗಿದೆ. ಜನಾರ್ದನನಾದ ನಾನು ಸಂತುಷ್ಟನಾಗಿದ್ದೇನೆ. ॥ ೧೦೨॥ ಹೇ ಶೂದ್ರನೇ! ಬೇರೊಬ್ಬರು ವಿಧಿಪೂರ್ವಕ ಮಾಡಿದ ಏಕಾದಶೀ ವ್ರತದ ಪುಣ್ಯವು ನಿನಗೆ ಕೊಡಲ್ಪಟ್ಟದ್ದರಿಂದ ದಶಮೀವೇಧಜವಾದ ನಿನ್ನ ಪಾಪವು ನಾಶವಾಗಿ ಹೋಯಿತು. ॥೧೦೩॥ ಏಕಾದಶೀ ವ್ರತವನ್ನು ವಿಧಿಪೂರ್ವಕ ಆಚರಿಸಿ ನಿನ್ನ ಮೊಮ್ಮಗನು ಆ ವ್ರತದ ಪುಣ್ಯವನ್ನು ನಿನಗೆ ಸಮರ್ಪಿಸಿದ್ದನು. ನಿನ್ನ ಮೊಮ್ಮಗನಿಂದಲೇ ನೀನು ಉದ್ಧೃತನಾಗಿರುವಿ. ಶೂದ್ರನೇ, ನಿನ್ನ ಪತ್ನಿಯೊಂದಿಗೆ ಈ ಗರುಡನ ಮೇಲೇರು ಬಾ.' ॥ ೧೦೪॥ '' ಹೇ ರಾಜಾ, ಈ ರೀತಿ ವಿಷ್ಣುವು ಹೇಳಿದ ನಂತರ ಶೂದ್ರನು ತನ್ನ ಪತ್ನಿಯೊಂದಿಗೆ ಪರಮಾತ್ಮನ ಸಾನ್ನಿಧ್ಯದಲ್ಲಿ ಗರುಡಾರೂಢನಾಗಿ ಕುಳಿತು ಸಪತ್ನೀಕನಾಗಿ ಸ್ವರ್ಗಲೋಕಕ್ಕೆ ಹೋದನು. ಇತ್ತ ದೇವಶರ್ಮ ಬ್ರಾಹ್ಮಣನು ತೀರ್ಥಯಾತ್ರಾ ನಿಮಿತ್ತವಾಗಿ ಪುನಃ ತನ್ನ ಪ್ರಯಾಣವನ್ನು ಮುಂದುವರಿಸಿದನು. ॥೧೦೫॥

ಏತತ್ತೇ ಸರ್ವಮಾಖ್ಯಾತಂ ಯತ್ತ್ವಯಾ ಪರಿಪೃಚ್ಛಿತಮ್ ।
ಅಖಂಡೈಕಾದಶೀಪುಣ್ಯಾತ್ ಪ್ರಾಪ್ತಸ್ಯಾತಿಥ್ಯಕಾರಣಾತ್ ॥ ೧೦೬॥

ವಿಷ್ಣುಭಕ್ತಿಮತೀ ಭಾರ್ಯಾ ರಾಜ್ಯಂ ನಿಹತಕಂಟಕಮ್ ।
ರಾಜೋವಾಚ -
ಏಕಾದಶೀವಿಧಿಂ ಬ್ರಹ್ಮನ್ ಮಾಂಸಮ್ಯಕ್ ಸಮುಪಾದಿಶ ॥ ೧೦೭॥

ವಿಷ್ಣೋಃ ಸಂಪ್ರೀಣನಾರ್ಥಾಯ ಪ್ರಸಾದಂ ಕರ್ತುಮರ್ಹಸಿ ।
ಋಷಿರುವಾಚ -
ಶೃಣುಷ್ವ ನೃಪಶಾರ್ದೂಲ ಏಕಾದಶ್ಯಾ ವಿಧಿಂ ಶುಭಮ್ ॥ ೧೦೮॥

ಪುರಾಽಽಸೀದ್ಭಗವಾನ್ ವಿಷ್ಣುರ್ನಾರದಾಯ ಯದುಕ್ತವಾನ್ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ಉದ್ಯಾಪನವಿಧಿಂ ಶುಭಮ್ ॥ ೧೦೯॥

ಮಾರ್ಗಶೀರ್ಷಾದಿಮಾಸೇಷು ದ್ವಾದಶೀಷು ನರೋತ್ತಮ ।
ವ್ರತಂ ಪುಣ್ಯಮಿದಂ ಕಾರ್ಯಮಖಂಡೈಕಾದಶೀವ್ರತಮ್ ॥ ೧೧೦॥

ದಶಮ್ಯಾಂ ಚೈವ ನಕ್ತಂ ಚ ಏಕಾದಶ್ಯಾಮುಪೋಷಣಮ್ ।
ದ್ವಾದಶ್ಯಾಮೇಕಭುಕ್ತಂ ವೈ ಅಖಂಡಮಿತಿ ಕಥ್ಯತೇ ॥ ೧೧೧॥

ನೀನು ಪ್ರಶ್ನಿಸಿದ ವಿಷಯಗಳಿಗೆಲ್ಲ ಉತ್ತರಿಸಿದ್ದೇನೆ. ಪೂರ್ವಜನ್ಮದಲ್ಲಿ ಸಂಪಾದಿಸಿದ ಅಖಂಡ ಏಕಾದಶೀವ್ರತದ ಪುಣ್ಯಪ್ರಭಾವದಿಂದಲೂ, ಮತ್ತು ಬಂದ ಬ್ರಾಹ್ಮಣನಿಗೆ ನೀಡಿದ ಆತಿಥ್ಯ ಕಾರಣದಿಂದಲೂ ॥ ೧೦೬॥ ಈ ಜನ್ಮದಲ್ಲಿ ನಿನಗೆ ವಿಷ್ಣು ಭಕ್ತಿಯುಳ್ಳ ಪತ್ನಿಯೂ, ನಿಷ್ಕಂಟಕವಾದ ರಾಜ್ಯವೂ ಪ್ರಾಪ್ತವಾಗಿವೆ.' ಹೀಗೆಂದು ಶ್ರೀ ಭಾರದ್ವಾಜರು ವಿವರಿಸಲು ರಾಜನು 'ಭೋ ಬ್ರಹ್ಮಜ್ಞಾನಿಗಳೇ' ಏಕಾದಶೀ ವ್ರತದ ವಿಧಾನವನ್ನು ನನಗೆ ವಿಸ್ತಾರವಾಗಿ ಉಪದೇಶಿಸಬೇಕು. ॥ ೧೦೭॥ ಶ್ರೀವಿಷ್ಣುವಿನ ಸಂಪ್ರೀತಿಗೆ ಕಾರಣವಾದ ಇದನ್ನು ಉಪದೇಶಿಸಿ ನನ್ನ ಮೇಲೆ ಅನುಗ್ರಹ ಮಾಡುವವರಾಗಿರಿ' ಎಂದು ಪ್ರಾರ್ಥಿಸಲು ಭಾರದ್ವಾಜ ಋಷಿಗಳು ಹೇಳುತ್ತಾರೆ - 'ಹೇ ರಾಜಾ ! ಏಕಾದಶಿಯ ಶುಭಕರವಾದ ವಿಧಾನವನ್ನು ಕೇಳು. ॥ ೧೦೮॥ ಹಿಂದಕ್ಕೆ ಭಗವಾನ್ ವಿಷ್ಣುವು ನಾರದರಿಗೆ ಹೇಳಿದ ಏಕಾದಶಿಯ ವ್ರತದ ವಿಧಾನವನ್ನು ಮತ್ತು ಉದ್ಯಾಪನ ವಿಧಿಯನ್ನೇ ನಿನಗೀಗ ತಿಳಿಸುವೆನು ಕೇಳು. ॥ ೧೦೯॥ ಹೇ ರಾಜಾ ! ಮಾರ್ಗಶೀರ್ಷಾದಿ ಮಾಸಗಳಲ್ಲಿ ದ್ವಾದಶೀ (ದಶಮೀ, ಏಕಾದಶೀ, ದ್ವಾದಶೀ) ದಿನಗಳಲ್ಲಿ ಪುಣ್ಯಕರವಾದ ಈ ಅಖಂಡ ಏಕಾದಶೀ ವ್ರತವನ್ನು ಆಚರಿಸಬೇಕು. ॥ ೧೧೦॥ ದಶಮೀ ದಿನ ರಾತ್ರಿ, ಏಕಾದಶೀ ದಿನ ಪೂರ್ತಿ ಉಪವಾಸದಿಂದ ಇದ್ದು ದ್ವಾದಶಿಯ ದಿನ ಬೆಳಿಗ್ಗೆ ಒಂದಾವರ್ತಿ ಮಾತ್ರ ಊಟ ಮಾಡುವುದೇ ಅಖಂಡ ಏಕಾದಶೀವ್ರತವೆಂದು ಕರೆಯಲ್ಪಡುತ್ತದೆ. ॥ ೧೧೧॥

ದಿವಸಸ್ಯಾಷ್ಟಮೇ ಭಾಗೇ ಮಂದೀಭೂತೇ ದಿವಾಕರೇ ।
ತದ್ಧಿ ನಕ್ತಂ ವಿಜಾನೀಯಾನ್ನ ನಕ್ತಂ ನಿಶಿ ಭೋಜನಮ್ ॥ ೧೧೨॥

ಕಾಂಸ್ಯಂ ಮಾಂಸಂ ಮಸೂರಾನ್ನಂ ಚಣಕಾನ್ ಕೋದ್ರವಾಂಸ್ತಥಾ ।
ಶಾಕಂ ಮಧು ಪರಾನ್ನಂ ಚ ಪುನರ್ಭೋಜನಮೈಥುನೇ ॥ ೧೧೩॥

ವಿಷ್ಣುಭಕ್ತೋ ನರೋ ವಾಪಿ ದಶಮ್ಯಾಂ ದಶ ವರ್ಜಯೇತ್
ದಶಮೀವಿಧಿರುಕ್ತೋಽಯಂ ಏಕಾದಶ್ಯಾಸ್ತಥಾ ಶೃಣು ॥ ೧೧೪॥

ಅಸಕೃಜ್ಜಲಪಾನಂ ಚ ಹಿಂಸಾಶೌಚಮಸತ್ಯತಾ ।
ತಾಂಬೂಲಂ ದಂತಕಾಷ್ಠಂ ಚ ದಿವಾಶಯನಮೈಥುನೇ ॥ ೧೧೫॥

ದ್ಯೂತಂ ಕ್ರೀಡಾ ನಿಶಾನಿದ್ರಾ, ಪತಿತೈಃ ಸಹ ಭಾಷಣಮ್ ।
ಏಕಾದಶ್ಯಾಂ ಸದೈತಾನಿ ವಿಷ್ಣುಭಕ್ತಸ್ತು ವರ್ಜಯೇತ್ ॥ ೧೧೬॥

ಅದ್ಯ ಮೇ ಭೋಜನಂ ನಾಸ್ತಿ ಸ್ತ್ರೀಸೌಖ್ಯಂ ತತ್ರ ಕೇಶವ ।
ಪ್ರೀತ್ಯರ್ಥಂ ತವ ದೇವೇಶ ನಿಯಮಸ್ತು ದಿವಾನಿಶಿ ॥ ೧೧೭॥

ಸುಪ್ತೇಂದ್ರಿಯೈಸ್ತು ವೈಕ್ಲವ್ಯಂ ಭೋಜನಂ ಯಚ್ಚ ಮೈಥುನಮ್ ।
ದಂತಾಂತರವಿಲಗ್ನಾನ್ನಂ ಕ್ಷಮಸ್ವ ಪುರುಷೋತ್ತಮ ॥ ೧೧೮॥

ದಿನದ ೮ನೆಯ ಭಾಗದಲ್ಲಿ ಸೂರ್ಯನು ಮಂದವಾಗುತ್ತಿರಲು 'ನಕ್ತ' ಕಾಲವೆಂದು ತಿಳಿಯಬೇಕು. ಈ ನಕ್ತಕಾಲದಲ್ಲಾಗಲೀ, ರಾತ್ರಿಯಲ್ಲಾಗಲೀ ಭೋಜನ ಮಾಡ ಕೂಡದು. ॥೧೧೨॥ ಕಂಚು, ಮಾಂಸ, ಚನ್ನಂಗೀ, ಕಡಲಿ, ಕೋದ್ರವ(ಹಾರಕ ಧಾನ್ಯ), ಫಲಮೂಲಾದಿಗಳಿಂದ ಮಾಡಿದ ಪದಾರ್ಥಗಳು, ಜೇನುತುಪ್ಪ, ಪರಾನ್ನ, ಎರಡಾವರ್ತಿ ಭೋಜನ ಮತ್ತು ಮೈಥುನ ॥ ೧೧೩॥ ಈ ಹತ್ತನ್ನು ವಿಷ್ಣುಭಕ್ತನು ಅಥವಾ ಇತರ ಯಾವುದೇ ಮನುಷ್ಯನು ದಶಮಿಯ ದಿನದಂದು ವರ್ಜಿಸಬೇಕು. ಇಷ್ಟೆಲ್ಲ ದಶಮೀ ದಿನದಂದು ಮಾಡಬೇಕಾದ ವಿಧಾನವನ್ನು ಹೇಳಿದ್ದೇನೆ. ಇನ್ನು ಏಕಾದಶಿಯ ವಿಧಿಯನ್ನು ಕೇಳು. ॥ ೧೧೪॥ ಪುನಃ ಪುನಃ ಜಲಪಾನ ಮಾಡುವುದು, ಹಿಂಸೆ, ಅಶೌಚಕರ್ಮ, ಮಿಥ್ಯಾ ಭಾಷಣ, ತಾಂಬೂಲ, ದಂತಕಾಷ್ಠ, ಹಗಲು ನಿದ್ರೆ, ಮೈಥುನ ॥೧೧೫॥ ದ್ಯೂತಕ್ರೀಡಾ, ರಾತ್ರಿ ನಿದ್ರೆ, ಮತ್ತು ಪತಿತರೊಂದಿಗೆ ಸಂಭಾಷಣೆ ಈ ಹನ್ನೊಂದು ಕಾರ್ಯಗಳನ್ನು ವಿಷ್ಣುಭಕ್ತನಾದವನು ಏಕಾದಶಿಯಂದು ಅವಶ್ಯವಾಗಿ ತ್ಯಜಿಸಬೇಕು. ॥ ೧೧೬॥ "ಹೇ ಕೇಶವಾ ! ಇಂದು ನಾನು ಭೋಜನವನ್ನು ಸ್ವೀಕರಿಸುವುದಿಲ್ಲ. ಸ್ತ್ರೀ ಸೌಖ್ಯವನ್ನು ತ್ಯಜಿಸಿದ್ದೇನೆ. ಹೇ ದೇವೇಶಾ! ನಿನ್ನ ಪ್ರೀತ್ಯರ್ಥವಾಗಿ ಇಂದು ಹಗಲು, ರಾತ್ರಿ ನಿಯಮದಿಂದ ಇರುವೆನು. ॥೧೧೭॥ ಹೇ ಪುರುಷೋತ್ತಮಾ!

ಉಪಾವೃತ್ತಸ್ತು ಪಾಪೇಭ್ಯೋ ಯಸ್ತು ವಾಸೋ ಗುಣೈಃ ಸಹ ।
ಉಪವಾಸಃ ಸ ವಿಜ್ಞೇಯೋ ನ ಶರೀರಸ್ಯ ಶೋಷಣಮ್ ॥ ೧೧೯॥

ಪೂರ್ವೋಕ್ತಾನಿ ದಶೈತಾನಿ ಪರಾನ್ನಂ ಚ ತಥಾ ಮಧು ।
ದ್ವಾದಶ್ಯಾಂ ವಿಷ್ಣುಭಕ್ತೋ ವೈ ವರ್ಜಯೇನ್ಮರ್ದನಾದಿಕಮ್ ॥ ೧೨೦॥

ಅದ್ಯ ಮೇ ದ್ವಾದಶೀ ಪುಣ್ಯಾ ಪವಿತ್ರಾ ಪಾಪನಾಶನೀ ।
ಪಾರಣಂ ಚ ಕರಿಷ್ಯಾಮಿ ಪ್ರಸೀದ ಗರುಡಧ್ವಜ ॥ ೧೨೧॥

ವಿಷ್ಣೋಃ ಸಂತೋಷಣಾರ್ಥಾಯ ಯನ್ಮಯಾ ನಿಯಮಃ ಕೃತಃ ।
ಅದ್ಯಾಹಂ ಭೋಜಯಿಷ್ಯಾಮಿ ತ್ವತ್ಪ್ರಸಾದಾತ್ ದ್ವಿಜೋತ್ತಮ ॥ ೧೨೨॥

ಅನೇನ ವಿಧಿನಾ ಕುರ್ಯಾದ್ಯಾವದ್ವರ್ಷಂ ಸಮಾಪ್ಯತೇ ।
ಸಂಪೂರ್ಣೇ ತು ತತೋ ವರ್ಷೇ ಕುರ್ಯಾದುದ್ಯಾಪನಂ ಬುಧಃ ॥ ೧೨೩॥

ಆದೌ ಮಧ್ಯೇ ತಥಾ ಚಾಂತೇ ವ್ರತಸ್ಯೋದ್ಯಾಪನಂ ಸ್ಮೃತಮ್ ।
ಉದ್ಯಾಪನಂ ನ ಕುರ್ಯಾದ್ಯಃ ಕುಷ್ಠೀ ಚಾಂಧಶ್ಚ ಜಾಯತೇ ॥ ೧೨೪॥

ನಿಶ್ಚೇಷ್ಟಿತ ಇಂದ್ರಿಯಗಳಿಂದಾದ ವೈಕ್ಲವ್ಯ (ಗೊಂದಲ), ಭೋಜನಾಪೇಕ್ಷೆ, ಮೈಥುನಾಪೇಕ್ಷೆ ಮುಂತಾದವುಗಳನ್ನು ಹಾಗೂ ಹಲ್ಲುಗಳ ನಡುವೆ ತಪ್ಪಿ ಅನ್ನ ಉಳಿದುದನ್ನು ಕ್ಷಮಿಸು. ॥ ೧೧೮॥ ಪಾಪಕರ್ಮಗಳಿಂದ ದೂರವಾಗಿದ್ದು ಸದ್ಗುಣಗಳಿಂದ ಯುಕ್ತನಾಗಿರುವುದೇ ಉಪವಾಸವೆನ್ನಿಸಿಕೊಳ್ಳುವುದಲ್ಲದೇ ಕೇವಲ ಶರೀರದ ಶೋಷಣೆಯೇ ಉಪವಾಸವಾಗಲಾರದು. ॥೧೧೯॥ ಈ ಮೊದಲು ಹೇಳಿದ ಹತ್ತು ಪದಾರ್ಥಗಳನ್ನು ಮತ್ತು ಪರಾನ್ನ, ಜೇನುತುಪ್ಪ ಹಾಗೂ ಮರ್ದನಾದಿಗಳನ್ನು ವಿಷ್ಣುಭಕ್ತನಾದವನು ದ್ವಾದಶಿಯ ದಿನದಂದು ವರ್ಜಿಸಬೇಕು. ॥ ೧೨೦॥ ಹೇ ಗರುಡಧ್ವಜನೇ ! ಇಂದು ಪುಣ್ಯಪ್ರದವಾದ ಸಕಲ ಪಾಪಗಳನ್ನು ನಾಶಮಾಡುವ ದ್ವಾದಶೀತಿಥಿ ಇದೆ. ನಾನು ಇಂದು ಪಾರಣೆಯನ್ನು ಮಾಡುತ್ತೇನೆ. ॥ ೧೨೧॥ ಎಲೈ ದ್ವಿಜೋತ್ತಮನೇ ! ಶ್ರೀವಿಷ್ಣುವಿನ ಪ್ರೀತ್ಯರ್ಥವಾಗಿ ನಾನು ಮಾಡಿದ ನಿಯಮದಂತೆ ನಿನ್ನ ಅನುಗ್ರಹದಿಂದ ಇಂದು ಭೋಜನವನ್ನು ಮಾಡುವೆನು" ಎಂದು ದೇವದ್ವಿಜರನ್ನು ಪ್ರಾರ್ಥಿಸಬೇಕು. ॥ ೧೨೨॥ ಈ ಪ್ರಕಾರವಾಗಿ ಒಂದು ವರ್ಷದವರೆಗೆ ಆಚರಿಸಿ, ವರ್ಷಪೂರ್ತಿಯಾದ ನಂತರ ಉದ್ಯಾಪನೆಯನ್ನು ಮಾಡಬೇಕು. ॥೧೨೩॥ ವ್ರತಸ್ಥನಾದ ಪುರುಷನು ವ್ರತಧಾರಣ ಮಾಡಿದ ವರ್ಷದ ಆದಿಯಲ್ಲೂ, ಮಧ್ಯದಲ್ಲೂ ಹಾಗೂ ಅಂತ್ಯದಲ್ಲೂ ಉದ್ಯಾಪನೆಯನ್ನು ಮಾಡಬೇಕೆಂದು ಸ್ಮೃತಿಯಲ್ಲಿ ಹೇಳಲ್ಪಟ್ಟಿದೆ . ಉದ್ಯಾಪನೆಯನ್ನು ಮಾಡದಿದ್ದವನು ಜನ್ಮಾಂತರದಲ್ಲಿ ಕುಷ್ಠಿಯೂ ಅಂಧನೂ ಆಗಿ ಹುಟ್ಟುವರು. ॥ ೧೨೪॥ ಆದ್ದರಿಂದ ತನ್ನ ಶಕ್ತ್ಯನುಸಾರ ಶುಭಕರವಾದ

ತಸ್ಮಾದುದ್ಯಾಪನಂ ಕುರ್ಯಾದ್ಯಥಾ ವಿಭವಸಾರತಃ ।
ಕ್ರಿಯತೇ ಶುಕ್ಲಪಕ್ಷೇ ಚ ಮಾಸೇ ಮಾರ್ಗಶಿರೇ ಶುಭೇ ॥ ೧೨೫॥

ಆಮಂತ್ರ್ಯ ದ್ವಾದಶಮಿತಾನ್ ಬ್ರಾಹ್ಮಣಾನ್ ವಿಧಿಕೋವಿದಾನ್ ।
ತ್ರಯೋದಶಂ ಸಪತ್ನೀಕಂ ಆಚಾರ್ಯಂ ವಿಧಿಕೋವಿದಮ್ ॥ ೧೨೬॥

ಯಜಮಾನಃ ಶುಚಿಃ ಸ್ನಾತ್ವಾ ಶ್ರದ್ಧಾಯುಕ್ತೋ ಜಿತೇಂದ್ರಿಯಃ ।
ಪಾದಶೌಚಾರ್ಘ್ಯವಸ್ತ್ರಾಣಿ ಆಚಾರ್ಯಾಯ ತತೋಽರ್ಪಯೇತ್॥ ೧೨೭॥

ಆಚಾರ್ಯಸ್ತು ತತಃ ಕುರ್ಯಾನ್ಮಂಡಲಂ ವರ್ಣಕೈಃ ಶುಭೈಃ ।
ಚಕ್ರಾಬ್ಜಂ ಸರ್ವತೋ ಭದ್ರಂ ಶ್ವೇತವಸ್ತ್ರೇಣ ವೇಷ್ಟಿತಮ್ ॥ ೧೨೮॥

ಜಲಪೂರ್ಣಂ ಚ ಕುಂಭಂ ತು ಪಂಚರತ್ನಸಮನ್ವಿತಮ್ ।
ಪಂಚಪಲ್ಲವಸಂಯುಕ್ತಂ ಕರ್ಪೂರಾಗರುವಾಸಿತಮ್ ॥ ೧೨೯॥

ವೇಷ್ಟಿತಂ ರಕ್ತವಸ್ತ್ರೇಣ ತಾಮ್ರಪಾತ್ರೇಣ ಸಂಯುತಮ್ ।
ವೇಷ್ಟಿತಂ ಪುಷ್ಪಮಾಲಾಭಿರ್ಮಂಡಲೋಪರಿ ವಿನ್ಯಸೇತ್ ॥ ೧೩೦॥

ತಸ್ಯೋಪರಿ ನ್ಯಸೇದ್ದೇವಂ ಲಕ್ಷ್ಮೀನಾರಾಯಣಂ ನೃಪ ।
ಸೌವರ್ಣೀ ಪ್ರತಿಮಾ ಕಾರ್ಯಾ ಏಕಕರ್ಷಪ್ರಮಾಣತಃ ॥ ೧೩೦॥

ಮಾರ್ಗಶೀರ್ಷಮಾಸದ ಶುಕ್ಲಪಕ್ಷದಲ್ಲಿ ಉದ್ಯಾಪನೆಯನ್ನು ಮಾಡಬೇಕು. ॥ ೧೨೫॥ ಉದ್ಯಾಪನೆಯ ವಿಧಿಯನ್ನು ತಿಳಿದವರಾದ ೧೨ ಜನ ಬ್ರಾಹ್ಮಣರನ್ನು ಉದ್ಯಾಪನೆಯ ದಿನ ಆಮಂತ್ರಿಸಬೇಕು ಮತ್ತು ಹದಿಮೂರನೆ-ಯವನಾಗಿ ವಿಧಿಕೋವಿದನಾದ ಉದ್ಯಾಪನೆಯನ್ನು ಮಾಡಿಸಲು ಬಂದಿರುವ ಪತ್ನೀಸಮೇತನಾದ ಒಬ್ಬ ಆಚಾರ್ಯನನ್ನು ಆಮಂತ್ರಿಸಬೇಕು. ॥ ೧೨೬॥ ವ್ರತಸ್ಥನಾದ ಯಜಮಾನನು ಶುದ್ಧನಾಗಿ,ಸ್ನಾನ ಮಾಡಿ, ಜಿತೇಂದ್ರಿಯನಾಗಿ, ಶ್ರದ್ಧಾಯುಕ್ತನಾಗಿ ಪ್ರತಿಯೊಬ್ಬ ಬ್ರಾಹ್ಮಣರಿಗೂ ಪಾದಪ್ರಕ್ಷಾಲನೆ ಮಾಡಿ ಅವರಿಗೆ ಅರ್ಘ್ಯ ವಸ್ತ್ರಗಳನ್ನು ಸಮರ್ಪಿಸಬೇಕು. ॥ ೧೨೭॥ ಪತ್ನೀಸಮೇತ ಆಮಂತ್ರಿತನಾದ ಆಚಾರ್ಯನು ಉತ್ತಮ ಬಣ್ಣದ ರಂಗವಲ್ಲಿಗಳಿಂದ ಸರ್ವತ್ರ ರಕ್ಷಕವಾದ ಚಕ್ರಾಬ್ಜಮಂಡಲವನ್ನು ಸಿದ್ಧಪಡಿಸಿ ಅದನ್ನು ಶುಭ್ರವಸ್ತ್ರದಿಂದ ಸುತ್ತುವರಿಸಬೇಕು. ॥೧೨೮॥ ಅನಂತರ ಪಂಚರತ್ನಗಳಿಂದ ಹಾಗೂ ಪಂಚಪಲ್ಲವಗಳಿಂದ ಯುಕ್ತವಾದ, ಕರ್ಪೂರ ಅಗರುಗಳಿಂದ ಸುವಾಸಿತವಾದ ಜಲದಿಂದ ತುಂಬಿದ ॥ ೧೨೯॥ ರಕ್ತವಸ್ತ್ರದಿಂದ ಸುತ್ತಲ್ಪಟ್ಟ, ಪುಷ್ಪಮಾಲೆಗಳಿಂದ ಅಲಂಕೃತವಾದ ತಾಮ್ರದ ಪೂರ್ಣಕುಂಭವನ್ನು ಆ ಮಂಡಲದ ಮೇಲ್ಭಾಗದಲ್ಲಿ ಸ್ಥಾಪಿಸಬೇಕು. ॥೧೩೦॥ ಹೇ ರಾಜಾ! ಕುಂಭದ ಮೇಲೆ ಶ್ರೀಲಕ್ಷ್ಮೀನಾರಾಯಣರ ವಿಗ್ರಹವನ್ನು ಇಡಬೇಕು. ಎಂಭತ್ತು ಗುಂಜಿ

ವಾಹನಾಯುಧಸಂಯುಕ್ತಾ ಪ್ರಮಾಣಂ ಚತುರಂಗುಲಮ್ ।
ಕಿಂವಾ ಶಕ್ತ್ಯಾ ಪ್ರಕುರ್ವೀತ ವಿತ್ತಶಾಠ್ಯಂ ವಿವರ್ಜಯೇತ್ ॥ ೧೩೨॥

ತತಃ ಸಂಸ್ಥಾಪಯೇನ್ಮೂರ್ತಿಂ ಮಂಡಲೇ ದ್ವಾದಶೈವ ಹಿ ।
ಮಾಸಾನಾಮಧಿಪಃ ಪೂಜ್ಯಶ್ಚಾಖಂಡವ್ರತಹೇತವೇ ॥ ೧೩೩॥

ಮಂಡಲಾತ್ಪೂರ್ವದಿಗ್ಭಾಗೇ ಶಂಖಂ ಸಂಸ್ಥಾಪಯೇತ್ ಶುಭಮ್ ।
ತ್ವಂ ಪುರಾ ಸಾಗರೋತ್ಪನ್ನೋ ವಿಷ್ಣುನಾ ವಿಧೃತಃ ಕರೇ ॥ ೧೩೪॥

ನಮಿತಃ ಸರ್ವದೇವೈಶ್ಚ ಪಾಂಚಜನ್ಯ ನಮೋಽಸ್ತು ತೇ ।
ತತಸ್ತು ಸ್ಥಂಡಿಲಂ ಕಾರ್ಯಂ ಮಂಡಲಾದುತ್ತರಾಂ ದಿಶಮ್ ॥ ೧೩೫॥

ಸಂಕಲ್ಪ್ಯಾವಾಹನಂ ಕಾರ್ಯಂ ಮಂತ್ರೈರ್ವೇದೋಕ್ತವೈಷ್ಣವೈಃ ।
ಸ್ವಸ್ಥಾನೇ ಸ್ಥಾಪಯೇದ್ವಿಷ್ಣುಂ ಸ್ನಾಪಯೇಚ್ಚ ಹರಿಂ ಪ್ರತಿ ॥ ೧೩೬॥

ಪೂಜಾಂ ಪುರುಷಸೂಕ್ತೇನ ಮಂತ್ರೈಃ ಪೌರಾಣಿಕೈಃ ಶುಭೈಃ ।
ನೈವೇದ್ಯಾರ್ಥಂ ಚ ಕಾರ್ಯಾಣಿ ಮೋದಕಾನಿ ಬಹೂನ್ಯಪಿ ॥ ೧೩೭॥

ತೂಕ ಸುವರ್ಣದಿಂದ ನಿರ್ಮಿತವಾದ, ವಾಹನಾಯುಧಗಳಿಂದ ಯುಕ್ತವಾದ, ನಾಲ್ಕು ಅಂಗುಲ ಪ್ರಮಾಣದ ದೇವತೆಯ ಪ್ರತಿಮೆಯನ್ನು ಮಾಡಿಸಬೇಕು. ಇದು ಸಾಧ್ಯವಿರದಿದ್ದರೆ ವಿತ್ತಶಾಠ್ಯವಿಲ್ಲದೇ ತನ್ನ ಶಕ್ತ್ಯನುಸಾರ ಪ್ರತಿಮೆಯನ್ನು ಮಾಡಿಸಬೇಕು. ॥೧೩೧॥ ೧೩೨॥ ಅನಂತರ ಅಖಂಡ ಏಕಾದಶೀವ್ರತದ ನಿಮಿತ್ತವಾಗಿ ಮಂಡಲದಲ್ಲಿ ಹನ್ನೆರಡು ಪ್ರತಿಮೆಗಳನ್ನು ಸ್ಥಾಪಿಸಿ, ಮಾಸಾಧಿಪತಿಯಾದ ಕೇಶವನಾಮಕ ಶ್ರೀವಿಷ್ಣುವಿನನ್ನು ಪೂಜಿಸಬೇಕು. ॥೧೩೩॥ ಮಂಡಲದ ಪೂರ್ವಭಾಗದಲ್ಲಿ ಶುಭಕರವಾದ ಶಂಖವನ್ನು ಸ್ಥಾಪಿಸಿ "ಹೇ ಶಂಖದೇವತೆಯೇ ! ನೀನು ಹಿಂದಕ್ಕೆ ಸಮುದ್ರಮಥನ ಕಾಲದಲ್ಲಿ ಸಾಗರದಿಂದ ಹುಟ್ಟಿರುವಿ ಹಾಗೂ ಶ್ರೀವಿಷ್ಣುವಿನಿಂದ ಕೈಯಲ್ಲಿ ಧರಿಸಲ್ಪಟ್ಟಿರುವಿ. ॥೧೩೪॥ ಸರ್ವದೇವತೆಗಳಿಂದ ನಮಸ್ಕರಿಸಲ್ಪಟ್ಟಿರುವ ಹೇ ಪಾಂಚಜನ್ಯನೇ! ನಿನಗೆ ವಂದಿಸುವೆನು. ಆಮೇಲೆ ಮಂಡಲದ ಉತ್ತರ ಭಾಗದಲ್ಲಿ ಸ್ಥಂಡಿಲವನ್ನು ಸಿದ್ಧಪಡಿಸಬೇಕು. ॥ ೧೩೫॥ ವೇದೋಕ್ತವಾದ ವೈಷ್ಣವ ಮಂತ್ರಗಳಿಂದ ಸಂಕಲ್ಪ ಮಾಡಿ ಆ ಸ್ಥಂಡಿಲದಲ್ಲಿ ಅಗ್ನಿಯ ಆವಾಹನವನ್ನು ಮಾಡಬೇಕು. ಸ್ವಸ್ಥಾನದಲ್ಲಿ ಶ್ರೀವಿಷ್ಣುವನ್ನು ಸ್ಥಾಪಿಸಿ (ವಿಷ್ಣುಪ್ರತಿಮೆಯನ್ನು ಸ್ಥಾಪಿಸಿ) ಅಭಿಷೇಕ ಮಾಡಬೇಕು. ॥ ೧೩೬॥ ಪುರುಷಸೂಕ್ತ ಮಂತ್ರಗಳಿಂದಲೂ, ಒಳ್ಳೆಯ ಪುರಾಣ ಮಂತ್ರಗಳಿಂದಲೂ ಶ್ರೀಹರಿಯ ಪೂಜಾದಿಗಳನ್ನು ಮಾಡಬೇಕು. ನೈವೇದ್ಯಕ್ಕಾಗಿ ಬಹು ಮೋದಕಗಳನ್ನು ಸಿದ್ಧಪಡಿಸಬೇಕು. ॥ ೧೩೭॥ ಧೂಪ-ದೀಪಾರತಿಗಳನ್ನು ಮಾಡಿ , ನೈವೇದ್ಯ ಪದಾರ್ಥಗಳನ್ನು ನಿವೇದಿಸಿ ನಂತರ

ಧೂಪದೀಪೋಪಹಾರಾಣಿ ಕೃತ್ವಾ ನೀರಾಜನಂ ತತಃ ।
ಯಕ್ಷಕರ್ದಮೇನ ಸಂಪೂಜ್ಯ ತತಃ ಕಾರ್ಯಾ ಪ್ರದಕ್ಷಿಣಾಃ ॥ ೧೩೮॥

ಸ್ವಸ್ತಿವಾಚನಕಂ ವಿಪ್ರೈರ್ನಮಸ್ಕಾರಂ ತತೋ ನೃಪ ।
ತತಸ್ತು ಬ್ರಾಹ್ಮಣೈಃ ಕಾರ್ಯ ಆಚಾರ್ಯಕ್ರಮಶೋ ಜಪಃ ॥ ೧೩೯॥

ಜಪಶ್ಚ ಪಾವಮಾನೀಯಮಂಡಲಂ ಬ್ರಾಹ್ಮಣಂ ಮಧು ।
ತೇಜೋಽಸಿ ಶುಕ್ರಜಂ ವಾಚಂ ಬ್ರಾಹ್ಮಸಾಮಾದನಂತರಮ್ ॥ ೧೪೦॥

ಪವಿತ್ರವಂತಂ ಸೂರ್ಯಸ್ಯ ವಿಷ್ಣೋರ್ಮಹಸಿ ಸಂಹಿತಾಮ್ ।
ಜಪಾಂತೇ ಕಲಶೇ ವಿಷ್ಣುಂ ಸೋಪಾಂಗಮುಪರಿ ನ್ಯಸೇತ್ ॥ ೧೪೧॥

ದಿವಸಸ್ಯೋದಯೇ ಚೈವ ಹೋಮಂ ಕುರ್ಯಾದನುಕ್ರಮಮ್ ।
ಸಂಸ್ಥಾಪ್ಯ ಪ್ರಥಮಂ ಪಾತ್ರಂ ಪೂಜಯಿತ್ವಾ ವಿಧಾನತಃ ॥ ೧೪೨॥

ಸ್ತವನಂ ಚ ತತೋ ಹೋಮಃ ಕರ್ತವ್ಯಃ ಚರುಪೂರ್ವಕಮ್ ।
ಸ್ವಗೃಹ್ಯೋಕ್ತವಿಧಾನೇನ ಯಜನಾಗ್ನಿಕ್ರಿಯಾಪರಃ ॥ ೧೪೩॥

ಚರುದ್ವಯಂ ಚ ಕುರ್ವೀತ ಪಾಯಸಂ ವೈಷ್ಣವಂ ಚರುಮ್ ।
ಜುಹುಯಾತ್ಪುರುಷಸೂಕ್ತೇನ ಚರೋರಾಹುತಿಷೋಡಶಮ್ ॥ ೧೪೪॥

ಮಹಾನೀರಾಜನಾದಿಗಳನ್ನು ಸಮರ್ಪಿಸಬೇಕು. ಅನಂತರ ಯಕ್ಷಕರ್ದಮದಿಂದ (ಕುಂಕುಮಾಗರು ಕಸ್ತೂರೀ ಕರ್ಪೂರಂ ಚಂದನಂ ತಥಾ। ಮಹಾಸುಗಂಧಮಿತ್ಯುಕ್ತಂ ನಾಮತೋ ಯಕ್ಷಕರ್ದಮಃ ॥ = ಕೇಶರ, ಅಗರು, ಕರ್ಪೂರ ಮತ್ತು ಚಂದನ ಇವುಗಳ ಮಿಶ್ರಣದಿಂದಾತ ಲೇಪವು ಯಕ್ಷಕರ್ದಮ.) ಎಂದು ಪ್ರಾರ್ಥಿಸಿ ಪೂಜಿಸಿ ದೇವರಿಗೆ ಪ್ರದಕ್ಷಿಣೆಗಳನ್ನು ಸಮರ್ಪಿಸಬೇಕು. ॥ ೧೩೮॥ ನಂತರ ಅಲ್ಲಿ ಬಂದ ಬ್ರಾಹ್ಮಣರಿಂದ ಸ್ವಸ್ತಿವಾಚನದೊಂದಿಗೆ ದೇವರಿಗೆ ಅಕ್ಷತಾರೋಪಣ ಪೂರ್ವಕ ಪ್ರದಕ್ಷಿಣೆಗಳನ್ನು ಹಾಕಬೇಕು. ಆಚಾರ್ಯರಿಂದ ಪ್ರಾರಂಭಿಸಿ ಬಂದ ಎಲ್ಲರಿಗೂ ಪವಮಾನ ಸೂಕ್ತದ ಜಪಮಾಡಲು ತಿಳಿಸಬೇಕು. ಜಪಾನಂತರ ಕಲಶದಲ್ಲಿ ಉಪಾಂಗಸಹಿತ ಶ್ರೀವಿಷ್ಣುವಿನನ್ನು ಸ್ಥಾಪಿಸಬೇಕು. ॥ ೧೩೯॥ ೧೪೦॥ ಸೂರ್ಯೋದಯ ಆಗುತ್ತಿರಲು ಯಥಾಕ್ರಮ ಹೋಮವನ್ನು ಮಾಡಬೇಕು. ಮೊದಲು ಪಾತ್ರೆಯನ್ನು ಸ್ಥಾಪಿಸಿ ಯಥಾವಿಧಿಯಿಂದ ಪೂಜೆಯನ್ನು ಮಾಡಿ ॥ ೧೪೧॥ ೧೪೨॥ ಬಳಿಕ ಸ್ತೋತ್ರಪಠಣ ಮಾಡಿದ ಮೇಲೆ ಚರುಪೂರ್ವಕ ಹೋಮವನ್ನು ಮಾಡಬೇಕು. ಯಜನ ಮಾಡುವವನು ಸ್ವಗೃಹ್ಯೋಕ್ತ ವಿಧಾನದಿಂದ ॥ ೧೪೩॥ ಪಾಯಸ ಮತ್ತು ವೈಷ್ಣವಚರು (ವಿಷ್ಣು ನೇವೇದಿತ) ಎಂದು ಎರಡು ಪ್ರಕಾರದ ಚರುಗಳನ್ನು ಮಾಡಿಕೊಂಡು ಪುರುಷಸೂಕ್ತ ಪಠಣಪೂರ್ವಕ

ತಥಾ ಚತುರ್ಗೃಹೀತೇನ ಘೃತಯುಕ್ತಾವರಾಹುತಿಮ್ ।
ಪ್ರಾದೇಶಮಾತ್ರಾಃ ಪಾಲಾಶಸಮಿಧಶ್ಚ ಘೃತಪ್ಲುತಾಃ ॥ ೧೪೫॥

ಇದಂ ವಿಷ್ಣುರಿತಿ ಮಂತ್ರೇಣ ಹೋತವ್ಯಾ ಕರ್ಮಸಿದ್ಧಯೇ ।
ಶತಮೇಕಂ ತು ಜುಹುಯಾದ್ದ್ವಿಗುಣಾಶ್ಚ ತಿಲಾಹುತೀಃ ॥ ೧೪೬॥

ಕೃತೇ ಚ ವೈಷ್ಣವೇ ಹೋಮೇ ಗೃಹಯಜ್ಞಂ ಸಮಾರಭೇತ್ ।
ಸಮಿದ್ಭಿಶ್ಚರುಹೋಮಂ ಚ ತಿಲಹೋಮಂ ಕ್ರಮೇಣ ತು
ಉಭಯೋಃ ಸ್ವಸ್ತಿಕಂ ವಾಚ್ಯಂ ತತಃ ಪೂಜಾಂ ಸಮಾಚರೇತ್ ॥ ೧೪೭॥

ಋತ್ವಿಜಾಂ ಚ ತತೋ ದದ್ಯಾದ್ಧೇನ್ವಾದಿಗೃಹದಕ್ಷಿಣಾಃ ।
ದೇವಸ್ಯ ತೃಪ್ತ್ಯೈ ದದ್ಯಾಶ್ಚ ಬ್ರಾಹ್ಮಣಾಯ ಯಥಾವಿಧಿ ॥ ೧೪೮॥

ಗಾಂ ವೈ ಪಯಸ್ವಿನೀಂ ದದ್ಯಾದ್ ವೃಷಭಂ ಚ ಸುಶೋಭನಮ್ ।
ಬ್ರಾಹ್ಮಣಾನಾಂ ತತೋ ದದ್ಯಾದ್ ತ್ರಯೋದಶ ಪದಾನಿ ಚ ॥ ೧೪೯॥

ಆಚಾರ್ಯಂ ತು ಸಪತ್ನೀಕಂ ವಸ್ತ್ರೈಶ್ಚ ಪರಿತೋಷಯೇತ್ ।
ತೋಷಯಿತ್ವಾ ಮಹಾದಾನೈಸ್ತಂ ಸಾರ್ಥಂ ಚ ಸಮರ್ಪಯೇತ್ ॥ ೧೫೦॥

ಹದಿನಾರು ಸಲ ಚರು ಆಹುತಿಗಳನ್ನು ಹಾಕಿ ಹೋಮವನ್ನು ಮಾಡಬೇಕು. ॥ ೧೪೪॥ ಹಾಗೆಯೇ ಚರು ಮತ್ತು ತುಪ್ಪದ ನಾಲ್ಕು ಆಹುತಿಗಳನ್ನು ಅರ್ಪಿಸಬೇಕು. ಪ್ರಾದೇಶ ಮಾತ್ರ ಪಲಾಶದ ಸಮಿತ್ತುಗಳನ್ನು ತುಪ್ಪದಲ್ಲಿ ಮುಳುಗಿಸಿ ॥ ೧೪೫॥ 'ಇದಂ ವಿಷ್ಣು' ಎಂಬ ಮಂತ್ರವನ್ನು ಪಠಿಸುತ್ತ ಒಂದು ನೂರು ಸಲ ಹೋಮ ಮಾಡಬೇಕು. ಇದರ ಎರಡುಪಟ್ಟು ಅಂದರೆ ಎರಡು ನೂರು ಸಲ ತಿಲಾಹುತಿಗಳನ್ನು ಕೊಡಬೇಕು. ॥ ೧೪೬॥ ಈ ಪ್ರಕಾರದ ವೈಷ್ಣವ ಹೋಮವು ಸಮಾಪ್ತಿಯಾದ ಮೇಲೆ ಗೃಹಯಜ್ಞವನ್ನು ಪ್ರಾರಂಭಿಸಬೇಕು. ಮೊದಲು ಸಮಿತ್ತುಗಳಿಂದ, ನಂತರ ಚರುವಿನಿಂದ, ಆಮೇಲೆ ತಿಲದಿಂದ ಹೋಮವನ್ನು ಮಾಡಬೇಕು. ॥ ೧೪೭॥ ಎರಡೂ ಹೋಮಗಳನ್ನು ಸ್ವಸ್ತಿವಾಚನ ಪೂರ್ವಕ ಪೂರ್ಣಗೊಳಿಸಿ ಬಳಿಕ ಪೂಜೆಯನ್ನು ಮಾಡಬೇಕು. ಋತ್ವಿಜರಿಗೆ ಗೋ, ಗೃಹದಕ್ಷಿಣೆ ಮೊದಲಾದವುಗಳನ್ನು ಕೊಡಬೇಕು. ದೇವತಾ ಪ್ರೀತ್ಯರ್ಥವಾಗಿ ಆಚಾರ್ಯರಿಗೆ ವಿಷ್ಣು ಪ್ರತಿಮೆಯನ್ನು, ಹಾಲು ಕರೆಯುವ ಒಳ್ಳೆಯ ಆಕಳು ಹಾಗೂ ಅಲಂಕೃತವಾದ ವೃಷಭವನ್ನು ದಾನವಾಗಿ ಕೊಡಬೇಕು. ಆಮೇಲೆ ಬ್ರಾಹ್ಮಣರಿಗೆ ತ್ರಯೋದಶ ಪದಗಳನ್ನು ಕೊಡಬೇಕು. ॥ ೧೪೮॥೧೪೯॥ ಪತ್ನೀಸಹಿತನಾದ ಆಚಾರ್ಯರಿಗೆ ವಸ್ತ್ರಗಳನ್ನು, ಮಹಾದಾನಗಳನ್ನು, ದಕ್ಷಿಣೆಸಹಿತ ಕೊಟ್ಟು ಸಂತೋಷಪಡಿಸಬೇಕು. ॥೧೫೦॥ ರಾತ್ರಿ ಪಾರಣಾ ನಂತರ ವಸ್ತ್ರಗಳಿಂದ ಅಲಂಕೃತವಾದ ಇಪ್ಪತ್ತೈದು ಜಲಪೂರ್ಣ ಕುಂಭಗಳನ್ನು ಬ್ರಾಹ್ಮಣರಿಗೆ

ಪಂಚವಿಂಶತಿ ಕುಂಭಾಂಶ್ಚ ಸೋದಕಾನ್ವಸ್ತ್ರವೇಷ್ಟಿತಾನ್ ।
ಬ್ರಾಹ್ಮಣಾಂಶ್ಚ ತತೋ ದದ್ಯಾತ್ ಕೃತೇ ಪಾರಣಕೇ ನಿಶಿ ॥೧೫೧॥

ಭೂಮಿದಾನಂ ಚ ದಾತವ್ಯಂ ಬಂಧೂನಾಮಿಷ್ಟಭೋಜನಮ್ ।
ಪೂರ್ಣಪಾತ್ರಂ ತತೋ ದದ್ಯಾದಾಚಾರ್ಯಾಯ ಸದಕ್ಷಿಣಮ್ ॥೧೫೨॥

ಪೂರ್ಣಪಾತ್ರಪ್ರದಾನೇನ ಕಾರ್ಯಂ ಸಂಪೂರಿತಂ ಭವೇತ್ ।
ಉಪವಾಸವ್ರತಂ ಚೈವ ಸ್ನಾನಂ ತೀರ್ಥಫಲಂ ಭವೇತ್ ॥೧೫೩॥

ವಿಪ್ರೈಃ ಸಂಭಾಷಿತಂ ತಸ್ಯ ಸಂಪೂರ್ಣಂ ತದ್ಭವೇತ್ಫಲಮ್ ।
ವಿತ್ತಶಕ್ತಿರ್ಗೃಹೇ ವಾಸ್ತಿ ಕೃತಂ ಚೈಕಾದಶೀವ್ರತಮ್ ॥೧೫೪॥

ಸ್ವಶಕ್ತ್ಯಾ ಚೈವ ಕರ್ತವ್ಯಂ ತಥಾ ಚೋದ್ಯಾಪನಾದಿಕಮ್ ।
ಏತತ್ತೇ ಸರ್ವಮಾಖ್ಯಾತಮಖಂಡೈಕಾದಶೀ ವ್ರತಮ್ ॥೧೫೫॥

॥ ಇತಿ ಶ್ರೀಸ್ಕಂಧಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಅಖಂಡೈಕಾದಶೀಕಥನಂ ನಾಮ
ಏಕಾದಶೋಽಧ್ಯಾಯಃ ॥

ದಾನವಾಗಿ ಕೊಡಬೇಕು. ॥೧೫೧॥ಭೂ ದಾನವನ್ನೂ ಕೊಡಬೇಕು. ಬಂಧುಗಳಿಗೆ ಇಷ್ಟ ಭೋಜನವನ್ನು ಮಾಡಿಸಬೇಕು. ಆಚಾರ್ಯರಿಗೆ ದಕ್ಷಿಣೆ ಸಹಿತ ಪೂರ್ಣ ಪಾತ್ರವನ್ನು ಸಮರ್ಪಿಸಬೇಕು. ॥ ೧೫೨॥ ಪೂರ್ಣಪಾತ್ರ ಪ್ರದಾನದಿಂದ ಅಂದಿನ ಕಾರ್ಯವು ಪೂರ್ಣವಾದಂತಾಗುವದು. ವ್ರತೋಪವಾಸದಿಂದ ತೀರ್ಥಸ್ನಾನದ ಫಲವು ಉಂಟಾಗುತ್ತದೆ.॥೧೫೩॥ ಬ್ರಾಹ್ಮಣರ ಆಶೀರ್ವಾದವನ್ನು ಪಡೆಯುವುದರಿಂದ ಮಾಡಿದ ಕಾರ್ಯವು ಸಂಪೂರ್ಣವಾಗಿ ಅದರ ಫಲವು ಕರ್ತೃವಿಗೆ ಲಭಿಸುವದು. ಏಕಾದಶೀವ್ರತ ಮಾಡಿ ಇಷ್ಟೆಲ್ಲ ಮಾಡಲು ದ್ರವ್ಯದ ಅನುಕೂಲತೆ ಇರದಿದ್ದರೆ ತನ್ನ ಶಕ್ತ್ಯನುಸಾರ ಎಲ್ಲವನ್ನೂ ಮಾಡಿ ಉದ್ಯಾಪನೆಯನ್ನು ಮಾಡಬೇಕು. ಹೇ ಬ್ರಹ್ಮಾ ! ನಿನಗೆ ಅಖಂಡ ಏಕಾದಶೀ ವ್ರತವನ್ನು ಕುರಿತು ಸಕಲವನ್ನೂ ತಿಳಿಸಿದ್ದೇನೆ. ॥ ೧೫೪ ॥೧೫೫॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಮಾರ್ಗಶೀರ್ಷಮಾಸ ಮಹಾತ್ಮೆಯಲ್ಲಿ ಶ್ರೀವಿಷ್ಣುಬ್ರಹ್ಮರ ಸಂವಾದದಲ್ಲಿ " ಅಖಂಡ ಏಕಾದಶೀ ವ್ರತ "ವೆಂಬ ಹನ್ನೊಂದನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಅಧ್ಯಾಯ ೧೨
ಏಕಾದಶೀ, ದ್ವಾದಶೀ ಜಾಗರ

★

ಶ್ರೀಭಗವಾನುವಾಚ -

ಶೃಣು ಪುತ್ರ ಪ್ರವಕ್ಷ್ಯಾಮಿ ಜಾಗರಸ್ಯ ಚ ಲಕ್ಷಣಮ್ ।
ಯೇನ ವಿಜ್ಞಾತಮಾತ್ರೇಣ ಸುಲಭೋಽಹಂ ಸದಾ ಕಲೌ ॥ ೧॥

ಗೀತಂ ವಾದ್ಯಂ ಚ ನೃತ್ಯಂ ಚ ಪುರಾಣಪಠನಂ ತಥಾ ।
ಧೂಪಂ ದೀಪಂ ಚ ನೈವೇದ್ಯಂ ಪುಷ್ಪಗಂಧಾನುಲೇಪನಮ್ ॥ ೨॥

ಫಲಾರ್ಪಣಂ ಚ ಶ್ರದ್ಧಾಂ ಚ ದಾನಮಿಂದ್ರಿಯಸಂಯಮಮ್ ।
ಸತ್ಯಾನ್ವಿತಂ ವಿನಿದ್ರಂ ಚ ಮುದಾಮದ್ಯ ಜನಾನ್ವಿತಮ್ ॥ ೩॥

ಸಾಶ್ಚರ್ಯಂ ಚೈವ ಸೋತ್ಸಾಹಂ ಪಾಪಾಲಸ್ಯಾದಿವರ್ಜನಮ್ ।
ಪ್ರದಕ್ಷಿಣಾಸಮಾಯುಕ್ತಂ ನಮಸ್ಕಾರಪುರಃಸರಮ್ ॥ ೪॥

ನೀರಾಜನಸಮಾಯುಕ್ತಮತಿಹೃಷ್ಟೇನ ಚೇತಸಾ ।
ಯಾಮೇ ಯಾಮೇ ಮಹಾಭಾಗ ಕುರ್ಯಾದಾರಾರ್ತಿಕಂ ಮಮ ॥ ೫॥

ಮಾರ್ಗಶೀರ್ಷ ಮಾಸದ ಮಹಾತ್ಮೆಯನ್ನು ಮುಂದುವರಿಸುತ್ತ ಶ್ರೀ ಭಗವಂತನು ಹೇಳುತ್ತಾನೆ 'ಹೇ ವತ್ಸಾ! ಜಾಗರದ ಲಕ್ಷಣವನ್ನು ಹೇಳುವೆನು ಕೇಳು. ಇದನ್ನು ಯಾವನು ತಿಳಿಯುವನೋ, ತಿಳಿಯುವ ಮಾತ್ರದಿಂದಲೇ ನಾನು ಅವನಿಗೆ ಕಲಿಯುಗದಲ್ಲಿ ಸುಲಭವಾಗಿ ಪ್ರತ್ಯಕ್ಷನಾಗುವೆನು. ॥೧॥ ಹೇ ಮಹಾಭಾಗ ಬ್ರಹ್ಮನೇ! ಗೀತ, ವಾದ್ಯ, ನೃತ್ಯ, ಪುರಾಣ ಪಠಣ, ಧೂಪ, ದೀಪಾರತಿಗಳು, ಗಂಧಲೇಪನ, ಪುಷ್ಪಾರ್ಚನೆ, ನೈವೇದ್ಯ ಸಮರ್ಪಣೆ ॥೨॥ ಫಲಾರ್ಪಣೆ ಮುಂತಾದವುಗಳು ನಡೆಯುತ್ತಿರಲು, ಶ್ರದ್ಧಾಭಕ್ತಿಯುತನಾಗಿ, ಇಂದ್ರಿಯನಿಗ್ರಹವುಳ್ಳವನಾಗಿ, ಸತ್ಯಭಾಷಿಯಾಗಿ, ನಿದ್ರಾರಹಿತನಾಗಿ, ಹರ್ಷಚಿತ್ತನಾಗಿ, ಸಕಲ ಬಂಧು ಬಾಂಧವರಿಂದ ಯುಕ್ತನಾಗಿ ॥೩॥ ಆಶ್ಚರ್ಯೋತ್ಸಾಹಗಳಿಂದ ಕೂಡಿದ್ದು, ಪಾಪಕರ್ಮ ಆಲಸ್ಯಾದಿಗಳಿಂದ ರಹಿತನಾಗಿ, ನಮಸ್ಕಾರಪೂರ್ವಕ ಪ್ರದಕ್ಷಿಣೆಗಳನ್ನು ಹಾಕುತ್ತ ॥೪॥ ಅತಿ ಹರ್ಷಚಿತ್ತನಾಗಿ ಶ್ರೀಹರಿಗೆ ಮಹಾನೀರಾಜನವನ್ನು ಮಾಡಬೇಕು. ಯಾಮ, ಯಾಮದಲ್ಲಿ ನನ್ನನ್ನು ಉದ್ದೇಶಿಸಿ ಆರತಿಗಳನ್ನು ಮಾಡಬೇಕು. ॥ ೫॥ ಈ ಪ್ರಕಾರ ಏಕಾದಶಿಯಂದು ಇಪ್ಪತ್ತಾರು ಗುಣಗಳಿಂದ, (ಗೀತವಾದ್ಯಾದಿ ೨೬ ಕರ್ಮಗಳಿಂದ) ಯುಕ್ತವಾದ ಜಾಗರವನ್ನು

ಷಡ್ವಿಂಶದ್ಗುಣಸಂಯುಕ್ತಂ ಏಕಾದಶ್ಯಾಂ ತು ಜಾಗರಮ್ ।
ಯಃ ಕರೋತಿ ನರೋ ಭಕ್ತ್ಯಾ ನ ಪುನರ್ಜಾಯತೇ ಭುವಿ ॥ ೬॥

ಯ ಏವಂ ಕುರುತೇ ಭಕ್ತ್ಯಾ ವಿತ್ತಶಾಠ್ಯವಿವರ್ಜಿತಃ ।
ಜಾಗರಂ ಪರಯಾ ಭಕ್ತ್ಯಾ ಸ ಲೀನೋ ಜಾಯತೇ ಮಯಿ ॥ ೭॥

ದಷ್ಟಾಃ ಕಲಿಭುಜಂಗೇನ ಸ್ವಪಂತೇ ಯೇ ದಿನೇ ಮಮ ।
ಕುರ್ವಂತಿ ಜಾಗರಂ ನೈವ ಮಾಯಾಪಾಶವಿಮೋಹಿತಾಃ ॥ ೮॥

ಪ್ರಾಪ್ತಾಪ್ಯೇಕಾದಶೀ ಯೇಷಾಂ ಕಲೌ ಜಾಗರಣಂ ವಿನಾ ।
ತೇ ವಿನಷ್ಟಾ ನ ಸಂದೇಹೋ ಯಸ್ಮಾಜ್ಜೀವಿತಮಧ್ರುವಮ ॥ ೯॥

ಉದ್ಧೃತಂ ನೇತ್ರಯುಗ್ಮಂ ಚ ದತ್ವಾ ವೈ ಹೃದಯೇ ಪದಮ್ ।
ಕೃತಂ ಯೇ ನೈವ ಪಶ್ಯಂತಿ ಪಾಪಿನೋ ಮಮ ಜಾಗರಮ್ ॥ ೧೦॥

ಅಭಾವೇ ವಾಚಕಸ್ಯಾಥ ಗೀತಂ ನೃತ್ಯಂ ಚ ಕಾರಯೇತ್ ।
ವಾಚಕೇ ಸತಿ ದೇವೇಶ ಪುರಾಣಂ ಪ್ರಥಮಂ ಪಠೇತ್ ॥ ೧೧॥

ಭಕ್ತಿಯಿಂದ ಮಾಡುವ ಪುರುಷನು ಭೂಮಿಯಲ್ಲಿ ಪುನರ್ಜನ್ಮವನ್ನು ಪಡೆಯುವದಿಲ್ಲ. ॥ ೬॥ ವಿತ್ತಶಾಠ್ಯವರ್ಜಿತನಾಗಿ ಪರಮ ಭಕ್ತಿಯಿಂದ ಇಂಥ ಜಾಗರವನ್ನು ಮಾಡುವ ಮನುಷ್ಯನು ನನ್ನಲ್ಲಿ ಲೀನವಾಗುವನು. ಅಂದರೆ ನನ್ನ ಲೋಕವನ್ನು ಪಡೆದು ಅಲ್ಲಿ ವಾಸಿಸುವನು. ॥ ೭॥ ಕಲಿ ಎಂಬ ಸರ್ಪದಿಂದ ಕಚ್ಚಲ್ಪಟ್ಟವರಾಗಿ ಹರಿದಿನವಾದ ಜಾಗರದಿನದಂದು ಯಾರು ಜಾಗರವನ್ನು ಮಾಡುವದಿಲ್ಲವೋ, ॥ ೮॥ ಏಕಾದಶಿಯು ಬಂದಾಗ ಕಲಿಯುಗದಲ್ಲಿ ಅದನ್ನು ಮಾಯಾಪಾಶದಿಂದ ವಿಮೋಹಿತರಾದ ಯಾರು ಜಾಗರವಿಲ್ಲದೇ ಕಳೆಯುವರೋ ಅವರು ನಿಶ್ಚಿತವಾಗಿ ನಷ್ಟರಾಗುವರು. ಅಶಾಶ್ವತವಾದ ಜೀವನದಲ್ಲಿ ಅವರ ಜೀವಿತವು ನಿರರ್ಥಕವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ॥ ೯॥ ಎದೆಯ ಮೇಲೆ ಕಾಲಿನಿಂದ ತುಳಿದು ಕಣ್ಣುಗಳನ್ನು ತೆರೆದು ಎಚ್ಚರಿಸಿದಾಗ್ಯೂ ಕೆಲವರು ಹರಿದಿನದ ರಾತ್ರಿ ಎಚ್ಚರವಾಗುವುದಿಲ್ಲ. ಪಾಪಿಗಳಾದ ಇಂಥವರು ಹರಿದಿನದ ಜಾಗರವನ್ನು ನೋಡಲಾರರು. (ಜಾಗರದ ಫಲವನ್ನು ಹೊಂದಲಾರರು.) ॥ ೧೦॥ ಪೌರಾಣಿಕನು ಲಭ್ಯವಾಗದಿದ್ದರೆ ಗೀತ ಮತ್ತು ನೃತ್ಯ ಸೇವೆಯನ್ನು ಮಾಡಬೇಕು ಹಾಗೂ ಇತರ ಬಾಂಧವರಿಂದ ಮಾಡಿಸಬೇಕು. ಪೌರಾಣಿಕನು ಲಭ್ಯನಾದರೆ ಅವನಿಂದ ಮೊದಲು ಪುರಾಣ ಪಠಣ ಮಾಡಿಸಿ ತಾನು ಶ್ರವಣ ಮಾಡಬೇಕು. ಅಥವಾ ಸಮರ್ಥನಿದ್ದರೆ ತಾನೇ ಪುರಾಣ ಪಠಣ ಮಾಡಬೇಕು. ॥ ೧೧ ॥ ಹೇ ವತ್ಸಾ! ಹರಿದಿನದಂದು ಜಾಗರಣೆಯನ್ನು ಮಾಡಿದರೆ ಸಹಸ್ರ ಅಶ್ವಮೇಧಯಾಗಗಳಿಗಿಂತಲೂ, ನೂರು ವಾಜಪೇಯ

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ।
ಪುಣ್ಯಂ ಕೋಟಿಗುಣಂ ಪುತ್ರ ಮಮ ಜಾಗರಣೇ ಕೃತೇ ॥ ೧೨॥

ಪಿತೃಪಕ್ಷೇ ಮಾತೃಪಕ್ಷೇ ಭಾರ್ಯಾಪಕ್ಷೇ ಚ ಮಾನದ ।
ಕುಲಾನ್ಯುದ್ಧರತೇ ಚೈತಾನ್ ಮಮ ಜಾಗರಣೇ ಕೃತೇ ॥ ೧೩॥

ಉಪೋಷಣದಿನೇ ವಿದ್ಧೇ ಪ್ರಾರಬ್ಧೇ ಜಾಗರೇ ಸತಿ ।
ಸ್ಥಾನಂ ವಿಹಾಯ ತತ್ರಾಹಂ ಶಾಪಂ ದತ್ವಾ ವ್ರಜಾಮ್ಯಹಮ್ ॥ ೧೪॥

ಅವಿದ್ಧವಾಸರೇ ಯೇ ಮೇ ಪ್ರಕುರ್ವಂತಿ ಹಿ ಜಾಗರಮ್ ।
ತೇಷಾಂ ಮಧ್ಯೇ ಪ್ರಹೃಷ್ಟಃ ಸನ್ ನೃತ್ಯಂ ವೈ ಪ್ರಕರೋಮ್ಯಹಮ್ ॥ ೧೫॥

ಯಾವದ್ದಿನಾನಿ ಕುರುತೇ ಜಾಗರಂ ಮಮ ಸಂನಿಧೌ ।
ಯುಗಾಯುತಾನಿ ತಾವಂತಿ ವಸತೇ ಮಮ ವೇಶ್ಮನಿ ॥ ೧೬॥

ನ ಗಯಾಪಿಂಡದಾನೇನ ತೀರ್ಥೈರ್ಬಹುಭಿರ್ಮಖೈಃ ।
ಪೂರ್ವಜಾ ಮುಕ್ತಿಮಾಯಾಂತಿ ವಿನೈಕಾದಶಿಜಾಗರಾತ್ ॥ ೧೭॥

ಯಃ ಕುರ್ಯಾತ್ ಜಾಗರೇ ಪೂಜಾಂ ಕುಸುಮೈರ್ಮಮ ವಾಸರೇ ।
ಪುಷ್ಪೇ ಪುಷ್ಪೇಽಶ್ವಮೇಧಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೧೮॥

ಯಾಗಗಳಿಗಿಂತಲೂ ಕೋಟಿಪಟ್ಟು ಅಧಿಕವಾದ ಪುಣ್ಯವು ಪ್ರಾಪ್ತವಾಗುವದು. ॥ ೧೨॥ ಮಗನೇ ! ಹರಿದಿನದಂದು ಜಾಗರಣೆ ಮಾಡುವುದರಿಂದ ಮನುಷ್ಯನು ತನ್ನ ತಂದೆಯ ಕಡೆಯ, ತಾಯಿಯ ಕಡೆಯ ಹಾಗೂ ಹೆಂಡತಿಯ ಕಡೆಯ ಹೀಗೆ ಮೂರು ಕುಲಗಳನ್ನು ಉದ್ಧರಿಸುತ್ತಾನೆ. ॥ ೧೩॥ ದಶಮೀವಿದ್ಧವಾದ ಏಕಾದಶಿಯ ದಿನ ರಾತ್ರಿ ಜಾಗರಣೆ ಪ್ರಾರಂಭಿಸಿದರೆ ನಾನು ಆ ಸ್ಥಳದಲ್ಲಿ ನಿಲ್ಲದೇ ಶಾಪವನ್ನು ಕೊಟ್ಟು ಹೊರಟು ಹೋಗುವೆನು. ॥ ೧೪॥ ಅವಿದ್ಧವಾದ ಅಂದರೆ ಶುದ್ಧ ಏಕಾದಶಿಯಂದು ರಾತ್ರಿ ಯಾರು ಜಾಗರ ಮಾಡುವರೋ ಅವರ ಮಧ್ಯದಲ್ಲಿ ಪ್ರಸನ್ನನಾಗಿ ಸನ್ನಿಹಿತನಾಗಿದ್ದು ಅವರೊಂದಿಗೆ ಕುಣಿದಾಡುವೆನು. ॥ ೧೫॥ ಈ ರೀತಿ ಜನರು ಎಷ್ಟು ಹರಿವಾಸರಗಳಂದು ನನ್ನ ಸನ್ನಿಧಿಯಲ್ಲಿ ಜಾಗರ ಮಾಡುವರೋ ಅಷ್ಟು ಸಂಖ್ಯೆಯ ದಿನಗಳ ಹತ್ತು ಸಾವಿರಪಟ್ಟು ಯುಗಗಳವರೆಗೆ ಅವರು ನನ್ನ ಲೋಕದಲ್ಲಿ ವಾಸವಾಗಿರುವರು. ॥ ೧೬॥ ಏಕಾದಶಿಯ ದಿನ ಜಾಗರಮಾಡದೇ, ಕೇವಲ ಗಯಾದಲ್ಲಿ ಪಿಂಡ ಪ್ರದಾನ ಮಾಡುವುದರಿಂದಾಗಲೀ, ಬಹು ತೀರ್ಥಗಳಲ್ಲಿ ಸ್ನಾನ ಹಾಗೂ ಬಹು ಯಜ್ಞಗಳನ್ನು ಮಾಡವುದರಿಂದಾಗಲೀ ಪೂರ್ವಜ ಪಿತೃಗಳು ಎಂದಿಗೂ ಮುಕ್ತಿಯನ್ನು ಹೊಂದಲಾರರು. ॥ ೧೭॥ ನನ್ನ ಜಾಗರ ದಿನ ಯಾವ ಮನುಷ್ಯನು ಪುಷ್ಪಗಳಿಂದ ನನ್ನ ಅರ್ಚನೆಯನ್ನು ಮಾಡುವನೋ ಅಂಥ ಮನುಷ್ಯನು ನನ್ನ

ಯಃ ಕುರ್ಯಾದ್ದೀಪದಾನಂ ತು ರಾತ್ರೌ ಜಾಗರಣೇ ಮಮ ।
ನಿಮಿಷೇ ನಿಮಿಷೇ ಪುತ್ರ ಲಭತೇ ಗೋಯುತಂ ಫಲಮ್ ॥ ೧೯॥

ಯೋ ದದ್ಯಾಜ್ಜಾಗರೇ ಪುತ್ರ ಹವಿಷ್ಯಾನ್ನಸಮುದ್ಭವಮ್ ।
ನೈವೇದ್ಯಂ ಲಭತೇ ಪುಣ್ಯಂ ಶಾಲಿಶೈಲಸಮುದ್ಭವಮ್ ॥ ೨೦॥

ಪಕ್ವಾನ್ನಾನಿ ಚ ಯೋ ದದ್ಯಾತ್ಫಲಾನಿ ವಿವಿಧಾನಿ ಚ ।
ಜಾಗರೇ ಮೇ ಚತುರ್ವಕ್ತ್ರ ಲಭತೇ ಗೋಶತಂ ಫಲಮ್ ॥ ೨೧॥

ಕರ್ಪೂರೇಣ ಚ ತಾಂಬೂಲಂ ದದಾತಿ ಮಮ ಜಾಗರೇ ।
ಮದ್ಭಕ್ತೋ ಮತ್ಪ್ರಸಾದೇನ ಸಪ್ತದ್ವೀಪಾಧಿಪೋ ಭವೇತ್ ॥ ೨೨॥

ಜಾಗರೇ ಮಮ ದೇವೇಶ ಯಃ ಕುರ್ಯಾತ್ಪುಷ್ಪಮಂಡಪಮ್ ।
ಸ ಪುಷ್ಪಕವಿಮಾನೇನ ಕ್ರೀಡತೇ ಮಮ ಸದ್ಮನಿ ॥ ೨೩॥

ಮೇ ಜಾಗರೇ ತು ಯೋ ಧೂಪಂ ಸಕರ್ಪೂರಂ ಸಗುಗ್ಗುಲಮ್ ।
ದದಾತಿ ದಹತೇ ಪಾಪಂ ಜನ್ಮಲಕ್ಷಸಮುದ್ಭವಮ್ ॥ ೨೪॥

ಪೂಜೆಯಲ್ಲಿ ಏರಿಸುವ ಒಂದೊಂದು ಪುಷ್ಪಕ್ಕೂ ಅಶ್ವಮೇಧಯಾಗದ ಫಲವನ್ನು ಪಡೆಯುವನು. ॥ ೧೮॥ ಜಾಗರದಿನ ಯಾವನು ರಾತ್ರಿಯಲ್ಲಿ ದೀಪದಾನವನ್ನು ಮಾಡುವನೋ ಅವನು ಪ್ರತಿ ನಿಮಿಷದಲ್ಲಿಯೂ ಹತ್ತು ಸಹಸ್ರ ಗೋದಾನದ ಫಲವನ್ನು ಪಡೆಯುವನು. ॥ ೧೯॥ ಎಲೈ ಪುತ್ರನೇ ! ಜಾಗರದಲ್ಲಿ ಯಾವ ಮನುಷ್ಯನು ಹವಿಷ್ಯಾನ್ನದ ನೈವೇದ್ಯವನ್ನು ನನಗೆ ಅರ್ಪಣ ಮಾಡುವನೋ ಅವನು ಒಂದು ಪರ್ವತ ಶಾಲ್ಯನ್ನವನ್ನು ದಾನಮಾಡಿದಾಗಿನಷ್ಟು ಪುಣ್ಯವನ್ನು ಸಂಪಾದಿಸುವನು. ॥ ೨೦॥ ಅಯ್ಯಾ ಚತುರಾಸ್ಯನೇ! ಯಾವನು ಜಾಗರದಲ್ಲಿ ಪಕ್ವಾನ್ನಗಳನ್ನು ಮತ್ತು ವಿವಿಧ ಫಲಗಳನ್ನು ನನಗೆ ಅರ್ಪಿಸುವನೋ ಅವನು ನೂರು ಆಕಳುಗಳ ದಾನದ ಫಲವನ್ನು ಪಡೆಯುವನು. ॥ ೨೧॥ ಜಾಗರದಲ್ಲಿ ಕರ್ಪೂರ ಸಹಿತವಾದ ತಾಂಬೂಲವನ್ನು ನನಗೆ ಸಮರ್ಪಣ ಮಾಡುವವನು ನನ್ನ ಭಕ್ತನಾಗಿದ್ದು ನನ್ನ ಅನುಗ್ರಹದಿಂದ ಸಪ್ತದ್ವೀಪಾಧಿಪತಿಯಾಗುವನು. ॥ ೨೨॥ ಜಾಗರದಲ್ಲಿ ನನಗೋಸ್ಕರ ಪುಷ್ಪಗಳಿಂದ ಅಲಂಕೃತವಾದ ಮಂಡಪವನ್ನು ಮಾಡಿ ಅದರೊಳಗೆ ನನ್ನನ್ನು ಸ್ಥಾಪಿಸಿ ಪೂಜಿಸುವವನು ಮರಣಾನಂತರ ಪುಷ್ಪಕ ವಿಮಾನದಲ್ಲಿ ಕುಳಿತು ನನ್ನ ಲೋಕಕ್ಕೆ ಬಂದು ಅಲ್ಲಿ ಆನಂದದಿಂದ ಇರುವನು. ॥ ೨೩॥ ಏಕಾದಶೀ ಜಾಗರದಲ್ಲಿ ಕರ್ಪೂರ, ಗುಗ್ಗುಲಗಳಿಂದ ಸಹಿತವಾದ ಧೂಪವನ್ನು ಭಕ್ತಿಯಿಂದ ನನಗೆ ಸಮರ್ಪಣ ಮಾಡುವ ಮನುಷ್ಯನು ಒಂದು ಲಕ್ಷ ಜನ್ಮಗಳಲ್ಲಿ ಪ್ರಾಪ್ತವಾದ ಪಾಪಗಳನ್ನು ಸುಟ್ಟು ಮುಕ್ತನಾಗುವನು. ॥ ೨೪॥ ಜಾಗರದಲ್ಲಿ ದಧಿ, ಕ್ಷೀರ, ಘೃತ ಹಾಗೂ ನೀರಿನಿಂದ

ಸ್ನಾಪಯೇಜ್ಜಾಗರೇ ಯೋ ಮಾಂ ದಧಿಕ್ಷೀರಘೃತಾಂಬುಕೈಃ ।
ಇಹ ಭೋಗಾಂಲ್ಲಭೇತ್ ಸೋ ವೈ ಅಂತೇ ಚ ಪರಮಾಂ ಗತಿಮ್॥ ೨೫॥

ದಿವ್ಯಾಂಬರಾಣಿ ಯೋ ದದ್ಯಾತ್ಫಲಾನಿ ವಿವಿಧಾನಿ ಚ ।
ಸ ಚಿರಂ ವಸತೇ ಸ್ವರ್ಗೇ ತಂತುಸಂಖ್ಯಾಸಮಾನಿ ವೈ ॥ ೨೬॥

ದದ್ಯಾದಾಭರಣಂ ಯೋ ಮೇ ಹೇಮಜಂ ರತ್ನಸಂಭವಮ್ ।
ಸಪ್ತಕಲ್ಪಾನಿ ವಸತೇ ಸೋತ್ಸಂಗೇ ಮತ್ಪ್ರಿಯೋ ಭವೇತ್ ॥ ೨೭॥

ಘೃತೇನ ದೀಪಕಂ ಯೋ ಮೇ ಗವ್ಯೇನ ಚ ವಿಶೇಷತಃ ।
ಜ್ವಾಲಯೇಜ್ಜಾಗರೇ ರಾತ್ರೌ ನಿಮಿಷೇ ಗೋಯುತಂ ಫಲಮ್ ॥ ೨೮॥

ಜಾಗರೇ ಮೇ ಚತುರ್ವಕ್ತ್ರ ಕರ್ಪೂರೇಣ ಚ ದೀಪಕಮ್ ।
ಯೋ ಜ್ವಾಲಯೇತ ನೀರಾಜಂ ಕಪಿಲಾದಾನಜಂ ಫಲಮ್ ॥ ೨೯॥

ಯಃ ಪುನಃ ಕುರುತೇ ದೀಪಂ ಗೀತಂ ನೃತ್ಯಂ ಚ ಪೂಜನಮ್ ।
ಶತಕ್ರತುಸಮಂ ಪುಣ್ಯಂ ವ್ರತೈರ್ದಾನಶತೈರಪಿ ॥ ೩೦॥

ಸ್ವಯಂ ಯಃ ಕುರುತೇ ದೀಪಂ ವಿಲಜ್ಜೋ ನೃತ್ಯತೇ ಯದಿ ।
ಸ ಲಭೇನ್ನಿಮಿಷಾರ್ಧೇನ ಕೋಟಿಯಜ್ಞಕೃತಂ ಫಲಮ್ ॥ ೩೧॥

ನನಗೆ ಅಭಿಷೇಕ ಮಾಡುವ ನರನು ಇಹ ಲೋಕದಲ್ಲಿ ವಿವಿಧ ಫಲಗಳನ್ನು ಭೋಗಿಸಿ ಮರಣಾನಂತರ ನನ್ನ ಲೋಕವನ್ನು ಹೊಂದುವನು. ॥ ೨೫॥ ಯಾವಾತನು ಅಂದಿನ ದಿನ ಉತ್ತಮ ವಸ್ತ್ರಗಳನ್ನು ಹಾಗೂ ವಿವಿಧ ಫಲಗಳನ್ನು ನನಗೆ ಸಮರ್ಪಿಸುತ್ತಾನೋ ಅವನು ಆ ಪ್ರತಿಯೊಂದು ವಸ್ತ್ರದಲ್ಲಿರುವ ಎಳೆಗಳ ಸಂಖ್ಯೆಯಷ್ಟು ವರ್ಷಗಳವರೆಗೆ ಸ್ವರ್ಗಲೋಕದಲ್ಲಿ ವಾಸಿಸುವನು. ॥ ೨೬॥ ರತ್ನಖಚಿತವಾದ ಸುವರ್ಣದ ಆಭರಣಗಳನ್ನು ನನಗೆ ಅರ್ಪಿಸುವ ಮನುಷ್ಯನು ನನ್ನ ಪ್ರೀತಿಪಾತ್ರನಾಗಿ ೭ ಕಲ್ಪಗಳವರೆಗೆ ನನ್ನ ಸನ್ನಿಧಿಯಲ್ಲಿರುವನು. ॥ ೨೭॥ ಜಾಗರದ ರಾತ್ರಿ ಘೃತ ದೀಪವನ್ನು ಅದರಲ್ಲೂ ವಿಶೇಷವಾಗಿ ಗೋಘೃತದ ದೀಪವನ್ನು ನನಗೆ ಅರ್ಪಿಸುವ ನರನು ದೀಪ ಉರಿಯುವ ಪ್ರತಿಯೊಂದು ನಿಮಿಷದಲ್ಲೂ ಹತ್ತು ಸಾವಿರ ಗೋದಾನದ ಫಲವನ್ನು ಹೊಂದುವನು.॥ ೨೮॥ ಹೇ ಚತುರಾಸ್ಯ ಬ್ರಹ್ಮಾ! ಜಾಗರದಲ್ಲಿ ಕರ್ಪೂರದ ದೀಪವನ್ನು ಹಚ್ಚಿ ಕರ್ಪೂರದ ಆರತಿಯನ್ನು ಬೆಳಗುವವನು ಕಪಿಲಾಗೋದಾನದ ಫಲವನ್ನು ಹೊಂದುವನು. ॥ ೨೯॥ ದೀಪಾರತಿಯನ್ನು ಸಮರ್ಪಿಸಿ ಪುನಃ ಗೀತ ನೃತ್ಯಗಳೊಂದಿಗೆ ನನ್ನ ಪೂಜನವನ್ನು ಮಾಡಿದರೆ ಅವನಿಗೆ ನೂರಾರು ವ್ರತಗಳ ನೂರಾರು ದಾನಗಳಿಗಿಂತಲೂ ಅಧಿಕವಾದ ಹಾಗೂ ನೂರು ಯಜ್ಞಗಳಿಗೆ ಸಮನಾದ ಪುಣ್ಯವು ದೊರೆಯುವುದು. ॥ ೩೦ ॥ ಯಾವನು ಸ್ವಯಂ

ನಿವಾರಯತಿ ಯೋ ಗೀತಂ ನೃತ್ಯಂ ಜಾಗರಣೇ ಮಮ ।
ಷಷ್ಟಿಯುಗಸಹಸ್ರಾಣಿ ಪಚ್ಯತೇ ರೌರವಾದಿಷು ॥ ೩೨॥

ನೃತ್ಯಮಾನಸ್ಯ ಮರ್ತ್ಯಸ್ಯ ಯೇ ಕೇಚಿನ್ನಿಕಟೇ ಗತಾಃ ।
ವಿಮುಕ್ತಾ ಧರ್ಮರಾಜೇನ ಮುಕ್ತಾ ಯಾಂತಿ ಚ ಮತ್ಪದಮ್ ॥ ೩೩॥

ನೃತ್ಯಮಾನಸ್ಯ ಮರ್ತ್ಯಸ್ಯ ಉಪಹಾಸಂ ಕರೋತಿ ಯಃ ।
ಜಾಗರೇ ಯಾತಿ ನಿರಯಂ ಯಾವದಿಂದ್ರಾಶ್ಚತುರ್ದಶ ॥ ೩೪॥

ಜಾಗರೇ ಮಮ ಯಃ ಕುರ್ಯಾದ್ಭಕ್ತ್ಯಾ ಪುಸ್ತಕವಾಚನಮ್ ।
ಶ್ಲೋಕಸಂಖ್ಯಾಯುಗಾನ್ಯೇವ ವಸತೇ ಮಮ ಸನ್ನಿಧೌ ॥ ೩೫॥

ಪ್ರದಕ್ಷಿಣಾಪ್ರದಾನೇನ ಯತ್ಫಲಂ ಕಥಿತಂ ಬುಧೈಃ ।
ನ ತತ್ಕೋಟಿಮಖೈಃ ಪುಣ್ಯಂ ಯುಗಸಂಖ್ಯೈರವಾಪ್ಯತೇ ॥ ೩೬॥

ದೀಪಮಾಲಾಂ ಮಮಾಗ್ರೇ ವೈ ಯಃ ಕುರ್ಯಾಜ್ಜಾಗರೇ ಸುತ ।
ವಿಮಾನಕೋಟಿಸಂಯುಕ್ತ ಆಕಲ್ಪಂ ವಸತೇ ದಿವಿ ॥ ೩೭॥

ದೀಪವನ್ನು ಹಚ್ಚಿಟ್ಟು ಪರಮಾತ್ಮನ ಪೂಜಾ ಸಮಯದಲ್ಲಿ ಲಜ್ಜಾರಹಿತನಾಗಿ ನರ್ತಿಸುವನೋ ಅವನು ನಿಮಿಷಾರ್ಧದಲ್ಲಿ ಕೋಟಿ ಯಜ್ಞಗಳ ಫಲವನ್ನು ಪಡೆಯುವನು. ॥೩೧॥ ನನ್ನ ಜಾಗರದಲ್ಲಿ ಗೀತ, ನೃತ್ಯ ಸೇವೆಗಳನ್ನು ನಡೆಸದವನು ಅಥವಾ ಈ ಸೇವೆಗಳಿಗೆ ಆತಂಕಪಡಿಸುವವನು ಅರವತ್ತು ಸಹಸ್ರ ಯುಗಗಳ ಪರ್ಯಂತರ ರೌರವಾದಿ ನರಕಗಳಲ್ಲಿ ಬಿದ್ದು ಒದ್ದಾಡುವನು. ॥೩೨॥ ಅಂದು ನರ್ತನ ಮಾಡುತ್ತಿರುವ ಮನುಷ್ಯನ ಸಮೀಪಕ್ಕೆ ಯಾರಾದರೂ ಹೋದರೆ ಅಷ್ಟರಿಂದಲೇ ಅವರು ಯಮಧರ್ಮನ ಪಾಶಗಳಿಂದ ಮುಕ್ತರಾಗುವರಲ್ಲದೇ ನನ್ನ ಲೋಕವನ್ನು ಹೊಂದುವರು. ॥ ೩೩॥ ಆದರೆ ಯಾವುದಾದರೂ ಜಾಗರದಲ್ಲಿ ನೃತ್ಯ ಮಾಡುತ್ತಿರುವವನ ಉಪಹಾಸವನ್ನು ಮಾಡಿದರೆ ಅವನು ಚತುರ್ದಶ ಇಂದ್ರರು ಇರುವವರೆಗೆ ನಿರಯವನ್ನು ಅನುಭೋಗಿಸುವನು. ॥೩೪॥ ಜಾಗರದಲ್ಲಿ ಭಕ್ತಿಯಿಂದ ಸಚ್ಛಾಸ್ತ್ರ ಪುರಾಣಾದಿಗಳನ್ನು ಪಠಣ ಮಾಡುವ ನರನು ಗ್ರಂಥದಲ್ಲಿರುವ ಶ್ಲೋಕಗಳ ಸಂಖ್ಯೆಯಷ್ಟು ಯುಗಗಳವರೆಗೆ ನನ್ನ ಸನ್ನಿಧಿಯಲ್ಲಿ ವಾಸಿಸುವನು. ॥ ೩೫॥ ಜಾಗರದಲ್ಲಿ ನನಗೆ ಪ್ರದಕ್ಷಿಣೆ ಹಾಕುವುದರಿಂದ ಯಾವ ಫಲವು ಬರುವದೋ ಅದು ಕೃತಾದಿ ನಾಲ್ಕು ಯುಗಗಳಲ್ಲಿ ಕೋಟಿ ಯಜ್ಞಗಳನ್ನು ಮಾಡುವುದರಿಂದಲೂ ದೊರೆಯಲಾರದು. ॥೩೬॥ ಹೇ ವತ್ಸಾ! ಜಾಗರ ಸಮಯದಲ್ಲಿ ನನ್ನ ಮುಂಭಾಗದಲ್ಲಿ ಸಾಲು ದೀಪಗಳನ್ನು ಹಚ್ಚುವವನು ಕೋಟಿ ವಿಮಾನಗಳಿಂದ ಸಹಿತನಾಗಿ ಕಲ್ಪಾಂತದವರೆಗೆ ಸ್ವರ್ಗದಲ್ಲಿ ವಾಸಿಸುವನು. ॥ ೩೭॥ ಜಾಗರದಲ್ಲಿ ನನ್ನ

ಮಮ ನಾಮಸಹಸ್ರಾಣಿ (ಬಾಲಚರಿತ್ರಾಣಿ) ಜಾಗರೇ ಪಠತೇ ಹಿ ಯಃ ।
ಯುಗಕೋಟಿಸಹಸ್ರಾಣಿ ಶ್ವೇತದ್ವೀಪೇ ವಸೇನ್ನರಃ ॥ ೩೮॥

ತಸ್ಮಾಜ್ಜಾಗರಣಂ ಕಾರ್ಯಂ ಪಕ್ಷಯೋಃ ಶುಕ್ಲಕೃಷ್ಣಯೋಃ ।
ಯೋ ಗೀತಂ(ತಾಂ) ಪಠತೇ ರಾತ್ರೌ ಮಮ ನಾಮಸಹಸ್ರಕಮ್ ॥ ೩೯॥

ವೇದೋಕ್ತಾನಾಂ ಪುರಾಣಾನಾಂ ಜಾಗರಾತ್ಪುಣ್ಯಮಾಪ್ನುಯಾತ್ ।
ಧೇನುದಾನಂ ಚ ಯಃ ಕುರ್ಯಾತ್ ಜಾಗರೇ ಮಮ ಪುತ್ರಕ ॥ ೪೦॥

ಸ ಲಭೇನ್ನಾತ್ರ ಸಂದೇಹಃ ಸಪ್ತದ್ವೀಪವತೀಫಲಮ್ ।
ಸರ್ವೇಷಾಮೇವ ಪುಣ್ಯಾನಾಂ ಶ್ರೇಷ್ಠಪುಣ್ಯಂ ಮಹೀತಲೇ ॥ ೪೧॥

ದ್ವಾದಶೀಜಾಗರಂ ಪುತ್ರ ಪ್ರಸಿದ್ಧಂ ಭುವನತ್ರಯೇ ।
ಜಾಗರಂ ಯೇ ಚ ಕುರ್ವಂತಿ ಕರ್ಮಣಾ ಮನಸಾ ಗಿರಾ ॥ ೪೨॥

ನ ತೇಷಾಂ ಪುನರಾವೃತ್ತಿರ್ಮಮ ಲೋಕಾತ್ಕಥಂಚನ ।
ಪ್ರೋತ್ಸಾಹಯಿತ್ವಾ ಲೋಕಾನ್ ಯಃ ಕುರುತೇ ಜಾಗರಂ ನಿಶಿ ॥ ೪೩॥

ಸಹಸ್ರ ನಾಮಗಳ (ಬಾಲ ಚರಿತ್ರೆಗಳ) ಪಠಣ ಮಾಡುವ ನರನು ಸಹಸ್ರ ಕೋಟಿ ಯುಗಗಳವರೆಗೆ ಶ್ವೇತದ್ವೀಪದಲ್ಲಿ ವಾಸಿಸುವನು. ॥೩೮॥ ಜಾಗರದ ಮಹಿಮೆಯು ಈ ಪ್ರಕಾರವಾಗಿರುವುದರಿಂದ ವತ್ಸಾ ! ಪ್ರತಿ ಮಾಸದ ಕೃಷ್ಣ ಹಾಗೂ ಶುಕ್ಲಪಕ್ಷಗಳ ಏಕಾದಶಿಗಳಂದು ಅವಶ್ಯವಾಗಿ ಜಾಗರವನ್ನು ಮಾಡಬೇಕು. ಯಾವನು ಜಾಗರ ದಿನ ಹರಿಕೀರ್ತನೆಗಳನ್ನು, ವಿಷ್ಣು ಸಹಸ್ರನಾಮಗಳನ್ನು ಹೇಳುವನೋ ॥ ೩೯॥ ಹಾಗೂ ವೇದೋಕ್ತ ಮಂತ್ರಗಳ ಮತ್ತು ಪುರಾಣಗಳ ಪಠಣ ಮಾಡುವನೋ ಅವನು ಜಾಗರದ ಪುಣ್ಯವನ್ನು ಹೊಂದುವನು. ಜಾಗರದಲ್ಲಿ ಗೋದಾನವನ್ನು ಮಾಡಿದರೆ ॥ ೪೦॥ ಅವನು ನಿಶ್ಚಿತವಾಗಿ ಸಪ್ತದ್ವೀಪಗಳಿಂದ ಸಹಿತವಾದ ಭೂಮಿಯನ್ನು ದಾನ ಮಾಡಿದಾಗಿನಷ್ಟು ಫಲವನ್ನು ಪಡೆಯುವನು. ಗೋದಾನದ ಪುಣ್ಯವು ಭೂಮಿಯಲ್ಲಿ ಸಾಧ್ಯವಿರುವ ಸಕಲ ದಾನಗಳಿಂದ ಲಭ್ಯವಾಗುವ ಪುಣ್ಯಕ್ಕಿಂತಲೂ ಅಧಿಕವಾಗಿದೆ. ॥ ೪೧॥ ಎಲೈ ಪುತ್ರನೇ ! ತ್ರಿಲೋಕಗಳಲ್ಲಿ ದ್ವಾದಶೀ ಜಾಗರವು ಸುಪ್ರಸಿದ್ಧವಾಗಿದೆ. ಕಾಯಾ, ವಾಚಾ, ಮನಸಾ ಜಾಗರವನ್ನು ಮಾಡುವವರಿಗೆ ॥ ೪೨॥ ನನ್ನ ಲೋಕದಿಂದ ನಿವೃತ್ತಿಯಾಗಿ ಭೂಲೋಕದಲ್ಲಿ ಪುನರ್ಜನ್ಮವೆಂಬುದು ಎಂದಿಗೂ ಇರಲಾರದು. ಬಂಧು ಬಾಂಧವರನ್ನು ಜಾಗರ ಮಾಡಲು ಪ್ರೋತ್ಸಾಹಿಸಿ ತಾನು ಸ್ವತಃ ರಾತ್ರಿ ಜಾಗರವನ್ನು ಮಾಡುವ ಮನುಷ್ಯನು ॥ ೪೩॥ ಜನ್ಮಾಂತರದಲ್ಲಿ ಚಕ್ರವರ್ತಿ ಪದವನ್ನು ಹೊಂದುವನು. ಮಗನೇ ! ಇದು ನನ್ನ ಸತ್ಯ

ಪ್ರಾಪ್ನೋತಿ ಚಕ್ರವರ್ತಿತ್ವಂ ಸತ್ಯಂ ಮೇ ವ್ಯಾಹೃತಂ ಸುತ ।
ಸನ್ಮಾನಿತಾಃ ಕಕುತ್ಸ್ಥೇನ ರಾತ್ರೌ ಜಾಗರಕಾರಿಣಃ ॥ ೪೪॥

ಸ್ವಶಕ್ತ್ಯಾ ಚೈವ ದಾನೇನ ಪ್ರಾಪ್ತಂ ರಾಜ್ಯಂ ಸುದುರ್ಲಭಮ್ ।
ಯೇ ಕೇಚಿದ್ಗಾಯಕಾ ವಿಪ್ರಾ ವಾದಕಾ ನರ್ತಕಾಶ್ಚ ಯೇ ॥ ೪೫॥

ನರ್ತಕೀಸಹಿತಾ ಯಾಂತಿ ಮಮ ಲೋಕೇ ಸನಾತನೇ ।
ದುರ್ಯೋನಿಷು ಗತೈಃ ಸರ್ವೈಃ ಕೃತ್ವಾ ಜಾಗರಣಂ ಮಮ ॥ ೪೬॥

ಸಂಪ್ರಾಪ್ಯ ಪೃಥಿವೀಶತ್ವಂ ಸಕಾಮೈರ್ಮುನಿಸತ್ತಮ ।
ನಿಷ್ಕಾಮಾ ಮುಕ್ತಿಮಾಪನ್ನಾಃ ಶ್ವಪಚಾದ್ಯಾಶ್ಚ ಜಾಗರಾತ್ ॥ ೪೭॥

ವಿವೇಕೋ ನಾಸ್ತಿ ವರ್ಣಾನಾಂ ಮಮ ಜಾಗರಕಾರಿಣಾಮ್
ನ ಕಲೌ ಪಾವನಂ ಧ್ಯಾನಂ ನ ಕಲೌ ಜಾಹ್ನವೀಜಲಮ್ ॥ ೪೮॥

ನ ಕಲೌ ಪಾವನಂ ಜಾಪ್ಯಂ ಮುಕ್ತ್ವೈಕಂ ಜಾಗರಂ ಮಮ ।
ದ್ವಾದಶೀದಿವಸೇ ಪ್ರಾಪ್ತೇ ಯೇ ಕುರ್ವಂತಿ ಹಿ ಜಾಗರಮ್ ॥ ೪೯॥

ತೇ ಧನ್ಯಾಸ್ತೇ ಕೃತಾರ್ಥಾ ವೈ ಕಲಿಕಾಲೇ ನ ಸಂಶಯಃ ।
ನ ಭೂಯಾನ್ಮಾನುಷೇ ಲೋಕೇ ದ್ವಾದಶೀವಿಮುಖೋ ನರಃ ॥ ೫೦॥

ವಚನವು. ಹಿಂದಕ್ಕೆ ಕಕುತ್‌ಸ್ಥ ಎಂಬ ರಾಜನು ರಾತ್ರಿಯಲ್ಲಿ ತಾನು ಜಾಗರಣ ಮಾಡಿ ಜಾಗರ ಮಾಡುತ್ತಿದ್ದ ಇತರ ಜನರಿಗೆ ॥೪೪॥ ತನ್ನ ಶಕ್ತ್ಯನುಸಾರ ದಾನ ಮಾಡುವ ಮೂಲಕ ಅವರನ್ನು ಸತ್ಕರಿಸಿದ್ದನು. ಈ ನಿಮಿತ್ತವಾಗಿ ಅವನಿಗೆ ದುರ್ಲಭವಾದ ರಾಜ್ಯವು ಪ್ರಾಪ್ತವಾಯಿತು. ಗಾಯನ ಮಾಡುವ ಬ್ರಾಹ್ಮಣರಾಗಲೀ, ವಾದ್ಯ ಬಾರಿಸುವ ಬ್ರಾಹ್ಮಣರಾಗಲೀ ಮತ್ತು ನರ್ತನ ಮಾಡುವ ಬ್ರಾಹ್ಮಣರಾಗಲೀ, ಯಾರಿದ್ದರೂ ಅವರು ॥ ೪೫॥ ನರ್ತಕಿಯರೊಂದಿಗೆ ಕೂಡಿಕೊಂಡು ಸನಾತನವಾದ ನನ್ನ ಲೋಕವನ್ನು ಸೇರುವರು. ದುರ್ಯೋನಿಗಳಲ್ಲಿ ಹುಟ್ಟಿದವರಾಗಿರಲಿ, ॥ ೪೬॥ ಸಕಾಮಿಗಳಾಗಿರಲಿ, ಯಾರಿದ್ದರೂ ಅವರು ಜಾಗರವನ್ನು ಮಾಡಿ ಚಕ್ರವರ್ತಿ ಪದವಿಯನ್ನು ಪಡೆದಿರುವ ದೃಷ್ಟಾಂತಗಳಿವೆ. ಇನ್ನು ನಿಷ್ಕಾಮಿಗಳಾದ ಶ್ವಪಚಾದಿಗಳೂ ಕೂಡ ಜಾಗರದಿಂದ ಮುಕ್ತಿಯನ್ನು ಹೊಂದಿರುವುದೂ ಉಂಟು. ॥೪೭॥ ಜಾಗರವನ್ನು ಮಾಡುವವರಿಗೆ ವರ್ಣಭೇದವಿಲ್ಲವೆಂದು ತಿಳಿ. ಕಲಿಯುಗದಲ್ಲಿ ಧ್ಯಾನ, ಜಾಹ್ನವೀಜಲ ॥ ೪೮॥ ಜಪ ಇವೆಲ್ಲವುಗಳಿಗಿಂತ ನನ್ನ ಒಂದು ಜಾಗರವು ಹೆಚ್ಚು ಪಾವಕವಾಗಿದೆ. ದ್ವಾದಶಿಯ ರಾತ್ರಿ ಜಾಗರವನ್ನು ಯಾರು ಮಾಡುವರೋ ॥ ೪೯॥ ಅವರೇ ಕಲಿಯುಗದಲ್ಲಿ ಧನ್ಯರು,

ಅತೀತಾನಾಗತಾನ್ಚಾಪಿ ಪಾತಯೇನ್ನರಕೇ ಹಿ ಸಃ ।
ವರಮೇಕೋ ಗುಣೈರ್ಯುಕ್ತೋ ಕಿಂ ಜಾತೈರ್ಬಹುಭಿಃ ಸುತೈಃ ॥ ೫೧॥

ದ್ವಾದಶೀಜಾಗರಾತ್ ಸರ್ವಾನ್ ತಾರಯೇದ್ಯೋ ಹಿ ಪೂರ್ವಜಾನ್ ।
ಮಾಹಾತ್ಮ್ಯಂ ಪಠತೇ ಭಕ್ತ್ಯಾ ಮಯೋಕ್ತಂ ಜಾಗರೋದ್ಭವಮ್ ॥ ೫೨॥

ದ್ವಾದಶೀಸಂಭವಂ ಪುತ್ರ ಸ ಕುಲಂ ತಾರಯೇತ್ ಶತಮ್ ।
ಅಗಮ್ಯಾಗಮನೇ ಪಾಪಂ ಅಭಕ್ಷಸ್ಯಾಪಿ ಭಕ್ಷಣೇ ॥ ೫೩॥

ಪಾಪಂ ವಿಲಯಮಾಯಾತಿ ಕೃತೇ ಜಾಗರಣೇ ಸುತ ।
ಅಜ್ಞಾನಾತ್ ಯತ್ಕೃತಂ ಪಾಪಂ ಜ್ಞಾತ್ವಾ ಯತ್ಪಾತಕಂ ಕೃತಮ್ ॥ ೫೪॥

ಪೂರ್ವಜನ್ಮಾರ್ಜಿತಂ ಪಾಪಂ ಇಹ ಜನ್ಮನಿ ಯತ್ಕೃತಮ್ ।
ತತ್ಸರ್ವಂ ವಿಲಯಂ ಯಾತಿ ಕೃತೇ ಜಾಗರಣೇ ಮಮ ॥ ೫೫॥

ಸಿಧ್ಯಂತಿ ಸರ್ವಕಾರ್ಯಾಣಿ ಮನಸಾ ಚಿಂತಿತಾನ್ಯಪಿ ।
ದ್ವಾದಶ್ಯಾ ವೈ ಚತುರ್ವಕ್ತ್ರ ರಾತ್ರೌ ಜಾಗರಣೇ ಕೃತೇ ॥ ೫೬॥

ಕೃತಾರ್ಥರು. ಇದರಲ್ಲಿ ಸಂದೇಹವೇ ಇಲ್ಲ. ಇಂಥವರು ಪುನಃ ಭೂಮಿಯ ಮೇಲೆ ಹುಟ್ಟಲಾರರು, ದ್ವಾದಶೀ ವಿಮುಖನಾದವನು ॥ ೫೦॥ ತನ್ನ ಪಿತೃಗಳನ್ನೂ ಹಾಗೂ ಮುಂದಿನ ಸಂತತಿಯನ್ನೂ ನರಕದಲ್ಲಿ ಬೀಳಿಸುವನು. ದ್ವಾದಶೀ ವಿಮುಖರಾಗುವ ಬಹು ಪುತ್ರರಿಗಿಂತಲೂ ದ್ವಾದಶೀ ಜಾಗರದಿಂದ ಸರ್ವ ಪಿತೃಗಳನ್ನು ಉದ್ಧರಿಸಲು ಸಮರ್ಥನಾದ ಸದ್ಗುಣಿಯಾದ ಒಬ್ಬ ಪುತ್ರನಿರುವದೇ ಲೇಸು. ಇದುವರೆಗೆ ನಾನು ಹೇಳಿದ ಜಾಗರದ ಮಹಾತ್ಮೆಯನ್ನು ॥ ೫೧॥ ೫೨॥ ಹಾಗೂ ದ್ವಾದಶಿಯ ಮಹಾತ್ಮೆಯನ್ನು ಯಾವಾತನು ಭಕ್ತಿಯಿಂದ ಶ್ರವಣ, ಪಠಣ ಮಾಡುವನೋ ಅಷ್ಟುಮಾತ್ರದಿಂದಲೇ ಅವನು ತನ್ನ ನೂರು ಕುಲಗಳನ್ನು ಉದ್ಧರಿಸುವನು. ಅಗಮ್ಯ ಸ್ತ್ರೀ ಗಮನ, ನಿಷಿದ್ಧ ಪದಾರ್ಥಗಳ ಭಕ್ಷಣ ಇವುಗಳಿಂದ ॥೫೩॥ ಬರುವ ಪಾಪವು ಹರಿದಿನ ಜಾಗರ ಮಾಡುವ ಮಾತ್ರದಿಂದ ನಾಶವಾಗಿ ಹೋಗುವದು. ಅಲ್ಲದೇ ಅಜ್ಞಾನದಿಂದಾಗಲೀ, ತಿಳಿದಾಗಲೀ ಮಾಡಿದ ಪಾಪವೇನಿದೆಯೋ ಅದೆಲ್ಲವೂ ॥ ೫೪॥ ಹಾಗೂ ಪೂರ್ವಜನ್ಮದಲ್ಲಿ ಸಂಚಿತವಾದ ಪಾಪವು, ಈ ಜನ್ಮದಲ್ಲಿ ಮಾಡಲ್ಪಟ್ಟ ಪಾಪವು ಅದೆಲ್ಲವೂ ಸಹ ನನ್ನ ಜಾಗರ ಮಾಡುವ ಮಾತ್ರದಿಂದ ನಷ್ಟವಾಗಿ ಹೋಗುವದು. ॥ ೫೫॥ ಹೇ ಬ್ರಹ್ಮಾ ! ದ್ವಾದಶಿಯ ರಾತ್ರಿ ಜಾಗರಣ ಮಾಡುವದರಿಂದ ಮನಸ್ಸಿನಲ್ಲಿ ಆಲೋಚಿಸಿದ ಸರ್ವ ಕಾರ್ಯಗಳು ಸಿದ್ಧಿಸುವವು. ॥ ೫೬॥ ದ್ವಾದಶೀ ಜಾಗರಣ ಮಾತ್ರದಿಂದಲೇ ಮಾನವರು ಮುಕ್ತಿಯನ್ನು

ದ್ವಾದಶೀಜಾಗರೇಣೈವ ಮುಕ್ತಿಂ ಗಚ್ಛಂತಿ ಮಾನವಾಃ ।
ನ ತತ್ಪುಣ್ಯಂ ಕುರುಕ್ಷೇತ್ರೇ ಪ್ರಯಾಗೇ ವಸತಾಂ ಕಲೌ ॥ ೫೭॥

ಮಾಹಾತ್ಮ್ಯಂ ಪಠತಾಂ ಪುಂಸಾಂ ಯತ್ಫಲಂ ದ್ವಾದಶೀಷು ಚ ।
ನಾಶ್ವಮೇಧಸಹಸ್ರೈಸ್ತು ತೀರ್ಥಕೋಟ್ಯವಗಾಹನಾತ್ ॥ ೫೮॥

ತತ್ಫಲಂ ಪ್ರಾಪ್ಯತೇ ಪುತ್ರ ದ್ವಾದಶೀಜಾಗರೇ ಕೃತೇ ।
ಪಠೇದ್ವಾ ಶೃಣುಯಾದ್ವಾಪಿ ಮಾಹಾತ್ಮ್ಯಂ ದ್ವಾದಶೀಭವಮ್ ॥ ೫೯॥

ಸರ್ವಪಾಪವಿಶುದ್ಧಾತ್ಮಾ ಲಭತೇ ಶಾಶ್ವತಂ ಪದಮ್ ।
ಸರ್ವೇ ತುಷ್ಟಾಃ ಸಮುಸ್ತಾಶ್ಚ ಸೌಮ್ಯಾಸ್ತಸ್ಯ ಸದಾ ಗ್ರಹಾಃ ॥ ೬೦॥

ಸಂತತೇರ್ನ ವಿಯೋಗಸ್ತು ದ್ವಾದಶೀ ಯಸ್ಯ ಕಾರಣಮ್ ।
ಮಮ ಕೀರ್ತಿರುಚಿರ್ನಿತ್ಯಂ ನ ವಿಪದ್ಯೇತ ಕರ್ಹಿಚಿತ್ ॥ ೬೧॥

ರಣೇ ರಾಜಕುಲೇ ಚೈವ ಸರ್ವದಾ ವಿಜಯೀ ಭವೇತ್ ।
ಧರ್ಮೋಪರಿ ಮತಿರ್ನಿತ್ಯಂ ಭಕ್ತಿರ್ಮಮ ಸುನಿರ್ಮಲಾ ॥ ೬೨॥

ಹೊಂದುವರು. ದ್ವಾದಶೀಗಳಲ್ಲಿ ಜಾಗರ ಮಹಾತ್ಮೆಯನ್ನು ಓದುವವರಿಗೆ ಕಲಿಯುಗದಲ್ಲಿ ಬರುವ ಫಲವೇನಿದೆಯೋ ಅದು ಕಲಿಯುಗದಲ್ಲಿ ಕೇವಲ ಕುರುಕ್ಷೇತ್ರದಲ್ಲಾಗಲೀ, ಪ್ರಯಾಗದಲ್ಲಾಗಲೀ ವಾಸಮಾಡುವುದರಿಂದ ದೊರೆಯಲಾರದು. ॥೫೭॥ ಹೇ ವತ್ಸಾ! ದ್ವಾದಶೀ ಜಾಗರ ಮಾಡುವದರಿಂದ ಉಂಟಾಗುವ ಫಲವು ಸಹಸ್ರ ಅಶ್ವಮೇಧಯಾಗಗಳನ್ನು ಮಾಡುವುದರಿಂದಾಗಲೀ ಅಥವಾ ಕೋಟಿತೀರ್ಥಗಳಲ್ಲಿ ಮುಳುಗುವುದರಿಂದಾಗಲೀ ದೊರೆಯಲಾರದು. ಆದ್ದರಿಂದ ದ್ವಾದಶಿಯ ಜಾಗರ ಮಹಾತ್ಮೆಯನ್ನು ಪಠಣ ಅಥವಾ ಶ್ರವಣ ಮಾಡಬೇಕು. ॥೫೮॥೫೯॥ ಹೀಗೆ ಮಾಡುವವನು ಸರ್ವ ಪಾಪಗಳನ್ನು ಕಳೆದುಕೊಂಡು ವಿಶುದ್ಧಾತ್ಮನಾಗಿ ಶಾಶ್ವತವಾದ ಗತಿಯನ್ನು ಹೊಂದುತ್ತಾನೆ. ದ್ವಾದಶೀ ಜಾಗರ ಮಾಡಿದ್ದರಿಂದ ಅವನ ಅನಿಷ್ಟ ಸ್ಥಾನಗಳಲ್ಲಿದ್ದ ಸಕಲ ಗ್ರಹಗಳೂ ಸಂತುಷ್ಟವಾಗುತ್ತವೆ ಮತ್ತು ಸೌಮ್ಯವಾಗುತ್ತವೆ. ॥ ೬೦॥ ಅವನ ಸಂತತಿಯ ವಿಯೋಗವಾಗದಿರಲು ದ್ವಾದಶಿಯೇ ಕಾರಣವಾಗುವದು. ನನ್ನ ಗುಣಾನುಕೀರ್ತನೆಯಲ್ಲಿ ಆಸಕ್ತಿ ಇರುವ ಮನುಷ್ಯನು ಎಂದಿಗೂ ಯಾವ ರೀತಿಯಿಂದಲೂ ವಿಪತ್ತನ್ನು ಹೊಂದುವದಿಲ್ಲ. ॥ ೬೧॥ ಅಂಥವನು ರಣದಲ್ಲಾಗಲೀ, ರಾಜಕುಲದ ವ್ಯವಹಾರಗಳಲ್ಲಾಗಲೀ ಸರ್ವದಾ ವಿಜಯಿಯಾಗಿರುವನು. ಅವನಿಗೆ ಸದಾ ಧರ್ಮಕಾರ್ಯಗಳಲ್ಲಿ ಮತಿಯೂ ಹಾಗೂ ನನ್ನಲ್ಲಿ ನಿರ್ಮಲವಾದ ಭಕ್ತಿಯೂ ಉಂಟಾಗುವವು. ॥ ೬೨॥ ದ್ವಾದಶಿಯಲ್ಲಿರುವ ಶ್ರದ್ಧೆಯಿಂದ ಆ ಮನುಷ್ಯನನ್ನು ಯಾವ

ಪಾತಕಂ ನೈವ ಲಿಪ್ಯೇತ ದ್ವಾದಶೀಭಕ್ತಿತೋ ನರಮ್ ।
ಪ್ರೇತತ್ವಂ ನೈವ ತಸ್ಯಾಸ್ತಿ ಕೃತೇ ಜಾಗರಣೇ ಮಮ ॥ ೬೩॥

ಏಕಾದಸ್ಯಾ ವಿಹೀನಸ್ಯ ಪರಲೋಕಗತಿರ್ನ ಹಿ ।
ತಸ್ಮಾತ್ ಸರ್ವಪ್ರಯತ್ನೇನ ಕಲೌ ಕಾರ್ಯಂ ಹಿ ತದ್ದಿನಮ್ ॥ ೬೪॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ದ್ವಾದಶೋಽಧ್ಯಾಯಃ ॥

ಪಾತಕವೂ ಸ್ಪರ್ಶಿಸಲಾರದು. ನನ್ನ ಜಾಗರ ಮಾಡುವ ಮನುಷ್ಯನಿಗೆ ಪ್ರೇತತ್ವವೆಂಬುದೇ ಬರಲಾರದು. ॥ ೬೩॥ ಏಕಾದಶೀ ಮಾಡದಿದ್ದವನಿಗೆ ಪರಲೋಕದಲ್ಲಿ ಸದ್ಗತಿಯೇ ಆಗಲಾರದು. ಈ ಕಾರಣದಿಂದಲೇ ಕಲಿಯುಗದಲ್ಲಿ ಹರಿವಾಸರವನ್ನು ಸರ್ವಪ್ರಯತ್ನಪೂರ್ವಕ ಆಚರಿಸಬೇಕು. ॥ ೬೪॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಮಾರ್ಗಶೀರ್ಷಮಾಸಮಹಾತ್ಮೆಯಲ್ಲಿ ಶ್ರೀವಿಷ್ಣುಬ್ರಹ್ಮರ ಸಂವಾದದಲ್ಲಿ " ಏಕಾದಶೀ ದ್ವಾದಶೀ ಜಾಗರ ಮಹಾತ್ಮೆ "ಎಂಬ ಹನ್ನೆರಡನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೧೩
ದ್ವಾದಶೀ ಮತ್ಸ್ಯೋತ್ಸವ

★

ಶ್ರೀಭಗವಾನುವಾಚ -
ತತಃ ಪ್ರಭಾತೇ ದ್ವಾದಶ್ಯಾಂ ಕಾರ್ಯೋ ಮತ್ಸ್ಯೋತ್ಸವೋ ಬುಧೈಃ ।
ಮಾರ್ಗಶೀರ್ಷೇ ಶುಕ್ಲಪಕ್ಷೇ ಯಥಾವಿಧ್ಯುಪಚಾರತಃ ॥ ೧॥

ಅಥ ಮಾರ್ಗಶಿರೇ ಮಾಸೇ ದಶಮ್ಯಾಂ ನಿಯತಾತ್ಮವಾನ್ ।
ಕೃತ್ವಾ ದೇವಾರ್ಚನಂ ಧೀಮಾನ್ ಅಗ್ನಿಕಾರ್ಯಂ ಯಥಾವಿಧಿ ॥ ೨॥

ಶುಚಿವಾಸಾಃ ಪ್ರಸನ್ನಾತ್ಮಾ ಹವ್ಯಮನ್ನಂ ಸುಸಂಸ್ಕೃತಮ್ ।
ಪಕ್ತ್ವಾ ಪಂಚಪದಂ ಗತ್ವಾ ಪುನಃ ಶೌಚಂ ತು ಪಾದಯೋಃ ॥ ೩॥

ಕೃತ್ವಾಷ್ಟಾಂಗುಲಮಾನಂ ತು ಕ್ಷೀರವೃಕ್ಷಸಮುದ್ಭವಮ್ ।
ಭಕ್ಷಯೇದ್ದಂತಕಾಷ್ಠಂ ತು ತತಶ್ಚಾಚಮ್ಯ ಯತ್ನತಃ ॥ ೪॥

ದೃಷ್ಟ್ವಾ ಕೋಶಾನಿ ಸರ್ವಾಣಿ ಧ್ಯಾತ್ವಾ ಮಾಂ ವೈ ಗದಾಧರಮ್ ।
ಶಂಖಚಕ್ರಗದಾಪಾಣಿಂ ಕಿರೀಟಂ ಪಿತವಾಸಸಮ್ ॥ ೫॥

ಶ್ರೀಭಗವಂತನು ಹೇಳುತ್ತಾನೆ . ಹೇ ಬ್ರಹ್ಮಾ! ಬುದ್ಧಿವಂತರಾದವರು ಮಾರ್ಗಶೀರ್ಷ ಶುಕ್ಲಪಕ್ಷದ ದ್ವಾದಶೀ ಪ್ರಾತಃಕಾಲದಲ್ಲಿ ವಿಧಿಪೂರ್ವಕ ಮತ್ಸ್ಯೋತ್ಸವವನ್ನು ಆಚರಿಸಬೇಕು. ॥ ೧॥ ಧೀಮಂತನಾದವನು ಮೊದಲು ಮಾರ್ಗಶೀರ್ಷ ಶುದ್ಧ ದಶಮಿಯ ದಿನ ಇಂದ್ರಿಯನಿಗ್ರಹವುಳ್ಳವನಾಗಿ ಪ್ರಾತರಾಹ್ನಿಕಗಳನ್ನೆಲ್ಲ ಮುಗಿಸಿ ದೇವ ಪೂಜೆಯನ್ನು ಮಾಡಿ ಯಥಾ ವಿಧಿ ವೈಶ್ವದೇವಾದಿ ಅಗ್ನಿ ಕಾರ್ಯವನ್ನು ಮಾಡಬೇಕು. ॥ ೨॥ ಪ್ರಸನ್ನ ಚಿತ್ತವುಳ್ಳಂಥವನಾಗಿ ಶುದ್ಧವಾದ ವಸ್ತ್ರಗಳನ್ನು ಧರಿಸಿ, ಹವನ ಮಾಡಲು ಯೋಗ್ಯವಾದ ಅನ್ನವನ್ನು ಮಾಡಿ ಅದನ್ನು ಸಂಸ್ಕಾರದಿಂದ ಶುದ್ಧ ಮಾಡಿಟ್ಟು ಐದು ಹೆಜ್ಜೆ ಗಮನ ಮಾಡಿ ಪುನಃ ಕಾಲುಗಳನ್ನು ತೊಳೆದುಕೊಂಡು ಶುದ್ಧವಾಗಬೇಕು. ॥ ೩॥ (ವಟ ಅಥವಾ ಔದುಂಬರ ಮೊದಲಾದ ಕ್ಷೀರವೃಕ್ಷದ) ೮ ಅಂಗುಲ ಪರಿಮಿತವಾದ ಕಾಷ್ಠವನ್ನು ತೆಗೆದು ಆ ದಂತಕಾಷ್ಠವನ್ನು ಭಕ್ಷಣ ಮಾಡಿ ನಂತರ ಆಚಮನ ಮಾಡಬೇಕು. ॥ ೪॥ ಆಕಾಶ ಮೊದಲಾದವುಗಳನ್ನು ಅವಲೋಕನ ಮಾಡಿ ಶಂಖ, ಚಕ್ರ, ಗದಾಧಾರಿಯಾದ, ಕಿರೀಟವನ್ನು ಧರಿಸಿದ, ಪೀತಾಂಬರಧಾರಿಯಾದ ॥ ೫॥ ಪ್ರಸನ್ನವಾದ ಮುಖಕಮಲವುಳ್ಳ, ಸರ್ವಲಕ್ಷಣ

ಪ್ರಸನ್ನವದನಾಂಭೋಜಂ ಸರ್ವಲಕ್ಷಣಲಕ್ಷಿತವ್ ।
ಧ್ಯಾತ್ವಾ ಪುನರ್ಜಲಂ ಹಸ್ತೇ ಗೃಹೀತ್ವಾ ಭಾನುಮಧ್ಯಗಮ್ ॥ ೬॥

ಧ್ಯಾತ್ವಾರ್ಘ್ಯಂ ದಾಪಯೇತ್ತತ್ರ ಕರತೋಯೇನ ಮಾನವಃ ।
ಏವಮುಚ್ಚಾರಯೇದ್ವಾಚಂ ತಸ್ಮಿನ್ ಕಾಲೇ ಚತುರ್ಮುಖ ॥ ೭॥

ಏಕಾದಶ್ಯಾಂ ನಿರಾಹಾರಃ ಸ್ಥಿತ್ವಾಹನಿ ಪರೇ ಹ್ಯಹಮ್ ।
ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭವಾಚ್ಯುತ ॥ ೮॥

ಏವಮುಕ್ತ್ವಾ ತತೋ ರಾತ್ರೌ ಮಮ ಮೂರ್ತೇಶ್ಚ ಸನ್ನಿಧೌ ।
ಜಪೇನ್ನಾರಾಯಣಾಯೇತಿ ಸ್ವಯಂ ತತ್ರ ವಿಧಾನತಃ ॥ ೯॥

ತತಃ ಪ್ರಭಾತೇ ವಿಮಲಾಂ ನದೀಂ ಗತ್ವಾ ಸಮುದ್ರಗಾಮ್ ।
ಇತರಾಂ ವಾ ತಡಾಗಂ ವಾ ಗೃಹೇ ವಾ ನಿಯತಾತ್ಮವಾನ್ ॥ ೧೦॥

ಆನೀಯ ಮೃತ್ತಿಕಾಂ ಶುದ್ಧಾಂ ಮಂತ್ರೇಣಾನೇನ ಮಾನವಃ ।
ವಂದಯೇದ್ದೇವದೇವೇಶಂ ತದಾ ಶುದ್ಧೋ ಭವೇತ್ ನರಃ ॥ ೧೧॥

ಧಾರಣಂ ಪೋಷಣಂ ತ್ವತ್ತೋ ಭೂತಾನಾಂ ದೇವಿ ಸರ್ವದಾ ।
ತೇನ ಸತ್ಯೇನ ಮೇ ಪಾಪಂ ಯಾವನ್ಮೋಚಯ ಸುವ್ರತೇ ॥ ೧೨॥

ಸಂಪನ್ನನಾದ ಈ ನನ್ನ ಗದಾಧರ ರೂಪವನ್ನು ಧ್ಯಾನಿಸುತ್ತ ಕೈಯಲ್ಲಿ ನೀರನ್ನು ಹಿಡಿದುಕೊಂಡು ಮಧ್ಯಾಹ್ನಕ್ಕೆ ಪ್ರಾಪ್ತನಾದಂಥ ಸೂರ್ಯನನ್ನು ॥ ೬॥ ಧ್ಯಾನಿಸುತ್ತ ಕೈಯೊಳಗಿನ ನೀರಿನಿಂದ ಅರ್ಘ್ಯವನ್ನು ಕೊಡಬೇಕು. ಎಲೈ ಚತುರಾಸ್ಯನೇ! ಅರ್ಘ್ಯವನ್ನು ಕೊಡುವಾಗ ಹೀಗೆ ಉಚ್ಚರಿಸಬೇಕು ಏನೆಂದರೆ ॥೭॥ "ಹೇ ಪುಂಡರೀಕಾಕ್ಷಾ! ಏಕಾದಶಿಯಂದು ಉಪವಾಸದಿಂದ ಇದ್ದು ಮರುದಿನ ದ್ವಾದಶಿಯ ದಿನ ಭೋಜನ ಮಾಡುವೆನು. ಹೇ ಅಚ್ಯುತಾ! ನೀನು ನನ್ನ ರಕ್ಷಕನಾಗಿರು". ॥೮॥ ಹೀಗೆ ಪ್ರಾರ್ಥಿಸುತ್ತ ಅಂದಿನ ರಾತ್ರಿ ನನ್ನ ಮೂರ್ತಿಯ ಸನ್ನಿಧಿಯಲ್ಲಿದ್ದುಕೊಂಡು ಸ್ವತಃ ತಾನು ಯಥಾವಿಧಿ 'ಓಂ ನಮೋ ನಾರಾಯಣಾಯ' ಎಂಬ ಮಂತ್ರವನ್ನು ಉಚ್ಚರಿಸಬೇಕು. ॥ ೯॥ ನಂತರ ಪ್ರಾತಃಕಾಲವಾಗಲು ನಿಯತಾತ್ಮನಾಗಿ ಸಮುದ್ರಗಾಮಿಯಾದ ಶುದ್ಧ ನೀರುಳ್ಳ ನದಿಗಾಗಲೀ ಸರೋವರಕ್ಕಾಗಲೀ ಹೋಗಿ ಅಥವಾ ಇದಾವುದೂ ಇರದಿದ್ದರೆ ಮನೆಯಲ್ಲಿಯೇ ಇದ್ದುಕೊಂಡು ॥ ೧೦॥ ಶುದ್ಧವಾದ ಮೃತ್ತಿಕೆಯನ್ನು ಸಂಗ್ರಹಿಸಬೇಕು. ಮೃತ್ತಿಕೆಯನ್ನು ಸಂಗ್ರಹಿಸುವಾಗ ದೇವದೇವೇಶನಾದ ನನ್ನನ್ನು ನಮಸ್ಕರಿಸಿ 'ಧಾರಣಂ ಪೋಷಣಂ ತ್ವತ್ತೋ ' ಇತ್ಯಾದಿ ಮಂತ್ರವನ್ನು ಪಠಿಸಬೇಕು. ಇದರಿಂದ ಮೃತ್ತಿಕೆಯನ್ನು ಸಂಗ್ರಹಿಸುವ ಮನುಷ್ಯನು ಶುದ್ಧನಾಗುವನು. ಅದಾವ ಮಂತ್ರವೆಂದರೆ ॥ ೧೧॥ 'ಹೇ ಮೃತ್ತಿಕೆ ! ದೇವಿ! ಸಕಲ ಪ್ರಾಣಿಗಳ ಧಾರಣ, ಪೋಷಣೆಗಳು ನಿನ್ನಿಂದಲೇ ನಡೆಯುವವು.

ಬ್ರಹ್ಮಾಂಡೋದರತೀರ್ಥಾನಿ ಕರೈಃ ಸ್ಪೃಷ್ಟಾನಿ ದೈವತೈಃ ।
ತೇನೇಮಾಂ ಮೃತ್ತಿಕಾಂ ಸ್ಪೃಷ್ಟ್ವಾಮಾಲಭಾಮಿ ತ್ವಯೋದ್ಧೃತಾಮ್ ॥ ೧೩॥

ತ್ವಯಿ ನಿತ್ಯಂ ರಸಾಃ ಸರ್ವೇ ಸ್ಥಿತಾ ವರುಣ ಸರ್ವದಾ ।
ತೇನೇಮಾಂ ಮೃತ್ತಿಕಾಂ ಪ್ಲಾವ್ಯ ಪೂತಾಂ ಕುರು ಹಿ ಮಾ ಚಿರಮ್ ॥ ೧೪॥

ಏವಂ ಮೃದಂ ತಥಾ ತೋಯಂ ಪ್ರಸಾದ್ಯಾತ್ಮಾನಮಾಲಿಪೇತ್ ।
ತ್ರಿಃಕೃತ್ವಾ ಶೇಷಮೃದಯಾ ಪಿಂಡಮಾಲಿಪ್ಯ ವೈ ಜಲೇ ॥ ೧೫॥

ತತಃ ಸಮ್ಯಕ್ ನರಸ್ತಸ್ಮಿನ್ನಕ್ರಕಚ್ಛಪಚಾರತಃ ।
ಸ್ನಾತ್ವಾ ಚಾವಶ್ಯಕಂ ಕೃತ್ವಾ ಪುನರ್ಮಮ ಗೃಹಂ ವ್ರಜೇತ್ ॥ ೧೬॥

ತತ್ರಾರಾಧ್ಯ ಮಹಾಯೋಗಿನ್ ದೇವಂ ನಾರಾಯಣಂ ಹರಿಮ್ ।
ಕೇಶವಾಯ ನಮಃ ಪಾದೌ ಕಟಿಂ ದಾಮೋದರಾಯ ಚ ॥ ೧೭॥

ಜಾನುಯುಗ್ಮಂ ನೃಸಿಂಹಾಯ ಊರೂ ಶ್ರೀವತ್ಸಧಾರಿಣೇ ।
ಕಂಠಂ ಕೌಸ್ತುಭನಾಭಾಯ ವಕ್ಷಃ ಶ್ರೀಪತಯೇ ತಥಾ ॥ ೧೮॥

ಹೇ ಸುವ್ರತೇ ! ಸರ್ವಾಧಾರಕಳಾದ ನಿನಗೆ ನಮಿಸುವೆನು. ನನ್ನ ಪಾಪಗಳನ್ನೆಲ್ಲ ಕಳೆದು ಅನುಗ್ರಹಿಸು ॥ ೧೨॥ ಬ್ರಹ್ಮಾಂಡ -ದೊಳಗಿರುವ ಸಕಲ ತೀರ್ಥಗಳನ್ನು ದೇವತೆಗಳು ತಮ್ಮ ಕರಗಳಿಂದ ಸ್ಪರ್ಶ ಮಾಡಿರುವದರಿಂದ ನಿನ್ನಿಂದ ಉದ್ಧೃತವಾದ ಭೂದೇವಿಯ ಈ ಮೃತ್ತಿಕೆಯನ್ನು ನಾನು ಧರಿಸುತ್ತೇನೆ. ॥ ೧೩॥ ಹೇ ವರುಣಾಂತರ್ಗತ ಪರಮಾತ್ಮನೇ ! ನಿನ್ನಲ್ಲಿ ಯಾವಾಗಲೂ ಸರ್ವರಸಗಳು ಸನ್ನಿಹಿತವಾಗಿರುತ್ತವೆ. ಆದ್ದರಿಂದ ಈ ಮೃತ್ತಿಕೆಯನ್ನು ಬೇಗನೇ ಪವಿತ್ರಗೊಳಿಸು ಮತ್ತು ಈ ಮೃತ್ತಿಕೆಯು ತಾನು ಶುದ್ಧವಾಗಿ ತನ್ನನ್ನು ಧರಿಸುವ ಇತರರನ್ನು ಪವಿತ್ರಗೊಳಿಸುವ ಸಾಮರ್ಥ್ಯವುಳ್ಳದ್ದನ್ನಾಗಿ ಮಾಡು. ತಡಮಾಡಬೇಡಾ' ॥೧೩॥ ಹೀಗೆ ಪ್ರಾರ್ಥಿಸುತ್ತ ಮೃತ್ತಿಕೆ ಹಾಗೂ ತೀರ್ಥಾಭಿಮಾನಿ ವರುಣದೇವತೆಯನ್ನು ಸ್ತೋತ್ರಪೂರ್ವಕ ಪ್ರಸನ್ನಗೊಳಿಸಿ ಸ್ವಲ್ಪ ಮೃತ್ತಿಕೆ ಹಾಗೂ ನೀರನ್ನು ಕಲಿಸಿ ದೇಹಕ್ಕೆ ಲೇಪಿಸಿಕೊಳ್ಳಬೇಕು. ಉಳಿದ ಮೃತ್ತಿಕೆಯಲ್ಲಿ ಮೂರು ಪಿಂಡಗಳನ್ನು ಮಾಡಿ ನೀರಿನೊಳಗೆ ಚೆಲ್ಲಬೇಕು. ॥ ೧೫॥ ನಂತರ ನಕ್ರ, ಮೀನುಗಳು, ಆವಿ ಮೊದಲಾದವುಗಳಂತೆ ಜಲದಲ್ಲಿ ಚೆನ್ನಾಗಿ ಅವಗಾಹನ ಸ್ನಾನವನ್ನು ಮಾಡಿ ಸಂಧ್ಯಾವಂದನಾದಿ ನಿತ್ಯಾಹ್ನಿಕ ಕರ್ಮಗಳನ್ನು ಮುಗಿಸಿ ಪುನಃ ನನ್ನ ಮಂದಿರಕ್ಕೆ ಹೊರಟು ಬರಬೇಕು. ॥ ೧೬॥ ಹೇ ಮಹಾಯೋಗಿಯಾದ ಬ್ರಹ್ಮಾ ! ಆ ದೇವಮಂದಿರದಲ್ಲಿ ಶ್ರೀಹರಿ ನಾರಾಯಣ ದೇವರನ್ನು ಆರಾಧಿಸಬೇಕು. ಹೇಗೆಂದರೆ - ಪರಮಾತ್ಮನ ಪಾದಗಳಲ್ಲಿ ಕೇಶವಾಯ ನಮಃ, ಕಟಿಯಲ್ಲಿ ದಾಮೋದರಾಯ ನಮಃ ॥ ೧೭॥ ಎರಡೂ ಮೊಳಕಾಲುಗಳಲ್ಲಿ ನೃಸಿಂಹಾಯ ನಮಃ,

ತ್ರೈಲೋಕ್ಯವಿಜಯಾಯೇತಿ ಬಾಹುಂ ಸರ್ವಾತ್ಮನೇ ಶಿರಃ ।
ರಥಾಂಗಧಾರಿಣೇ ವಕ್ತ್ರಂ ಶಂಕರಾಯೇತಿ ವಾರಿಜಮ್ ॥ ೧೯॥

ಗಂಭೀರಾಯೇತಿ ಚ ಗದಾಮಂಭೋಜಂ ಶಾಂತಮೂರ್ತಯೇ ।
ಏವಮಭ್ಯರ್ಚ ದೇವೇಶಂ ದೇವಂ ನಾರಾಯಣಂ ಪ್ರಭುಮ್ ॥ ೨೦॥

ಪುನಸ್ತಸ್ಯಾಗ್ರತಃ ಕುಂಭಾಂಶ್ಚತುರಃ ಸ್ಥಾಪಯೇದ್ಬುಧಃ ।
ಜಲಪೂರ್ಣಾನ್ಸಮಾಲ್ಯಾಂಶ್ಚ ಸಿತಚಂದನಲೇಪಿತಾನ್ ॥ ೨೧॥

ಚೂತಪಲ್ಲವಸಂಯುಕ್ತಾನ್ ಸಿತವಸ್ತ್ರಾವಗುಂಠಿತಾನ್ ।
ಛಾದಿತಾಂಸ್ತಾಮ್ರಪಾತ್ರೈಶ್ಚ ತಿಲಪೂರ್ಣೈಃ ಸಕಾಂಚನೈಃ ॥ ೨೨॥

ಚತ್ವಾರಸ್ತು ಸಮುದ್ರಾಶ್ಚ ಕಲಶಾಃ ಸಂಪ್ರಕೀರ್ತಿತಾಃ ।
ತೇಷಾಂ ಮಧ್ಯೇ ಶುಭಂ ಪೀಠಂ ಸ್ಥಾಪಯೇದ್ವಸ್ತ್ರಗರ್ಭಿತಮ್ ॥ ೨೩॥

ತಸ್ಮಿನ್ ಸುವರ್ಣಂ ರೌಪ್ಯಂ ವಾ ತಾಮ್ರಂ ವಾ ದಾರವಂ ತಥಾ।
ಅಲಾಭೇ ಸರ್ವಪಾತ್ರಾಣಾಂ ಪಾಲಾಶಂ ಪಾತ್ರಮಿಷ್ಯತೇ ॥ ೨೪॥

ತೊಡೆಗಳಲ್ಲಿ ಶ್ರೀವತ್ಸಧಾರಿಣೇ ನಮಃ, ಕಂಠದಲ್ಲಿ ಕೌಸ್ತುಭನಾಥಾಯ ನಮಃ, ವಕ್ಷಃಸ್ಥಳದಲ್ಲಿ ಶ್ರೀಪತಯೇ ನಮಃ ॥ ೧೮॥ ಬಾಹುಗಳಲ್ಲಿ ತ್ರೈಲೋಕ್ಯ ವಿಜಯಾಯ ನಮಃ, ಶಿರಸ್ಸಿನಲ್ಲಿ ಸರ್ವಾತ್ಮನೇ ನಮಃ, ಚಕ್ರದಲ್ಲಿ ರಥಾಂಗಧಾರಿಣೇ ನಮಃ, ಶಂಖದಲ್ಲಿ ಶಂಕರಾಯ ನಮಃ ॥ ೧೯॥ ಗದಾದಲ್ಲಿ ಗಂಭೀರಾಯ ನಮಃ ಮತ್ತು ಪದ್ಮದಲ್ಲಿ ಶಾಂತಮೂರ್ತಯೇ ನಮಃ ಎಂದು ಹೇಳುತ್ತ ಈ ಪ್ರಕಾರವಾಗಿ ಪರಮಾತ್ಮನ ಮೂರ್ತಿಯ ಒಂದೊಂದು ಅವಯವದಲ್ಲಿ ಹಾಗೂ ಆತನು ಧರಿಸಿದ ಆಯುಧಗಳಲ್ಲಿ ಪರಮಾತ್ಮನ ಒಂದೊಂದು ರೂಪವನ್ನು ಧ್ಯಾನಿಸಿ ನಮಸ್ಕರಿಸುತ್ತ ದೇವೇಶನಾದ ಪ್ರಭು ನಾರಾಯಣ ದೇವರನ್ನು ಪೂಜಿಸಬೇಕು. ॥ ೨೦॥ ನಂತರ ದೇವರ ಮುಂಭಾಗದಲ್ಲಿ ಶುಭ್ರವಾದ ಸುವಾಸಿತ ಗಂಧವನ್ನು ಲೇಪಿಸಿದ, ಪುಷ್ಪಹಾರಗಳಿಂದ ಅಲಂಕರಿಸಿದ ನಾಲ್ಕು ಜಲಪೂರ್ಣ ಕುಂಭಗಳನ್ನು ಸ್ಥಾಪಿಸಬೇಕು. ॥ ೨೧॥ ಆ ಕುಂಭಗಳ ಮೇಲ್ಭಾಗದಲ್ಲಿ ಮಾವಿನ ಎಲೆಗಳನ್ನು ಹಾಕಿರಬೇಕು. ಅವುಗಳನ್ನು ಶುಭ್ರವಾದ ವಸ್ತ್ರದಿಂದ ಸುತ್ತಿರಬೇಕು. ತಿಲ ಮತ್ತು ಸುವರ್ಣನಾಣ್ಯ, ಆಭರಣಗಳಿಂದ ತುಂಬಿದ ತಾಮ್ರ ಪಾತ್ರೆಗಳನ್ನು ಆ ಕುಂಭಗಳ ಮೇಲೆ ಸ್ಥಾಪಿಸಬೇಕು.॥ ೨೨॥ ಈ ನಾಲ್ಕು ಕಲಶಗಳೆಂದರೆ ನಾಲ್ಕು ಸಮುದ್ರಗಳೆಂದು ತಿಳಿಯಬೇಕು. ಇವುಗಳ ಮಧ್ಯಭಾಗದಲ್ಲಿ ವಸ್ತ್ರದಿಂದ ಸುತ್ತಿದ ಒಳ್ಳೆಯ ಪೀಠವನ್ನು ಸಿದ್ಧಪಡಿಸಬೇಕು. ॥೨೩॥ ಆ ಪೀಠದ ಮೇಲ್ಭಾಗದಲ್ಲಿ ಸುವರ್ಣದ ಅಥವಾ ಬೆಳ್ಳಿಯ ಅಥವಾ ತಾಮ್ರದ ಅಥವಾ ಕಟ್ಟಿಗೆಯ ಒಂದು ಪಾತ್ರೆಯನ್ನಿಡಬೇಕು. ಇದಾವುದೂ

ತೋಯಪೂರ್ಣಂ ತತ್ ಕೃತ್ವಾ ತಸ್ಮಿನ್ ಪಾತ್ರೇ ಚ ತತೋ ನ್ಯಸೇತ್ ।
ಸೌವರ್ಣಂ ಮತ್ಸ್ಯರೂಪಂ ಚ ಕೃತ್ವಾ ದೇವಂ ಜನಾರ್ದನಮ್ ॥ ೨೫॥

ವೇದವೇದಾಂಗಸಂಯುಕ್ತಂ ಶ್ರುತಿಸ್ಮೃತಿವಿಭೂಷಿತಮ್ ।
ತತ್ರಾನೇಕವಿಧೈರ್ಭಕ್ಷ್ಯೈಃ ಫಲೈಃ ಪುಷ್ಪೈಶ್ಚ ಶೋಭಿತಮ್ ॥ ೨೬॥

ಗಂಧೈರ್ಧೂಪೈಶ್ಚ ವಸ್ತ್ರೈಶ್ಚ ಅರ್ಚಯಿತ್ವಾ ಯಥಾವಿಧಿ ।
ರಸಾತಲಗತಾ ವೇದಾ ಯಥಾ ದೇವ ತ್ವಯೋದ್ಧೃತಾಃ ॥ ೨೭॥

ಮತ್ಸ್ಯರೂಪೇಣ ತದ್ವನ್ಮಾಂ ಭವಾದುದ್ಧರ ಚೇಶ್ವರ ।
ಏವಮುಚ್ಚಾರ್ಯ ತಸ್ಯಾಗ್ರೇ ಜಾಗರಂ ತತ್ರ ಕಾರಯೇತ್ ॥ ೨೮॥

ಚತುರ್ಣಾಂ ಬ್ರಾಹ್ಮಣಾನಾಂ ಚ ಚತುರೋ ದಾಪಯೇದ್ಘಟಾನ್ ।
ಪೂರ್ವಂ ಚ ಬಹ್ವೃಚೇ ದದ್ಯಾತ್ ಛಂದೋಗೇ ದಕ್ಷಿಣಂ ತಥಾ ॥ ೨೯॥

ಯಜುಃಶಾಖಾನ್ವಿತೇ ದದ್ಯಾತ್ ಪಶ್ಚಿಮಂ ಘಟಮುತ್ತಮಮ್ ।
ಉತ್ತರಂ ಕಾಮತೋ ದದ್ಯಾದೇಷ ಏವ ವಿಧಿಃ ಸ್ಮೃತಃ ॥ ೩೦॥

ಋಗ್ವೇದಃ ಪ್ರೀಯತಾಂ ಪೂರ್ವೇ ಸಾಮವೇದಸ್ತು ದಕ್ಷಿಣೇ ।
ಯಜುರ್ವೇದಃ ಪಶ್ಚಿಮತೋ ಹ್ಯಥರ್ವಶ್ಚೋತ್ತರೇಣ ತು ॥ ೩೧॥

ಲಭ್ಯವಾಗದಿದ್ದರೆ ಕೊನೆಯ ಪಕ್ಷ ಒಂದುಮುತ್ತಲು ದೊನ್ನೆಯನ್ನಾದರೂ ಇಡಬೇಕು. ॥೨೪॥ ಪಾತ್ರೆಯಲ್ಲಿ ಜಲವನ್ನು ತುಂಬಿ ಅದರ ಮಧ್ಯದಲ್ಲಿ ಸುವರ್ಣದಿಂದ ನಿರ್ಮಿಸಿದ ಮತ್ಸ್ಯರೂಪಿ ಜನಾರ್ದನನ ಪ್ರತಿಮೆಯನ್ನು ಇಡಬೇಕು. ॥೨೫॥ ವೇದವೇದಾಂಗಗಳ ಪಠಣಗಳಿಂದ ವಿಭೂಷಿತನಾದ, ಶ್ರುತಿ ಸ್ಮೃತಿಗಳ ಪಠಣದಿಂದ ಸುಶೋಭಿತನಾದ ದೇವರನ್ನು ವಿವಿಧ ಪುಷ್ಪಗಳಿಂದ ಗಂಧ, ಧೂಪ, ವಸ್ತ್ರಗಳಿಂದ ಯಥಾವಿಧಿ ಅರ್ಚಿಸಿ, ಅನೇಕ ವಿಧವಾದ ಭಕ್ಷ್ಯಗಳನ್ನು ಅರ್ಪಿಸಿ ಪೂಜಿಸಬೇಕು. ಹೇ ದೇವಾ! ದೈತ್ಯರಿಂದ ರಸಾತಲಕ್ಕೆ ಅಪಹರಿಸಲ್ಪಟ್ಟ ವೇದಗಳು ಮತ್ಸ್ಯರೂಪಿಯಾದ ನಿನ್ನಿಂದ ಹೇಗೆ ಉದ್ಧರಿಸಲ್ಪಟ್ಟಿರುವವೋ ॥೨೬॥ ೨೭॥ ಹಾಗೆಯೇ ಹೇ ಈಶ್ವರಾ! ನೀನು ನನ್ನನ್ನು ಈ ಭವಸಾಗರದಿಂದ ಉದ್ಧರಿಸು. ಈ ರೀತಿ ಪ್ರಾರ್ಥಿಸಿ ದೇವರ ಎದುರಿನಲ್ಲಿ ಜಾಗರವನ್ನು ಮಾಡಬೇಕು. ॥ ೨೮॥ ಪೂಜೆಯ ನಂತರ ಆ ನಾಲ್ಕೂ ಜಲ ಕುಂಭಗಳನ್ನು ನಾಲ್ಕು ಬ್ರಾಹ್ಮಣರಿಗೆ ದಾನವಾಗಿ ಕೊಡಬೇಕು. ಪೂರ್ವ ದಿಕ್ಕಿನಲ್ಲಿದ್ದ ಕಲಶವನ್ನು ಋಕ್‌ಶಾಖೆಯ ಬ್ರಾಹ್ಮಣನಿಗೂ, ದಕ್ಷಿಣದ ಕಲಶವನ್ನು ಸಾಮವೇದೀ ಬ್ರಾಹ್ಮಣನಿಗೂ,ಪಶ್ಚಿಮದಲ್ಲಿದ್ದ ಉತ್ತಮ ಕಲಶವನ್ನು ಯಜುರ್ವೇದೀ ಬ್ರಾಹ್ಮಣನಿಗೂ ಹಾಗೂ ಉತ್ತರದ ಕಲಶವನ್ನು ತನ್ನ ಮನಸ್ಸಿಗೆ ಬಂದವನಿಗೆ ಅಥವಾ ಅಥರ್ವವೇದೀ ಬ್ರಾಹ್ಮಣನಿಗೆ ದಾನವಾಗಿ

ಅನೇನ ಕ್ರಮಯೋಗೇನ ಪ್ರೀಯತಾಮಿತಿ ವಾಚಯೇತ್ ।
ಮತ್ಸ್ಯರೂಪಂ ತು ಸೌವರ್ಣಂ ಆಚಾರ್ಯಾಯ ನಿವೇದಯೇತ್॥ ೩೨॥

ಗಂಧಧೂಪಾದಿವಸ್ತ್ರೈಶ್ಚ ಸಂಪೂಜ್ಯ ವಿಧಿವತ್ಕ್ರಮಾತ್ ।
ಯಸ್ತ್ವಿಮಂ ಸರಹಸ್ಯಂ ಚ ಮಂತ್ರೇಣೈವೋಪಪಾದಯೇತ್ ॥ ೩೩॥

ವಿಧಾನಂ ವಿಧಿವತ್ಕೃತ್ವಾ ದಾತಾ ಕೋಟಿಗುಣೋತ್ತರಮ್ ।
ಪ್ರತಿಪದ್ಯ ಗುರುಂ ಯಸ್ತು ಮೋಹಾದ್ವಿಪ್ರತಿಪದ್ಯತೇ ॥ ೩೪॥

ಸ ಜನ್ಮಕೋಟಿನರಕೇ ಪಚ್ಯತೇ ಪುರುಷಾಧಮಃ ।
ವಿಧಾನಸ್ಯ ಪ್ರದಾತಾ ಯೋ ಗುರುರಿತ್ಯುಚ್ಯತೇ ಬುಧೈಃ ॥ ೩೫॥

ಏವಂ ದತ್ತ್ವಾ ವಿಧಾನೇನ ದ್ವಾದಶ್ಯಾಂ ಮಾಂ ಸಮರ್ಚಯೇತ್ ।
ವಿಪ್ರಾಣಾಂ ಭೋಜನಂ ದದ್ಯಾತ್ ಯಥಾಶಕ್ತ್ಯಾ ಚ ದಕ್ಷಿಣಾಮ್ ॥ ೩೬॥

ಭೂರಿಣಾ ಪರಮಾನ್ನೇನ ತತಃ ಪಶ್ಚಾತ್ ಸ್ವಯಂ ನರಃ ।
ಭುಂಜೀತ ಸಹಿತೋ ವಿಪ್ರೈರ್ವಾಗ್ಯತಃ ಸಂಯತೇಂದ್ರಿಯಃ ॥ ೩೭॥

ಕೊಡಬೇಕು. ॥ ೨೯॥ ೩೦ ॥ ಋಗ್ವೇದವು ಪೂರ್ವದಿಕ್ಕಿನಲ್ಲಿ ಸಂತುಷ್ಟವಾಗಲಿ, ದಕ್ಷಿಣದಲ್ಲಿ ಸಾಮವೇದವು ಸಂತುಷ್ಟವಾಗಲಿ, ಪಶ್ಚಿಮದಲ್ಲಿ ಯಜುರ್ವೇದವು ಹಾಗೂ ಉತ್ತರದಲ್ಲಿ ಅಥರ್ವವೇದವು ಸಂತುಷ್ಟವಾಗಲಿ ॥ ೩೧॥ ಈ ರೀತಿಯಾಗಿ ಕ್ರಮದಿಂದ ಋಗಾದಿ ವೇದಗಳು ಪೂರ್ವಾದಿ ದಿಕ್ಕುಗಳಲ್ಲಿ 'ಪ್ರೀಯತಾಂ =ಸಂತುಷ್ಟವಾಗಲಿ' ಎಂದುಉಚ್ಚರಿಸಬೇಕು. ಸುವರ್ಣದ ಮತ್ಸ್ಯರೂಪೀ ಪ್ರತಿಮೆಯನ್ನು ಆಚಾರ್ಯ ಸ್ಥಾನದಲ್ಲಿರುವ ಬ್ರಾಹ್ಮಣನಿಗೆ ದಾನವಾಗಿ ಕೊಡಬೇಕು. ॥ ೩೨॥ ಪ್ರತಿಮೆಯ ದಾನ ಮಾಡುವ ಮೊದಲು ಆಚಾರ್ಯರನ್ನು ಗಂಧಲೇಪನ, ಧೂಪ ವಸ್ತ್ರಾದಿಗಳಿಂದ ವಿಧಿಪೂರ್ವಕ ಪೂಜಿಸಬೇಕು. ರಹಸ್ಯಮಯವಾದ ಈ ಪೂಜಾಕ್ರಮವನ್ನು ಯಾರು ಮಂತ್ರಪಠಣ ಪೂರ್ವಕ ವಿಧಾನದಿಂದ ಆಚರಿಸುವರೋ ॥ ೩೩॥ ಅವರೇ ನಿಜವಾದ ದಾತಾ ಎಂದೆನಿಸಿಕೊಳ್ಳುವರು. ಕೋಟಿ ಗುಣಗಳಿಂದ ಉತ್ತಮರಾದವರನ್ನು ಮೊದಲು ಗುರುಗಳೆಂದು ಗ್ರಹಣ ಮಾಡಿ ನಂತರ ಅಜ್ಞಾನದಿಂದ ಯಾವನು ಧಿಕ್ಕರಿಸುವನೋ ॥೩೪॥ ನರಾಧಮನಾದ ಅವನು ಕೋಟಿ ಜನ್ಮಗಳ ವರೆಗೆ ನರಕದಲ್ಲಿ ಬಿದ್ದು ಕ್ಲೇಶ ಬಡುವನು. ಪೂಜಾ ದಾನಾದಿಗಳ ಯಥಾಕ್ರಮವನ್ನು ತಿಳಿಸಿ ಮಂತ್ರೋಪದೇಶ ಮಾಡುವವನೇ ಗುರುವೆಂದು ಜ್ಞಾನಿಗಳಿಂದ ಕರೆಯಲ್ಪಡುವನು. ॥ ೩೫॥ ಈ ಪ್ರಕಾರ ದ್ವಾದಶಿಯ ದಿನ ಪೂಜೆ ಮಾಡಿ ದಾನಾದಿಗಳನ್ನು ಕೊಟ್ಟು ಬ್ರಾಹ್ಮಣರಿಗೆ ಪರಮಾನ್ನ ಸಹಿತವಾದ ಭೂರಿ ಭೋಜನ ಮಾಡಿಸಿ ಅವರಿಗೆ ಯಥಾಶಕ್ತಿ ದಕ್ಷಿಣೆ ಕೊಡಬೇಕು. ॥ ೩೬॥ ಬ್ರಾಹ್ಮಣರ

ಅನೇನ ವಿಧಿನಾ ಯಸ್ತು ಕುರ್ಯಾನ್ಮತ್ಸ್ಯೋತ್ಸವಂ ನರಃ ।
ತಸ್ಯ ಪುಣ್ಯಫಲಂ ಚಾಗ್ರೇ ಶೃಣು ಸತ್ಯವತಾಂ ವರ ॥ ೩೮॥

ಯದಿ ವರ್ಷಸಹಸ್ರಾಣಾಂ ಸಹಸ್ರಾಣಿ ಭವಂತಿ ಹಿ ।
ಆಯುಶ್ಚ ಬ್ರಹ್ಮಣಾ ತುಲ್ಯಂ ಲಭೇದ್ಯದಿ ಮಹಾವ್ರತ ॥ ೩೯॥

ತದಾ ವೈ ಹ್ಯಸ್ಯ ಧರ್ಮಸ್ಯ ಫಲಂ ಕಥಯಿತುಂ ಭವೇತ್ ।
ಯ ಇಮಂ ಶ್ರಾವಯೇದ್ಭಕ್ತ್ಯಾ ದ್ವಾದಶೀಕಲ್ಪಮುತ್ತಮಮ್ ॥ ೪೦॥

ಶೃಣೋತಿ ವಾ ಸ ಪಾಪೈಸ್ತು ಸರ್ವೈರೇವ ವಿಮುಚ್ಯತೇ ॥ ೪೧॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ತ್ರಯೋದಶೋಽಧ್ಯಾಯಃ ॥ ೧೩॥

ಭೋಜನಾನಂತರ ವ್ರತೀ ಯಜಮಾನನು, ಉಳಿದ ಬ್ರಾಹ್ಮಣರು ಹಾಗೂ ಆಪ್ತೇಷ್ಟರಿಂದ ಕೂಡಿಕೊಂಡು ಇಂದ್ರಿಯ ನಿಗ್ರಹ ಉಳ್ಳವನಾಗಿ ಮೌನದಿಂದ ಭೋಜನ ಮಾಡಬೇಕು. ॥ ೩೭॥ ಎಲೈ ಸತ್ಯವಂತರಲ್ಲಿ ಶ್ರೇಷ್ಠನಾದ ಬ್ರಹ್ಮನೇ ! ಈ ವಿಧಾನದಿಂದ ದ್ವಾದಶೀ ದಿನ ಮತ್ಸ್ಯೋತ್ಸವವನ್ನು ಯಾರು ಆಚರಿಸುವರೋ ಅವರ ಪುಣ್ಯಫಲವನ್ನು ತಿಳಿಸುವೆನು ಕೇಳು. ॥ ೩೮॥ ಹೇ ಮಹಾವ್ರತನೇ ! ಮನುಷ್ಯನ ಆಯುಷ್ಯವು ಸಹಸ್ರ ಸಹಸ್ರ ವರ್ಷಗಳಾದರೆ ಅಥವಾ ಮನುಷ್ಯನ ಆಯುಷ್ಯವು ಒಂದು ವೇಳೆ ಬ್ರಹ್ಮದೇವನಾದ ನಿನ್ನ ಆಯುಷ್ಯಕ್ಕೆ ಸಮಾನವಾದರೆ ಮಾತ್ರ ॥ ೩೯॥ ಮತ್ಸ್ಯೋತ್ಸವವನ್ನು ಆಚರಿಸುವ ಮನುಷ್ಯನ ಪುಣ್ಯಫಲವನ್ನು ಹಾಗೂ ಈ ವ್ರತದ ಮಹಾತ್ಮೆಯನ್ನು ಹೇಳಲು ಸಾಧ್ಯವಾದೀತು ! ವತ್ಸಾ ! ಇದರ ಮಹಿಮೆಯು ವರ್ಣನಾತೀತವಾಗಿದೆ. ಯಾವ ಮನುಷ್ಯನು ಈ ದ್ವಾದಶೀ ವ್ರತದ ಉತ್ತಮವಾದ ಮಹಿಮೆಯನ್ನು ಭಕ್ತಿಯಿಂದ ಹೇಳುವನೋ ಮತ್ತು ॥ ೪೦॥ ಯಾವನು ಭಕ್ತಿಯಿಂದ ಕೇಳುವನೋ ಅವನು ಸರ್ವ ಪಾಪಗಳಿಂದ ಮುಕ್ತನಾಗುವನು. ॥ ೪೧॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಮಾರ್ಗಶೀರ್ಷಮಾಸಮಹಾತ್ಮೆಯಲ್ಲಿ ಶ್ರೀವಿಷ್ಣು-ಬ್ರಹ್ಮರ ಸಂವಾದದಲ್ಲಿ "ದ್ವಾದಶೀ ಮತ್ಸ್ಯೋತ್ಸವ" ಎಂಬ ಹದಿಮೂರನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೧೪
ದಾನ, ನೈವೇದ್ಯ, ಶ್ರೀಕೃಷ್ಣನಾಮಸ್ಮರಣೆ

★

ಶ್ರೀಭಗವಾನುವಾಚ -

ಯೇ ತ್ವಯಾ ವೈ ಕೃತಾ ಪೂರ್ವಂ ಪ್ರಶ್ನಾಃ ಪ್ರಶ್ನವಿದಾಂ ವರ ।
ತಾನ್ವರ್ಣಯಿಷ್ಯೇ ಕ್ರಮಶೋ ನಿಶಾಮಯ ಸುನಿಶ್ಚಿತಮ್ ॥ ೧॥

ಸಹೋಮಾಸೇ ಚ ದೇವೋ ವೈ ಕೀರ್ತಿಯುಕ್ತೋ ಹಿ ಕೇಶವಃ ।
ತಸ್ಯ ಪೂಜಾ ಪ್ರಕರ್ತವ್ಯಾ ಯಥಾ ಪೂರ್ವಪ್ರಭಾಷಿತಮ್ ॥ ೨॥

ಬ್ರಾಹ್ಮಣಂ ಕೇಶವಂ ಸ್ಮೃತ್ವಾ ತತ್ಪತ್ನೀಂ ಕೀರ್ತಿಮೇವ ಚ ।
ದಂಪತೀ ವಿಧಿವತ್ಪೂಜ್ಯೌ ವಸ್ತ್ರಾಭರಣಧೇನುಭಿಃ ॥ ೩॥

ದಂಪತೀ ಪೂಜಿತೌ ವತ್ಸ ಪೂಜಿತೋಽಹಂ ನ ಸಂಶಯಃ ।
ತಸ್ಮಾದವಶ್ಯಂ ಸಂಪೂಜ್ಯೌ ದಂಪತೀ ಮಮ ತುಷ್ಟಿದೌ ॥ ೪॥

ದಾನಂ ಚ ವಿವಿಧಂ ಕಾರ್ಯಂ ಮಮ ತುಷ್ಟಿಕರಂ ಪರಮ್ ।
ಗೋದಾನಂ ಭೂಮಿದಾನಂ ಚ ಅನ್ನದಾನಂ ವಿಶೇಷತಃ ॥ ೫॥

ಶ್ರೀಭಗವಂತನು ಹೇಳುತ್ತಾನೆ - 'ಯೋಗ್ಯವಾದ ಪ್ರಶ್ನೆಗಳನ್ನು ಕೇಳುವಲ್ಲಿ ಜಾಣನಾದ ಹೇ ಬ್ರಹ್ಮಾ ! ಈ ಮೊದಲು ಯಾವ ವಿಷಯಗಳನ್ನು ಕುರಿತು ನೀನು ಪ್ರಶ್ನೆ ಮಾಡಿರುವಿಯೋ ಅವುಗಳಿಗೆ ಕ್ರಮವಾಗಿ ಉತ್ತರಿಸುವೆನು. ಸಾವಧಾನದಿಂದ ಕೇಳುವವನಾಗು. ॥ ೧॥ ಮಾರ್ಗಶೀರ್ಷಮಾಸದಲ್ಲಿ ಶ್ರೀಹರಿ ಕೇಶವನು ಮಾಸಾಧಿಪನೆಂದು ಪ್ರಸಿದ್ಧನಾಗಿರುವನು. ಈ ಹಿಂದೆ ಹೇಳಿದಂತೆ ಅವನ ಪೂಜೆಯನ್ನು ಭಕ್ತಿಯಿಂದ ಮಾಡಬೇಕು. ॥ ೨॥ ಆಮಂತ್ರಿತರಾದ ಬ್ರಾಹ್ಮಣನನ್ನು ಕೇಶವನ ರೂಪವೆಂದೂ ಅವನ ಪತ್ನಿಯನ್ನು ಲಕ್ಷ್ಮೀದೇವಿಯೆಂದೂ ಅನುಸಂಧಾನ ಮಾಡಿಕೊಂಡು ಅವರಿಗೆ ವಸ್ತ್ರಾಭರಣ, ಆಕಳು ಮುಂತಾದವುಗಳನ್ನು ದಾನವಾಗಿ ಕೊಟ್ಟು ಪೂಜಿಸಬೇಕು. ॥ ೩॥ ದಂಪತಿಗಳನ್ನು ಈ ರೀತಿ ಪೂಜಿಸುವುದರಿಂದ ನನ್ನನ್ನೇ ಪೂಜಿಸಿದಂತಾಗುವದು. ಆದ್ದರಿಂದ ನನಗೆ ಸಂತೋಷವನ್ನುಂಟು ಮಾಡುವಂತೆ ದಂಪತಿಗಳನ್ನು ಅವಶ್ಯವಾಗಿ ಪೂಜಿಸಬೇಕು. ॥ ೪॥ ನನಗೆ ತುಷ್ಟಿಕರವಾದ ವಿವಿಧ ದಾನಗಳನ್ನು ಕೊಡಬೇಕು, ಗೋದಾನ, ಭೂದಾನ, ವಿಶೇಷವಾಗಿ ಅನ್ನದಾನ, ॥ ೫॥ ವಸ್ತ್ರದಾನ, ಶಯ್ಯಾದಾನ, ಆಭರಣಗಳ ದಾನ, ಗೃಹದಾನ ಮುಂತಾದ ಯೋಗ್ಯವಾದ ದಾನಗಳನ್ನು ಕೊಡಬೇಕು.

ವಸ್ತ್ರದಾನಂ ತಥಾ ಶಯ್ಯಾ ತಥಾಲಂಕರಣಾನಿ ಚ ।
ಸದ್ಮದಾನಂ ಪ್ರಕರ್ತವ್ಯಂ ಮಮ ಸಂತೋಷಕಾರಕಮ್ ॥ ೬॥

ಸರ್ವೇಷಾಮೇವ ದಾನಾನಾಂ ವಿಶೇಷೇಣ ತ್ರಿಕಂ ಸ್ಮೃತಮ್ ।
ವಸುಂಧರಾ ತಥಾ ಧೇನುರ್ವಿದ್ಯಾದಾನಂ ತಥೈವ ಚ ॥ ೭॥

ದತ್ತೇ ದಾನತ್ರಿಕೇ ವತ್ಸ ಭವೇತ್ ಪ್ರೀತಿರ್ಮಮಾತುಲಾ ।
ತಸ್ಮಾನ್ನರೈಸ್ತು ಕರ್ತವ್ಯಂ ಸಹೋಮಾಸೇ ತ್ರಿಕಂ ಶುಭಮ್ ॥ ೮॥

ಸ್ನಾನಸ್ಯ ಚ ವಿಧಿಃ ಸಮ್ಯಕ್ ಪುರೈವೋಕ್ತೋ ಮಯಾನಘ ।
ಪೂಜಾಸ್ನಾನಂ ಚ ದಾನಂ ಚ ವಿಧಿರೇಷ ನ ಸಂಶಯಃ ॥ ೯॥

ಮಾರ್ಗಶೀರ್ಷಂ ಸಮಗ್ರಂ ತು ಏಕಭಕ್ತೇನ ಯಃ ಕ್ಷಿಪೇತ್ ।
ಭೋಜಯೇದ್ಯೋ ದ್ವಿಜಾನ್ ಭಕ್ತ್ಯಾ ಸ ಮುಚ್ಯೇದ್ವ್ಯಾಧಿಕಿಲ್ಬಿಷೈಃ ॥ ೧೦॥

ಕೃಷಿಭಾಗೀ ಬಹುಧನೋ ಬಹುಧಾನ್ಯಶ್ಚ ಜಾಯತೇ ।
ಕಿಮತ್ರ ಬಹುನೋಕ್ತೇನ ಶೃಣು ಗುಹ್ಯಂ ಪರಂ ಮಮ ॥ ೧೧॥

ಹುತಭುಕ್ ಬ್ರಾಹ್ಮಣಶ್ಚೈವ ವದನಂ ಮಮ ಮಾನದ ।
ಯಥಾ ಮೇ ಬ್ರಾಹ್ಮಣಃ ಶ್ರೇಷ್ಠೋ ನ ತಥಾ ಹವ್ಯವಾಹನಃ ॥ ೧೨॥

ಈ ದಾನಗಳು ನನಗೆ ಸಂತೋಷವನ್ನುಂಟು ಮಾಡುವವು. ॥ ೬॥ ಈ ಎಲ್ಲ ದಾನಗಳಲ್ಲಿ ಮೂರು ಮುಖ್ಯವೆಂದು ತಿಳಿಯಲ್ಪಟ್ಟಿವೆ. ಭೂದಾನ, ಗೋದಾನ ಮತ್ತು ವಿದ್ಯಾದಾನ ಇವೇ ಆ ಮೂರು ದಾನಗಳು. ॥ ೭॥ ಹೇ ವತ್ಸಾ ! ಈ ಮೂರು ದಾನಗಳನ್ನು ಕೊಡುವುದರಿಂದ ನನಗೆ ಅತುಲವಾದ ಪ್ರೀತಿಯು ಉಂಟಾಗುವದು. ಆದ್ದರಿಂದ ಮಾರ್ಗಶೀರ್ಷ ಮಾಸದಲ್ಲಿ ಈ ಮೂರು ದಾನಗಳನ್ನು ಮಾತ್ರ ತಪ್ಪದೇ ಮಾಡಬೇಕು. ॥ ೮॥ ಹೇ ಅನಘಾ ! ಸ್ನಾನವಿಧಿಯನ್ನು ಈ ಮೊದಲೇ ತಿಳಿಸಿರುವೆನಷ್ಟೇ. ಅದರಂತೆ ಪೂಜಾ, ಸ್ನಾನ, ದಾನಗಳ ಕ್ರಮವನ್ನೂ ತಿಳಿಸಿದ್ದೇನೆ. ॥೯॥ ಮಾರ್ಗಶೀರ್ಷಮಾಸವನ್ನು ಯಾವಾತನು ಏಕಭಕ್ತ ವ್ರತದಿಂದ ಕಳೆಯುವನೋ ಮತ್ತು ಬ್ರಾಹ್ಮಣರಿಗೆ ಶ್ರದ್ಧೆಯಿಂದ ಭೋಜನವನ್ನು ಮಾಡಿಸುವನೋ ಅವನು ವ್ಯಾಧಿ ಕಿಲ್ಬಿಷಗಳಿಂದ ಮುಕ್ತನಾಗುತ್ತಾನೆ. ॥ ೧೦॥ ಅವನು ಕೃಷಿಯುಳ್ಳವನೂ, ಬಹು ಧನಸಂಪತ್ತು ಉಳ್ಳವನೂ, ವಿಪುಲವಾದ ಧಾನ್ಯವುಳ್ಳವನೂ ಆಗುವನು. ಈ ಮಾಸದ ವಿಷಯದಲ್ಲಿ ಇದಕ್ಕೂ ಹೆಚ್ಚಿಗೆ ಏನು ವರ್ಣಿಸಲಿ! ಪರಮ ರಹಸ್ಯವಾದ ವಿಷಯವೊಂದನ್ನು ತಿಳಿಸುವೆನು ಕೇಳು. ॥೧೧॥ ಎಲೈ ಬ್ರಹ್ಮನೇ! ಅಗ್ನಿ ಮತ್ತು ಬ್ರಾಹ್ಮಣ ಇವರು ನನ್ನ ಮುಖಗಳು. ಇವುಗಳಲ್ಲಿ ಬ್ರಾಹ್ಮಣನು ನನಗೆ ಹೇಗೆ ಶ್ರೇಷ್ಠನೋ ಹಾಗೆ ಅಗ್ನಿಯು ಶ್ರೇಷ್ಠನಲ್ಲ. ॥೧೨॥ ಎಲೈ ಪುತ್ರನೇ! ಬ್ರಾಹ್ಮಣನ

ಬ್ರಾಹ್ಮಣಾಖ್ಯೇ ಮುಖೇ ಪುತ್ರ ಹುತಂ ಕೋಟಿಗುಣಂ ಭವೇತ್ ।
ಅಗ್ನ್ಯಾಖ್ಯಂ ಬ್ರಾಹ್ಮಣಾಧೀನಂ ಸ್ವತಂತ್ರಾ ಬ್ರಾಹ್ಮಣಾಃ ಕಿಲ ॥ ೧೩॥

ಸಶರ್ಕರಂ ಸರ್ಪಿಯುತಂ ಪಾಯಸಂ ಶಶಿಸನ್ನಿಭಮ್ ।
ಹೋತವ್ಯಂ ಬ್ರಾಹ್ಮಣಮುಖೇ ಮಮ ತುಷ್ಟಿಕರಂ ಸುತ ॥ ೧೪॥

ಶುಭಮಂಡಲಮೋದಕಕೋಕರಸಂ ಸುತ ಫೇಣಿಕಯಾ
ಘೃತಪೂರಯುತಮ್ ।
ಯಜ ವಿಪ್ರಮುಖೇ ಮಮ ತುಷ್ಟಿಕರಂ ಯದಿ ಚೇಚ್ಛಸಿ
ದಾರಸುತಾದಿಸುಖಮ ॥ ೧೫॥

ಕುಮುದೇನ ಸಮಪ್ರಭಸೌರಭದಂ ಶುಭಭಕ್ತಯುತಂ ತ್ವಥ
ಮುದ್ಗಯುತಮ್।
ಸುರಭೀಕೃತಪುಷ್ಕಲಸರ್ಪಿಯುತಂ ಕುರು ವಿಪ್ರಮುಖೇ
ಹವನಂ ಹಿ ಸಹೇ ॥ ೧೬॥

ಪಯಸಾ ಶುಭಸರ್ಪಿಷಿ ಚ ಕ್ವಥಿತಂ ಬಹುಖಾರಿಕಚಾರುಫಲೈಃ ಸಿತಯಾ ।
ಸಹ ಕರ್ಪೂರನಾರಿಫಲೇನ ಸಮಂ ಕುರು ಶೀಕರಕಂ ಸುತ ಶುಭ್ರಕರಮ್ ॥ ೧೭॥

ಮುಖದಲ್ಲಿ ಕೊಟ್ಟ ಆಹುತಿಯು ಅಗ್ನಿಮುಖದಲ್ಲಿ ಕೊಟ್ಟ ಆಹುತಿಗಿಂತ ಕೋಟಿ ಪಟ್ಟು ಹೆಚ್ಚು ಫಲದಾಯಕವಾಗಿರುವದು. ಅಗ್ನಿಯು ಬ್ರಾಹ್ಮಣರ ಆಧೀನವಾದರೆ, ಬ್ರಾಹ್ಮಣರು ಮಾತ್ರ ಸ್ವತಂತ್ರರಾಗಿರುವರು. ॥೧೩॥ ಅಯ್ಯಾ ವತ್ಸಾ! ನನಗೆ ಸಂತೋಷವಾಗುವದಕ್ಕಾಗಿ ಚಂದ್ರನಂತೆ ಶುಭ್ರವಾದ, ತುಪ್ಪದಿಂದ ಕೂಡಿದ ಸಕ್ಕರೆಯ ಪಾಯಸವನ್ನು ಬ್ರಾಹ್ಮಣರ ಮುಖದಲ್ಲಿ ಹವನ ಮಾಡಬೇಕು (ಅಂದರೆ ಬ್ರಾಹ್ಮಣರಿಗೆ ಸಕ್ಕರೆಯ ಪಾಯಸವನ್ನು ಭೋಜನ ಮಾಡಿಸಬೇಕು.) ॥ ೧೪॥ ಹೆಂಡಿರು, ಮಕ್ಕಳು ಮುಂತಾದವರ ಸುಖವನ್ನು ಬಯಸುವಿಯಾದರೆ ಘೃತದಿಂದ ಪೂರಿತವಾದ ಫೇಣಿ, ಲಡ್ಡು, ಮೋದಕಗಳು, ಕೋಕರಸ ಇವುಗಳನ್ನು ಬ್ರಾಹ್ಮಣರ ಮುಖದಲ್ಲಿ ಹೋಮ ಮಾಡಬೇಕು. ಹೀಗೆ ಮಾಡುವುದರಿಂದ ನನಗೆ ಪ್ರೀತಿಯಾಗುವದು. ॥ ೧೫॥ ಮಾರ್ಗಶೀರ್ಷಮಾಸದಲ್ಲಿ, ಕರ್ಪೂರದಂತೆ ಶುಭ್ರವಾದ ಹಾಗೂ ಸುವಾಸನೆಯುಳ್ಳ, ಹೆಸರುಬೇಳೆಯಿಂದ ಯುಕ್ತವಾದ, ಆಕಳ ತುಪ್ಪದಿಂದ ಕೂಡಿದ ಅನ್ನವನ್ನು ಬ್ರಾಹ್ಮಣನ ಮುಖದಲ್ಲಿ ಹವನ ಮಾಡಬೇಕು. ॥೧೬॥ ಹೇ ವತ್ಸಾ! ಹಾಲಿನಿಂದ ಕಲಿಸಿ ತುಪ್ಪದೊಳಗೆ ಕರೆದು ಬೇಯಿಸಿದ, ಉತ್ತತ್ತಿ, ಗೋಡಂಬಿ, ಬಾದಾಮು, ಖೊಬ್ಬರಿ, ಇವುಗಳನ್ನು ಮತ್ತು ಕರ್ಪೂರ ,ಸಕ್ಕರಿ ಇವುಗಳನ್ನು ಹಾಲಿನಲ್ಲಿ ಸೇರಿಸಿ ಪದಾರ್ಥವನ್ನು ತಯಾರಿಸಬೇಕು. ॥೧೭॥ ಅದರಂತೆ ಆಕರ್ಷಕವಾದ, ಶುಭ್ರವಾದ ವ್ಯಂಜನ ಪದಾರ್ಥಗಳನ್ನು ಈ ಮಾರ್ಗಶೀರ್ಷ ಮಾಸದಲ್ಲಿ ಬ್ರಾಹ್ಮಣ ಭೋಜನಕ್ಕಾಗಿ

ವ್ಯಂಜನಾನಿ ಚ ಶುಭ್ರಾಣಿ ಮನೋಜ್ಞಾನಿ ಪ್ರಿಯಾಣಿ ಚ ।
ಕರ್ತವ್ಯಾನಿ ಸಹೋಮಾಸೇ ಬ್ರಾಹ್ಮಣಾರ್ಥೇ ಚತುರ್ಮುಖ ॥ ೧೮॥

ಪ್ರಿಯಾ ಶಿಖರಿಣೀ ಕಾರ್ಯಾ ಚಾನ್ಯತ್ತೇಷಾಂ ಪ್ರಿಯಂ ಚ ಯತ್ ।
ಕೃತ್ವೈವಂ ಭೋಜಯೇದ್ವಿಪ್ರಾನ್ ಶ್ರದ್ಧಯಾ ಪರಯಾ ಸುತ ॥ ೧೯॥

ರಸಾಸ್ವಾದನಪೂರ್ವಂ ಹಿ ಭುಂಜಾನೋ ಹಿ ಯಥಾ ಯಥಾ ।
ತಥಾ ತಥಾ ಮಮ ಪ್ರೀತಿರ್ಜಾಯತೇ ಭುವಿ ದುರ್ಲಭಾ ॥ ೨೦॥

ತಸ್ಮಾತ್ತಾತ ತಥಾ ಕಾರ್ಯಂ ಯಥಾ ತುಷ್ಯಂತಿ ಬ್ರಾಹ್ಮಣಾಃ ।
ತುಷ್ಟೈಸ್ತೈಶ್ಚಾಪ್ಯಹಂ ತುಷ್ಟೋ ಭವಾಮೀಹ ನ ಸಂಶಯಃ ॥ ೨೧॥

ಶ್ರದ್ಧಸ್ವ ತ್ವಂ ಚತುರ್ವಕ್ತ್ರ ನ ತೇ ಮಿಥ್ಯಾ ವದಾಮ್ಯಹಮ್ ।
ಏತದ್ಗುಹ್ಯಂ ಮಯಾ ಪ್ರೋಕ್ತಂ ಶ್ರೇಯೋರ್ಥಂ ತವ ಮಾನದ ॥ ೨೨॥

ಆಕ್ರೋಶಯಂತಿ ಯದಿ ತೇ ಅಥವಾ ಪ್ರಹರಂತಿ ಚೇತ್ ।
ತಥಾಪಿ ತೇ ನಮಸ್ಕಾ ವೈ ಮಮ ಪ್ರೀತ್ಯಾ ಹಿ ಮಾನದ ॥ ೨೩॥

ಏವಂ ಕಾರ್ಯಂ ಸದಾ ಪುತ್ರ ಮಾರ್ಗಶೀರ್ಷೇ ವಿಶೇಷತಃ ।
ಯದುಕ್ತಂ ಭವತಾ ಬ್ರಹ್ಮನ್ ಭೋಕ್ತವ್ಯಂ ಕಿಂ ಶೃಣುಷ್ವ ತತ್ ॥ ೨೪॥

ತಯಾರಿಸಬೇಕು. ॥ ೧೮॥ ಹಣ್ಣುಗಳಿಂದ ರುಚಿಕರವಾದ ಶೀಕರಣೆಯನ್ನು ಮತ್ತು ಬ್ರಾಹ್ಮಣರಿಗೆ ಅಪೇಕ್ಷಿತವಾದ ಇತರ ಪದಾರ್ಥಗಳನ್ನು ತಯಾರಿಸಿ ಯಾವನು ಬ್ರಾಹ್ಮಣರಿಗೆ ಪರಮ ಶ್ರದ್ಧೆಯಿಂದ ಭೋಜನ ಮಾಡಿಸುವನೋ ॥ ೧೯॥ ಅವನಿಗೆ ಆ ಬ್ರಾಹ್ಮಣರು ಭೋಜನ ಪದಾರ್ಥಗಳನ್ನು ಆಸ್ವಾದಿಸುತ್ತ ಊಟ ಮಾಡುತ್ತ ಹೋದಂತೆ ನನಗೆ ಭೂಮಿಯಲ್ಲಿ ದುರ್ಲಭವಾದ ಮಹಾನ್ ಸಂತೋಷವಾಗುತ್ತ ಹೋಗುವದು. ॥೨೦॥ ಆದ್ದರಿಂದ ಹೇ ವತ್ಸಾ! ಬ್ರಾಹ್ಮಣರು ಸಂತೋಷಬಡುವಂತೆ ಎಲ್ಲವನ್ನೂ ಮಾಡಬೇಕು. ಬ್ರಾಹ್ಮಣರು ತುಷ್ಟರಾದರೆ ನಾನು ಪ್ರೀತನಾಗುವೆನೆಂಬಲ್ಲಿ ಯಾವ ಸಂದೇಹವೂ ಇಲ್ಲ. ॥ ೨೧॥ ಹೇ ಚತುರ್ಮುಖ ಬ್ರಹ್ಮಾ ! ನಿನಗೆ ನಾನೇನು ಸುಳ್ಳು ಹೇಳುತ್ತಿರುವದಿಲ್ಲ. ನಾನು ಹೇಳುವದರಲ್ಲಿ ವಿಶ್ವಾಸವಿಡು. ನಿನ್ನ ಕಲ್ಯಾಣಕ್ಕಾಗಿಯೇ ಪರಮ ಗುಹ್ಯವಾದ ಈ ವಿಷಯವನ್ನು ನಿನಗೆ ತಿಳಿಸಿದ್ದೇನೆ. ॥ ೨೨॥ ಹೇ ಬ್ರಹ್ಮನೇ! ನನ್ನ ಮೇಲಿನ ಭಕ್ತಿಯಿಂದ ಯಾರಾದರೂ ಕೂಗಾಡಿದರೆ ಅಥವಾ ಪ್ರಹಾರವನ್ನು ಮಾಡಿದರೆ ಅವು ನನಗೆ ಮಾಡಿದ ನಮಸ್ಕಾರವೆಂದು ತಿಳಿಯುತ್ತೇನೆ. ॥ ೨೩॥ ಪುತ್ರಾ ! ಇದುವರೆಗೆ ಹೇಳಿದಂತೆ ಸದಾ ಮಾಡಬೇಕು. ಅದರಲ್ಲೂ ಮಾರ್ಗಶೀರ್ಷದಲ್ಲಿ ವಿಶೇಷವಾಗಿ ಮಾಡಬೇಕು. ಇನ್ನು ಭೋಜನದ ವಿಷಯದಲ್ಲಿ ನೀನು ಪ್ರಶ್ನೆ ಮಾಡಿದ್ದಿ. ಯಾವ ಪದಾರ್ಥಗಳನ್ನು ಸೇವಿಸಬೇಕೆಂಬುದರ ಬಗ್ಗೆ ತಿಳಿಸುವೆನು ಕೇಳು. ॥ ೨೪॥ ನನ್ನ ಭಕ್ತರಾದವರು ನನಗೆ

ಭೋಕ್ತವ್ಯಂ ಮಮ ಚೋಚ್ಛಿಷ್ಟಂ ಮಮ ಭಕ್ತಿಪರಾಯಣೈಃ ।
ಪವಿತ್ರಕರಣಂ ಪುತ್ರ ಪಾಪಿನಾಮಪಿ ಮುಕ್ತಿದಮ್ ॥ ೨೫॥

ಮಮಾಶನಸ್ಯ ಶೇಷಂ ಚ ಯೋ ಭುನಕ್ತಿ ದಿನೇ ದಿನೇ ।
ಸಿಕ್ಥೇ ಸಿಕ್ಥೇ ಭವೇತ್ಪುಣ್ಯಂ ಚಾಂದ್ರಾಯಣಶತೋದ್ಭವಮ್ ॥ ೨೬॥

ಅವಶಿಷ್ಟಂ ತಥೋಚ್ಛಿಷ್ಟಂ ಭಕ್ತಾನಾಂ ಭೋಜನದ್ವಯಮ್ ।
ನಾನ್ಯದ್ವೈ ಭೋಜನಂ ತೇಷಾಂ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥ ೨೭॥

ಅನರ್ಪಯಿತ್ವಾ ಯೋ ಭುಂಕ್ತೇ ಅನ್ನಪಾನಾದಿಕಂ ಚ ಯತ್ ।
ಶ್ವಾನವಿಷ್ಠಾಸಮಂ ಚಾನ್ನಂ ಪಾನಂ ಚ ಮದಿರಾಸಮಮ್ ॥ ೨೮॥

ತಸ್ಮಾನ್ಮಾಮರ್ಪಯೇತ್ಪುತ್ರ ಅನ್ನಪಾನಾದಿ ಚೌಷಧಮ್ ।
ಭಕ್ಷಯೇತ್ಪರಯಾ ಭಕ್ತ್ಯಾ ನಿಷ್ಪಾಪಶುಚಿಕಾರಕಮ್ ॥ ೨೯॥

ತೀರ್ಥಯಜ್ಞಾದಿಕಫಲಂ ಕಲಿದೋಷವಿನಾಶನಮ್ ।
ಮಮೋಚ್ಛಿಷ್ಟಂ ಸುಗತಿದಮಪಿ ದುಷ್ಕೃತಕಾರಿಣಾಮ್ ॥ ೩೦॥

ನಿವೇದಿತವಾದ ಪದಾರ್ಥಗಳನ್ನಷ್ಟೇ ಸೇವಿಸಬೇಕು. ನನಗೆ ಅರ್ಪಿತವಾಗಿ ಉಳಿದ ಪದಾರ್ಥಗಳು ಪಾಪಿಗಳನ್ನೂ ಕೂಡ ಪವಿತ್ರಗೊಳಿಸಿ ಅವರಿಗೆ ಮುಕ್ತಿಯನ್ನು ಕೊಡಲು ಸಮರ್ಥವಾಗಿರುವವು. ॥ ೨೫॥ ಯಾವಾತನು ನನ್ನ ನೈವೇದ್ಯದ ಶೇಷ ಪದಾರ್ಥಗಳನ್ನು ಪ್ರತಿ ದಿವಸದಲ್ಲೂ ಸೇವಿಸುವನೋ, ಪದಾರ್ಥದ ಒಂದೊಂದು ಅಗಳನ್ನು ಸೇವಿಸಿದಂತೆ ಅವನಿಗೆ ನೂರು ಚಾಂದ್ರಾಯಣ ವ್ರತಾನುಷ್ಠಾನದ ಫಲವು ಪ್ರಾಪ್ತವಾಗುವದು. ॥ ೨೬॥ ನನ್ನ ಉಚ್ಛಿಷ್ಟವನ್ನು ಮತ್ತು ನನಗೆ ನಿವೇದಿತವಾದ ಶೇಷಾನ್ನ ಇವೆರಡನ್ನು ಮಾತ್ರ ನನ್ನ ಭಕ್ತರಾದವರು ಸೇವಿಸಬೇಕು. ಅವರು ಪ್ರಮಾದದಿಂದ ಬೇರೆ ಅನ್ನವನ್ನು ಸೇವಿಸಿದರೆ ಪ್ರಾಯಶ್ಚಿತ್ತಕ್ಕಾಗಿ ಚಾಂದ್ರಾಯಣ ವ್ರತವನ್ನಾಚರಿಸಬೇಕಾಗುತ್ತದೆ. ॥ ೨೭॥ ನನಗೆ ಅರ್ಪಿಸದೇ ಯಾವನು ಅನ್ನ ಪಾನೀಯಗಳನ್ನು ಸೇವಿಸುವನೋ, ಅವನು ಉಂಡ ಅನ್ನವು ಮಲಕ್ಕೆ ಸಮಾನವೆಂದೂ, ಕುಡಿದ ಪಾನೀಯಗಳು ಮದ್ಯಗಳಿಗೆ ಸಮವೆಂದೂ ತಿಳಿಯಲ್ಪಟ್ಟವೆ. ॥ ೨೮॥ ಆದ್ದರಿಂದ ಹೇ ಪುತ್ರಾ! ಅನ್ನಪಾನ, ಔಷಧ (ಕಾಯಿಪಲ್ಯೆ ಇತ್ಯಾದಿ) ಮೊದಲಾದವುಗಳನ್ನು ಮೊದಲು ನನಗೆ ಪರಮ ಭಕ್ತಿಯಿಂದ ಸಮರ್ಪಿಸಿ ನಂತರ ಪಾಪ ನಿವಾರಕವಾದ ಮತ್ತು ಪವಿತ್ರಕಾರಕವಾದ ಆ ಪದಾರ್ಥಗಳನ್ನು ಪ್ರೀತಿ ವಿಶ್ವಾಸಪೂರ್ವಕ ಸೇವಿಸಬೇಕು. ॥ ೨೯॥ ತೀರ್ಥಸ್ನಾನ, ಯಜ್ಞಾನುಷ್ಠಾನಗಳಿಗಿಂತಲೂ ಅಧಿಕ ಫಲದಾಯಕವಾದ, ಕಲಿದೋಷವಿನಾಶಕವಾದ ನನ್ನ ಉಚ್ಛಿಷ್ಟವು ದುಷ್ಕರ್ಮಿಗಳಿಗೂ ಕೂಡ ಸದ್ಗತಿಪ್ರದವಾದುದೆಂದು ಜ್ಞಾನಿಗಳಿಂದ ಹೇಳಲ್ಪಟ್ಟಿದೆ. ॥೩೦॥ ನನ್ನ ಹೊರತಾಗಿರುವ ಇತರ ದೇವತೆಗಳಿಗೆ ಅರ್ಪಿತವಾದ ಅನ್ನ ಮತ್ತು ನನ್ನ ಭಕ್ತ

ಅನ್ಯೇಷಾಂ ದೇವತಾನಾಂ ಚ ನ ಗೃಹ್ಣೀಯಾಚ್ಚ ಭಕ್ಷಿತವ್ ।
ಅಭಕ್ತಾನಾಂ ಚ ಪಕ್ವಾನ್ನಂ ಭುಕ್ತ್ವಾ ಚ ನರಕಂ ವ್ರಜೇತ್ ॥ ೩೧॥

ವಕ್ತವ್ಯಮೇವ ಯತ್ಪ್ರೋಕ್ತಂ ತತ್ಶೃಣುಷ್ವ ಸಮಾಹಿತಃ ।
ಕಥಯಿಷ್ಯೇ ತವ ಪ್ರೀತ್ಯಾ ಅಪಿ ಗುಹ್ಯತಮಂ ಪರಮ್ ॥ ೩೨॥

ಮಮ ನಾಮ ಪ್ರವಕ್ತವ್ಯಂ ಸಹೇ ಚೈವ ವಿಶೇಷತಃ ।
ಕೃಷ್ಣ ಕೃಷ್ಣೇತಿ ವಕ್ತವ್ಯಂ ಮಮ ಪ್ರೀತಿಕರಂ ಪರಮ್ ॥ ೩೩॥

ಪ್ರತಿಜ್ಞೈಷಾ ಚ ಮೇ ಪುತ್ರ ನ ಜಾನಂತಿ ಸುರಾಸುರಾಃ ।
ಮನಸಾ ಕರ್ಮಣಾ ವಾಚಾ ಯೋ ಮೇ ಶರಣಮಾಗತಃ ॥ ೩೪॥

ಸ ವೈ ಸರ್ವಾಮವಾಪ್ನೋತಿ ಕಾಮನಾಮಿಹ ಲೌಕಿಕೀಮ್ ।
ಸರ್ವೋತ್ಕೃಷ್ಟಂ ಚ ವೈಕುಂಠಂ ಮತ್ಪ್ರಿಯಾಂ ಕಮಲಾಮಪಿ ॥ ೩೫॥

ಕೃಷ್ಣ ಕೃಷ್ಣೇತಿ ಕೃಷ್ಣೇತಿ ಯೋ ಮಾಂ ಸ್ಮರತಿ ನಿತ್ಯಶಃ ।
ಜಲಂ ಭಿತ್ವಾ ಯಥಾ ಪದ್ಮಂ ನರಕಾದುದ್ಧರಾಮ್ಯಹಮ್ ॥ ೩೬॥

ರಲ್ಲದವರು ಕೊಟ್ಟ ಪಕ್ವಾನ್ನಗಳನ್ನು ಕೂಡ ಸರ್ವಥಾ ಸೇವಿಸಕೂಡದು. ಒಂದು ವೇಳೆ ಯಾವನಾದರೂ ಸೇವಿಸಿದರೆ ಅವನು ನರಕವನ್ನು ಹೊಂದಬೇಕಾಗುತ್ತದೆ. ॥೩೧॥ ಹೇ ಪುತ್ರಾ ! ನಿನಗೆ ಹೇಳಬೇಕಾದುದನ್ನು ಹೇಳಿದ್ದೇನೆ. ನಿನ್ನಲ್ಲಿರುವ ವಾತ್ಸಲ್ಯದಿಂದ ಗುಹ್ಯತಮವಾದ ಇನ್ನೂ ಕೆಲ ವಿಷಯವನ್ನು ತಿಳಿಸುವೆನು ಸಾವಧಾನದಿಂದ ಕೇಳು. ॥೩೨॥ ನನ್ನ ನಾಮಸ್ಮರಣೆಯನ್ನು ಸದಾಕಾಲ ಮಾಡಬೇಕು. ಅದರಲ್ಲೂ ವಿಶೇಷವಾಗಿ ಈ ಮಾರ್ಗಶೀರ್ಷ ಮಾಸದಲ್ಲಿ ನನ್ನ ಪ್ರೀತಿ ಸಂಪಾದನೆಗಾಗಿ ಪ್ರತಿಯೊಬ್ಬ ಭಕ್ತನೂ 'ಕೃಷ್ಣ, ಕೃಷ್ಣ 'ಎಂದು ಜಪಿಸಬೇಕು. ॥ ೩೩॥ ಹೇ ಪುತ್ರಾ ! ಗುಹ್ಯವಾದ ಈ ನನ್ನ ಪ್ರತಿಜ್ಞಾ ವಿಷಯವನ್ನು ಸುರಾಸುರಾದಿಗಳು ಯಾರೂ ತಿಳಿಯಲಾರರು. ಕಾಯಾ ವಾಚಾ ಮನಸಾ ಯಾವನು ನನಗೆ ಶರಣು ಬರುವನೋ ॥೩೪॥ ಅವನು ಈ ಲೋಕದಲ್ಲಿಯ ಸಕಲ ಶುಭ ಕಾಮನೆಗಳನ್ನು ಹೊಂದುವನು ಮತ್ತು ಮರಣಾನಂತರ ಸರ್ವೋತ್ಕೃಷ್ಟವಾದ ವೈಕುಂಠ ಲೋಕವನ್ನು ಸೇರುವನು. ನನ್ನ ಪ್ರಿಯೆಯಾದ ಕಮಲಾ (ಲಕ್ಷ್ಮೀ) ದೇವಿಯನ್ನೂ ॥ ೩೫॥ ಹಾಗೂ ಕೃಷ್ಣ ಕೃಷ್ಣ ಕೃಷ್ಣ ಎಂದು ನನ್ನನ್ನೂ ಯಾವನು ನಿತ್ಯದಲ್ಲೂ ಸ್ಮರಿಸುವನೋ ಕೆಸರಿನಿಂದ ಕಮಲವನ್ನು ಮೇಲೆತ್ತುವಂತೆ ಅವನನ್ನು ನರಕ ಪತನದಿಂದ ರಕ್ಷಿಸಿ ಉದ್ಧರಿಸುವೆನು. ॥ ೩೬॥ ಹೇ ವತ್ಸಾ ! ವಿನೋದದಿಂದಾಗಲೀ, ದಂಭದಿಂದಾಗಲೀ, ಗರ್ವದಿಂದಾಗಲೀ, ಲೋಭದಿಂದಾಗಲೀ ಅಥವಾ ಛಲದಿಂದಾಗಲೀ ಯಾವನು ನಾಮಸ್ಮರಣೆ ಪೂರ್ವಕ ನನ್ನನ್ನು ಭಜಿಸುವನೋ ಅವನೇ ನನ್ನ ಭಕ್ತನು. ಅವನೆಂದಿಗೂ

ವಿನೋದೇನಾಪಿ ದಂಭೇನ ಗರ್ವಾಲ್ಲೋಭಾಚ್ಛಲಾದಪಿ ।
ಯೋ ಮಾಂ ಭಜತಿ ಸೋ ವತ್ಸ ಮದ್ಭಕ್ತೋ ನಾವಸೀದತಿ ॥ ೩೭॥

ಯೇ ವೈ ವದಂತಿ ಕೃಷ್ಣೇತಿ ಮರಣೇ ಪರ್ಯುಪಸ್ಥಿತೇ ।
ಯದಿ ಪಾಪಯುತಾಃ ಪುತ್ರ ನ ಪಶ್ಯಂತಿ ಯಮಂ ಕ್ವಚಿತ್ ॥ ೩೮॥

ಪೂರ್ವೇ ವಯಸಿ ಪಾಪಾನಿ ಕೃತಾನ್ಯಪಿ ಚ ಕೃತ್ಸ್ನಶಃ ।
ಅಂತಕಾಲೇ ಚ ಕೃಷ್ಣೇತಿ ಸ್ಮೃತ್ವಾ ಮಾಮೇತ್ಯಸಂಶಯಮ್ ॥ ೩೯॥

ನಮಃ ಕೃಷ್ಣಾಯ ಮಹತೇ ವಿವಶೋऽಪಿ ವದೇದ್ಯದಿ ।
ಧ್ರೌವಂ ಪದಮವಾಪ್ನೋತಿ ಮರಣೇ ಪರ್ಯುಪಸ್ಥಿತೇ ॥ ೪೦॥

ಶ್ರೀಕೃಷ್ಣೇತಿ ಕೃತೋಚ್ಚಾರಃ ಪ್ರಾಣೈರ್ಯದಿ ವಿಯುಜ್ಯತೇ ।
ದೂರಸ್ಥಃ ಪಶ್ಯತಿ ಚ ತಂ ಸ್ವರ್ಗತಿಂ ಪ್ರೇತನಾಯಕಃ ॥ ೪೧॥

ಸ್ಮಶಾನೇ ಯದಿ ರಥ್ಯಾಯಾಂ ಕೃಷ್ಣಕೃಷ್ಣೇತಿ ಜಲ್ಪತಿ ।
ಮ್ರಿಯತೇ ಯದಿ ಚೇತ್ಪುತ್ರ ಮಾಮೇವೈತಿ ನ ಸಂಶಯಃ ॥ ೪೨॥

ದರ್ಶನಾನ್ಮಮ ಭಕ್ತಾನಾಂ ಮೃತ್ಯುಮಾಪ್ನೋತಿ ಯಃ ಕ್ವಚಿತ್ ।
ವಿನಾ ಮತ್ಸ್ಮರಣಾತ್ಪುತ್ರ ಮುಕ್ತಿಮೇತಿ ಸ ಮಾನವಃ ॥ ೪೩॥

ಅಧಃಪತನವನ್ನು ಹೊಂದಲಾರನು. ॥೩೭॥ ಮರಣಕಾಲದಲ್ಲಿ ಕೃಷ್ಣ ಕೃಷ್ಣ ಎಂದು ಯಾರು ಪಠಿಸುವರೋ ಅವರು ಪಾಪಕರ್ಮಗಳನ್ನು ಮಾಡಿದ್ದರೂ ಕೂಡ ಮರಣಾನಂತರ ಕಿಂಚಿತ್ತು ಕೂಡ ಯಮನನ್ನು ಕಾಣಲಾರರು. ॥ ೩೮॥ ಪೂರ್ವವಯಸ್ಸಿನಲ್ಲಿ ಅನೇಕ ವಿಧವಾದ ಪಾಪಕರ್ಮಗಳನ್ನು ಮಾಡಿದ್ದರೂ ಕೂಡ ಅಂತ್ಯಕಾಲದಲ್ಲಿ ಕೃಷ್ಣ ಎಂದಾಕ್ಷಣ ಅವನು ಎಲ್ಲ ಪಾಪಗಳಿಂದ ಮುಕ್ತನಾಗಿ ನನ್ನ ಸನ್ನಿಧಿಗೆ ನಿಶ್ಚಿತವಾಗಿ ಬರುವನು. ॥ ೩೯॥ ಮರಣ ಕಾಲದಲ್ಲಿ ಇಂದ್ರಿಯಗಳು ತನ್ನ ವಶದಲ್ಲಿ ಇಲ್ಲದಿರುವಾಗಲೂ ಯಾವನು "ಮಹಾತ್ಮನಾದ ಶ್ರೀಕೃಷ್ಣಾ, ನಿನಗೆ ನಮಸ್ಕಾರ" ಎಂದು ಮಾತ್ರ ಹೇಳುವನೋ ಅವನು ಮರಣಾನಂತರ ಶಾಶ್ವತವಾದ ವೈಕುಂಠ ಲೋಕವನ್ನು ಹೊಂದುವನು ॥ ೪೦॥ ಪ್ರಾಣಗಳಿಂದ ವಿಯೋಗವಾಗುತ್ತಿರಲು ಯಾವನು 'ಶ್ರೀಕೃಷ್ಣಾ' ಎಂದು ಉಚ್ಚರಿಸುವನೋ ಅವನು ಸ್ವರ್ಗಲೋಕವನ್ನು ಕುರಿತು ಪ್ರಯಾಣಿಸುವನು ಮತ್ತು ಇವನು ಸ್ವರ್ಗಲೋಕಕ್ಕೆ ಹೋಗುತ್ತಿರುವದನ್ನು ಯಮರಾಯನು ದೂರದಲ್ಲಿ ನಿಂತುಕೊಂಡೇ ನೋಡುವನು. ॥ ೪೧॥ ಎಲೈ ಪುತ್ರನೇ ! ಮಾರ್ಗದಲ್ಲಾಗಲೀ, ಸ್ಮಶಾನದಲ್ಲಾಗಲೀ ಇರುವಾಗ ಯಾವನು ಕೃಷ್ಣ ಕೃಷ್ಣ ಎಂದು ಬಡಬಡಿಸುತ್ತ ಮೃತನಾಗುವನೋ ಅವನು ನಿಶ್ಚಿತವಾಗಿಯೂ ನನ್ನ ಸಮೀಪಕ್ಕೆ ಬರುವನು. ॥ ೪೨॥ ಅಷ್ಟೇಕೆ, ನನ್ನ ಭಕ್ತರ ದರ್ಶನ ಮಾಡಿಕೊಂಡು ಯಾವನಾದರೂ ಮೃತನಾದರೆ ಅವನು ಮರಣ ಸಮಯದಲ್ಲಿ ನನ್ನ

ಪಾಪಾನಲಸ್ಯ ದೀಪ್ತಸ್ಯ ಭಯಂ ಮಾ ಕುರು ಪುತ್ರಕ ।
ಶ್ರೀಕೃಷ್ಣನಾಮಮೇಘೋತ್ಥೈಃ ಸಿಂಚ್ಯತೇ ನೀರಬಿಂದುಭಿಃ ॥ ೪೪॥

ಕಲಿಕಾಲಮೃಗೇಂದ್ರ (ಭುಜಂಗ)ಸ್ಯ ತೀಕ್ಷ್ಣದಂಷ್ಟ್ರಸ್ಯ ಕಿಂ ಭಯಮ್ ।
ಶ್ರೀಕೃಷ್ಣನಾಮದಾರೂತ್ಥವಹ್ನಿದಗ್ಧಃ ಸ ನಶ್ಯತಿ ॥ ೪೫॥

ಪಾಪಪಾವಕದಗ್ಧಾನಾಂ ಕರ್ಮಚೇಷ್ಟಾವಿಯೋಗಿನಾಮ್ ।
ಭೇಷಜಂ ನಾಸ್ತಿ ಮರ್ತ್ಯಾನಾಂ ಶ್ರೀಕೃಷ್ಣಸ್ಮರಣಂ ವಿನಾ ॥ ೪೬॥

ಪ್ರಯಾಗೇ ವೈ ಯಥಾ ಗಂಗಾ ಶುಕ್ಲತೀರ್ಥೇ ಚ ನರ್ಮದಾ ।
ಸರಸ್ವತೀ ಕುರುಕ್ಷೇತ್ರೇ ತದ್ವತ್ ಶ್ರೀಕೃಷ್ಣಕೀರ್ತನಮ್ ॥ ೪೭॥

ಭವಾಂಭೋಧಿನಿಮಗ್ನಾನಾಂ ಮಹಾಪಾಪೋರ್ಮಿಪಾತಿನಾಮ್ ।
ನ ತರಿ(ಗತಿ)ರ್ಮಾನವಾನಾಂ ಚ ಶ್ರೀಕೃಷ್ಣಸ್ಮರಣಂ ವಿನಾ ॥ ೪೮॥

ಮೃತ್ಯುಕಾಲೇಽಪಿ ಮರ್ತ್ಯಾನಾಂ ಪಾಪಿನಾಂ ತದನಿಚ್ಛತಾಮ್ ।
ಗಚ್ಛತಾಂ ನಾಸ್ತಿ ಪಾಥೇಯಂ ಶ್ರೀಕೃಷ್ಣಸ್ಮರಣಂ ವಿನಾ ॥ ೪೯॥

ತತ್ರ ಪುತ್ರ ಗಯಾ ಕಾಶೀ ಪುಷ್ಕರಂ ಕುರುಜಾಂಗಲಮ್ ।
ಪ್ರತ್ಯಹಂ ಮಂದಿರೇ ಯಸ್ಯ ಕೃಷ್ಣ ಕೃಷ್ಣೇತಿ ಕೀರ್ತನಮ್ ॥ ೫೦॥

ನಾಮಸ್ಮರಣೆ ಮಾಡಿರದಿದ್ದರೂ ಕೂಡ ಮುಕ್ತಿಯನ್ನು ಹೊಂದುವನು. ॥ ೪೩॥ ಹೇ ಬ್ರಹ್ಮಾ! ಪ್ರಜ್ವಲಿತವಾದ ಅಗ್ನಿಯಂತಿರುವ ಪಾಪಗಳ ಬಗ್ಗೆ ನೀನು ಭಯ ಪಡದಿರು. ಶ್ರೀಕೃಷ್ಣ ನಾಮಸ್ಮರಣ ರೂಪ ಮೇಘಗಳಿಂದ ಉತ್ಪನ್ನವಾದ ನೀರಿನ ಹನಿಗಳಿಂದ ಆ ಪಾಪಾಗ್ನಿಯು ಸಿಂಚಿತವಾಗಿ ಆರಿಹೋಗುವದು. ॥ ೪೪॥ ಕಲಿಕಾಲವೆಂಬ ಮೃಗೇಂದ್ರ(ಸರ್ಪ)ದಿಂದ ಭಯವೇಕೆ? ಶ್ರೀಕೃಷ್ಣ ನಾಮಸ್ಮರಣೆ ಎಂಬ ದಾರುವಿನಿಂದ ಉತ್ಪನ್ನವಾದ ಅಗ್ನಿಯಿಂದ ಸುಟ್ಟು ಆ ಮೃಗೇಂದ್ರ(ಸರ್ಪ)ವು ನಾಶವಾಗಿ ಹೋಗುವದು. ॥ ೪೫॥ ಪಾಪಗಳೆಂಬ ಅಗ್ನಿಯಿಂದ ದಗ್ಧರಾದ, ಸ್ವಕರ್ಮಾನುಷ್ಠಾನಗಳಿಂದ ವಿಮುಖರಾದ ಮನುಷ್ಯರಿಗೆ ಉದ್ಧೃತರಾಗಲು ಶ್ರೀಕೃಷ್ಣ ನಾಮಸ್ಮರಣೆ ಎಂಬ ಔಷಧ ಒಂದನ್ನು ಬಿಟ್ಟು ಬೇರಾವ ಉಪಾಯವೂ ಇರುವದಿಲ್ಲ. ॥ ೪೬॥ ಪ್ರಯಾಗದಲ್ಲಿ ಗಂಗಾನದಿಯಂತೆಯೂ, ಶುಕ್ಲತೀರ್ಥದಲ್ಲಿ ನರ್ಮದೆಯಂತೆಯೂ, ಕುರುಕ್ಷೇತ್ರದಲ್ಲಿ ಸರಸ್ವತೀ ನದಿಯಂತೆಯೂ ಶ್ರೀಕೃಷ್ಣನಾಮ ಕೀರ್ತನೆಯು ಭಕ್ತರನ್ನು ಪವಿತ್ರಗೊಳಿಸುವದು. ॥ ೪೭॥ ಭವಸಾಗರದಲ್ಲಿ ಮುಳುಗಿರುವ ಹಾಗೂ ಮಹಾಪಾಪಗಳೆಂಬ ತೆರೆಯಲ್ಲಿ ಸಿಕ್ಕಿರುವ ಜನರಿಗೆ ಪಾರಾಗಲು ಶ್ರೀಕೃಷ್ಣ ನಾಮಸ್ಮರಣೆಯಿಂದ ಹೊರತಾದ ಬೇರಾವ ಉಪಾಯವೂ ಇರುವದಿಲ್ಲ. ॥೪೮॥ ಮರಣೋನ್ಮುಖರಾದ ಪಾಪಿಗಳಿಗೂ ಕೂಡ ಉದ್ಧಾರವಾಗಲು ಶ್ರೀಕೃಷ್ಣನ ನಾಮಸ್ಮರಣೆ ಬಿಟ್ಟು ಬೇರಾವ ಉಪಾಯವಿಲ್ಲ. ॥ ೪೯॥ ಮಗನೇ! ಯಾವಾತನ ಮನೆಯಲ್ಲಿ ನಿತ್ಯವೂ ಕೃಷ್ಣ ಕೃಷ್ಣ ಎಂದು ಪಠಣವಿರುವದೋ ಅಲ್ಲಿ ಗಯಾ, ಕಾಶೀ, ಪುಷ್ಕರ, ಕುರು, ಜಾಂಗಲ

ಜೀವಿತಂ ಜನ್ಮಸಾಫಲ್ಯಂ ಮುಖಂ ತಸ್ಯೈವ ಸಾರ್ಥಕಮ್ ।
ಸತತಂ ರಸನಾ ಯಸ್ಯ ಕೃಷ್ಣಕೃಷ್ಣೇತಿ ಜಲ್ಪತಿ ॥ ೫೧॥

ಸಕೃದುಚ್ಚರಿತಂ ಯೇನ ಹರಿರಿತ್ಯಕ್ಷರದ್ವಯಮ್ ।
ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥ ೫೨॥

ನಾಮ್ನೋಽಸ್ಯ ಯಾವತೀ ಶಕ್ತಿಃ ಪಾಪನಿರ್ದಹನೇ ಹರೇಃ ।
ತಾವತ್ಕರ್ತುಂ ನ ಶಕ್ನೋತಿ ಪಾತಕಂ ಪಾತಕೀಜನಃ ॥ ೫೩॥

ನಾಪವಿದ್ಧಂ ಭವೇತ್ತಸ್ಯ ಶಾರೀರಂ ನೈವ ಮಾನಸಮ್ ।
ನ ಪಾಪಂ ನ ಚ ವೈಕ್ಲವ್ಯಂ ಕೃಷ್ಣಕೃಷ್ಣೇತಿ ಕೀರ್ತನಾತ್ ॥ ೫೪॥

ಶ್ರೀಕೃಷ್ಣೇತಿ ವಚಃ ಪಥ್ಯಂ ನ ತ್ಯಜೇದ್ಯಃ ಕಲೌ ನರಃ ।
ಪಾಪಾಮಯೋ ವೈ ನ ಭವೇತ್ಕಲೌ ತಸ್ಯೈವ ಮಾನಸೇ ॥ ೫೫॥

ಶ್ರೀಕೃಷ್ಣೇತಿ ಪ್ರಜಲ್ಪಂತಂ ದಕ್ಷಿಣಾಶಾಪತಿರ್ನರಮ್ ।
ಶ್ರುತ್ವಾ ಮಾರ್ಜಯತೇ ಪಾಪಂ ತಸ್ಯ ಜನ್ಮಶತಾರ್ಜಿತಮ್ ॥ ೫೬॥

ಚಾಂದ್ರಾಯಣಶತೈಃ ಪಾಪಂ ಪರಾಕಾಣಾಂ ಸಹಸ್ರಕೈಃ ।
ಯನ್ನಾಪಯಾತಿ ತದ್ಯಾತಿ ಕೃಷ್ಣಕೃಷ್ಣೇತಿ ಕೀರ್ತನಾತ್ ॥ ೫೭॥

ಮೊದಲಾದ ಕ್ಷೇತ್ರಗಳ ಸನ್ನಿಧಾನವಿರುವದು ॥೫೦॥ ಯಾವಾತನ ನಾಲಿಗೆಯು ಸದಾಕಾಲ ಕೃಷ್ಣ ಕೃಷ್ಣ ಎಂದು ಪಠಿಸುವದೋ ಅಂಥವನ ಜೀವಿತವೇ ಸಾರ್ಥಕ, ಅವನ ಮುಖವೇ ಸಾರ್ಥಕ ॥ ೫೧॥ 'ಹರಿ' ಎಂಬ ಎರಡು ಅಕ್ಷರಗಳು ಯಾವಾತನಿಂದ ಒಮ್ಮೆ ಉಚ್ಚರಿಸಲ್ಪಡುವವೋ ಅವನು ನಿಶ್ಚಿತವಾಗಿ ಮೋಕ್ಷಕ್ಕೆ ಪ್ರಯಾಣಿಸುವನು.॥ ೫೨॥ ಪಾಪಗಳನ್ನು ಸುಡುವಲ್ಲಿ ಶ್ರೀ ಹರಿಯ ನಾಮೋಚ್ಚಾರಣೆಯ ಶಕ್ತಿಯು ಎಷ್ಟಿದೆಯೆಂದರೆ ಆ ಶಕ್ತಿಯು ಎಷ್ಟು ಪಾಪಗಳನ್ನು ಕಳೆಯಲು ಸಮರ್ಥವಾಗಿದೆಯೋ ಅಷ್ಟು ಪಾಪಗಳನ್ನು ಮಾಡಲು ಕೂಡ ಪಾತಕೀ ಜನರಿಗೆ ಸಾಧ್ಯವಾಗುವದಿಲ್ಲ. ॥ ೫೩॥ ಕೃಷ್ಣ ಕೃಷ್ಣ ಎಂಬ ನಾಮ ಸಂಕೀರ್ತನೆಯ ಪ್ರಭಾವದಿಂದ ಆ ಮನುಷ್ಯನಿಗೆ ಯಾವ ತರಹದ ಶಾರೀರಿಕ ಹಾಗೂ ಮಾನಸಿಕ ಆಪತ್ತುಗಳು ಬರಲಾರವು. ಅವನಿಗೆ ಯಾವ ಬಗೆಯ ಪಾಪವೈಕ್ಲವ್ಯಗಳೂ ಲೇಪಿಸಲಾರವು. ॥೫೪॥ ಕಲಿಯುಗದಲ್ಲಿ 'ಶ್ರೀಕೃಷ್ಣ' ಎಂಬ ಹಿತವಾದ ನಾಮಸ್ಮರಣೆಯನ್ನು ಯಾವನು ಬಿಡುವದಿಲ್ಲವೋ ಅಂಥವನ ಮನಸ್ಸಿನಲ್ಲಿಯೂ ಕೂಡ ಪಾಪಗಳೆಂಬ ರೋಗದ ಅಂಟು ಕಾಣಲಾರದು. ॥ ೫೫॥ ಯಾವನಾದರೂ ಶ್ರೀಕೃಷ್ಣ ಎಂದು ಸದಾ ಬಡಬಡಿಸುತ್ತಿದ್ದರೆ ಅದನ್ನು ಕೇಳಿ ಯಮಧರ್ಮನು, ಅವನು ನೂರು ಜನ್ಮಗಳಲ್ಲಿ ಮಾಡಿದ ಪಾಪಗಳನ್ನೆಲ್ಲ ತೊಳೆದು ಕಳೆಯುವನು. ॥ ೫೬॥ ಒಂದು ನೂರು ಚಾಂದ್ರಾಯಣ ವ್ರತಗಳಿಂದಲೂ, ಒಂದು ಸಹಸ್ರ ಪರಾಕಕೃಚ್ಛ್ರಗಳಿಂದಲೂ ಯಾವ

ನಾನ್ಯಾಭಿರ್ನಾಮಕೋಟೀಭಿಸ್ತೋಷೋ ಮಮ ಭವೇತ್ ಕ್ವಚಿತ್ ।
ಶ್ರೀಕೃಷ್ಣೇತಿ ಕೃತೋಚ್ಚಾರೇ ಪ್ರೀತಿರೇವಾಧಿಕಾಧಿಕಾ ॥ ೫೮॥

ಚಂದ್ರಸೂರ್ಯೋಪರಾಗೈಸ್ತು ಕೋಟಿಭಿರ್ಯತ್ಫಲಂ ಸ್ಮೃತಮ್ ।
ತತ್ಫಲಂ ಸಮವಾಪ್ನೋತಿ ಕೃಷ್ಣಕೃಷ್ಣೇತಿ ಕೀರ್ತನಾತ್ ॥ ೫೯॥

ಗುರುದಾರಾಭಿಗಮನಂ ಹೇಮಸ್ತೇಯಾದಿಪಾತಕಮ್ ।
ಶ್ರೀಕೃಷ್ಣಕೀರ್ತನಾದ್ಯಾತಿ ಘರ್ಮತಪ್ತಂ ಹಿಮಂ ಯಥಾ ॥ ೬೦॥

ಯುಕ್ತೋ ಯದಿ ಮಹಾಪಾಪೈರಗಮ್ಯಾಗಮನಾದಿಭಿಃ ।
ಮುಚ್ಯತೇ ಚಾಂತಕಾಲೇಽಪಿ ಸಕೃತ್ ಶ್ರೀಕೃಷ್ಣಕೀರ್ತನಾತ್ ॥ ೬೧॥

ಅವಿಶುದ್ಧಮನಾ ಯಸ್ತು ವಿನಾಪ್ಯಾಚಾರವರ್ತನಾತ್ ।
ಪ್ರೇತತ್ವಂ ಸೋಽಪಿ ನಾಪ್ನೋತಿ ಅಂತೇ ಶ್ರೀಕೃಷ್ಣಕೀರ್ತನಾತ್ ॥ ೬೨॥

ಮುಖೇ ಭವತು ಸಾ ಜಿಹ್ವಾಸತೀ ಯಾತು ರಸಾತಲಮ್ ।
ನ ಸಾ ಚೇತ್ ಕಲಿಕಾಲೇ ಯಾ ಶ್ರೀಕೃಷ್ಣಗುಣವಾದಿನೀ ॥ ೬೩॥

ಪಾಪವು ನಾಶವಾಗುವದಿಲ್ಲವೋ ಅದು ಕೃಷ್ಣಕೃಷ್ಣ ಎಂಬ ನಾಮಸ್ಮರಣೆ ಒಂದರಿಂದಲೇ ಕಳೆಯುವದು. ॥೫೭॥ ಹೇ ಬ್ರಹ್ಮಾ! ಇನ್ನಾವ ಕೋಟಿ ನಾಮಸ್ಮರಣೆಗಳಿಂದಲೂ ನನಗೆ ಆನಂದವಾಗುವದಿಲ್ಲ. ಆದರೆ ಶ್ರೀಕೃಷ್ಣ ಎಂದು ಉಚ್ಚರಿಸುವ ಮಾತ್ರದಿಂದಲೇ ನನಗೆ ಅಧಿಕಾಧಿಕವಾದ ಪ್ರೀತಿಯುಂಟಾಗುವದು. ॥೫೮॥ ಕೋಟಿ ಚಂದ್ರಗ್ರಹಣ, ಕೋಟಿ ಸೂರ್ಯಗ್ರಹಣಗಳ ದಿನ ಮಾಡುವ ಅನುಷ್ಠಾನಗಳಿಂದ ಬರುವ ಫಲವು ಶ್ರೀಕೃಷ್ಣನಾಮೋಚ್ಚಾರಣೆಯೊಂದರಿಂದಲೇ ಪ್ರಾಪ್ತವಾಗುವದು. ॥ ೫೯ ॥ ಗುರುಪತ್ನೀಗಮನ, ಸುವರ್ಣಚೌರ್ಯ ಮೊದಲಾದ ಮಹಾಪಾತಕಗಳು ಶ್ರೀಕೃಷ್ಣನಾಮೋಚ್ಚಾರಣೆಯೊಂದರಿಂದ, ಬಿಸಿಲಿನಿಂದ ಹಿಮವು ಕರಗಿ ನಾಶವಾಗುವಂತೆ ನಷ್ಟವಾಗುವವು .॥ ೬೦॥ ಅಗಮ್ಯ ಸ್ತ್ರೀಗಮನ ಮೊದಲಾದ ಮಹಾಪಾಪಗಳಿಂದ ಯುಕ್ತನಾದಾಗ್ಯೂ ಅವನು ಕಲಿಯುಗದಲ್ಲಿ ಅಂತಕಾಲದಲ್ಲಿ ಶ್ರೀಕೃಷ್ಣನಾಮಸ್ಮರಣೆಯೊಂದನ್ನು ಮಾಡುವದರಿಂದ ಎಲ್ಲ ಪಾಪಗಳಿಂದ ಮುಕ್ತನಾಗುವನು. ॥ ೬೧॥ ಸದಾಚಾರ ವರ್ಜಿತನಾದವನು ಕಲುಷಿತವಾದ ಮನಸ್ಸುಳ್ಳವನಾಗಿದ್ದರೂ ಅಂತ ಕಾಲದಲ್ಲಿ ಶ್ರೀಕೃಷ್ಣ ನಾಮೋಚ್ಚಾರಣೆ ಮಾತ್ರದಿಂದ ಅವನು ಮರಣಾನಂತರ ಪ್ರೇತತ್ವವನ್ನು ಹೊಂದುವದಿಲ್ಲ. ॥ ೬೨॥ ಕಲಿ ಕಾಲದಲ್ಲಿ ಯಾವ ನಾಲಿಗೆಯು ಶ್ರೀಕೃಷ್ಣನ ಗುಣಗಳನ್ನು ವರ್ಣಿಸುವದೋ ಅದು ಬಾಯಿಯಲ್ಲಿ ಇರಲಿ. ಗುಣಗಾನವನ್ನು ಮಾಡದಿದ್ದರೆ ಬಾಯಿಯಲ್ಲಿ ಇರದೇ ರಸಾತಲಕ್ಕೆ ಹೊರಟು ಹೋಗುವದು ಉತ್ತಮ. ॥೬೩॥ ಎಲೈ ಪುತ್ರನೇ! ಕಲಿಯುಗದಲ್ಲಿ ಯಾವ ತನ್ನ ನಾಲಿಗೆಯು ಮತ್ತು ಪರಪುಷನ ನಾಲಿಗೆಯು ಪ್ರಯತ್ನಪೂರ್ವಕ ಶ್ರೀಕೃಷ್ಣನ

ಸ್ವವಕ್ತ್ರೇ ಪರವಕ್ತ್ರೇ ಚ ವಂದ್ಯಾಜಿಹ್ವಾ ಪ್ರಯತ್ನತಃ ।
ಕುರುತೇ ಯಾ ಕಲೌ ಪುತ್ರ ಶ್ರೀಕೃಷ್ಣಗುಣಕೀರ್ತನಮ್ ॥ ೬೪॥

ಪಾಪವಲ್ಲೀಮುಖೇ ತಸ್ಯ ಜಿಹ್ವಾರೂಪೇಣ ತಿಷ್ಠತಿ ।
ಯಾ ನ ವಕ್ತಿ ದಿವಾರಾತ್ರೌ ಶ್ರೀಕೃಷ್ಣಗುಣಕೀರ್ತನಮ್ ॥ ೬೫॥

ಪತತಾಂ ಶತಖಂಡಾ ತು ಸಾ ಜಿಹ್ವಾ ರೋಗರೂಪಿಣೀ ।
ಶ್ರೀಕೃಷ್ಣ ಕೃಷ್ಣಕೃಷ್ಣೇತಿ ಶ್ರೀಕೃಷ್ಣೇತಿ ನ ಜಲ್ಪತಿ ॥ ೬೬॥

ಶ್ರೀಕೃಷ್ಣನಾಮಮಾಹಾತ್ಮ್ಯಂ ಪ್ರಾತರುತ್ಥಾಯ ಯಃ ಪಠೇತ್ ।
ತಸ್ಯಾಹಂ ಶ್ರೇಯಸಾಂ ದಾತಾ ಭವಾಮ್ಯೇವ ನ ಸಂಶಯಃ ॥ ೬೭॥

ಶ್ರೀಕೃಷ್ಣನಾಮಮಾಹಾತ್ಮ್ಯಂ ತ್ರಿಸಂಧ್ಯಂ ತು ಪಠೇತ್ತು ಯಃ ।
ಸರ್ವಾನ್ ಕಾಮಾನವಾಪ್ನೋತಿ ಸ ಮೃತಃ ಪರಮಾಂ ಗತಿಮ್ ॥ ೬೮॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಚತುರ್ದಶೋಽಧ್ಯಾಯಃ ॥

ಗುಣಕೀರ್ತನೆಯನ್ನು ಮಾಡುವದೋ ಅದೇ ವಂದ್ಯವಾಗುವದು (ಪ್ರಶಂಸಾರ್ಹವಾಗುವದು). ॥ ೬೪॥ ಹಗಲು ರಾತ್ರಿ ಶ್ರೀಕೃಷ್ಣನ ಗುಣಗಾನವನ್ನು ಮಾಡದಿರುವ ನಾಲಿಗೆಯೆಂದರೆ ಪಾಪವೆಂಬ ಬಳ್ಳಿಯು (ಪಾಪ ಸಮೂಹವು) ನಾಲಿಗೆಯ ರೂಪದಲ್ಲಿದ್ದಂತೆ ಆಗಿರುತ್ತದೆ. ॥ ೬೫॥ ಯಾವ ನಾಲಿಗೆಯು ಶ್ರೀ ಕೃಷ್ಣ ಕೃಷ್ಣ ಕೃಷ್ಣ ಶ್ರೀ ಕೃಷ್ಣ ಎಂದು ಜಪಿಸುವದಿಲ್ಲವೋ ಅದು ರೋಗಗ್ರಸ್ತವಾಗಿ ನೂರು ತುಂಡುಗಳಾಗಿ ಕತ್ತರಿಸಿ ಕೆಳಗೆ ಬಿದ್ದು ಹೋಗಲಿ. ॥ ೬೬॥ ನಿತ್ಯವೂ ಪ್ರಾತಃಕಾಲದಲ್ಲೆದ್ದು ಯಾರು ಶ್ರೀಕೃಷ್ಣನಾಮ ಮಹಾತ್ಮೆಯನ್ನು ಭಕ್ತಿಯಿಂದ ಪಠಿಸುವರೋ ಅಂಥವರಿಗೆ ಸರ್ವ ರೀತಿಯಿಂದಲೂ ಶ್ರೇಯಸ್ಸನ್ನುಂಟು ಮಾಡುವೆನು. ಇದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ॥ ೬೭॥ ಶ್ರೀಕೃಷ್ಣನಾಮ ಮಹಾತ್ಮೆಯನ್ನು ಯಾವನು ಭಕ್ತಿಯಿಂದ ಮೂರು ದಿನ ಸಾಯಂಕಾಲ ಪಠಿಸುವನೋ ಅವನು ಸರ್ವ ಮನೋರಥಗಳನ್ನು ಹೊಂದುವನು. ಮರಣಾನಂತರ ಉತ್ತಮಗತಿಯನ್ನೂ ಪಡೆಯುವನು. ॥ ೬೮॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಮಾರ್ಗಶೀರ್ಷಮಾಸ ಮಹಾತ್ಮೆಯಲ್ಲಿ ಶ್ರೀವಿಷ್ಣುಬ್ರಹ್ಮರ ಸಂವಾದದಲ್ಲಿ ''ದಾನ, ನೈವೇದ್ಯ, ಶ್ರೀಕೃಷ್ಣನಾಮ ಮಹಿಮೆ'' ಎಂಬ ಹದಿನಾಲ್ಕನೆಯ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

ಅಧ್ಯಾಯ ೧೫

"ಧ್ಯಾನ, ಶ್ರೀದಾಮೋದರ ಮಂತ್ರ, ಶಿಷ್ಯ-ಗುರು ಲಕ್ಷಣ, ಶ್ರೀಭಾಗವತ ಮಹಿಮೆ"

★

ಶ್ರೀಭಗವಾನುವಾಚ -

ಶೃಣು ಧ್ಯಾನಂ ಚತುರ್ವಕ್ತ್ರ ವಕ್ಷ್ಯೇಽಹಂ ಪ್ರೀತಿಮಾನಸಃ ।
ಶ್ರುತೇನೈವ ಚ ಸೌಭಾಗ್ಯಂ ಲಭತೇ ಮಾನವೋ ಭುವಿ ॥ ೧॥

ಅಥ ಶ್ರೀಮದುದ್ಯಾನಸಂವೀತಹೈಮ-
ಸ್ಥಲೋದ್ಭಾಸಿರತ್ನಸ್ಫುರನ್ ಮಂಡಪಾಂತಃ ।
ಲಸತ್ಕಲ್ಪವೃಕ್ಷೋದಿತೋದ್ದೀಪ್ತರತ್ನ-
ಸ್ಥಲಾಧಿಷ್ಠಿತಾಂಭೋಜಪೀಠಾಧಿರೂಢಮ್ ॥ ೨॥

ಮಹಾನೀಲಮೇಘಾಭಮತ್ಯಂತಚಾರು-
ಗುಡಸ್ನಿಗ್ಧವಕ್ತ್ರಾಂತವಿಸ್ರಸ್ತಕೇಶಮ್ ।
ಅಲಿವ್ರಾತಪರ್ಯಾಕುಲೋತ್ಫುಲ್ಲಪದ್ಮ-
ಪ್ರಮುಗ್ಧಾನನಂ ಶ್ರೀಮದಿಂದೀವರಾಕ್ಷಮ್ ॥ ೩॥

ಶ್ರೀಭಗವಂತನು ಹೇಳುತ್ತಾನೆ - 'ಹೇ ಚತುರ್ಮುಖ ಬ್ರಹ್ಮನೇ ! ನಿನ್ನಲ್ಲಿ ಪ್ರೀತಿಯುಳ್ಳವನಾದ ನಾನು ನಿನಗೀಗ ಧ್ಯಾನದ ಬಗ್ಗೆ ತಿಳಿಸುವೆನು ಕೇಳು. ಈ ಧ್ಯಾನದ ಕ್ರಮ ಮುಂತಾದವುಗಳನ್ನು ಶ್ರವಣ ಮಾಡುವ ಮಾತ್ರದಿಂದಲೇ ಮನುಷ್ಯನು ಭೂಮಿಯಲ್ಲಿ ಸಕಲ ಸೌಭಾಗ್ಯವನ್ನು ಪಡೆಯುವನು. ॥ ೧॥ ಫಲಪುಷ್ಪಗಳಿಂದ ಭರಿತವಾದ, ಉದ್ಯಾನದಿಂದ ಸುತ್ತುವರಿಯಲ್ಪಟ್ಟ, ಸುವರ್ಣಮಯವಾದ ಸ್ಥಳದಿಂದ ಪ್ರಕಾಶಿಸುತ್ತಿರುವ, ರತ್ನಗಳಿಂದ ತೇಜಃಪುಂಜವಾದ ಮಂಟಪದ ಮಧ್ಯದಲ್ಲಿ, ಶೋಭಾಯಮಾನವಾದ, ಕಲ್ಪವೃಕ್ಷದಿಂದ ಉದಿತವಾದ ರತ್ನಗಳಿಂದ ತುಂಬಿರುವ ಸ್ಥಳದಲ್ಲಿ ಅಧಿಷ್ಠಿತವಾದ ಕಮಲಾಸನದಲ್ಲಿ ವಿರಾಜಮಾನನಾದ ಶ್ರೀವಿಷ್ಣುವಿನನ್ನು ॥೨॥ ಮಹಾನೀಲ ಮೇಘಗಳಂತೆ ಶ್ಯಾಮವರ್ಣದಿಂದ ಶೋಭಿಸುವ, ಅತ್ಯಂತ ಸುಂದರವಾದ ಕಪೋಲಗಳುಳ್ಳ, ಮನೋಹರವಾದ ಮುಖವುಳ್ಳ, ವಿಸ್ಖಲಿತವಾದ ಕೇಶಗಳುಳ್ಳ, ಭ್ರಮರಗಳ ಸಮೂಹದಿಂದ ಸುತ್ತುವರಿಯಲ್ಪಟ್ಟ ವಿಕಸಿತಸುಂದರ ಕಮಲದಂತೆ ಮನೋಹರವಾದ ಮುಖವುಳ್ಳ, ಕಮಲದಂತೆ ನೇತ್ರಗಳುಳ್ಳ ॥ ೩॥ ಅಲುಗಾಡುತ್ತಿರುವ

ಚಲತ್ಕುಂಡಲೋದ್ಭಾಸಿತೋತ್ಫುಲ್ಲಗಂಡಂ
ಸುಘೋಣಂ ಸುಶೋಣಾಧರಂ ಸುಸ್ಮಿತಾಸ್ಯಮ್ ।
ಅನೇಕೋಲ್ಲಸತ್ಕಂಠಭೂಷಾಲಸಂತಂ
ವಹಂತಂ ನಖಂ ಪೌಂಡರೀಕಂ ಸುನೇತ್ರಮ್ ॥ ೪॥

ಸಮುದ್ಧೂಸರೋರಃಸ್ಥಲಂ ಧೇನುಧೂಲ್ಯಾ
ಸುಪುಷ್ಟಾಂಗಮಷ್ಟಾಪದಾಕಲ್ಪದೀಪ್ತಮ್ ।
ಕಟೀರಸ್ಥಲೇ ಚಾರುಜಂಘೋರುಯುಗ್ಮೇ
ಪಿನದ್ಧಂ ಕ್ವಣತ್ಕಿಂಕಿಣೀಜಾಲದಾಮ್ನಾ ॥ ೫॥

ಹಸಂತಂ ಲಸದ್ಬಂಧುಜೀವಪ್ರಸೂನ-
ಪ್ರಭಾಪಾಣಿಪಾದಾಂಬುಜೋದಾರಕಾಂತ್ಯಾ ।
ಕರೇ ದಕ್ಷಿಣೇ ಪಾಯಸಂ ವಾಮಹಸ್ತೇ
ದಧಾನಂ ನವಂ ಶುದ್ಧಹಯ್ಯಂಗವೀನಮ್ ॥ ೬॥

ಮಹೀಭಾರಭೂತಾಮರಾರಾತಿಯೂಥಾ-
ನಲಂ ದಾನವಾದೀನ್ ನಿಹಂತುಂ ಪ್ರವೃತ್ತಮ್ ।
ಪ್ರಭುಂ ಗೋಪಿಕಾನಾಂ ಚ ವೃಂದೇನ ವೀತಂ
ಸುರೇಂದ್ರಾದಿಭಿರ್ವಂದಿತಂ ದೇವದೇವಮ್ ॥ ೭॥

ಕರ್ಣಕುಂಡಲಗಳಿಂದ ಶೋಭಿಸುತ್ತಿರುವ ಪುಷ್ಟವಾದ ಕಪೋಲಗಳುಳ್ಳ, ಸುಂದರವಾದ ನೀಟಾದ ನಾಸಿಕವುಳ್ಳ, ಕೆಂಪು ರಕ್ತದಂತೆ ಶೋಭಿಸುವ ತುಟಿಗಳುಳ್ಳ, ಮಂದಹಾಸ್ಯದಿಂದ ಆಕರ್ಷಕವಾದ ಮುಖವುಳ್ಳ (ಬಾಯಿಯುಳ್ಳ), ಥಳಥಳಿಸುವ ಅನೇಕ ಕಂಠಾಭರಣಗಳಿಂದ ರಮಣೀಯನಾದ, ಪುಂಡರೀಕದಂತಿರುವ ನಖಗಳುಳ್ಳ, ಸಮೀಚೀನವಾದ ನೇತ್ರಗಳುಳ್ಳ ಶ್ರೀವಿಷ್ಣುವನ್ನು ॥ ೪॥ ಉತ್ತಮವಾದ ಧೂಳಿಯ ಕಣಗಳಿಂದ ಲಿಪ್ತವಾದ ವಕ್ಷಃಸ್ಥಲವುಳ್ಳ, ಗೋವುಗಳು ಓಡುತ್ತಿರುವಾಗ ಕಾಲುಗಳಿಂದ ಎದ್ದ ಧೂಳಿಯು ಮೈಗೆ ಹತ್ತಿ ಭಂಗಾರದಂತೆ ಶೋಭಿಸುತ್ತಿರುವ ಪುಷ್ಟವಾದ ಅವಯವಗಳುಳ್ಳ, ಕಿಣಿ ಕಿಣಿ ಎಂದು ಮಂಜುಳಗಳನ್ನು ಧ್ವನಿ ಮಾಡುತ್ತಿರುವ ಗೆಜ್ಜೆಗಳ ಗೊಂಚಲು ಕಟ್ಟಿದ ಕಟಿಸ್ಥಲ, ಎರಡು ತೊಡೆಗಳು, ಮೊಣಕಾಲುಗಳುಳ್ಳ ॥ ೫॥ ಮಂದವಾಗಿ ಮುಗುಳು ನಗುತ್ತಿರುವ, ಬಂಧುಜೀವ ಪುಷ್ಪದ ಕಾಂತಿಯಂತೆ ಶೋಭಿಸುವ ಕೈಕಾಲುಗಳುಳ್ಳ, ಬಲಗೈಯಲ್ಲಿ ಪಾಯಸವನ್ನೂ, ಎಡಗೈಯಲ್ಲಿ ಹಾಲು, ಮೊಸರು, ಬೆಣ್ಣೆಗಳನ್ನೂ ಧರಿಸಿದ ಶ್ರೀವಿಷ್ಣುವನ್ನು ॥ ೬॥ ಭೂಮಿಗೆ ಭಾರವಾಗಿರುವ ದೈತ್ಯರ ಸಮೂಹವೆಂಬ ಅರಣ್ಯಕ್ಕೆ ದಾವಾಗ್ನಿಯಂತಿರುವ, ದಾನವರನ್ನೆಲ್ಲ ಸಂಹರಿಸಲು ಪ್ರವೃತ್ತನಾಗಿರುವ, ಗೋಪಿಕಾಸ್ತ್ರೀಯರ ವರ್ತುಳ ಮಧ್ಯದಲ್ಲಿರುವ,

ಉಷಃಕಾಲ ಉತ್ಥಾಯ ಸಂಸ್ಮೃತ್ಯ ಕೃಷ್ಣಂ
ಭವೇಂದ್ರಾದಿಭಿರ್ವಂದಿತಂ ದೇವವೃಂದೈಃ ।
ಸದಾ ಭಕ್ತಿತಶ್ಚಾಪಿ ಹಯ್ಯಂಗವೀನೈ-
ರ್ವಿಮಿಶ್ರೇಣ ದಧ್ನಾ ಚ ದುಗ್ಧೇನ ಕೃಷ್ಣಮ್ ॥ ೮॥

ಇತಿ ಪ್ರೀಣಯೇತ್ ಪ್ರಾತರೇ ವಾರ್ಚಯೇತ್ಸ
ನರಃ ಪ್ರತ್ಯಹಂ ಶಶ್ವದಾಸ್ತಿಕ್ಯಯುಕ್ತಃ ।
ಲಭೇತ್ ಸೋಽಚಿರೇಣೈವ ಲಕ್ಷ್ಮೀಂ ಸಮಗ್ರಾ-
ಮಿಹ ಪ್ರೇತ್ಯ ಶುದ್ಧಂ ಪರಂ ಧಾಮ ಭೂಯಾತ್ ॥ ೯॥

ಮಂತ್ರಶ್ಲೋಕ್ತಃ ಮಯಾ ಪುತ್ರ ಆದೌ ಲೋಕಮನೋಹರಃ ।
ಶ್ರೀಮದ್ದಾಮೋದರಾಖ್ಯೋ ಹಿ ಶೃಣು ತಸ್ಯಾಧಿಕಾರಿಣಃ ॥ ೧೦॥

ಅಭಕ್ತಾಯ ನ ದಾತವ್ಯೋ ಮಂತ್ರರಾಜಸ್ತ್ವಯಾ ಸುತ ।
ಯತ್ನೇನ ಗೋಪನೀಯಂ ಚ ರಹಸ್ಯಂ ಶೀಘ್ರಸಿದ್ಧಿದಮ್ ॥ ೧೧॥

ಅಲಸಂ ಮಾನಿನಂ ಕ್ಲಿಷ್ಟಂ ದಂಭಮೋಹಸಮನ್ವಿತಮ್ ।
ದರಿದ್ರಂ ರೋಗಿಣಂ ಕ್ರುದ್ಧಂ ರಾಗಿಣಂ ಭೋಗಲಾಲಸಮ್ ॥ ೧೨॥

ಇಂದ್ರಾದಿ ದೇವತಾವೃಂದದಿಂದ ವಂದಿತನಾದ, ಪ್ರಭುವಾದ ॥ ೭॥ ಶ್ರೀಕೃಷ್ಣನನ್ನು ಪ್ರಾತಃಕಾಲದಲ್ಲೆದ್ದು ಭಕ್ತಿಯಿಂದ ಸ್ಮರಣ ಮಾಡಬೇಕು. ಬ್ರಹ್ಮ ರುದ್ರೇಂದ್ರಾದಿ ದೇವತೆಗಳಿಂದ ಯುಕ್ತನಾದ, ಸಕಲ ದೇವತೆಗಳಿಂದ ಭಕ್ತಿಯಿಂದ ಸದಾ ವಂದಿತನಾದ, ಶ್ರೀಕೃಷ್ಣನನ್ನು ಪ್ರಾತಃಕಾಲದಲ್ಲಿ ಬಿಳಿಕಮಲಗಳಿಂದಲೂ, ಹಾಲು, ಮೊಸರು ಮೊದಲಾದ ಪಂಚಾಮೃತಾಭಿಷೇಕದಿಂದಲೂ ಭಕ್ತಿಯಿಂದ ಪೂಜಿಸಿ ॥ ೮॥ ಭಗವಂತನನ್ನು ಪ್ರಸನ್ನಗೊಳಿಸಬೇಕು. ಈ ಪ್ರಕಾರವಾಗಿ ಯಾವ ಮನುಷ್ಯನು ನಿತ್ಯದಲ್ಲಿಯೂ ತಪ್ಪದೇ ಆಸ್ತಿಕ್ಯ ಬುದ್ಧಿಯಿಂದ ಪೂಜಿಸುವನೋ ಅವನು ಶೀಘ್ರದಲ್ಲಿಯೇ ಸಕಲ ಸಂಪತ್ತುಗಳನ್ನು ಪಡೆಯುವನು ಮತ್ತು ಮರಣಾನಂತರದಲ್ಲಿ ಪವಿತ್ರವಾದ ಶ್ರೇಷ್ಠವಾದ ಸ್ಥಾನವನ್ನೂ ಹೊಂದುವನು. ॥೯॥ ಹೇ ಬ್ರಹ್ಮಾ! ಲೋಕಕ್ಕೆಲ್ಲ ಕಲ್ಯಾಣಕಾರಕವಾದ 'ಶ್ರೀದಾಮೋದರ ಮಂತ್ರ' ವನ್ನು ನಿನಗೆ ತಿಳಿಸಿದ್ದೇನೆ. ಇನ್ನು ಈ ಮಂತ್ರದ ಅಧಿಕಾರಿಗಳ ಬಗ್ಗೆ ಹೇಳುವೆನು ಕೇಳು. ॥ ೧೦॥ ಹೇ ವತ್ಸಾ ! ಮಂತ್ರಗಳಲ್ಲಿ ಶ್ರೇಷ್ಠವಾದ ಈ ದಾಮೋದರ ಮಂತ್ರವು ಅತ್ಯಂತ ರಹಸ್ಯವಾಗಿದೆ. ಇದು ಶೀಘ್ರದಲ್ಲಿ ಸಿದ್ಧಿಪ್ರದವಾಗಿದೆ. ಇದನ್ನು ಪ್ರಯತ್ನಪೂರ್ವಕ ಗೌಪ್ಯವಾಗಿಡಬೇಕು. ವಿಷ್ಣುಭಕ್ತರಲ್ಲದವರಿಗೆ ಈ ಮಂತ್ರವನ್ನು ಎಂದಿಗೂ ಉಪದೇಶಿಸ ಕೂಡದು. ॥೧೧॥ ಆಲಸಿಯಾದ, ಅಹಂಕಾರಿಯಾದ, ಡಂಭಾಚಾರ ಮತ್ತು ಮೋಹದಿಂದ ಯುಕ್ತನಾದ, ದರಿದ್ರನಾದ, ರೋಗಗ್ರಸ್ತನಾದ, ಕೋಪಿಷ್ಠನಾದ, ವಿಷಯಾಸಕ್ತನಾದ,

ಅಸೂಯಾಮತ್ಸರಗ್ರಸ್ತಂ ಶಠಂ ಪರುಷವಾದಿನಮ್ ।
ಅನ್ಯಾಯೇನಾರ್ಜಿತದ್ರವ್ಯಂ ಪರದಾರರತಂ ಸದಾ ॥ ೧೩॥

ವಿದುಷಾಂ ವೈರಿಣಾಂ ನಿತ್ಯಂ ಅಜ್ಞಂ ಪಂಡಿತಮಾನಿನಮ್ ।
ಭ್ರಷ್ಟವ್ರತಂ ಕ್ಲಿಷ್ಟವೃತ್ತಿಂ ಪಿಶುನಂ ದುಷ್ಟಮಾನಸಮ್ ॥ ೧೪॥

ಬಹ್ವಾಶಿನಂ ಕ್ರೂರಚೇಷ್ಟಂ ಅಗ್ರಗಣ್ಯಂ ದುರಾತ್ಮನಾಮ್ ।
ಕೃಪಣಂ ಪಾಪಿನಂ ರೌದ್ರಂ ಆಶ್ರಿತಾನಾಂ ಭಯಂಕರಮ್ ॥ ೧೫॥

ಏವಮಾದಿಗುಣೈರ್ಯುಕ್ತಂ ಶಿಷ್ಯಂ ನೈವ ಪರಿಗ್ರಹೇತ್ ।
ಗೃಹ್ಣೀಯಾದ್ಯದಿ ತದ್ದೋಷಃ ಪ್ರಾಯೋ ಗುರುಮುಪಸ್ಪೃಶೇತ್ ॥ ೧೬॥

ಅಮಾತ್ಯದೋಷೋ ರಾಜಾನಂ ಜಾಯಾದೋಷಃ ಪತಿಂ ಯಥಾ ।
ತಥಾ ಶಿಷ್ಯಕೃತೋ ದೋಷೋ ಗುರುಂ ಪ್ರಾಪ್ನೋತ್ಯಸಂಶಯಮ್॥ ೧೭॥

ತಸ್ಮಾಚ್ಛಿಷ್ಯಂ ಗುರುರ್ನಿತ್ಯಂ ಪರೀಕ್ಷ್ಯೈವ ಪರಿಗ್ರಹೇತ್ ।
ಕಾಯೇನ ಮನಸಾ ವಾಚಾ ಗುರುಶುಶ್ರೂಷಣೇ ರತಮ್ ॥ ೧೮॥

ಅಸ್ತೇಯವೃತ್ತಿಮಾಸ್ತಿಕ್ಯಯುಕ್ತಂ ಮೋಕ್ಷಕೃತೋದ್ಯಮಮ್ ।
ಬ್ರಹ್ಮಚರ್ಯರತಂ ನಿತ್ಯಂ ದೃಢವ್ರತಮಕಲ್ಮಷಮ್ ॥ ೧೯॥

ಭೋಗಲಾಲಸೆಗಳಿಂದ ಯುಕ್ತನಾದ ॥ ೧೨॥ ಅಸೂಯಾ ಮತ್ಸರಾದಿಗಳಿಂದ ಕೂಡಿದ, ನಿಷ್ಠುರಭಾಷಿಯಾದ, ಅನ್ಯಾಯದಿಂದ ಸಂಪಾದಿಸಿದ ದ್ರವ್ಯವುಳ್ಳ, ಸದಾ ಪರಸ್ತ್ರೀಯರಲ್ಲಿ ಆಸಕ್ತನಾದ ॥ ೧೩॥ ಜ್ಞಾನಿಗಳನ್ನು ನಿತ್ಯ ದ್ವೇಷಿಸುವ, ಅಜ್ಞಾನಿಯಾದ, ಸ್ವತಃ ಪಂಡಿತನೆಂದು ತಿಳಿಯುವ, ವ್ರತಭ್ರಷ್ಟನಾದ, ಕ್ಲಿಷ್ಟವಾದ ಕಾರ್ಯಗಳನ್ನು ಮಾಡುವ, ಪರನಿಂದಾಸಕ್ತನಾದ, ದುಷ್ಟಬುದ್ಧಿಯುಳ್ಳ ॥ ೧೪॥ ಅತಿಯಾಗಿ ಭೋಜನಮಾಡುವ , ಕ್ರೂರಿಯಾದ , ದುಷ್ಟರಲ್ಲಿ ಅಗ್ರಗಣ್ಯನಾದ, ಕೃಪಣನಾದ, ಪಾಪಿಯಾದ, ರೌದ್ರ ಸ್ವಭಾವದ ಅಥವಾ ಆಶ್ರಿತರಿಗೆ ಭಯಂಕರನಾದ ॥ ೧೫॥ ಇವೇ ಮೊದಲಾದ ದುಷ್ಟಗುಣಗಳಿಂದ ಯುಕ್ತನಾದವನನ್ನು ಎಂದಿಗೂ ಶಿಷ್ಯನನ್ನಾಗಿ ಸ್ವೀಕರಿಸಬಾರದು. ಒಂದು ವೇಳೆ ಪ್ರಮಾದದಿಂದ ಶಿಷ್ಯನನ್ನಾಗಿ ಸ್ವೀಕರಿಸಿದರೆ ಆ ದೋಷವು ಗುರುವಿಗೆ ಬರುವದು. ॥ ೧೬॥ ಮಂತ್ರಿಯು ಮಾಡಿದ ದೋಷವು ರಾಜನಿಗೆ ಬರುವಂತೆ ಹಾಗೂ ಹೆಂಡತಿಯ ದೋಷವು ಗಂಡನಿಗೆ ಬರುವಂತೆ ಶಿಷ್ಯನು ಮಾಡಿದ ದೋಷವು ನಿಃಸಂಶಯವಾಗಿ ಗುರುವಿಗೆ ತಟ್ಟುವದು. ॥ ೧೭॥ ಆದ್ದರಿಂದ ಗುರು ಆದವನು ಚೆನ್ನಾಗಿ ಪರೀಕ್ಷೆ ಮಾಡಿಯೇ ಇನ್ನೊಬ್ಬನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕು. ಕಾಯಾ, ವಾಚಾ, ಮನಸಾ ಸದಾ ಗುರು ಶುಶ್ರೂಷೆಯಲ್ಲಿ ಆಸಕ್ತನಾದ ॥ ೧೮॥ ಚಾರ್ಯ ವೃತ್ತಿಯನ್ನು

ಪ್ರಸನ್ನಹೃದಯಂ ಶುದ್ಧಮಶಠಂ ವಿಮಲಾಶಯಮ್ ।
ಪರೋಪಕಾರಾಭಿರತಂ ಪರಾರ್ಥೇ ವಿಗತಸ್ಪೃಹಮ್ ॥ ೨೦॥

ಸ್ವವಿತ್ತಚಿತ್ತದೇಹೈಶ್ಚ ಪರಿತೋಷಕರಂ ಗುರೋಃ
ಆಶ್ರಿತಾನಾಂ ತಥಾ ಪುತ್ರ ಪರಿತೋಷಕರಂ ಶುಚಿಮ್ ॥ ೨೧॥

ಈದೃಗ್ವಿಧಾಯ ಶಿಷ್ಯಾಯ ಮಂತ್ರಂ ದದ್ಯಾತ್ತು ನಾನ್ಯಥಾ ।
ಯದ್ಯನ್ಯಥಾ ವದೇತ್ತ ತಸ್ಮಿನ್‌ದೇವತಾಶಾಪ ಆಪತೇತ್ ॥ ೨೨॥

ಶೃಣು ಪುತ್ರ ಪ್ರವಕ್ಷ್ಯಾಮಿ ಗುರೋರಪಿ ಚ ಲಕ್ಷಣಮ್ ।
ಏಭಿಸ್ತು ಲಕ್ಷಣೈರ್ಯುಕ್ತೋ ಗುರುರೇವ ಭವೇನ್ನೃಣಾಮ್ ॥ ೨೩॥

ಮಚ್ಚಿತ್ತಃ ಸುಪ್ರಶಾಂತಾತ್ಮಾ ವಿಮನ್ಯುಶ್ಚ ಸುಹೃನ್ನೃಣಾಮ್ ।
ಸಾಧುರ್ಮಹಾಂಶ್ಚ ದಾಂತಶ್ಚ ಸ ಗುರುಃ ಪರಕೀರ್ತಿತಃ ॥ ೨೪॥

ಮಮ ವ್ರತಧರೋ ನಿತ್ಯಂ ವೈಷ್ಣವಾನಾಂ ಸುಸಮ್ಮತಃ ।
ಮದಾಶ್ರಯಕಥಾಸಕ್ತೋ ಮಮೋತ್ಸವರತಃ ಸದಾ ॥ ೨೫॥

ಕೃಪಾಸಿಂಧುಃ ಸುಪೂರ್ಣಾರ್ಥಃ ಸರ್ವಸತ್ವೋಪಕಾರಕಃ ।
ನಿಃಸ್ಪೃಹಃ ಸರ್ವತಃ ಸಿದ್ಧಃ ಸರ್ವವಿದ್ಯಾವಿಶಾರದಃ ॥ ೨೬॥

ಮಾಡದ, ಧರ್ಮಕಾರ್ಯಗಳಲ್ಲಿ ರತನಾದ, ಮೋಕ್ಷ ಸಾಧನಕ್ಕೆ ಸಹಾಯವಾಗುವ ಕಾರ್ಯಗಳನ್ನು ಮಾಡುವ, ಬ್ರಹ್ಮಚರ್ಯ ವ್ರತವನ್ನು ಪಾಲಿಸುವ ದೃಢವ್ರತನಾದ, ಋಜು ಸ್ವಭಾವದ ॥ ೧೯॥ ಸದಾ ಪ್ರಸನ್ನನಾದ ಮನಸ್ಸುಳ್ಳ, ಶುದ್ಧನಾದ, ಮೂರ್ಖನಾಗಿರದ, ಶುದ್ಧವಾದ ವಿಚಾರಗಳುಳ್ಳ, ಪರೋಪಕಾರದಲ್ಲಿ ಆಸಕ್ತನಾದ, ಪರರ ದ್ರವ್ಯ ಸಂಪತ್ತುಗಳಲ್ಲಿ ಆಶೆಯಿರದ ॥ ೨೦॥ ತನ್ನಲ್ಲಿರುವ ದ್ರವ್ಯ, ಮನಸ್ಸು, ದೇಹಗಳಿಂದ ತನ್ನ ಗುರುವನ್ನು ಸಂತೋಷಪಡಿಸುವ ಕಾರ್ಯಗಳಲ್ಲಿಯೇ ರತನಾದ, ತನ್ನನ್ನು ಆಶ್ರಯಿಸಿದವರಿಗೆ ಸಂತೋಷವನ್ನುಂಟು ಮಾಡುವ, ಶುದ್ಧಾತ್ಮನಾದ ॥ ೨೧॥ ಪುರುಷನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡು ಅಂಥವನಿಗೆ ಮಾತ್ರ ಈ ಮಂತ್ರೋಪದೇಶವನ್ನು ಮಾಡಬೇಕೇ ಹೊರತು ಬೇರೆ ಸಿಕ್ಕವರಿಗೆಲ್ಲ ಮಂತ್ರೋಪದೇಶ ಮಾಡಿದರೆ ದೇವತೆಗಳ ಶಾಪ ತಟ್ಟುವದು. ॥ ೨೨॥ ಹೇ ವತ್ಸಾ ! ಕೇಳು . ಗುರುಗಳ ಲಕ್ಷಣಗಳನ್ನೂ ಕೂಡ ನಿನಗೀಗ ತಿಳಿಸುವೆನು. ಇನ್ನು ಮುಂದೆ ಹೇಳುವ ಲಕ್ಷಣಗಳಿಂದ ಯುಕ್ತನಾದವನು ಮಾತ್ರ ಯೋಗ್ಯ ಜನರಿಗೆ ಗುರುವಾಗಿ ಮಾರ್ಗದರ್ಶಕನಾಗಿರುವನು. ॥ ೨೩॥ ಸದಾ ನನ್ನ ಧ್ಯಾನದಲ್ಲಿರುವ, ಶಾಂತ ಸ್ವಭಾವದ, ಕ್ರೋಧರಹಿತನಾದ, ಎಲ್ಲಸಜ್ಜನರಿಗೆ ಬೇಕಾದವನಾದ, ಸಾಧುಸ್ವಭಾವದ, ದೊಡ್ಡ ಮನಸ್ಸಿನ, ಇಂದ್ರಿಯ ನಿಗ್ರಹವುಳ್ಳ ಮನುಷ್ಯನೇ ಗುರುವೆಂದು ಕರೆಸಿಕೊಳ್ಳಲ್ಪಡುವನು. ॥೨೪॥ ಈ ಲಕ್ಷಣಗಳಿಂದ ಯುಕ್ತನಾದ ಗುರು, ನಿತ್ಯದಲ್ಲಿ ನನ್ನ ಸಂಬಂಧಿಯಾದ

ಸರ್ವಸಂಶಯಸಂಛೇತ್ತಾನಲಸೋ ಗುರುರಾದೃತಃ ।
ಬ್ರಾಹ್ಮಣಃ ಸರ್ವಕಾಲಜ್ಞೋ ಕುರ್ಯಾತ್ ಸರ್ವೇಷ್ವನುಗ್ರಹಮ್ ॥ ೨೭॥

ಪೂರ್ವೋಕ್ತಲಕ್ಷಣೈರ್ಯುಕ್ತಃ ಶಿಷ್ಯ ಈದೃಗ್ವಿಧೋ ಗುರೋಃ ।
ಗೃಹ್ಣೀಯಾತ್ ಪುತ್ರ ತನ್ಮಂತ್ರಂ ಮಾರ್ಗಶೀರ್ಷೇ ಮಹಾಯನೇ ॥ ೨೮॥

ವೈಷ್ಣವಾನಾಂ ವ್ರತಾನಾಂ ಚ ಕುರ್ಯಾತ್ ಸ್ವೀಕರಣಂ ಬುಧಃ ।
ಮತ್ಪ್ರಿಯಂ ಶ್ರುಣುಯಾಚ್ಚಶ್ಚಚ್ಛ್ರೀಮದ್ಭಾಗವತಂ ಪರಮ್ ॥ ೨೯॥

ಶ್ರೀಮದ್ಭಾಗವತಂ ನಾಮ ಪುರಾಣಂ ಲೋಕವಿಶ್ರುತಮ್ ।
ಶೃಣುಯಾಚ್ಛ್ರದ್ಧಯಾ ಯುಕ್ತೋ ಮಮ ಸಂತೋಷಕಾರಕಂ ॥ ೩೦॥

ನಿತ್ಯಂ ಭಾಗವತಂ ಯಸ್ತು ಪುರಾಣಂ ಪಠತೇ ನರಃ ।
ಪ್ರತ್ಯಕ್ಷರಂ ಭವೇತ್ತಸ್ಯ ಕಪಿಲಾದಾನಜಂ ಫಲಮ್ ॥ ೩೧॥

ಶ್ಲೋಕಾರ್ಧಂ ಶ್ಲೋಕಪಾದಂ ವಾ ನಿತ್ಯಂ ಭಾಗವತೋದ್ಭವಮ್ ।
ಪಠೇಚ್ಛೃಣೋತಿ ಯೋ ಭಕ್ತ್ಯಾ ಗೋಸಹಸ್ರಫಲಂ ಲಭೇತ್ ॥ ೩೨॥

ಒಂದಿಲ್ಲೊಂದು ವ್ರತಗಳಲ್ಲಿ ರತನಾಗಿರುವವನು. ಎಲ್ಲ ವೈಷ್ಣವ ಜನರಿಗೆ ಮಾನ್ಯನಾಗಿರುವವನು. ನನ್ನ ಕಥಾ ಶ್ರವಣಗಳಲ್ಲಿ ಆಸಕ್ತನಾಗಿರುವವನು ಹಾಗೂ ನನ್ನ ಸಂಬಂಧಿಯಾದ ವಿವಿಧ ಉತ್ಸವಗಳಲ್ಲಿ ಸದಾ ರತನಾಗಿರುವವನು. ॥೨೫॥ ಕೃಪಾಸಾಗರನಾಗಿರುವವನು, ಪೂರ್ಣ ಮನೋರಥನಾಗಿರುವವನು. ಎಲ್ಲ ಪ್ರಾಣಿಗಳಿಗೆ ಉಪಕಾರ ಮಾಡುವವನೂ, ತಾನು ಸ್ವತಃ ನಿಃಸ್ಪೃಹಿಯೂ ಆಗಿರುವವನು. ಸರ್ವತ್ರ ಸಿದ್ಧಹಸ್ತನಾಗಿರುವವನು. ಸರ್ವಶಾಸ್ತ್ರ ವಿಶಾರದನಾಗಿರುವವನು. ॥ ೨೬॥ ಎಲ್ಲ ಶಿಷ್ಯರ ಸಂಶಯಗಳನ್ನು ನಿವಾರಣೆ ಮಾಡಲು ಸಮರ್ಥನಾಗಿರುವ, ಆಲಸ್ಯವಿಲ್ಲದ, ತ್ರಿಕಾಲಜ್ಞಾನಿಯಾದ ಬ್ರಾಹ್ಮಣನು ಸಜ್ಜನರಿಂದ ಸತ್ಕರಿಸಲ್ಪಡುವವನು. ಇವನು ಎಲ್ಲರಲ್ಲಿ ಅನುಗ್ರಹವನ್ನು ಮಾಡುವಂಥವನಾಗಿರಬೇಕು. ॥೨೭॥ ಎಲೈ ಪುತ್ರನೇ! ಈ ಮೊದಲು ನಿರೂಪಿಸಲಾದ ಗುಣಗಳಿಂದ ಯುಕ್ತನಾದ ಶಿಷ್ಯನು ಈ ಮೇಲೆ ಹೇಳಿದ ಗುಣಗಳಿಂದ ಯುಕ್ತನಾದ ಗುರುವಿನಿಂದ, ಮಾರ್ಗಶೀರ್ಷಮಾಸದಲ್ಲಿ ಶ್ರೀದಾಮೋದರ ಮಂತ್ರವನ್ನು ಉಪದೇಶಪೂರ್ವಕ ಸ್ವೀಕರಿಸಬೇಕು. ॥ ೨೮॥ ಹಾಗೂ ವೈಷ್ಣವ ವ್ರತಗಳೇನಿವೆಯೋ ಅವುಗಳನ್ನೂ ಸ್ವೀಕರಿಸಬೇಕು. ಜ್ಞಾನಿಯಾದ ಆ ಶಿಷ್ಯನು ನನಗೆ ಪ್ರಿಯವಾದ, ಉತ್ಕೃಷ್ಟವಾದ ಶ್ರೀಮದ್ಭಾಗವತವನ್ನು ಸರ್ವದಾ ಶ್ರವಣ ಮಾಡಬೇಕು. ॥೨೯॥ ಶ್ರೀಮದ್ಭಾಗವತವೆಂಬುದು ಲೋಕ ಪ್ರಸಿದ್ಧವಾದ ಪುರಾಣವಾಗಿದೆ. ಇಂಥ ಪುರಾಣವನ್ನು ಸರ್ವದಾ ಭಕ್ತಿಯಿಂದ ಶ್ರವಣ ಮಾಡಬೇಕು. ಇದರಿಂದ ನನಗೆ ಸಂತೋಷವಾಗುವದು.

ಯಃ ಪಠೇತ್ ಪ್ರಯತೋ ನಿತ್ಯಂ ಶ್ಲೋಕಂ ಭಾಗವತಂ ಸುತ ।
ಅಷ್ಟಾದಶಪುರಾಣಾನಾಂ ಫಲಂ ಪ್ರಾಪ್ನೋತಿ ಮಾನವಃ ॥ ೩೩॥

ನಿತ್ಯಂ ಮಮ ಕಥಾ ಯತ್ರ ತತ್ರ ತಿಷ್ಠಂತಿ ವೈಷ್ಣವಾಃ ।
ಕಲಿಬಾಹ್ಯಾ ನರಾಸ್ತೇ ವೈ ಯೇಽರ್ಚಯಂತಿ ಸದಾ ಮಮ ॥ ೩೪॥

ವೈಷ್ಣವಾನಿ ತು ಶಾಸ್ತ್ರಾಣಿ ಯೇಽರ್ಚಯಂತಿ ಸದಾ ನರಾಃ ।
ಸರ್ವಪಾಪವಿನಿರ್ಮುಕ್ತಾ ಭವಂತಿ ಸುರವಂದಿತಾಃ ॥ ೩೫॥

ಯೇಽರ್ಚಯಂತಿ ಗೃಹೇ ನಿತ್ಯಂ ಶಾಸ್ತ್ರಂ ಭಾಗವತಂ ಕಲೌ ।
ಆಸ್ಫೋಟಯಂತಿ ವಲ್ಗಂತಿ ತೇಷಾಂ ಪ್ರೀತೋ ಭವಾಮ್ಯಹಮ್ ॥ ೩೬॥

ಯಾವದ್ದಿನಾನಿ ಹೇ ಪುತ್ರ ಶಾಸ್ತ್ರಂ ಭಾಗವತಂ ಗೃಹೇ ।
ತಾವತ್ಪಿಬಂತಿ ಪಿತರಃ ಕ್ಷೀರಂ ಸರ್ಪಿರ್ಮಧೂದಕಮ್ ॥ ೩೭॥

ಯಚ್ಛಂತಿ ವೈಷ್ಣವೇ ಶಾಸ್ತ್ರಂ ಭಕ್ತ್ಯಾ ಭಾಗವತಂ ಹಿ ಯೇ ।
ಕಲ್ಪಕೋಟಿಸಹಸ್ರಾಣಿ ಮಮ ಲೋಕೇ ವಸಂತಿ ತೇ ॥ ೩೮॥

॥೩೦॥ ಯಾವ ನರನು ನಿತ್ಯದಲ್ಲಿ ಭಾಗವತ ಪುರಾಣವನ್ನು ಪಠಿಸುವನೋ ಅದರಲ್ಲಿಯ ಒಂದೊಂದು ಅಕ್ಷರವನ್ನು ಉಚ್ಚರಿಸುತ್ತಿದ್ದಂತೆ ಅವನಿಗೆ ಕಪಿಲಾ ಗೋದಾನದ ಫಲವು ಪ್ರಾಪ್ತವಾಗುವದು. ॥೩೧॥ ಇನ್ನು ಯಾವಾತನು ನಿತ್ಯದಲ್ಲಿ ಭಾಗವತ ಪುರಾಣದಲ್ಲಿಯ ಅರ್ಧ ಶ್ಲೋಕವನ್ನಾಗಲೀ ಅಥವಾ ಶ್ಲೋಕಪಾದವನ್ನಾಗಲೀ ಭಕ್ತಿಯಿಂದ ಪಠಿಸುವನೋ ಮತ್ತು ಕೇಳುವನೋ ಅವನಿಗೆ ಸಹಸ್ರ ಗೋದಾನದ ಫಲವು ಲಭಿಸುವದು. ॥೩೨॥ ಹೇ ವತ್ಸಾ! ಯಾವಾತನು ನಿತ್ಯದಲ್ಲಿ ತಪ್ಪದೇ ಭಾಗವತದಲ್ಲಿಯ ಒಂದು ಶ್ಲೋಕವನ್ನಾದರೂ ಪಠಿಸುವನೋ ಅವನಿಗೆ ಅಷ್ಟಾದಶ ಪುರಾಣಗಳನ್ನು ಓದಿದ ಫಲವು ಪ್ರಾಪ್ತ ವಾಗುವದು. ॥೩೩॥ ಎಲ್ಲಿ ಪ್ರತಿದಿನ ನನ್ನ ಕಥಾಕೀರ್ತನೆ ಮತ್ತು ಶ್ರವಣವು ನಡೆಯುವವೋ, ಯಾವ ಸ್ಥಳದಲ್ಲಿ ವಿಷ್ಣುಭಕ್ತರಿರುವರೋ ಅಂಥ ಸ್ಥಳದಲ್ಲಿದ್ದು ನನ್ನನ್ನು ಪೂಜಿಸುವ ನರರೆಲ್ಲರೂ ಕಲಿಯ ಪ್ರಭಾವದಿಂದ ದೂರವಾಗಿರುವರು. ॥೩೪॥ ವೈಷ್ಣವಶಾಸ್ತ್ರಗಳನ್ನು ಪೂಜಿಸುವ ನರರು ಸಕಲ ಪಾಪಗಳಿಂದ ಮುಕ್ತರಾಗಿ ದೇವತೆಗಳಿಂದ ವಂದಿತರಾಗುವರು. ॥ ೩೫॥ ಕಲಿಯುಗದಲ್ಲಿ ಯಾರು ಮನೆಯೊಳಗೆ ಪ್ರತಿದಿನ ಶ್ರೀಮದ್ಭಾಗವತವನ್ನು ಪೂಜಿಸುವರೋ ಅವರನ್ನು ನಾನು ಅನುಗ್ರಹಿಸುತ್ತೇನೆ . ॥ ೩೬॥ ಹೇ ಪುತ್ರಾ ! ಎಷ್ಟು ದಿನಗಳವರೆಗೆ ಶ್ರೀಭಾಗವತವು ಮನೆಯಲ್ಲಿರುವದೋ (ಪಠಣ ಶ್ರವಣಗಳಿಂದ ಪೂಜಿತವಾಗಿರುವದೋ) ಅಷ್ಟು ದಿನಗಳವರೆಗೆ ಆ ಯಜಮಾನನ ಪಿತೃಗಳು ಪಿತೃಲೋಕದಲ್ಲಿ ನಿತ್ಯ ಹಾಲು, ತುಪ್ಪ, ಜೇನುತುಪ್ಪ, ಸಿಹಿನೀರು ಮುಂತಾದವುಗಳನ್ನು ಕುಡಿಯುತ್ತ ಸಂತೋಷದಿಂದ ಇರುವರು. ॥ ೩೭॥ ಯಾರು ಈ ಮಾಸದಲ್ಲಿ ಯೋಗ್ಯನಾದ

ಯೇಽರ್ಚಯಂತಿ ಸದಾ ಗೇಹೆ ಶಾಸ್ತ್ರಂ ಭಾಗವತಂ ನರಾಃ ।
ಪ್ರೀಣಿತಾಸ್ತೈಶ್ಚ ವಿಬುಧಾ ಯಾವದಾಭೂತಸಂಪ್ಲವಮ್ ॥ ೩೯॥

ಶ್ಲೋಕಾರ್ಧಂ ಶ್ಲೋಕಪಾದಂ ವಾ ವರಂ ಭಾಗವತಂ ಗೃಹೇ ।
ಶತಶೋಽಥ ಸಹಸ್ರೈಶ್ಚ ಕಿಮನ್ಯೈಃ ಶಾಸ್ತ್ರಸಂಗ್ರಹೈಃ ॥ ೪೦॥

ನ ಯಸ್ಯ ತಿಷ್ಠತೇ ಶಾಸ್ತ್ರಂ ಗೃಹೇ ಭಾಗವತಂ ಕಲೌ ।
ನ ತಸ್ಯ ಪುನರಾವೃತ್ತಿರ್ಯಾಮ್ಯಪಾಶಾತ್ಕಥಂ ಚ ನ ॥ ೪೧॥

ಕಥಂ ಸ ವೈಷ್ಣವೋ ಜ್ಞೇಯಃ ಶಾಸ್ತ್ರಂ ಭಾಗವತಂ ಕಲೌ ।
ಗೃಹೇ ನ ತಿಷ್ಠತೇ ಯೇಷಾಂ ಶ್ವಪಚಾದಧಿಕಾ ಹಿ ತೇ ॥ ೪೨॥

ಸರ್ವಸ್ವೇನಾಪಿ ಲೋಕೇಶ ಕರ್ತವ್ಯಃ ಶಾಸ್ತ್ರಸಂಗ್ರಹಃ ।
ವೈಷ್ಣವಸ್ತು ಸದಾ ಭಕ್ತ್ಯಾ ತುಷ್ಟ್ಯರ್ಥಂ ಮಮ ಪುತ್ರಕ ॥ ೪೩॥

ಯತ್ರ ಯತ್ರ ಭವೇತ್ಪುಣ್ಯಂ ಶಾಸ್ತ್ರಂ ಭಾಗವತಂ ಕಲೌ ।
ತತ್ರ ತತ್ರ ಸದೈವಾಹಂ ಭವಾಮಿ ತ್ರಿದಶೈಃ ಸಹ ॥ ೪೪॥

ತತ್ರ ಸರ್ವಾಣಿ ತೀರ್ಥಾನಿ ನದೀನದಸರಾಂಸಿ ಚ ।
ಯಜ್ಞಾಸ್ಸಪ್ತಪುರೀನಿತ್ಯಂ ಪುಣ್ಯಂ ಸರ್ವಾಖಿಲಂ ಚ ಯತ್ ॥ ೪೫॥

ವಿಷ್ಣುಭಕ್ತನಿಗೆ ಭಕ್ತಿಯಿಂದ ಭಾಗವತ ಗ್ರಂಥವನ್ನು ದಾನವಾಗಿ ಕೊಡುವರೋ ಅವರು ಸಹಸ್ರ ಕೋಟಿ ಕಲ್ಪಗಳವರೆಗೆ ನನ್ನ ಲೋಕದಲ್ಲಿ ಆನಂದದಿಂದ ವಾಸಿಸುವರು. ॥ ೩೮॥ ಯಾರು ಮನೆಯಲ್ಲಿ ಭಾಗವತವನ್ನು ಪೂಜಿಸುವರೋ ಅಂಥವರು ಪ್ರಲಯಕಾಲದವರೆಗೆ ಲೋಕದಲ್ಲಿದ್ದ ಜ್ಞಾನಿಗಳನ್ನು ಪೂಜಿಸಿದಂತೆ ಆಗುವದು. ॥ ೩೯॥ ಸಾವಿರಾರು ಇತರ ಶಾಸ್ತ್ರ ಪುರಾಣಗಳನ್ನು ನೂರಾರು ಸಲ ಹೇಳುವದಕ್ಕಿಂತಲೂ ನಿತ್ಯ ಮನೆಯಲ್ಲಿ ಭಾಗವತದ ಶ್ಲೋಕಾರ್ಧವಾಗಲೀ, ಶ್ಲೋಕಪಾದವನ್ನಾಗಲೀ ಹೇಳುವದು, ಶ್ರೇಷ್ಠವಾದದ್ದು॥ ೪೦॥ ಯಾವನ ಮನೆಯಲ್ಲಿ ಕಲಿಯುಗದಲ್ಲಿ ಭಾಗವತ ಶಾಸ್ತ್ರ ಗ್ರಂಥವಿಲ್ಲವೋ ಹಾಗೂ ಆ ಗ್ರಂಥದ ವಿಚಾರವಿಲ್ಲವೋ ಅಂಥವನಿಗೆ ಯಮಪಾಶದಿಂದ ಬಿಡುಗಡೆ ಎಂಬುದೇ ಇರಲಾರದು. ॥ ೪೧॥ ಕಲಿಯುಗದಲ್ಲಿ ಯಾರ ಮನೆಯಲ್ಲಿ ಭಾಗವತ ಶಾಸ್ತ್ರವಿಲ್ಲವೋ ಅವರನ್ನು ವಿಷ್ಣುಭಕ್ತರೆಂದು ಹೇಗೆ ತಿಳಿಯುವದು ? ಅವರು [illegible]ತಲೂ ಹೆಚ್ಚಿನ ಕನಿಷ್ಠರು. ॥ ೪೨॥ ಹೇ ಬ್ರಹ್ಮಾ! ನಾನು ಪ್ರಸನ್ನನಾಗ[illegible]ವರಾದವರು ಪ್ರಯತ್ನಪೂರ್ವಕ ಶ್ರೇಷ್ಠವಾದ ಈ ಭಾಗವತ ಗ್ರಂಥವನ್ನು [illegible]ಸಂಗ್ರಹಿಸಬೇಕು. ಅದನ್ನು ಓದಬೇಕು. ಕೇಳಬೇಕು. ॥ ೪೩॥ ಹೇ ದಾ[illegible] ! [illegible]ಲ್ಲಿ ಭಾಗವತ ಗ್ರಂಥವಿರುವದೋ ಮತ್ತು ಆ ಗ್ರಂಥ ವಿಚಾರ [illegible]ದಲ್ಲೆಲ್ಲ ಸಕಲ ದೇವತೆಗಳಿಂದ ಸಹಿತನಾಗಿ ನಾನು ಸನ್ನಿ[illegible]॥ ಮತ್ತು ಅಲ್ಲಿ

ಶ್ರೋತವ್ಯಂ ಮಮ ಶಾಸ್ತ್ರಂ ಹಿ ಯಶೋಧರ್ಮಜಯಾರ್ಥಿನಾ ।
ಪಾಪಕ್ಷಯಾರ್ಥಂ ಲೋಕೇಶ ಮೋಕ್ಷಾರ್ಥಂ ಧರ್ಮಬುದ್ಧಿನಾ ॥ ೪೬॥

ಶ್ರೀಮದ್ಭಾಗವತಂ ಪುಣ್ಯಮಾಯುರಾರೋಗ್ಯಪುಷ್ಟಿದಮ್ ।
ಪಠನಾತ್ ಶ್ರವಣಾದ್ವಾಪಿ ಸರ್ವಪಾಪೈಃ ಪ್ರಮುಚ್ಯತೇ ॥ ೪೭॥

ನ ಶೃಣ್ವಂತಿ ನ ಹೃಷ್ಯಂತಿ ಶ್ರೀಮದ್ಭಾಗವತಂ ಪರಮ್ ।
ಸತ್ಯಂ ಸತ್ಯಂ ಹಿ ಲೋಕೇಶ ತೇಷಾಂ ಸ್ವಾಮೀ ಸದಾ ಯಮಃ ॥ ೪೮॥

ನ ಗಚ್ಛಂತಿ ಸದಾ ಮರ್ತ್ಯಾ ಶ್ರೋತುಂ ಭಾಗವತಂ ಸುತ ।
ಏಕಾದಶ್ಯಾಂ ವಿಶೇಷೇಣ ನಾಸ್ತಿ ಪಾಪಕ್ಷಯಸ್ತಥಾ ॥ ೪೯॥

ಶ್ಲೋಕಂ ಭಾಗವತಂ ಚಾಪಿ ಶ್ಲೋಕಾರ್ಧಂ ಪಾದಮೇವ ವಾ ।
ಲಿಖಿತಂ ತಿಷ್ಠತೇ ಯಸ್ಯ ಗೃಹೇ ತಸ್ಯ ವಸಾಮ್ಯಹಮ್ ॥ ೫೦॥

ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್ ।
ನ ತಥಾ ಪಾವನಂ ನೃಣಾಂ ಶ್ರೀಮದ್ಭಾಗವತಂ ಯಥಾ ॥ ೫೧॥

ಸರ್ವತೀರ್ಥಗಳು, ನದಿಗಳು, ಸರೋ ವರಗಳು, ಯಜ್ಞಗಳು, ಸಪ್ತಪುರಿಗಳು, ಪರ್ವತಗಳು ಮತ್ತು ಪುಣ್ಯವೆಂಬುದು ಎಷ್ಟಿದೆಯೋ ಅದೆಲ್ಲವೂ ಅಲ್ಲಿ ಸನ್ನಿಹಿತವಾಗಿರುತ್ತವೆ. ॥ ೪೫॥ ಯಶಸ್ಸು, ಧರ್ಮ, ಜಯವನ್ನು ಅಪೇಕ್ಷಿಸುವವನು ಶ್ರೀಭಾಗವತ ಪುರಾಣದ ಶ್ರವಣ ಮಾಡಬೇಕು. ಧರ್ಮಬುದ್ಧಿಯುಳ್ಳ ಯಾವನೇ ಆಗಲಿ ಅವನು ಪಾಪನಾಶ ಮತ್ತು ಮೋಕ್ಷ ಪ್ರಾಪ್ತಿಗೆ ನಿತ್ಯದಲ್ಲೂ ಭಾಗವತವನ್ನೇ ಆಶ್ರಯಿಸಬೇಕು. ॥೪೬॥ ಬ್ರಹ್ಮಾ! ಶ್ರೀಭಾಗವತವೆಂಬುದು ಬಹು ಪುಣ್ಯದಾಯಕವಾಗಿದ್ದು, ಆಯುರಾರೋಗ್ಯ ಸಮೃದ್ಧಿಗಳನ್ನು ಕೊಡುವಂಥದ್ದಾಗಿದೆ. ಈ ಪುರಾಣವನ್ನು ಹೇಳುವವರೂ ಕೇಳುವವರೂ ಸರ್ವಪಾಪಗಳಿಂದ ಮುಕ್ತರಾಗುತ್ತಾರೆ. ॥ ೪೭॥ ಶ್ರೇಷ್ಠವಾದ ಭಾಗವತವನ್ನು ಯಾರು ಶ್ರವಣ ಮಾಡುವದಿಲ್ಲವೋ ಮತ್ತು ಕೇಳಿ ಆನಂದಬಡುವದಿಲ್ಲವೋ ಅಂಥವರಿಗೆ ಯಮನೇ ಗತಿ! ॥ ೪೮॥ ವತ್ಸಾ! ಪ್ರತಿ ತಿಂಗಳು ಅದರಲ್ಲೂ ಈ ಮಾಸದಲ್ಲಿ ವಿಶೇಷವಾಗಿ ಏಕಾದಶಿಯ ದಿನ ಯಾರು ಭಾಗವತ ಶ್ರವಣ ಮಾಡುವದಿಲ್ಲವೋ ಅಂಥವರ ಪಾಪಕ್ಷಯವೆಂಬುದು ಎಂದಿಗೂ ಆಗಲಾರದು. ॥ ೪೯॥ ಯಾರ ಮನೆಯಲ್ಲಿ ಭಾಗವತದ ಒಂದು ಶ್ಲೋಕವಾಗಲೀ , ಅರ್ಧ ಶ್ಲೋಕವಾಗಲೀ, ಕೊನೆಯ ಪಕ್ಷ ಒಂದು ಪಾದವಾಗಲೀ ಬರೆದದ್ದು ಇದ್ದರೆ ಅಂಥವರ ಮನೆಯಲ್ಲಿ ನಾನು ವಾಸಿಸುವೆನೆಂದು ತಿಳಿ. ॥ ೫೦॥ ಶ್ರೀಮದ್ಭಾಗವತವು ಭಕ್ತರನ್ನು ಹೇಗೆ ಪವಿತ್ರಗೊಳಿಸುವದೋ ಹಾಗೆ ಯಾವುದೇ ಆಶ್ರಮ ಸ್ವೀಕಾರವಾಗಲೀ, ಸರ್ವತೀರ್ಥಗಳಲ್ಲಿ ಅವಗಾಹನ ಸ್ನಾನವಾಗಲೀ ಪವಿತ್ರಗೊಳಿಸಲಾರವು. ॥ ೫೧॥ ಹೇ

ಯತ್ರ ಯತ್ರ ಚತುರ್ವಕ್ತ್ರ ಶ್ರೀಮದ್ಭಾಗವತಂ ಭವೇತ್ ।
ಗಚ್ಛಾಮಿ ತತ್ರ ತತ್ರಾಹಂ ಗೌರ್ಯಥಾ ಸುತವತ್ಸಲಾ ॥ ೫೨॥

ಮತ್ಕಥಾವಾಚಕಂ ನಿತ್ಯಂ ಮತ್ಕಥಾಶ್ರವಣೇ ರತಮ್ ।
ಮತ್ಕಥಾಪ್ರೀತಮನಸಂ ನಾಹಂ ತ್ಯಕ್ಷ್ಯಾಮಿ ತಂ ನರಮ್ ॥ ೫೩॥

ಶ್ರೀಮದ್ಭಾಗವತಂ ಪುಣ್ಯಂ ದೃಷ್ಟ್ವಾ ನೋತ್ತಿಷ್ಠತೇ ಹಿ ಯಃ ।
ಸಾಂವತ್ಸರಂ ತಸ್ಯ ಪುಣ್ಯಂ ವಿಲಯಂ ಯಾತಿ ಪುತ್ರಕ ॥ ೫೪॥

ಶ್ರೀಮದ್ಭಾಗವತಂ ದೃಷ್ಟ್ವಾ ಪ್ರತ್ಯುತ್ಥಾನಾಭಿವಾದನೈಃ ।
ಸಮ್ಮಾನಯೇತ ತಂ ದೃಷ್ಟ್ವಾ ಭವೇತ್ಪ್ರೀತಿರ್ಮಮಾತುಲಾ ॥ ೫೫॥

ದೃಷ್ಟ್ವಾ ಭಾಗವತಂ ದೂರಾತ್ ಪ್ರಕ್ರಮೇತ್ ಸಂಮುಖಂ ಹಿ ಯಃ ।
ಪದೇ ಪದೇಽಶ್ವಮೇಧಸ್ಯ ಫಲಂ ಪ್ರಾಪ್ನೋತ್ಯಸಂಶಯಮ್ ॥ ೫೬॥

ಉತ್ಥಾಯ ಪ್ರಣಮೇದ್ಯೋ ವೈ ಶ್ರೀಮದ್ಭಾಗವತಂ ನರಃ ।
ಧನಂ ಪುತ್ರಾಂಸ್ತಥಾ ದಾರಾನ್ ಭಕ್ತಿಂ ಚ ಪ್ರದದಾಮ್ಯಹಮ್ ॥ ೫೭॥

ಪ್ರಿಯ ಮಗನೇ! ಕರುವಿನ ಮೇಲಿನ ವಾತ್ಸಲ್ಯದಿಂದ ಆಕಳು ಕರುವಿದ್ದಲ್ಲೇ ಹೋಗುವಂತೆ, ಭಾಗವತವಿರುವ ಸ್ಥಳಕ್ಕೆ ನಾನು ಧಾವಿಸಿ ಹೋಗುವೆನು. ॥ ೫೨॥ ನಿತ್ಯವೂ ನನ್ನ ಕಥಾಕೀರ್ತನೆ ಮತ್ತು ಕಥಾಶ್ರವಣದಲ್ಲಿ ಆಸಕ್ತನಾದವನನ್ನು ಹಾಗೂ ನನ್ನ ಕಥಾ ಕೀರ್ತನ, ಶ್ರವಣಗಳಿಂದ ಹರ್ಷಚಿತ್ತನಾದವನನ್ನು ನಾನೆಂದಿಗೂ ಬಿಡುವದಿಲ್ಲ. ॥ ೫೩॥ ಪುಣ್ಯಪ್ರದವಾದ ಶ್ರೀಮದ್ಭಾಗವತವನ್ನು ಕಂಡು ಯಾರು ಗೌರವಸೂಚಕವಾಗಿ ಎದ್ದು ನಿಲ್ಲುವದಿಲ್ಲವೋ ಒಂದು ವರ್ಷವಿಡೀ ಸಂಪಾದಿಸಿದ ಅವರ ಪುಣ್ಯವು ನಾಶವಾಗಿ ಹೋಗುವದು. ॥೫೪॥ ಶ್ರೀಮದ್ಭಾಗವತವನ್ನು ಕಂಡು ಪ್ರತ್ಯುತ್ಥಾನ ಅಭಿವಾದನಾದಿಗಳಿಂದ ಯಾರು ಆ ಗ್ರಂಥವನ್ನು ಸನ್ಮಾನಿಸುವರೋ ಅವರಲ್ಲಿ ನನಗೆ ಅಧಿಕವಾದ ಪ್ರೀತಿಯುಂಟಾಗುತ್ತದೆ. ॥ ೫೫॥ ದೂರದಿಂದ ಭಾಗವತವನ್ನು ಕಂಡಾಕ್ಷಣವೇ ಅದರ ಸನಿಹಕ್ಕೆ ಯಾವಾತನು ಧಾವಿಸಿ ಹೋಗುವನೋ ಹಾಗೆ ಹೋಗುವಾಗ ಅವನಿಡುವ ಒಂದೊಂದು ಹೆಜ್ಜೆಗೂ ಆತನು ಅಶ್ವಮೇಧಯಾಗದ ಫಲವನ್ನು ಹೊಂದುವನು. ॥ ೫೬॥ ಮೇಲೆದ್ದು ಭಾಗವತವನ್ನು ನಮಸ್ಕರಿಸುವವನಿಗೆ ಅಧಿಕವಾದ ಸಂಪತ್ತು, ಹೆಂಡತಿ, ಪುತ್ರರು ಇವರುಗಳನ್ನು ಕೊಡುವದಲ್ಲದೇ ನನ್ನಲ್ಲಿ ಅಧಿಕವಾದ ಭಕ್ತಿಯುಂಟಾಗುವಂತೆ ಮಾಡುವೆನು. ॥ ೫೭॥ ಮಹಾ ರಾಜೋಪಚಾರಗಳಿಂದಲೂ, ಭಕ್ತಿಯಿಂದಲೂ ಶ್ರೀಭಾಗವತವನ್ನು ಶ್ರವಣ ಮಾಡುವವರ ವಶದಲ್ಲಿ ನಾನಿರುವೆನು. ॥ ೫೮॥ ವತ್ಸಾ ! ನನ್ನ ಸಂಬಂಧಿಯಾದ ಎಲ್ಲ ಉತ್ಸವಗಳಲ್ಲಿ

ಮಹಾರಾಜೋಪಚಾರೈಶ್ಚ ಶ್ರೀಮದ್ಭಾಗವತಂ ಸುತ ।
ಶೃಣ್ವಂತಿ ಯೇ ನರಾ ಭಕ್ತ್ಯಾ ತೇಷಾಂ ವಶ್ಯೋ ಭವಾಮ್ಯಹಮ್ ॥ ೫೮॥

ಮಮೋತ್ಸವೇಷು ಸರ್ವೇಷು ಶ್ರೀಮದ್ಭಾಗವತಂ ಪರಮ್ ।
ಸಮರ್ಚಯಂತಿ ಭಕ್ತ್ಯಾ ಯೇ ಮಮಾಭೇದೇನ ಸುವ್ರತ ॥ ೫೯॥

ವಸ್ತ್ರಾಲಂಕರಣೈಃ ಶ್ರೇಷ್ಠೈರ್ಧೂಪೈರ್ದೀಪೋಪಹಾರಕೈಃ ।
ವಶೀಕೃತೋ ದೃಢಂ ವತ್ಸ ಸತ್‌ಸ್ತ್ರಿಯಾ ಸತ್ಪತಿಃ ಯಥಾ ॥ ೬೦॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಪಂಚದಶೋಽಧ್ಯಾಯಃ॥

ಶ್ರೀಮದ್ಭಾಗವತ ಪುರಾಣದ ಪಠಣ ಶ್ರವಣವೆಂಬ ಉತ್ಸವವೇ ಶ್ರೇಷ್ಠವಾದುದು. ಶ್ರೀಭಾಗವತ ಮತ್ತು ನನ್ನ ಮಧ್ಯೆ ಭೇದವನ್ನೆಣಿಸದೇ ಯಾರು ॥ ೫೯॥ ವಸ್ತ್ರಾಭರಣಗಳಿಂದಲೂ, ಶ್ರೇಷ್ಠವಾದ ಧೂಪ, ದೀಪ, ನೈವೇದ್ಯ ಸಮರ್ಪಣೆಗಳಿಂದಲೂ ಭಾಗವತವನ್ನು ಪೂಜಿಸುವರೋ ಅವರು, ಪತಿವ್ರತೆಯು ತನ್ನ ಪತಿಯನ್ನು ವಶೀಕರಿಸಿಕೊಳ್ಳುವಂತೆ, ನನ್ನನ್ನು ನಿಶ್ಚಿತವಾಗಿ ವಶೀಕರಿಸಿಕೊಳ್ಳುವರು. ॥ ೬೦॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಮಾರ್ಗಶೀರ್ಷಮಾಸಮಹಾತ್ಮೆಯಲ್ಲಿ ಶ್ರೀವಿಷ್ಣು ಬ್ರಹ್ಮರ ಸಂವಾದದಲ್ಲಿ "ಧ್ಯಾನ, ಶ್ರೀದಾಮೋದರ ಮಂತ್ರ, ಶಿಷ್ಯ-ಗುರು ಲಕ್ಷಣ, ಶ್ರೀಭಾಗವತ ಮಹಿಮೆ" ಎಂಬ ಹದಿನೈದನೆಯ ಅಧ್ಯಾಯವು ಸಮಾಪ್ತವಾಯಿತು. ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಅಧ್ಯಾಯ ೧೬
ಮಥುರಾ ಮಹಿಮೆ

★

ಬ್ರಹ್ಮೋವಾಚ -

ಕಸ್ಮಿನ್ ಕ್ಷೇತ್ರೇ ಹಿ ದೇವೇಶ ಮಾರ್ಗಶೀರ್ಷೋऽಧಿಕಃ ಸ್ಮೃತಃ ।
ಕಿಂ ಫಲಂ ಚ ಭವೇತ್ ತಸ್ಮಿನ್ನೇತತ್ಸರ್ವಂ ವದಸ್ವ ಮೇ ॥ ೧॥

ಶ್ರೀಭಗವಾನುವಾಚ -
ಮಥುರೇತಿ ಸುವಿಖ್ಯಾತಂ ಅಸ್ತಿ ಕ್ಷೇತ್ರಂ ಪರಂ ಮಮ ।
ಸುರಮ್ಯಾ ಚ ಪ್ರಶಸ್ತಾ ಚ ಜನ್ಮಭೂಮಿಃ ಪ್ರಿಯಾ ಮಮ ॥ ೨॥

ಪದೇ ಪದೇ ತೀರ್ಥಫಲಂ ಮಥುರಾಯಾಂ ಚತುರ್ಮುಖ ।
ಯತ್ರ ಯತ್ರ ನರಃ ಸ್ನಾತೋ ಮುಚ್ಯತೇ ಘೋರಕಿಲ್ಬಿಷಾತ್ ॥ ೩॥

ಸರ್ವಧರ್ಮವಿಹೀನಾನಾಂ ಪುರುಷಾಣಾಂ ದುರಾತ್ಮನಾಮ್ ।
ನಾರಕಾರ್ತಿಹರಾ ಪುತ್ರ ಮಥುರಾ ಪಾಪನಾಶಿನೀ ॥ ೪॥

ಕೃತಘ್ನಶ್ಚ ಸುರಾಪಶ್ಚ ಚೋರೋ ಭಗ್ನವ್ರತಸ್ತಥಾ ।
ಮಥುರಾಂ ಪ್ರಾಪ್ಯ ಮನುಜೋ ಮುಚ್ಯತೇ ಘೋರಪಾತಕಾತ್ ॥ ೫॥

ಹೇ ದೇವೇಶಾ, ಶ್ರೀಹರೇ ! ಯಾವ ಕ್ಷೇತ್ರದಲ್ಲಿ ಮಾರ್ಗಶೀರ್ಷಮಾಸವು ಅತಿ ಶ್ರೇಷ್ಠವೆಂದು ತಿಳಿಯಲ್ಪಟ್ಟಿದೆ ? ಮತ್ತು ಅಲ್ಲಿ ಯಾವ ಫಲವು ದೊರೆಯುವದು? ಇದೆಲ್ಲವನ್ನು ನನಗೆ ತಿಳಿಸಬೇಕು ಎಂದು ಚತುರ್ಮುಖ ಬ್ರಹ್ಮನು ವಿಜ್ಞಾಪಿಸಲು ॥೧॥ ಶ್ರೀಭಗವಂತನು ಹೇಳುತ್ತಾನೆ - ಎಲೈ ಬ್ರಹ್ಮನೇ ಕೇಳು. 'ಮಥುರಾ' ಎಂದು ಪ್ರಸಿದ್ಧವಾದ ನನ್ನ ಒಂದು ಕ್ಷೇತ್ರವಿದೆ. ಅದು ನನ್ನ ಜನ್ಮಭೂಮಿಯಾಗಿದ್ದು ಅತ್ಯಂತ ರಮಣೀಯವೂ ವಿಶಾಲವೂ ನನಗೆ ಪರಮ ಪ್ರಿಯವಾದುದೂ ಆಗಿದೆ. ॥೨॥ ಹೇ ಚತುರ್ಮುಖ ಬ್ರಹ್ಮಾ! ಮಥುರೆಯಲ್ಲಿ ಅಡ್ಡಾಡುವ ಒಂದೊಂದು ಹೆಜ್ಜೆಗೂ ತೀರ್ಥಸ್ನಾನದ ಫಲವಿದೆ. ಅಲ್ಲಿ ಮನುಷ್ಯನು ಎಲ್ಲಿ ಸ್ನಾನ ಮಾಡಿದರೂ ಘೋರ ವಾದ ಪಾತಕಗಳಿಂದ ಮುಕ್ತನಾಗುತ್ತಾನೆ. ॥ ೩॥ ಹೇ ವತ್ಸಾ ! ಸರ್ವಧರ್ಮವಿಹೀನರಾದ ದುರಾತ್ಮರಾದ ಪುರುಷರ ಸರ್ವಪಾಪಗಳನ್ನು ಮಥುರೆಯು ನಾಶ ಮಾಡುತ್ತದೆ. ಮತ್ತು ಅವರಿಗೆ ಮರಣಾನಂತರ ಒದಗಬಹುದಾಗಿದ್ದ ನರಕ ದುಃಖವನ್ನು ದೂರ ಮಾಡುತ್ತದೆ. ॥ ೪॥ ಕೃತಘ್ನನಾದವನು, ಸುರಾಪಾನ ಮಾಡುವವನು, ಮೊದಲಾದವರು ಮಥುರೆಗೆ ಬಂದರೆ ಸಾಕು ಅವರು

ಸೂರ್ಯೋದಯೇ ತಮೋ ನಶ್ಯೇದ್ಯಥಾ ವಜ್ರಭಯಾನ್ನಗಾಃ ।
ತಾರ್ಕ್ಷ್ಯಂ ದೃಷ್ಟ್ವಾ ಯಥಾ ಸರ್ಪಾ ಮೇಘಾ ವಾತಹತಾ ಯಥಾ ॥ ೬॥

ತತ್ವಜ್ಞಾನಾದ್ಯಥಾ ದುಃಖಂ ಹರಿಂ ದೃಷ್ಟ್ವಾ ಯಥಾ ಮೃಗಾಃ ।
ತಥಾ ಪಾಪಾನಿ ನಶ್ಯಂತಿ ಮಥುರಾದರ್ಶನಾತ್ ಸುತ ॥ ೭॥

ಶ್ರದ್ಧಯಾ ಭಕ್ತಿಯುಕ್ತಸ್ತು ದೃಷ್ಟ್ವಾ ಮಧುಪುರೀಂ ನರಃ ।
ಬ್ರಹ್ಮಹಾಪಿ ವಿಮುಚ್ಯೇತ ಕಿಂ ಪುನಸ್ತ್ವನ್ಯಪಾತಕೀ ॥ ೮॥

ಮಥುರಾಂ ಸ್ನಾತುಕಾಮಸ್ಯ ಗಚ್ಛತಸ್ತು ಪದೇ ಪದೇ ।
ನಿರಾಶಾನಿ ವ್ರಜಂತ್ಯೇವ ಪಾಪಾನಿ ಚ ಶರೀರತಃ ॥ ೯॥

ಅನುಷಂಗೇಣ ಗಚ್ಛಂತಿ ವಾಣಿಜ್ಯೇನಾಪಿ ಸೇವಯಾ ।
ಮಥುರಾಸ್ನಾನಮಾತ್ರೇಣ ಪಾಪಂ ತ್ಯಕ್ತ್ವಾ ದಿವಂ ವ್ರಜೇತ್ ॥ ೧೦॥

ನಾಮಾಪಿ ಗೃಹ್ಣತಾಮಸ್ಯಾಃ ಸದ್ದೈವತ್ವಂ ನ ಸಂಶಯಃ ।
ಸದಾ ಕೃತಯುಗಂ ತತ್ರ ಸದಾ ಚೈವೋತ್ತರಾಯಣಮ್ ॥ ೧೧॥

ಘೋರಪಾತಕಗಳಿಂದ ಮುಕ್ತರಾಗುವರು.॥ ೫॥ ವತ್ಸಾ! ಸೂರ್ಯೋದಯವಾಗಲು ಕತ್ತಲೆಯು ನಾಶವಾಗುವಂತೆ,ವಜ್ರಾಯುಧಕ್ಕೆ ಪರ್ವತಗಳು ಹೆದರುವಂತೆ, ಗರುಡನನ್ನು ಕಂಡು ಸರ್ಪಗಳು ಭಯಪಡುವಂತೆ, ಗಾಳಿ ಹೊಡೆಯಲ್ಪಟ್ಟ ಮೇಘಗಳು ಚದುರಿ ಹೋಗುವಂತೆ, ॥೬॥ ತತ್ತ್ವಜ್ಞಾನವಾದಾಗ ಅಜ್ಞಾನವು ದೂರವಾಗುವಂತೆ, ಸಿಂಹವನ್ನು ನೋಡಿದ ಮೃಗಗಳು ಭೀತರಾಗುವಂತೆ, ಮಥುರಾ ಕ್ಷೇತ್ರದ ದರ್ಶನ ಮಾತ್ರದಿಂದ ಪಾಪಗಳು ನಾಶವಾಗಿಬಿಡುತ್ತವೆ. ॥ ೭॥ ಭಕ್ತಿಯುತನಾದ ಮನುಷ್ಯನು ಮಥುರಾ ಪಟ್ಟಣವನ್ನು ಶ್ರದ್ಧೆಯಿಂದ ನೋಡಲು ಅವನು ಬ್ರಹ್ಮಘಾತಕಿಯಾಗಿದ್ದರೂ ಕೂಡ ಆ ಪಾಪದಿಂದ ಮುಕ್ತನಾಗುವನೆಂದ ಮೇಲೆ ಉಳಿದ ಚಿಕ್ಕ ಪಾಪಗಳನ್ನು ಮಾಡಿದವನು ಆ ಪಾಪಗಳಿಂದ ಮುಕ್ತನಾಗುವನೆಂದು ಬೇರೆ ಹೇಳುವದೇನಿದೆ ! ॥ ೮॥ ಮಥುರಾದ ತೀರ್ಥದಲ್ಲಿ ಸ್ನಾನ ಮಾಡಲು ಇಚ್ಛಿಸುವ ಮನುಷ್ಯನು ಸ್ನಾನಕ್ಕೆಂದು ಹೋಗುತ್ತಿರಲು ಅವನು ಒಂದೊಂದು ಹೆಜ್ಜೆಯನ್ನು ಇಡುತ್ತಿರುವಂತೆಯೇ ಅವನ ದೇಹದೊಳಗಿಂದ ಪಾಪಗಳು ಹೊರಬಿದ್ದು ಆಶ್ರಯವಿಲ್ಲದೇ ನಿರಾಶವಾಗಿ ಹೊರಟು ಹೋಗುವವು. ॥೯॥ ವೇಶ್ಯಾಸಂಗದ ನಿಮಿತ್ತದಿಂದಾಗಲೀ ಮನುಷ್ಯನು ಮಥುರೆಗೆ ಹೋಗಿ ಅಲ್ಲಿ ಸ್ನಾನ ಮಾಡುವ ಮಾತ್ರದಿಂದಲೇ ಸ್ವಕೃತ ಪಾಪಗಳಿಂದ ಮುಕ್ತನಾಗಿ ಸ್ವರ್ಗಕ್ಕೆ ಹೋಗುವನು. ॥ ೧೦॥ ಈ ಮಥುರೆಯ ಹೆಸರನ್ನು ಬಾಯಿಯಿಂದ ಉಚ್ಚರಿಸಿದರೆ ಸಾಕು ಅಷ್ಟರಿಂದಲೇ ಅವನು ಸದ್ದೈವತ್ವವನ್ನು ಹೊಂದುವನು. ಇದರಲ್ಲಿ ಸಂದೇಹವಿಲ್ಲ. ಅಲ್ಲದೇ ಆಗ ಅಲ್ಲಿ ಸದಾ

ಯಃ ಶೃಣೋತಿ ಚತುರ್ವಕ್ತ್ರ ಮಾಥುರಂ ನಾಮಮಂಡಲಮ್ ।
ಅನ್ಯೇನೋಚ್ಚಾರಿತೇ ಸದ್ಯಃ ಸೋಽಪಿ ಪಾಪಾತ್ ಪ್ರಮುಚ್ಯತೇ ॥ ೧೨॥

ತ್ರಿರಾತ್ರಮಪಿ ಯೇ ತತ್ರ ವಸಂತಿ ಮನುಜಾಃ ಸುತ ।
ತೇಷಾಂ ಪುನಂತಿ ಸಂದೃಷ್ಟಾಃ ಸ್ಪೃಷ್ಟಾಶ್ಚರಣರೇಣವಃ ॥ ೧೩॥

ಅಥ ತೃಣಸಮೂಹಂ ತು ಜ್ವಲಯಂತಿ ಸ್ಫುಲಿಂಗಕಾಃ ।
ತಥಾ ಮಹಾಂತಿ ಪಾಪಾನಿ ದಹತೇ ಮಥುರಾಪುರೀ ॥ ೧೪॥

ಸ್ನಾನೇನ ಸರ್ವತೀರ್ಥಾನಾಂ ಯಸ್ಸ್ಯಾತ್ಸುಕೃತಸಂಚಯಃ ।
ತತೋಽಧಿಕತರಂ ಪ್ರೋಕ್ತಾ ಮಥುರಾ ಸರ್ವಮಂಡಲೇ ॥ ೧೫॥

ಚತುರ್ಣಾಮಪಿ ವೇದಾನಾಂ ಪುಣ್ಯಮಧ್ಯಯನಾಚ್ಚ ಯತ್ ।
ತತ್ಪುಣ್ಯಂ ಜಾಯತೇ ತೇಷಾಂ ಮಥುರಾಂ ಸ್ಮರತಾಂ ಸತಾಮ್ ॥ ೧೬॥

ಅನ್ಯತ್ರ ಹಿ ಕೃತಂ ಪಾಪಂ ತೀರ್ಥಮಾಸಾದ್ಯ ನಶ್ಯತಿ ।
ತೀರ್ಥೇಷು ತತ್ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ
ಮಥುರಾಯಾಂ ಕೃತಂ ಪಾಪಂ ಮಥುರಾಯಾಂ ಪ್ರಣಶ್ಯತಿ ॥ ೧೭॥

ಕೃತಯುಗವು ಮತ್ತು ಉತ್ತರಾಯಣವು ಇದ್ದಂತೆ ಆಗುವವು. ॥ ೧೧॥ ಎಲೈ ಚತುರ್ಮುಖನೇ ! ಬೇರೆಯವರಿಂದ ಉಚ್ಚರಿಸಲ್ಪಟ್ಟಂಥ ನನ್ನ ಮಥುರಾ ಪುರಿಯ ಹೆಸರನ್ನು ಯಾವನು ಕೇಳುತ್ತಾನೋ ಅವನುಸಕಲ ಪಾಪಗಳಿಂದ ಮುಕ್ತನಾಗುವನು. ॥೧೨॥ ಹೇ ಪುತ್ರನೇ ! ಮಥುರಾಪುರಿಯಲ್ಲಿ ಮೂರು ರಾತ್ರಿ ವಾಸ ಮಾಡಿದಂಥ ಜನರ ದರ್ಶನವನ್ನು ಯಾರು ಮಾಡಿಕೊಳ್ಳುವರೋ ಮತ್ತು ಅವರ ಪಾದಧೂಳಿಯನ್ನು ಯಾರು ಸ್ಪರ್ಶ ಮಾಡುವರೋ ಅವರೂ ಕೂಡ ಪುನೀತರಾಗುವರು. ॥೧೩॥ ಬೆಂಕಿಯ ಕಿಡಿಗಳು ಹುಲ್ಲಿನ ರಾಶಿಯನ್ನು ಸುಟ್ಟು ಹಾಕುವಂತೆ ಮಥುರಾ ಪುರಿಯು ಪಾಪಗಳನ್ನು ದಹಿಸುವದು. ॥ ೧೪॥ ಸರ್ವತೀರ್ಥಗಳಲ್ಲಿ ಅವಗಾಹನ ಸ್ನಾನದಿಂದ ಎಷ್ಟೊಂದು ಪುಣ್ಯವು ಪ್ರಾಪ್ತವಾಗುವದೋ ಅದಕ್ಕಿಂತಲೂ ಹೆಚ್ಚಿನ ಸುಕೃತವು ಮಥುರೆಯೊಂದರಿಂದಲೇ ದೊರೆಯುವದು. ॥೧೫॥ ನಾಲ್ಕೂ ವೇದಗಳನ್ನು ಅಧ್ಯಯನ ಮಾಡುವುದರಿಂದ ಸಜ್ಜನರಿಗೆ ಏನು ಪುಣ್ಯವು ಬರುವದೋ ಅದು ಮಥುರಾ ಪುರಿಯ ಸ್ಮರಣ ಮಾತ್ರದಿಂದ ದೊರೆಯುವದು. ॥೧೬॥ ಬೇರೆಡೆ ಮಾಡಿದ ಪಾಪವು ತೀರ್ಥ ಕ್ಷೇತ್ರಕ್ಕೆ ಬಂದಾಗ ಮಾತ್ರ ನಾಶವಾಗುವದು. ಇತರ ತೀರ್ಥಗಳಲ್ಲಿ ಮಾಡಲ್ಪಟ್ಟ ಪಾಪವು ವಜ್ರಲೇಪದಂತೆ ನಾಶವಾಗದೇ ಉಳಿಯುತ್ತದೆ. ಆದರೆ ಮಥುರಾ ಕ್ಷೇತ್ರದಲ್ಲಿ ಅಜ್ಞಾನದಿಂದ ಏನಾದರೂ ಪಾಪವು ಘಟಿಸಿದರೆ ಅದು ಮಥುರಾದಲ್ಲಿರುವಾಗಲೇ ನಾಶವಾಗುವದು. ॥ ೧೭॥ ಮಥುರಾದಲ್ಲಿ ವಾಸವಾಗಿದ್ದ ಮನುಷ್ಯನು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ

ಧರ್ಮಾರ್ಥಕಾಮಮೋಕ್ಷಾರ್ಥಂ ಸ್ಥಿತ್ವಾ ತತ್ರ ಲಭೇನ್ನರಃ ।
ಅನ್ಯತ್ರ ದಶಭಿರ್ವರ್ಷೈಃ ಪ್ರಾರಬ್ಧಂ ಭುಜ್ಯತೇ ಹಿ ಯತ್ ॥ ೧೮॥

ಕಿಲ್ಬಿಷಂ ಚ ಚತುರ್ವಕ್ತ್ರ ಮಾಥುರೇ ದಶಭಿರ್ದಿನೈಃ ।
ದಿವಿ ನೈವ ನ ಪಾತಾಲೇ ನಾಂತರಿಕ್ಷೇ ನ ಮಾನುಷೇ ॥ ೧೯॥

ಸಮಂ ತು ಮಥುರಾಯಾಂ ಹಿ ಪ್ರಿಯಂ ಮಮ ಸದೈವ ಹಿ ।
ಸರ್ವೇಷಾಮೇವ ತೀರ್ಥಾನಾಂ ಮಾಥುರಂ ಪರಮಂ ಮಹತ್ ॥ ೨೦॥

ಬಾಲಕ್ರೀಡನರೂಪಾಣಿ ಕೃತಾನಿ ಸಹ ಗೋಪಕೈಃ ।
ತ್ರಿಂಶದ್ವರ್ಷಸಹಸ್ರಾಣಿ ತ್ರಿಂಶದ್ವರ್ಷಶತಾನಿ ಚ ॥ ೨೧॥

ಯತ್ಫಲಂ ಭಾರತೇ ವರ್ಷೇ ತತ್ಫಲಂ ಮಥುರಾಂ ಸ್ಮರನ್ ।
ಸನ್ನಿಹತ್ಯಾ ತು ಯತ್ಪುಣ್ಯಂ ರಾಹುಗ್ರಸ್ತೇ ದಿವಾಕರೇ ॥ ೨೨॥

ತತೋಽಧಿಕಂ ಲಭೇತ್ ಪುತ್ರ ಮಥುರಾಯಾಂ ದಿನೇ ದಿನೇ ।
ಪೂರ್ಣೇ ವರ್ಷಸಹಸ್ರೇ ತು ತೀರ್ಥರಾಜೇ ತು ಯತ್ಫಲಮ್ ॥ ೨೩॥

ಚತುರ್ವಿಧ ಪುರುಷಾರ್ಥಗಳನ್ನು ಪಡೆಯುವನು. ಎಲೈ ಚತುರಾಸ್ಯನೇ ! ಬೇರೆಡೆ ಹತ್ತು ವರ್ಷಗಳ ಅವಧಿಯಲ್ಲಿ ಭೋಗಿಸಬೇಕಾದ ಪ್ರಾರಬ್ಧವು ॥ ೧೮॥ ಮಥುರಾಪುರದಲ್ಲಿ ಹತ್ತು ದಿನಗಳಲ್ಲಿ ಭೋಗಿಸಲ್ಪಟ್ಟು ಕಳೆದು ಹೋಗುವದು. ನನಗೆ ಮಥುರಾಪುರಿಯು ಪ್ರಿಯವಾಗಿರುವಂತೆ ದ್ಯುಲೋಕದಲ್ಲಾಗಲೀ, ಪಾತಾಲದಲ್ಲಾಗಲೀ, ಅಂತರಿಕ್ಷದಲ್ಲಾಗಲೀ, ಭೂಲೋಕದಲ್ಲಾಗಲೀ ಯಾವುದೂ ಇರುವದಿಲ್ಲ. ॥ ೧೯॥ ಮಥುರಾ ಪಟ್ಟಣವು ನನಗೆ ಸದಾ ಪ್ರಿಯವಾಗಿದೆ. ಯಾವ ಮಥುರೆಯಲ್ಲಿ ನಾನು ಬಾಲರೂಪದಿಂದ ಗೋಪಾಲರೊಡನೆ ಕೂಡಿ ಅನೇಕ ಬಾಲಕ್ರೀಡೆಗಳನ್ನು ಆಡಿದೆನೋ ಅಂಥ ಮಥುರಾ ಪುರಿಯು ಸಕಲ ತೀರ್ಥಗಳಲ್ಲಿ ಶ್ರೇಷ್ಠವಾದದ್ದಾಗಿದೆ. ॥ ೨೦॥ ಮೂವತ್ತುಮೂರು ಸಹಸ್ರ ವರ್ಷಗಳವರೆಗೆ ಭಾರತ ವರ್ಷದಲ್ಲಿಯ ತೀರ್ಥಕ್ಷೇತ್ರಗಳನ್ನು ಸಂಚರಿಸಿ ಎಷ್ಟು ಪುಣ್ಯವನ್ನು ಸಂಪಾದಿಸಬಹುದೋ ಅದೆಲ್ಲವೂ ಮಥುರಾಪುರಿಯ ಸ್ಮರಣೆ ಮಾತ್ರದಿಂದಲೇ ದೊರೆಯುವದು. ಎಲೈ ಪುತ್ರನೇ! ಸೂರ್ಯಗ್ರಹಣದ ಪರ್ವಕಾಲದಲ್ಲಿ ಮಾಡುವ ಅನುಷ್ಠಾನಗಳಿಂದ ಏನು ಪುಣ್ಯವು ಬರುವದೋ ॥ ೨೧॥ ೨೨॥ ಅದಕ್ಕಿಂತಲೂ ಅಧಿಕವಾದ ಪುಣ್ಯವು ಮಥುರಾ ಪುರಿಯಲ್ಲಿ ಪ್ರತಿದಿನವೂ ದೊರೆಯುವದು. ಪೂರ್ಣ ಸಹಸ್ರ ವರ್ಷಗಳಲ್ಲಿ ಶ್ರೇಷ್ಠ ತೀರ್ಥಗಳಾದ ಪ್ರಯಾಗಾದಿಗಳಲ್ಲಿ ದೊರೆಯುವಷ್ಟು ಪುಣ್ಯಫಲವು ॥ ೨೩॥ ಈ ಮಾರ್ಗಶೀರ್ಷ ಮಾಸದಲ್ಲಿ ಮಥುರಾ ಪುರಿಯಲ್ಲಿ ವಾಸಮಾಡುವ ಮಾತ್ರದಿಂದ ದೊರೆಯುವದು. ಅದರಂತೆ ಸಹಸ್ರ ವರ್ಷಗಳವರೆಗೆ

ತತ್ಫಲಂ ಲಭತೇ ಪುತ್ರ ಸಹೋಮಾಸೇ ಮಧೌ ಪುರಿ ।
ಪೂರ್ಣೇ ವರ್ಷಸಹಸ್ರೇ ತು ವಾರಾಣಸ್ಯಾಂ ತು ಯತ್ಫಲಮ್ ॥ ೨೪॥

ತತ್ಫಲಂ ಲಭತೇ ಪುತ್ರ ಮಥುರಾಯಾಂ ಸಹೋದಿನೇ ॥ ೨೫॥

ಗೋದಾವರೀದ್ವಾರಕಯೋಃ ನರೋ ಯಃ
ಕ್ಷೇತ್ರೇ ಕುರೂಣಾಂ ಕ್ಷಿತಿದಾಯಕೋ ಯಃ
ಷಣ್ಮಾಸಕಾತ್ ಸಾಧಯತೇ ಗಯಾಯಾಂ
ಸಮಂ ಭವೇನ್ನೋ ದಿನಮೇಕಮಾಥುರಮ್ ॥ ೨೫॥

ನ ದ್ವಾರಕಾ ಕಾಶಿಕಾಂಚೀ ನ ಮಾಯಾ
ಗದಾಧರೋ ಯಸ್ಯ ಸಮಂ ನ ತೀರ್ಥಮ್
ಸಂತರ್ಪಿತಾ ಯದ್ಯಮುನಾಜಲೇನ
ವಾಂಛಂತಿ ನೋ ವೈ ಪಿತರಃ ಪಿಂಡದಾನಮ್ ॥ ೨೬॥

ಮಥುರಾಯಾಂ ಪ್ರಕುರ್ವಂತಿ ಪುರೀ ಸಾಧಾರಣೇದೃಶಮ್ ।
ಯೇ ನರಾಸ್ತೇಽಪಿ ವಿಜ್ಞೇಯಾಃ ಪಾಪರಾಶಿಭಿರನ್ವಿತಾಃ ॥ ೨೭॥

ನ ದೃಷ್ಟಾ ಮಥುರಾ ಯೇನ ದಿದೃಕ್ಷಾ ಯಸ್ಯ ಜಾಯತೇ ।
ಯತ್ರ ತತ್ರ ಮೃತಸ್ಯಾಪಿ ಮಾಥುರೇ ಜನ್ಮ ಜಾಯತೇ ॥ ೨೮॥

ವಾರಣಾಸಿಯಲ್ಲಿದ್ದು ಪಡೆಯುವ ಪುಣ್ಯವನ್ನು ॥ ೨೪॥ ಮಥುರಾಪುರಿಯಲ್ಲಿ ಮಾರ್ಗಶೀರ್ಷ ಮಾಸದ ಒಂದು ದಿನದಲ್ಲಿ ಪಡೆಯಬಹುದು. ॥ ೨೫॥ ಗೋದಾವರೀ ದ್ವಾರಕಾ ಕ್ಷೇತ್ರಗಳಲ್ಲಿ ಮತ್ತು ಕುರುಕ್ಷೇತ್ರ, ಗಯಾ ಮೊದಲಾದೆಡೆ ಆರು ತಿಂಗಳು ಇದ್ದು ಪ್ರತಿದಿನ ಭೂದಾನ ಮಾಡಿದರೆ ಎಷ್ಟು ಫಲವು ಬರುವದೋ ಅಷ್ಟು ಫಲವು ಮಥುರೆಯಲ್ಲಿ ಒಂದು ದಿನ ಇರುವ ಮಾತ್ರದಿಂದ ಲಭಿಸುವದು. ದ್ವಾರಕಾ, ಕಾಶೀ, ಕಾಂಚೀ, ಮಾಯಾ, ಗಯಾ, ಗದಾಧರ ಇವಾವೂ ಇಲ್ಲಿಯ ಯಮುನಾ ತೀರ್ಥಕ್ಕೆ ಸಮವಾಗಲಾರವು. ಇಂಥ ಯಮುನಾ ನದಿಯ ನೀರಿನಿಂದ ತರ್ಪಣಗಳನ್ನು ಕೊಟ್ಟರೆ ಅದರಿಂದ ತೃಪ್ತರಾದ ಪಿತೃಗಳು ಪಿಂಡಪ್ರದಾನವನ್ನೂ ಅಪೇಕ್ಷಿಸುವದಿಲ್ಲ. ॥ ೨೬॥ ಯಾರು ಮಥುರೆಯನ್ನು ಇತರ ಪುರಿಗಳಂತೆ ಒಂದು ಸಾಮಾನ್ಯ ಪುರವೆಂದು ಪರಿಗಣಿಸುವರೋ ಅವರು ಪಾಪರಾಶಿಗಳಿಂದ ಯುಕ್ತರಾಗುವರೆಂದು ತಿಳಿಯಬೇಕು. ॥ ೨೭॥ ಮಥುರೆಯನ್ನು ನೋಡಲು ಯಾರಿಗೆ ಸಾಧ್ಯವಾಗಿರುವುದಿಲ್ಲವೋ ಆದರೆ ನೋಡಲೇಬೇಕೆಂಬ ಅಪೇಕ್ಷೆ ಇರುವದೋ ಅಂಥವರು ಎಲ್ಲೇ ಮೃತರಾದರೂ ಜನ್ಮಾಂತರದಲ್ಲಿ ಮಥುರೆಯಲ್ಲಿಯೇ ಹುಟ್ಟುವರು. ॥ ೨೮॥ ಹೇ ಬ್ರಹ್ಮಾ ! ಭೂಮಿಯಲ್ಲಿರುವ ಧೂಳಿಯ ಕಣಗಳನ್ನು ಒಂದುವೇಳೆ ಎಣಿಸಲು

ಭೂಮೇ ರಜಾಂಸಿಗಣನಾ ಕಾಲೇನಾಪಿ ಭವೇನ್ಮುನೇ ।
ಮಾಥುರೇ ಯಾನಿ ತೀರ್ಥಾನಿ ತೇಷಾಂ ಸಂಖ್ಯಾ ನ ವಿದ್ಯತೇ ॥ ೨೯॥

ಕುರು ಭೋ ಕುರು ಭೋ ವಾಸಂ ಮಥುರಾಖ್ಯಾಂ ಪುರೀಂ ಪ್ರತಿ ।
ವಸಾಮಿ ಯಸ್ಯಾಂ ಸತತಂ ಗೋಪಕನ್ಯಾಭಿರಾವೃತಃ ॥ ೩೦॥

ಕ್ಷೇಮೇ ಸಂಸಾರಮಗ್ನಾನಾಂ ಶಿಕ್ಷಾಮೇಕಾಂ ತು ಮೇ ಶೃಣು ।
ಯದೀಚ್ಛಸಿ ಸುಖಂ ಸಾಂದ್ರಂ ವಾಸಂ ಕುರು ಚ ಮತ್ಪುರೀಮ್ ॥ ೩೧॥

ಅಹೋ ಲೋಕೋ ಮಹಾನಂಧೋ ನೇತ್ರಹೀನೋ ನ ಪಶ್ಯತಿ ।
ಮಾಥುರೇ ವಿದ್ಯಮಾನೇಽಪಿ ಸಂಸೃತಿಂ ಭಜತೇ ಸದಾ ॥ ೩೨॥

ಮಾನುಷೀಂ ಯೋನಿಮತುಲಾಂ ಲಬ್ಧ್ವಾ ಭಾಗ್ಯಸ್ಯ ಯೋಗತಃ ।
ವೃಥೈವಾಯುರ್ಗತಂ ತೇಷಾಂ ನ ದೃಷ್ಟಾ ಮಥುರಾಪುರೀ ॥ ೩೩॥

ಅಹೋ ಮತೇಃ ಸುದೌರ್ಬಲ್ಯಂ ಅಹೋ ಭಾಗ್ಯಸ್ಯ ದೌರ್ವಿಧಮ್।
ಅಹೋ ಮೋಹಸ್ಯ ಮಹಿಮಾ ಮಥುರಾ ನೈವ ಸೇವ್ಯತೇ ॥ ೩೪॥

ಸಾಧ್ಯವಾದರೂ ಆಗಬಹುದು ಆದರೆ ಮಥುರಾಪುರಿಯಲ್ಲಿ ಎಷ್ಟು ತೀರ್ಥಗಳಿವೆಯೋ ಅವುಗಳ ಸಂಖ್ಯೆಯೇ ಇಲ್ಲ. ॥ ೨೯॥ ಅಯ್ಯಾ ಮಗನೇ! ನಾನು (ಶ್ರೀಕೃಷ್ಣನು) ಯಾವ ಮಥುರೆಯಲ್ಲಿ ಗೋಪಿಕಾ ಸ್ತ್ರೀಯರೊಂದಿಗೆ ಕ್ರೀಡಿಸುತ್ತ ಸದಾಕಾಲ ವಾಸ ಮಾಡಿರುವೆನೋ ಅಂಥ ಮಥುರಾಪುರಿಯಲ್ಲಿ ನೀನೂ ವಾಸ ಮಾಡಯ್ಯಾ, ವಾಸ ಮಾಡು.॥ ೩೦॥ ಸಂಸಾರ ಸಾಗರದಲ್ಲಿ ಮುಳುಗಿರುವವರಿಗೆ ಪಾರಾಗಲು ನಾನೊಂದು ಉಪಾಯವನ್ನು ತಿಳಿಸುವೆನು ಕೇಳು. ಅವರಿಗೆ ಶಾಶ್ವತ ಸುಖವಾಗಲೆಂದು ನೀನು ಇಚ್ಛಿಸುವಿಯಾದರೆ ನನ್ನ ಮಥುರಾ ಪಟ್ಟಣದಲ್ಲಿ ಅವರು ವಾಸ ಮಾಡಲಿ. ನೀನೂ ಕೂಡ ಸುಖವನ್ನು ಬಯಸುವಿಯಾದರೆ ನನ್ನ ಪುರದಲ್ಲಿ ವಾಸಿಸು. ॥ ೩೧॥ ಅಹಾ ! ಏನಿದು ! ಕಣ್ಣುಗಳಿದ್ದರೂ ಕೂಡ ಈ ಲೋಕದ ಜನರು ಕುರುಡರಂತೆ ವರ್ತಿಸುವರಲ್ಲಾ! ಮುಕ್ತಿಯನ್ನೂ ಕೊಡಬಲ್ಲ ಮಥುರಾಪುರಿಯು ಇರುವಾಗಲೂ ಕೂಡ ಜನರು ಸಂಸಾರದಲ್ಲಿ ಸಿಕ್ಕುಬೀಳುವರಲ್ಲಾ ! ॥ ೩೨॥ ಜನ್ಮಾಂತರ ಪುಣ್ಯದ ಪ್ರಭಾವದಿಂದ ಈಗ ಅತಿ ಶ್ರೇಷ್ಠವಾದ ಮನುಷ್ಯ ಜನ್ಮವನ್ನು ಹೊಂದಿರುವ ಜನರು ಮಥುರಾಪುರಿಯ ದರ್ಶನವನ್ನು ಮಾಡದಿದ್ದರೆ ಅವರ ಆಯುಷ್ಯವು ವ್ಯರ್ಥವಾಗಿ ಕಳೆದಂತೆಯೇ ಸರಿ. ॥೩೩॥ ಮನುಷ್ಯ ಜನ್ಮ ಬಂದಾಗ ಜನರು ಮಹಿಮೋಪೇತವಾದ ಮಥುರೆಯನ್ನು ಸೇವಿಸದಿದ್ದರೆ ಅದೇ ಅವರ ಮತಿಯ ದೌರ್ಬಲ್ಯವೆಂದೋ, ಅವರ ದೌರ್ಭಾಗ್ಯವೆಂದೋ, ಅವರ ಅಜ್ಞಾನದ ಪ್ರಭಾವವೆಂದೋ ತಿಳಿಯಬೇಕಾಗುವದು.

ಮಥುರಾಂ ತು ಪರಿತ್ಯಜ್ಯ ಯೋಽನ್ಯತ್ರ ಕುರುತೇ ರತಿಮ್
ಮೂಢೋ ಭ್ರಮತಿ ಸಂಸಾರೇ ಮೋಹಿತೋ ಮಮ ಮಾಯಯಾ ॥ ೩೫॥

ಮಥುರಾಮಪಿ ಸಂಪ್ರಾಪ್ಯ ಯೋಽನ್ಯತ್ರ ಕುರುತೇ ಸ್ಪೃಹಾಮ್ ।
ದುರ್ಬುದ್ಧೇಸ್ತಸ್ಯ ಕಿಂ ಜ್ಞಾನಂ ಸೋಽಜ್ಞಾನೇನ ವಿಜೃಂಭಿತಃ ॥ ೩೬॥

ಮಾತ್ರಾ ಪಿತ್ರಾ ಪರಿತ್ಯಕ್ತಾ ಯೇ ತ್ಯಕ್ತಾ ನಿಜಬಂಧುಭಿಃ ।
ಯೇಷಾಂ ಕ್ವಾಪಿ ಗತಿರ್ನಾಸ್ತಿ ತೇಷಾಂ ಮಮ ಪುರೀ ಗತಿಃ ॥ ೩೭॥

ಪಾಪರಾಶಿಭಿರಾಕ್ರಾಂತಾ ಯೇ ದಾರಿದ್ರ್ಯಪರಾಜಿತಾಃ ।
ಯೇಷಾಂ ಕ್ವಾಪಿ ಗತಿರ್ನಾಸ್ತಿ ತೇಷಾಂ ಮಮ ಪುರೀ ಗತಿಃ ॥ ೩೮॥

ನ ತತ್ಪುಣ್ಯೈರ್ನ ದಾನೈರ್ನ ತಪೋಭಿರ್ನತಜ್ಜಪೈಃ (ತು ಸ್ತವೈಃ) ।
ನ ಲಭ್ಯಂ ವಿವಿಧೈರ್ಯೋಗೈರ್ಲಭ್ಯಂ ಮದನುಭಾವತಃ ॥ ೩೯॥

ಮಯಿ ತೇಷಾಂ ಸ್ಥಿರಾಭಕ್ತಿರ್ಭೂಯಸೀ ಯೇಷು ಮತ್ಕೃಪಾ ।
ತೇಷಾಮೇವ ಹಿ ಧನ್ಯಾನಾಂ ಮಥುರಾಯಾಂ ಭವೇದ್ಗತಿಃ ॥ ೪೦॥

॥೩೪॥ ಯಾವನು ಮಥುರಾ ಪುರಿಯನ್ನು ಬಿಟ್ಟು ಬೇರೆ ವಿಷಯದಲ್ಲಿ ಆಸಕ್ತಿಯನ್ನು ತೋರಿಸುವನೋ ಅಂಥವನು ನನ್ನ ಮಾಯೆಯಿಂದ ಮೋಹಿತನಾಗಿ ಈ ಸಂಸಾರ ಚಕ್ರದಲ್ಲಿ ಬಿದ್ದು ಹೊರಳಾಡುವನು. ॥ ೩೫॥ ಮಥುರಾಪುರಿಯನ್ನು ಹೊಂದಿದರೂ (ಮಥುರೆಯಲ್ಲಿದ್ದರೂ) ಯಾವನು ಬೇರೆ ತೀರ್ಥವನ್ನು ಇಚ್ಛಿಸುವನೋ ದುಷ್ಟಬುದ್ಧಿಯಾದ ಅವನಿಗೆ ಜ್ಞಾನವಿರುವದೇ ? ಅವನು ಅಜ್ಞಾನದಿಂದ ಲಿಪ್ತನಾದವನು. ॥ ೩೬॥ ತಾಯಿ ತಂದೆಗಳಿಂದಲೂ, ಬಂಧು ಬಳಗದವರಿಂದಲೂ ಯಾರು ಬಹಿಷ್ಕೃತರಾಗಿರುವರೋ, ಪಾಪರಾಶಿಗಳಿಂದ ಯುಕ್ತರಾಗಿರುವರೋ, ದಾರಿದ್ರ್ಯದಿಂದ ಪೀಡಿತರಾಗಿರುವರೋ, ಯಾರಿಗೆ ಎಲ್ಲಿಯೂ ಗತಿ ಎಂಬುದಿಲ್ಲವೋ ಅಂಥವರಿಗೆ ನನ್ನ ಪುರಿಯೇ ಗತಿಯು. ॥ ೩೭॥ ೩೮ ॥ ನನ್ನಲ್ಲಿ ಭಕ್ತಿ ಮಾಡುವುದರಿಂದ ಯಾವ ಫಲವು ದೊರೆಯುವದೋ ಅದು ನಾನಾ ಪುಣ್ಯಕರ್ಮಗಳಿಂದಾಗಲೀ, ವಿವಿಧ ದಾನಗಳಿಂದಾಗಲೀ, ಘೋರ ತಪಸ್ಸುಗಳಿಂದಾ ಗಲೀ, ಅನೇಕ ಜಪಗಳಿಂದಾಗಲೀ (ಅಥವಾ ಸ್ತೋತ್ರಗಳಿಂದಾಗಲೀ) ವಿವಿಧ ಯೋಗಗಳಿಂದಾಗಲೀ ದೊರೆಯಲಾರದು. ॥೩೯॥ ಯಾರಲ್ಲಿ ನನ್ನ ವಿಶೇಷವಾದ ಅನುಗ್ರಹವಿರುವದೋ ಅವರಿಗೆ ನನ್ನ ವಿಷಯದಲ್ಲಿ ಸ್ಥಿರವಾದ ಭಕ್ತಿಯುಂಟಾಗುವದು ಮತ್ತು ಧನ್ಯರಾದ ಅವರಿಗೇ ನನ್ನ ಮಥುರಾಪುರಿಯಲ್ಲಿ ಸದ್ಗತಿಯಾಗುತ್ತದೆ. ॥ ೪೦॥ ಯೋಗಿಯಾದ ಮತ್ತು ಬ್ರಹ್ಮಜ್ಞಾನಿಯಾದವನಿಗೆ ಯಾವ ಗತಿಯಾಗುವದೋ ಅದೇ ಗತಿಯು ಮಥುರಾ ಪುರಿಯಲ್ಲಿ ಪ್ರಾಣವನ್ನು ತ್ಯಜಿಸುವವನಿಗೆ

ಯಾ ಗತಿರ್ಯೋಗಯುಕ್ತಸ್ಯ ಬ್ರಹ್ಮಜ್ಞಸ್ಯ ಮನೀಷಿಣಃ ।
ಸಾ ಗತಿಸ್ತ್ಯಜತಃ ಪ್ರಾಣಾನ್ಮಥುರಾಯಾಂ ನರಸ್ಯ ಚ ॥ ೪೧॥

ಕಾಶ್ಯಾದಿಪುರ್ಯೋ ಯದಿ ಸಂತಿ ಲೋಕೇ
ತಾಸಾಂ ತು ಮಧ್ಯೇ ಮಥುರೈವ ಧನ್ಯಾ ।
ಯಾ ಜನ್ಮಮೌಂಜೀವ್ರತಮುಕ್ತಿದಾನೈಃ
ನೃಣಾಂ ಚತುರ್ಧಾ ವಿದಧಾತಿ ಮುಕ್ತಿಮ್ ॥ ೪೨॥

ತಪೋಭಿರ್ಯಾ ಗತಿರ್ಲಭ್ಯಾ ಮನ್ವಂತರಶತೈರಪಿ ।
ಅತ್ರ ಹೇಲನಯಾ ಸಾತ್ರ ಲಭ್ಯತೇ ಮತ್ಪ್ರಸಾದತಃ ॥ ೪೩॥

ನ ಪಾಪೇಭ್ಯೋ ಭಯಂ ಯತ್ರ ನ ಭಯಂ ಯತ್ರ ವೈ ಯಮಾತ್ ।
ನ ಗರ್ಭವಾಸಭೀರ್ಯತ್ರ ತತ್ಕ್ಷೇತ್ರಂ ಕೋ ನ ಸಂಶ್ರಯೇತ್ ॥ ೪೪॥

ಮಥುರಾಯಾಂ ಚ ಯತ್ಪುಣ್ಯಂ ತತ್ಪುಣ್ಯಸ್ಯ ಫಲಂ ಶೃಣು ।
ಮಥುರಾಯಾಂ ಸಮಾಸಾದ್ಯ ಮಥುರಾಯಾಂ ಮೃತಾ ಹಿ ಯೇ ॥ ೪೫॥

ಅಪಿ ಕೀಟಪತಂಗಾದ್ಯಾ ಜಾಯಂತೇ ತೇ ಚತುರ್ಭುಜಾಃ ।
ಕೂಲಾತ್ಪತಂತಿ ಯೇ ವೃಕ್ಷಾಸ್ತೇಽಪಿ ಯಾಂತಿ ಪರಾಂ ಗತಿಮ್ ॥ ೪೬॥

ಉಂಟಾಗುವದು. ॥ ೪೧॥ ಈ ಲೋಕದಲ್ಲಿ ಕಾಶೀ ಮೊದಲಾದ ಕ್ಷೇತ್ರಗಳೇನಿವೆಯೋ ಅವೆಲ್ಲವುಗಳಲ್ಲಿ ಮಥುರಾಪುರಿಯೇ ಶ್ರೇಷ್ಠವಾದದ್ದು. ಜನ್ಮ, ಮೌಂಜೀವ್ರತ ದಾನಗಳಿಂದ ಜನರಿಗೆ ಮಥುರಾಪುರಿಯು ಚತುರ್ವಿಧ ಮುಕ್ತಿಯನ್ನು ಕೊಡಲು ಸಮರ್ಥವಾಗಿದೆ. ॥ ೪೨॥ ನೂರಾರು ಮನ್ವಂತರಗಳಲ್ಲಿದ್ದು ಅನೇಕ ವಿಧ ತಪಸ್ಸುಗಳನ್ನಾಚರಿಸುವದರಿಂದ ಯಾವ ಗತಿಯು ಪ್ರಾಪ್ತವಾಗುವದೋ ಅದು ಈ ಪುರಿಯಲ್ಲಿರುವ ಮಾತ್ರದಿಂದಲೇ ನನ್ನ ಅನುಗ್ರಹದಿಂದ ಅನಾಯಾಸವಾಗಿ ದೊರಕುವದು. ॥ ೪೩॥ ಎಲ್ಲಿ ಪಾಪಗಳಿಂದ ಭಯವಿಲ್ಲವೋ, ಯಮನ ಭೀತಿಯಿಲ್ಲವೋ, ಗರ್ಭವಾಸದ ಭಯವಿಲ್ಲವೋ, ಅಂಥ ಮಥುರಾ ಕ್ಷೇತ್ರದಲ್ಲಿ ವಾಸಿಸಲು ಬಯಸದಿರುವವರಾರು ? ॥ ೪೪॥ ಹೇ ಬ್ರಹ್ಮಾ! ಮಥುರೆಯಲ್ಲಿ ಯಾವ ಪುಣ್ಯವು ಲಭಿಸುವದೋ ಅದರ ಫಲವನ್ನು ತಿಳಿಸುವೆನು ಕೇಳು. ಮಥುರೆಗೆ ಬಂದು ಅಲ್ಲಿ ಯಾರಾದರೂ ಮೃತರಾದರೆ, ॥ ೪೫॥ ಅವು ಕೀಟ, ಪತಂಗಗಳಾಗಿದ್ದಾಗ್ಯೂ ಜನ್ಮಾಂತರದಲ್ಲಿ ಚತುರ್ಭುಜ ದೇವತೆಗಳಾಗುವರು. ಯಮುನಾ ನದಿಯ ತೀರದಲ್ಲಿ ಪತನವಾದ ಗಿಡಗಳೂ ಕೂಡ ಪರಮ ಗತಿಯನ್ನು ಹೊಂದುತ್ತವೆ. ॥೪೬॥ ಮೂಕರು, ಮೂರ್ಖರು, ಅಂಧರು, ಕಿವುಡರು ತಪೋನಿಯಮಗಳಿಂದ ರಹಿತರಾದವರು

ಮೂಕಾ ಜಡಾಂಧಬಧಿರಾಸ್ತಪೋನಿಯಮವರ್ಜಿತಾಃ ।
ಕಾಲೇನೈವ ಮೃತಾ ಯೇ ಚ ಮಾಥುರೇ ಮಮ ಲೋಕಗಾಃ ॥ ೪೭॥

ಸರ್ಪದಷ್ಟಾಃ ಪಶುಹತಾಃ ಪಾವಕಾಂಬುವಿನಾಶಿತಾಃ ।
ಲಬ್ಧಾಪಮೃತವೋ ಯೇ ಚ ಮಾಥುರೇ ಮಮ ಲೋಕಗಾಃ ॥ ೪೮॥

ಸತ್ಯಂ ಸತ್ಯಂ ಮುನಿಶ್ರೇಷ್ಠ ಬ್ರುವೇ ಶಪಥಪೂರ್ವಕಮ್ ।
ಸರ್ವಾಭೀಷ್ಟಪ್ರದಂ ನಾನ್ಯತ್ ಮಥುರಾಯಾಃ ಸಮಂ ಕ್ವಚಿತ್ ॥ ೪೯॥

ತ್ರಿವರ್ಗದಾ ಕಾಮಿನಾಂ ಯಾ ಮುಮುಕ್ಷೂಣಾಂ ಚ ಮುಕ್ತಿದಾ ।
ಭಕ್ತೀಚ್ಛೋರ್ಭಕ್ತಿದಾ ಕಸ್ತಾಂ ಮಥುರಾಂ ನಾಶ್ರಯೇತ್ ಬುಧಃ ॥ ೫೦॥

ಏಕಾದಶೀ ಮಧುಪುರ್ಯಾಂ ಕರ್ತವ್ಯಾ ಮಾರ್ಗಶೀರ್ಷಕೇ ।
ಉಪೋಷಣಂ ಪೂಜನಂ ಚ ಕರ್ತವ್ಯಂ ವಿಧಿಪೂರ್ವಕಮ್ ॥ ೫೧॥

ಶ್ರೇಷ್ಠಂ ವೈ ಬ್ರಹ್ಮಣಃ ಕುಂಡಂ ಮಧ್ಯಂ ಕುಂಡಂ ಚ ವೈಷ್ಣವಮ್ ।
ಕನಿಷ್ಠಂ ರುದ್ರದೈವತ್ಯಮಿತಿ ಜಾನೀಹಿ ಬುದ್ಧಿಮನ್ ॥ ೫೨॥

॥೪೭॥ ಯಾರೇ ಇರಲಿ ಅವರು ಮಥುರೆಯಲ್ಲಿ ಮರಣವನ್ನು ಹೊಂದಿದರೆ ನನ್ನ ವೈಕುಂಠ ಲೋಕವನ್ನು ಹೊಂದುವರು. ಇನ್ನು ಮಥುರೆಯಲ್ಲಿರುವಾಗ ಸರ್ಪದಂಶದಿಂದಾಗಲೀ, ಕ್ರೂರ ಪಶುಗಳಿಂದಾಗಲೀ, ಅಗ್ನಿ, ನೀರುಗಳಿಂದಾಗಲೀ ॥ ೪೮॥ ಅಪಮೃತ್ಯುವನ್ನು ಹೊಂದಿದವರೂ ಕೂಡ ನನ್ನ ವೈಕುಂಠ ಲೋಕವನ್ನೇ ಹೊಂದುವರು. ಹೇ ಮುನಿಶ್ರೇಷ್ಠನಾದ ಚತುರ್ಮುಖ ಬ್ರಹ್ಮಾ! ಇದೆಲ್ಲವನ್ನು ನಾನು ನಿನಗೆ ಶಪಥಪೂರ್ವಕ ಹೇಳುತ್ತಿದ್ದೇನೆ. ॥೪೯॥ ಮಥುರೆಯನ್ನು ಬಿಟ್ಟರೆ, ಸರ್ವಾಭೀಷ್ಟಗಳನ್ನು ಕೊಡಬಲ್ಲ ಬೇರೆ ಯಾವುದೂ ಸಿಗಲಾರದು. ಇದು ಕಾಮುಕರಿಗೆ ಸ್ವರ್ಗವನ್ನು, ಮುಮುಕ್ಷುಗಳಿಗೆ ಮೋಕ್ಷವನ್ನೂ ಕೊಡಬಲ್ಲದು. ॥೫೦॥ ಬುದ್ಧಿವಂತನಾದ ಯಾವ ಮನುಷ್ಯನು, ಭುಕ್ತಿ ಮುಕ್ತಿಗಳನ್ನು ಕೊಡಬಲ್ಲ, ಮಹಿಮೋಪೇತವಾದ ಇಂಥ ಮಥುರಾ ಪುರಿಯನ್ನು ಆಶ್ರಯಿಸದೇ ಇದ್ದಾನು ? ಮಾರ್ಗಶೀರ್ಷ ಮಾಸದಲ್ಲಿ ಮಥುರೆಯಲ್ಲಿದ್ದು ಏಕಾದಶಿಯನ್ನು ಮಾಡಬೇಕು, ವಿಧಿಪೂರ್ವಕವಾಗಿ ಏಕಾದಶೀ ಉಪೋಷಣೆಯನ್ನೂ, ದೇವಪೂಜೆಯನ್ನೂ ಮಾಡಬೇಕು. ॥ ೫೧॥ ಹೇ ಬುದ್ಧಿವಂತನಾದ ಬ್ರಹ್ಮನೇ ! ಮಥುರೆಯಲ್ಲಿರುವ ಕುಂಡಗಳಲ್ಲಿ ಮೊದಲನೆಯದು ಬ್ರಹ್ಮಕುಂಡವೆಂದೂ, ಮಧ್ಯದಲ್ಲಿ ಇರುವದು ವೈಷ್ಣವಕುಂಡವೆಂದೂ, ಕೊನೆಯಲ್ಲಿ ಇರುವದು ರುದ್ರಕುಂಡವೆಂದೂ ತಿಳಿ. ॥ ೫೨॥ ಹೇ ವತ್ಸಾ ! ಈ ಕುಂಡಗಳಲ್ಲಿ ಸ್ನಾನವನ್ನೂ, ದಂಡೆಯ ಮೇಲೆ ಜ್ಞಾನ ಕಾರ್ಯಗಳನ್ನೂ, ಪಿತೃಗಳನ್ನುದ್ದೇಶಿಸಿ ಶ್ರಾದ್ಧಕರ್ಮವನ್ನೂ ಹಾಗೂ ಭಕ್ತಿಯಿಂದ ನನ್ನ

ಏಷು ಸ್ನಾನಂ ಚ ದಾನಂ ಚ ಶ್ರಾದ್ಧಂ ವೈ ವಿಧಿಪೂರ್ವಕಮ್ ।
ಪೂಜಾ ಚ ಮಹತೀ ಕಾರ್ಯಾ ಮಮ ಪ್ರೀತಿಕರಾ ಸುತ ॥ ೫೩॥

ಪೂಜಾಯಾಂ ಭವತೇ ಪುತ್ರ ಸಹೋಮಾಸೇ ಮಮ ಪ್ರಿಯಮ್ ।
ತಸ್ಯಾಂ ಯತ್ಕ್ರಿಯತೇ ಪುಣ್ಯಂ ಮಮ ಪ್ರೀತಿಕರಂ ಭವೇತ್ ॥ ೫೪॥

ಸ್ವರ್ಣದಾನಂ ಚ ಗೋದಾನಂ ಅನ್ನದಾನಂ ಚ ಪುತ್ರಕ ।
ಧರಾದಾನಂ ಪ್ರಕರ್ತವ್ಯಂ ಪೂರ್ಣಾಯಾಂ ವಿಧಿಪೂರ್ವಕಮ್ ॥ ೫೫॥

ಸಹೋಮಾಸೇ ತು ಪೂರ್ಣಾಯಾಂ ಸದ್ಮದಾನಂ ತು ಕಾರಯೇತ್ ।
ಯತ್ಕಿಂಚಿತ್ ಕ್ರಿಯತೇ ಪೂರ್ಣಂ ತದಕ್ಷಯ್ಯಫಲಂ ಭವೇತ್ ॥ ೫೬॥

ಬ್ರಹ್ಮಭೋಜ್ಯಂ ಪ್ರಕರ್ತವ್ಯಂ ಯಥಾವಿಭವಸಾರತಃ ।
ಪೂರ್ಣಯಾಮೇವ ಕರ್ತವ್ಯ ಉತ್ಸವೋ ವ್ರತಪೂರ್ತಯೇ ॥ ೫೭॥

ಯಾದೃಶೀ ಮಥುರಾ ಪುತ್ರ ಸಹೋಮಾಸೇ ಮಮ ಪ್ರಿಯಾ
ನ ತಥಾ ತೀರ್ಥರಾಜಾದ್ಯಾಸ್ತದಭಾವೇ ಚ ಪುಷ್ಕರಮ್ ॥ ೫೮॥

ಪುಷ್ಕರೇ ಮಥುರಾಯಾಂ ವೈ ಪೂರ್ಣಾ ಕಾರ್ಯಾ ವಿಚಕ್ಷಣೈಃ ।
ಯತ್ರ ಕುತ್ರಾಪಿ ವಾ ಕಾರ್ಯಾ ವಿಧಿಯುಕ್ತಾ ಚ ಪೂರ್ಣಿಮಾ ॥ ೫೯॥

ಪೂಜೆಯನ್ನೂ ಮಾಡಬೇಕು. ಇದರಿಂದ ನನಗೆ ಸಂತೋಷವಾಗುವುದು. ಅಲ್ಲಿ ಮಾಡುವ ಇತರ ಪುಣ್ಯಕರ್ಮಗಳೂ ನನ್ನ ಪ್ರಸನ್ನತೆಗೆ ಕಾರಣವಾಗುತ್ತವೆ. ॥೫೩॥೫೪॥ ಈ ಮಾಸದ ಪೂರ್ಣಿಮೆಯ ದಿನ ಸುವರ್ಣದಾನ, ಗೋದಾನ ಅನ್ನದಾನ ಮತ್ತು ಭೂದಾನಗಳನ್ನು ವಿಧಿಪೂರ್ವಕ ಮಾಡಬೇಕು. ॥೫೫॥ ಹಾಗೂ ಗೃಹದಾನವನ್ನೂ ಮಾಡಬೇಕು. ಅಂದಿನ ದಿನ ಮಾಡುವ ಯತ್ಕಿಂಚಿತ್ ಪುಣ್ಯಕರ್ಮಕ್ಕೆ ಅಕ್ಷಯವಾದ ಫಲವು ಲಭಿಸುವುದು. ॥೫೬॥ ತನ್ನ ದ್ರವ್ಯ ಶಕ್ತ್ಯನುಸಾರವಾಗಿ ಯಥಾವಿಧಿ ಬ್ರಾಹ್ಮಣ ಭೋಜನವನ್ನೂ ಮಾಡಿಸಬೇಕು. ವ್ರತಪೂರ್ತಿಗಾಗಿ ಪೂರ್ಣಿಮೆಯ ದಿನವೇ ಉದ್ಯಾಪನೆಯನ್ನು ಮಾಡಬೇಕು. ॥ ೫೭॥ ಮಾರ್ಗಶೀರ್ಷ ಮಾಸದಲ್ಲಿ ಮಥುರೆಯು ನನಗೆ ಪ್ರಿಯವಾಗಿರುವಂತೆ ಇನ್ನಾವ ಪ್ರಯಾಗಾದಿ ಶ್ರೇಷ್ಠ ತೀರ್ಥಗಳೂ ನನಗೆ ಪ್ರಿಯವಾಗಿರುವದಿಲ್ಲ. ಮಥುರೆಯನ್ನು ಬಿಟ್ಟರೆ ಪುಷ್ಕರ ಕ್ಷೇತ್ರವು ನನಗೆ ಪ್ರಿಯವಾಗಿದೆ. ॥೫೮॥ ಜ್ಞಾನಿಗಳಾದವರು ಪುಷ್ಕರದಲ್ಲಿ ಮತ್ತು ಮಥುರೆಯಲ್ಲಿ ನನ್ನ ಪೂಜೆಯನ್ನು ಮಾಡಬೇಕು. ಮಥುರಾ ಮತ್ತು ಪುಷ್ಕರ ಈ ಕ್ಷೇತ್ರಗಳಿಗೆ ಹೋಗಿ ಪೂಜೆ ಮಾಡುವದಾಗದಿದ್ದರೆ, ತಾನಿದ್ದ ಸ್ಥಳದಲ್ಲಿಯೇ ಇದ್ದುಕೊಂಡು ಪೂರ್ಣಿಮೆಯ ದಿನ ಎಲ್ಲವನ್ನೂ ವಿಧಿಪೂರ್ವಕ ಆಚರಿಸಬೇಕು. ॥ ೫೯॥

ಸ್ನಾನಂ ದಾನಂ ತಥಾ ಪೂಜಾಂ ಪೂರ್ಣಾಯಾಂ ನ ಕರೋತಿ ಯಃ ।
ಷಷ್ಟಿವರ್ಷಸಹಸ್ರಾಣಿ ಪಚ್ಯತೇ ರೌರವಾದಿಷು ॥ ೬೦॥

ತಸ್ಮಾತ್ಸರ್ವಪ್ರಯತ್ನೇನ ಮಾನ್ಯಾ ಪೂರ್ಣಾ ವಿಚಕ್ಷಣೈಃ ।
ಮಾರ್ಗಶೀರ್ಷೇಣ ಸಂಯುಕ್ತಾ ಅನಂತಫಲದಾಯಿನೀ ॥ ೬೧॥

ಯಥಾ ಮೇ ಕಥಿತಂ ವತ್ಸ ಮಾರ್ಗಶೀರ್ಷಂ ಮಮ ಪ್ರಿಯಮ್ ।
ಕರೋತಿ ಯೋ ನರೋ ಭಕ್ತ್ಯಾ ತಸ್ಯ ಪುಣ್ಯಫಲಂ ಶೃಣು ॥ ೬೨॥

ಸರ್ವಯಜ್ಞೇಷು ಯತ್ಪುಣ್ಯಂ ಯತ್ಪುಣ್ಯಂ ವ್ರತಕೋಟಿಭಿಃ ।
ಸರ್ವದಾನೇಷು ಯತ್ಪುಣ್ಯಂ ತತ್ಪುಣ್ಯಂ ಸಮವಾಪ್ನುಯಾತ್ ॥ ೬೩॥

ಅಪುತ್ರೋ ಲಭತೇ ಪುತ್ರಂ ನಿರ್ಧನೋ ಧನಮೇವ ಚ ।
ವಿದ್ಯಾರ್ಥೀ ಚ ತಥಾ ವಿದ್ಯಾಂ ರೂಪಾರ್ಥೀ ರೂಪಮಾಪ್ನುಯಾತ್॥ ೬೪॥

ಬ್ರಾಹ್ಮಣೋ ಬ್ರಹ್ಮವರ್ಚಸ್ವೀ ಕ್ಷತ್ರಿಯೋ ವಿಜಯೀ ಭವೇತ್ ।
ವೈಶ್ಯೋ ನಿಧಿಪತಿತ್ವಂ ಚ ಶೂದ್ರಃ ಶುಧ್ಯೇತ ಪಾತಕಾತ್ ॥ ೬೫॥

ಯದ್ದುರ್ಲಭಂ ಚ ದುಷ್ಪ್ರಾಪ್ಯಂ ತ್ರಿಷು ಲೋಕೇಷು ಮಾನದ ।
ತತ್ಸರ್ವಂ ಪ್ರಾಪ್ನುಯಾನ್ಮರ್ತ್ಯೋ ಸಹೋಮಾಸೇ ನ ಸಂಶಯಃ॥ ೬೬॥

ಯದ್ಯಪ್ಯೇತೇಷು ಕಾಮೇಷು ಸಕ್ತಾ ಯೇ ಮಾನವಾಃ ಸುತ ।
ತುಷ್ಟಾ ಹ್ಯಂತೇ ಚತುರ್ವಕ್ತ್ರ ನ ಕಾಮಾರ್ಹಾ ಮಹಾಭುಜ ॥ ೬೭॥

ಪೂರ್ಣಿಮೆಯಂದು ಸ್ನಾನ, ದಾನ ಹಾಗೂ ಪೂಜೆಗಳನ್ನು ಯಾರು ಮಾಡುವದಿಲ್ಲವೋ ಅವರು ಅರವತ್ತು ಸಹಸ್ರ ವರ್ಷಗಳವರೆಗೆ ರೌರವಾದಿ ನರಕಗಳಲ್ಲಿ ಬಿದ್ದು ಯಾತನೆಗಳನ್ನು ಅನುಭೋಗಿಸುವರು. ॥೬೦॥ ಆದ್ದರಿಂದ ಹುಣ್ಣಿಮೆಯ ದಿನ ತಪ್ಪದೇ ದೇವಪೂಜಾದಿಗಳನ್ನು ವಿಶೇಷವಾಗಿ ಮಾಡಬೇಕು. ಏಕೆಂದರೆ ಮಾರ್ಗಶೀರ್ಷ ಪೌರ್ಣಿಮೆಯು ಅನಂತ ಫಲಗಳನ್ನು ಕೊಡುವುದಾಗಿದೆ. ॥ ೬೧॥ ಆ ದಿನ ಸ್ನಾನಾದಿಗಳನ್ನು ಯಾವ ಮನುಷ್ಯನು ಭಕ್ತಿಯಿಂದ ಮಾಡುವನೋ ಅವನು ಪಡೆಯುವ ಪುಣ್ಯಫಲಗಳನ್ನು ತಿಳಿಸುವೆನು ಕೇಳು. ಹೇ ವತ್ಸಾ! ತ್ರಿಲೋಕಗಳಲ್ಲಿ ಯಾವುದು ದುರ್ಲಭವೋ ಮತ್ತು ಯಾವುದು ಅತ್ಯಂತ ಕಷ್ಟ ಸಾಧ್ಯವೋ ಅದೆಲ್ಲವನ್ನು ಮಾರ್ಗಶೀರ್ಷಮಾಸದ ವ್ರತವನ್ನಾಚರಿಸುವವನು ಅನಾಯಾಸವಾಗಿ ಪಡೆಯುವನು. ಇದರಲ್ಲಿ ಸಂದೇಹಕ್ಕೆ ಆಸ್ಪದವೇ ಇರುವದಿಲ್ಲ. ॥ ೬೬॥ ಹೇ ಚತುರ್ಮುಖನೇ ! ಈ ಫಲಗಳನ್ನು ಅಪೇಕ್ಷಿಸಿ ವ್ರತವನ್ನು ಆಚರಿಸುವ ಮನುಷ್ಯರು ತಮ್ಮ ಕಾಮನೆಗಳನ್ನೆಲ್ಲ

ಸುದುರ್ಲಭಾ ಹಿ ಯದ್ಭಕ್ತಿರ್ಮಮ ವಶ್ಯಕರೀ ಶುಭಾ ।
ಸಾ ವೈ ಸಂಪ್ರಾಪ್ಯತೇ ಪುತ್ರ ಸಹೋಮಾಸೇ ಕೃತೇ ತಥಾ ॥ ೬೮॥

ಮಮ ಪ್ರೀತಿಕರಂ ಮಾಸಂ ಸರ್ವದಾ ಮಮ ವಲ್ಲಭಮ್ ।
ಸರ್ವಂ ಸಂಪ್ರಾಪ್ಯತೇಽಮುಷ್ಮಾತ್ ಮತ್ಪ್ರಸಾದಾಚ್ಚತುರ್ಮುಖ ॥ ೬೯॥

॥ ಇತಿ ಶ್ರೀಸ್ಕಂದಪುರಾಣೇ ಬ್ರಹ್ಮ-ವಿಷ್ಣುಸಂವಾದೇ
ಮಾರ್ಗಶೀರ್ಷಮಾಹಾತ್ಮ್ಯೇ ಷೋಡಶೋಽಧ್ಯಾಯಃ॥

ಹೊಂದಿ ತುಷ್ಟರಾಗಿ ಹಾಗೂ ತೃಪ್ತರಾಗಿ ಇರುವರು. ॥ ೬೭॥ ಹೇ ಪುತ್ರಾ! ನನ್ನನ್ನು ವಶೀಕರಿಸಿಕೊಳ್ಳಲು ಉತ್ತಮ ಸಾಧನವಾದ ಭಕ್ತಿಯು ಸಾಮಾನ್ಯವಾಗಿ ಅತಿ ದುರ್ಲಭವಾಗಿದ್ದರೂ ಮಾರ್ಗಶೀರ್ಷ ಮಾಸದಲ್ಲಿ ಅದು ಸುಲಭ ಸಾಧ್ಯವಾಗುವದು. ಇದು ನಿಶ್ಚಿತ . ॥ ೬೮॥ ಹೇ ಚತುರ್ಮುಖ ಬ್ರಹ್ಮಾ ! ಒಟ್ಟಿನಲ್ಲಿ ಈ ಮಾರ್ಗಶೀರ್ಷ ಮಾಸವು ನನಗೆ ಅತ್ಯಂತ ಪ್ರೀತಿಯನ್ನುಂಟು ಮಾಡುವ ಮಾಸವಾಗಿದೆ. ಸದಾಕಾಲದಲ್ಲಿಯೂ ನನಗೆ ಪ್ರೀತ್ಯಾಸ್ಪದವಾಗಿದೆ. ಈ ಮಾಸವ್ರತವನ್ನು ಆಚರಿಸುವವರು ನನ್ನ ಅನುಗ್ರಹದಿಂದ ಇಹಪರಗಳಲ್ಲಿ ಸಕಲ ಮನೋರಥಗಳನ್ನು ಪಡೆಯುವರು. ॥ ೬೯॥

॥ ಇಲ್ಲಿಗೆ ಶ್ರೀಸ್ಕಂದಪುರಾಣದಲ್ಲಿಯ ಮಾರ್ಗಶೀರ್ಷಮಾಸಮಹಾತ್ಮೆಯಲ್ಲಿ ಶ್ರೀವಿಷ್ಣು ಬ್ರಹ್ಮರ ಸಂವಾದದಲ್ಲಿ ''ಮಥುರಾ ಮಹಿಮೆ'' ಎಂಬ ಹದಿನಾರನೆಯ ಅಧ್ಯಾಯವು ಸಮಾಪ್ತವಾಯಿತು ॥

॥ ಮಾರ್ಗಶೀರ್ಷಮಾಸ ಮಹಾತ್ಮೆಯೂ ಮುಗಿಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

೨೬) ಗುರುಗುಣಸ್ತವನ, (ಸಂಸ್ಕೃತದ ಎರಡು ಟಿಪ್ಪಣಿಗಳು, ಕನ್ನಡದಲ್ಲಿ ಪ್ರತಿಪದಾರ್ಥ, ತಾತ್ಪರ್ಯ, ವಿವರಣೆ ಸಹಿತ ಮತ್ತು ಗುರುಗುಣಸ್ತವನದ ಮೇಲೆ ವಿದ್ವಾಂಸರ ಕೆಲವು ಲೇಖನಗಳು) ೮೦/-

೨೭) ರಾಜಾಧಿರಾಜ ಗುರುಸಾರ್ವಭೌಮ (ಭಾಗ ೧,೨) ३೦೦/-

೨೮) ಪ್ರಾತಃಸಂಕಲ್ಪಗದ್ಯ ಮೂಲ ಹಾಗೂ ಕನ್ನಡಾನುವಾದ ೧೫/-

೨೯) ಸಾಧನದೀಪಿಕಾ (ಪ್ರತಿದಿನದ, ವಾರದ, ಮಾಸದ ಆಹ್ನೀಕ ಕರ್ಮಗಳ ವಿವರಣೆ, ವಾರ್ಷಿಕ ವ್ರತಗಳ ವಿಧಾನ ಮುಂತಾದವು. ಶ್ರೀಹರಿದಾಸರ ನೂರಾರು ಸುಳಾದಿಗಳು ಹಾಗೂ ಕೀರ್ತನೆಗಳು ಮತ್ತು ಸ್ತೋತ್ರಗಳು) ೭೫/-

೩೦) ಸುನೀತಿ ಭಾಗವತ ಮೂಲ ಹಾಗೂ ಕನ್ನಡಾನುವಾದ ೨೫/-

೩೧) ಸನ್ನೀತಿ ರಾಮಾಯಣ ಮೂಲ ಹಾಗೂ ಕನ್ನಡಾನುವಾದ ೨೫/-

೩೨) ಲಕ್ಷ್ಮೀಹೃದಯ ವೆಂಕಟೇಶಸ್ತವರಾಜ ಸಹಿತ ೧೫/-

೩೩) ಹನುಮನ್ನಾಟಕ ಅರ್ಥಾತ್ ಪಂಚಮುಖೀ ರಾಮಾಯಣ ೭೫/-

೩೪) ತಾಂಬೂಲ ಮಂಜರೀ ೫೦/-

೩೫) ಪಾಕದರ್ಪಣ ೫೦/-

೩೬) ಭಾಗವತೀಯ ಗ್ರಂಥಸಂಗ್ರಹಃ ಅಚ್ಚಿನಲ್ಲಿ

೩೭) ಪುರುಷ ಪರೀಕ್ಷೆ (ವರಪರೀಕ್ಷೆ) (ನೀತಿಗ್ರಂಥ) ೬೦/-

೩೮) ಕೃಷಿಪರಾಶರಃ ೫೦/-

೩೯) ಜ್ಞಾನಭೈಷಜ್ಯಮಂಜರೀ

೪೦) ಕಲಿವಿಡಂಬನಮ್

೪೧) Socio-Economic Ideas in Ancient Indaian Literature ೨೫೦/-

೪೨) Convocation Addresses (Past and Present) ಅಚ್ಚಿನಲ್ಲಿ

೪೩) ಶ್ರೀರುಕ್ಮಿಣೀಶ ವಿಜಯ ಕಥಾಸಾರಸಂಗ್ರಹ ೬೦/-

ಪ್ರಾಪ್ತಿ ಸ್ಥಳ

೧) ಗುರುಸಾರ್ವಭೌಮ ಶ್ರೀರಾಘವೇಂದ್ರ ತೀರ್ಥ ಪ್ರತಿಷ್ಠಾನಂ, ಧಾರವಾಡ ೫೮೦೦೦೭

೨) ಶ್ರೀ. ಕೆ.ಎಸ್. ಕುಲಕರ್ಣಿ ಬುಕ್ ಡಿಪೋ, ಹುಬ್ಬಳ್ಳಿ.

೩) ವಂದನಾ ಬುಕ್ ಹೌಸ್, ಬೆಂಗಳೂರು

೪) ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು

೫) ಶ್ರೀಕೃಷ್ಣಮಠ, ಉಡುಪಿ

೬) ಶ್ರೀರಾಘವೇಂದ್ರಸ್ವಾಮಿ ಮಠ,ಮಂತ್ರಾಲಯ

೭) ಸಮಾಜ ಪುಸ್ತಕಾಲಯ, ಧಾರವಾಡ

ಅವಶ್ಯ ಸಂಗ್ರಹಣೀಯ ಗ್ರಂಥಗಳು

ಸಂಪಾದಕ ಹಾಗೂ ಅನುವಾದಕ : ಆ.ರಾ. ಪಂಚಮುಖಿ

೧) ಚೈತ್ರಮಾಸ ಮಹಾತ್ಮೆ	ಮೂಲ ಹಾಗೂ ಕನ್ನಡಾನುವಾದ	೫೦/-
೨) ವೈಶಾಖಮಾಸ ಮಹಾತ್ಮೆ	"	೭೫/-
೩) ಜ್ಯೈಷ್ಠಮಾಸ ಮಹಾತ್ಮೆ	"	೫೦/-
೪) ಆಷಾಢಮಾಸ ಮಹಾತ್ಮೆ	"	೫೦/-
೫) ಶ್ರಾವಣಮಾಸ ಮಹಾತ್ಮೆ	"	೬೦/-
೬) ಭಾದ್ರಪದಮಾಸ ಮಹಾತ್ಮೆ	"	೫೦/-
೭) ಆಶ್ವೀನಮಾಸ ಮಹಾತ್ಮೆ	"	೫೦/-
೮) ಕಾರ್ತೀಕಮಾಸ ಮಹಾತ್ಮೆ	"	೫೦/-
೯) ಮಾರ್ಗಶೀರ್ಷಮಾಸ ಮಹಾತ್ಮೆ	"	೫೦/-
೧೦) ಪುಷ್ಯಮಾಸ ಮಹಾತ್ಮೆ	"	೫೦/-
೧೧) ಮಾಘಮಾಸ ಮಹಾತ್ಮೆ	"	೬೦/-
೧೨) ಫಾಲ್ಗುಣಮಾಸ ಮಹಾತ್ಮೆ	"	೬೦/-
೧೩) ಚಾತುರ್ಮಾಸ್ಯ ಮಹಾತ್ಮೆ	"	೧೨೦/-
೧೪) ಅಧಿಕಮಾಸ ಮಹಾತ್ಮೆ	"	೬೦/-
೧೫) ಧನುರ್ಮಾಸ ಮಹಾತ್ಮೆ	"	೧೦/-
೧೬) ೨೬ ಏಕಾದಶೀ ಮಹಾತ್ಮೆ	"	೬೦/-
೧೭) ಗಯಾ ಮಹಾತ್ಮೆ	"	೨೫/-
೧೮) ಶ್ರೀ ಬದರಿಕ್ಷೇತ್ರ ಮಹಾತ್ಮೆ	"	೩೦/-
೧೯) ವಿಷ್ಣುಸ್ತುತಿ ವ್ಯಾಖ್ಯಾನ	"	೨೫/-
೨೦) ಭಗವದ್ಗೀತಾ ಸಾರೋದ್ಧಾರ	"	೧೫/-
೨೧) ಸುಂದರಕಾಂಡ ರಾಮಾಯಣ	"	೧೫/-
೨೨) ಶ್ರೀ ಮಧ್ವಗುರು ವೈಭವ (ವಾಯುಪುರಾಣ)	"	೧೫/-
೨೩) ಶ್ರೀ ಮದ್ವಾದಿರಾಜಕೃತ ಸ್ತೋತ್ರಮಣಿಮಾಲಾ		೫೦/-
೨೪) ಶ್ರೀರಾಘವೇಂದ್ರ ವಿಜಯ	ಮೂಲ ಹಾಗೂ ಕನ್ನಡಾನುವಾದ	೭೫/-
೨೫) ಶ್ರೀಮದ್ರಾಘವೇಂದ್ರತೀರ್ಥ ಗುರುಸಾರ್ವಭೌಮ ಸ್ತುತಿಮಾಲಿಕಾ (ಕನ್ನಡ)		೫೦/-